2. ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

(ಅ) ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಧೇಯಕ, 2006

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ. ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಅದರ ಬಗ್ಗೆ ಎಕ್ಸ್‌ಪ್ಲೆನ್ ಮಾಡಿ.

ಶ್ರೀ ಡಿ. ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿರತಕ್ಕಂತಹ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ನಿಯಂತ್ರಿಸುವುದಕ್ಕಾಗಿ ಮತ್ತು ಶುಲ್ಕ ನಿಗದಿ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸುವುದಕ್ಕಾಗಿ ಮತ್ತು ಅಷ್ಟೇ ಪ್ರಮುಖವಾಗಿರುವಂತಹ ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗ ಬುಡಕಟ್ಟು ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಸೀಟುಗಳನ್ನು ಮೀಸಲಿಡುವುಕ್ಕಾಗಿ ಉಪಬಂಧಗಳನ್ನು ಕಲ್ಪಿಸುವುದು ಅವಶ್ಯಕವೆಂದು ಕಂಡುಬಂದಿರುವ ಕಾರಣಕ್ಕಾಗಿ ಈ ಒಂದು ವಿಧೇಯಕವನ್ನು ನಾನು ಇಲ್ಲಿ ಮಂಡಿಸುತ್ತಿದ್ದೇನೆ. 2003ರಲ್ಲಿ ವರದಿಯಾಗಿರುವಂತಹ ಇಸ್ಲಾಮಿಕ್ ಅಕಾಡೆಮಿಕ್ ಎಜ್ಯುಕೇಷನ್ ಹಾಗೂ ಇತರರ ವಿರುದ್ಧ ಕರ್ನಾಟಕ ರಾಜ್ಯ ಈ ಒಂದು ಪ್ರಕರಣ ಸರ್ವೋಚ್ಚ ನ್ಯಾಯಾಲಯದಲ್ಲಿ ನೀಡಿದ ತೀರ್ಪಿನಲ್ಲಿ ವೃತ್ತಿ ಶಿಕ್ಷಣ ಮತ್ತು ವ್ಯಾಸಂಗ ಕ್ರಮಗಳಿಗೆ ಪ್ರವೇಶಕ್ಕಾಗಿ ಸಂಸತ್ತು ಇದರ ಬಗ್ಗೆ ಒಂದು ಕಾನೂನನ್ನು ಮಾಡಬೇಕು, ಆ ಕಾನೂನು ಮಾಡುವ ತನಕ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಗಳ ಮೇಲ್ವಿಚಾರಣೆ ನಡೆಸಲು ಒಂದು ಸಮಿತಿ, ಹಾಗೂ ಶುಲ್ಕ ವ್ಯವಸ್ಥೆಯನ್ನು ಅನುಮೋದಿಸಲು ಇನ್ನೊಂದು ಸಮಿತಿ, ಹೀಗೆ ಎರಡು ಸಮಿತಿಗಳನ್ನು ಮಾಡಬೇಕೆಂದು ಆದೇಶವನ್ನು ನೀಡಿದೆ. ಹಾಗೆಯೇ2005-06ರ ಎಸ್.ಸಿ 532ರಲ್ಲಿ ವರದಿಯಾಗಿರುವ ಹಾಗೆ ಟಿ.ಐ. ಇನಾಂದಾರ್ ಮತ್ತು ಇತರರು ವಿರುದ್ಧ ಮಹಾರಾಷ್ಟ್ರ ರಾಜ್ಯ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ರಾಜ್ಯದಲ್ಲಿ ಯಾವುದೇ ಒಂದು ವಿಷಯವನ್ನು ಶಿಕ್ಷಣವನ್ನು ಅಲ್ಪಸಂಖ್ಯಾತ

ಮತ್ತು ಅಲ್ಪಸಂಖ್ಯಾತವಲ್ಲದ ಅಂತಹದ್ದೇ ಒಂದಕ್ಕಿಂತ ಹೆಚ್ಚು ಸಂಸ್ಥೆಗಳು ನೀಡುತ್ತಿದ್ದಲ್ಲಿ ಆಗ ಪಾರದರ್ಶಕತೆ ಮತ್ತು ಮೆರಿಟ್ ಈ ಎರಡು ಉದ್ದೇಶಗಳನ್ನೂ ಈಡೇರಿಸಬೇಕಾದರೆ ಒಂದೇ ಸಾಮಾನ್ಯ ಪರೀಕ್ಷೆ ನಡೆಸಿ ತರುವಾಯ ಕೇಂದ್ರೀಯ ಕೌನ್ಸಿಲಿಂಗ್ ವ್ಯವಸ್ಥೆ ಮಾಡಬೇಕು ಅಥವಾ ಅದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ ಪ್ರವೇಶಕ್ಕಾಗಿ ಏಕಗವಾಕ್ಷಿಯ ವ್ಯವಸ್ಥೆ ಮಾಡುವುದು ಅಗತ್ಯವಿದೆ. ಎಂದು ತೀರ್ಮಾನವನ್ನು ನೀಡಿದೆ. ಆದ್ದರಿಂದ ಒಂದೇ ಸ್ವರೂಪದ ಮತ್ತು ಸಮಾನ ಸ್ವರೂಪದ ಎಲ್ಲಾ ಸಂಸ್ಥೆಗಳು ಅಲ್ಪಸಂಖ್ಯಾತರ ಸಂಸ್ಥೆಯಾಗಿರಲಿ, ಅಲ್ಪಸಂಖ್ಯಾತವಲ್ಲದ ಸಂಸ್ಥೆಗಳಾಗಿರಲಿ, ಒಂದೇ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ತರುವಾಯ ಕೇಂದ್ರ ಕೌನ್ಸಿಲಿಂಗ್ ವ್ಯವಸ್ಥೆಯ ಮೂಲಕ ನಮ್ಮಲ್ಲಿಯ ಸೀಟುಗಳನ್ನು ಭರ್ತಿ ಮಾಡಿಕೊಳ್ಳಬೇಕೆಂದು ತೀರ್ಪು ನೀಡಿದೆ. ಅಲ್ಲದೆ ಅದೇ ತೀರ್ಪಿನೊಳಗಡೆ ಸರ್ವೋಚ್ಚ ನ್ಯಾಯಾಲಯ ಇನ್ನೊಂದು ವಿಷಯವನ್ನು ಹೇಳಿದೆ. ಪ್ರವೇಶಗಳು ನ್ಯಾಯಯುತವಾಗಿ ಮತ್ತು ಮೆರಿಟ್ ಆಧಾರದ ಮೇಲೆ ನಡೆಯುವಂತೆ ನೋಡಿಕೊಳ್ಳುವ ಸಲುವಾಗಿ ಹಾಗೂ ದುರಾಡಳಿತ ತಡೆಯುವ ಸಲುವಾಗಿ ಒಂದು ಕೇಂದ್ರೀಯ ಮತ್ತು ಏಕ ಗವಾಕ್ಷಿ ಕಾರ್ಯವಿಧಾನವನ್ನು ಏರ್ಪಡಿಸಿ ಪ್ರವೇಶವನ್ನು ನಿಯಂತ್ರಿಸಬಹುದು. ಖಾಸಗಿ ಶಿಕ್ಷಣ ಸಂಸ್ಥೆಗಳು ಅನುಸರಿಸುವ ಪ್ರವೇಶ ಪ್ರಕ್ರಿಯೆಯು ನ್ಯಾಯಾಲಯವು ನಿಗದಿಪಡಿಸಿದ ಮೂರು ಬಗೆಯ ಪರೀಕ್ಷೆಗಳಲ್ಲಿ ಎಲ್ಲಾ ಅಥವಾ ಯಾವುದಾದರೊಂದನ್ನು ಯಶಸ್ವಿಗೊಳಿಸಲು ವಿಫಲರಾದರೆ ಆಗ ರಾಜ್ಯವು ಪ್ರವೇಶ ಪ್ರಕ್ರಿಯೆಯನ್ನು ತಾನೇ ಕೈಗೆತ್ತಿಕೊಂಡು ತನ್ನದೇ ಆದ ಪ್ರಕ್ರಿಯೆಯನ್ನು ಅಳವಡಿಸಬಹುದೆಂದು ತೀರ್ಮಾನ ನೀಡಿದೆ. ಈ ಸಂಸ್ಥೆಗಳಲ್ಲಿ ಅಲ್ಪಸಂಖ್ಯಾತರಲ್ಲದ ಸಮುದಾಯಗಳ ವಿದ್ಯಾರ್ಥಿಗಳ ಸಂಖ್ಯೆ ಕನಿಷ್ಠ ಪ್ರಮಾಣಕ್ಕಿಂತ ಹೆಚ್ಚು ಇದ್ದರೆ ಆಗ ಅಲ್ಪಸಂಖ್ಯಾತರ ಸಂಸ್ಥೆಗಳು ತಮ್ಮ ಅಲ್ಪಸಂಖ್ಯಾತ ಸ್ವರೂಪವನ್ನು ಕಳೆದುಕೊಳ್ಳುತ್ತವೆ. ಎಂದು ಸ್ಪಷ್ಟಪಡಿಸಿದ್ದಾರೆ. ಸರ್ವೋಚ್ಚ ನ್ಯಾಯಾಲಯವೂ ಸಹ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ರಾಜ್ಯದೊಳಗಿನವರೇ ಆಗಿರಬೇಕೆಂದು ಸ್ಪಷ್ಟವಾಗಿ ತಿಳಿಸಿದೆ. ಇವೆಲ್ಲವನ್ನೂ ಪರಿಗಣಿಸಿ ರಾಜ್ಯದೊಳಗೆ ಇರುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಅಲ್ಪಸಂಖ್ಯಾತರ ಸಂಸ್ಥೆಗಳಲ್ಲಿ ಶೇಕಡ 66 ರಷ್ಟು ಮೀಸಲಾತಿಗೆ ಈ ವಿಧೇಯಕವು ಉಪಬಂಧವನ್ನು ಕಲ್ಪಿಸುತ್ತದೆ. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ಜನಸಂಖ್ಯೆ ಒಟ್ಟು ರಾಜ್ಯದಲ್ಲಿ ಶೇಕಡ 50ರಷ್ಟು ಮೀರಿದ್ದರೂ ಸುಪ್ರೀಂಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ಈ ಎಲ್ಲಾ

ಪ್ರವರ್ಗಗಳಿಗೆ ಸೇರಿ ಶೇಕಡ 50 ಅನ್ನು ಮೀರತಕ್ಕದ್ದಲ್ಲವೆಂದು ತೀರ್ಮ ನೀಡಿರುವ ಹಿನ್ನೆಲೆಯಲ್ಲಿ ಇದನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವೂ ಸಹ ಅನುಸೂಚಿತ ಜಾತಿ ಮತ್ತು ಪಂಗಡ ಹಾಗೂ ಹಿಂದುಳಿದ ವರ್ಗದವರಿಗೆ ಶೇಕಡ 50 ರಷ್ಟು ಮೀಸಲಾತಿಯನ್ನು ಒದಗಿಸುವುದಕ್ಕಾಗಿ ಸಂವಿಧಾನದ ಅನುಚ್ಛೇದದ ಅಡಿಯಲ್ಲಿ ನಾವು ಕೂಡಲೇ ಆದೇಶವನ್ನು ಹೊರಡಿಸಿದ್ದೇವೆ. ಸಂವಿಧಾನದ 15(5)ನೇ ಅನುಚ್ಛೇದದಲ್ಲಿ ಸಂವಿಧಾನ 93ನೇ ತಿದ್ದುಪಡಿ ಮಧ್ಯದಲ್ಲಿ ಇತ್ತೀಚೆಗೆ ಬಂದಿರುವ ಹಿನ್ನೆಲೆಯಲ್ಲಿ ಅಧಿನಿಯಮ 2005 ರ ಮೂಲಕ ಸೇರಿಸಿದಂತೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಹೊರತಾಗಿ ಅನುದಾನಿತ ಹಾಗೂ ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಕ್ಕೆ ಸಂಬಂಧಪಟ್ಟಂತೆ ಸಂವಿಧಾನದ 15-19ನೇ ಅನುಚ್ಛೇದದ (ಜಿ) ಉಪಖಂಡದಲ್ಲಿ ಏನೇ ಇದ್ದರೂ ಯಾವುದೇ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ನಾಗರೀಕ ಪುರೋಭಿವೃದ್ಧಿಗಾಗಿ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ರಾಜ್ಯ ಸರ್ಕಾರದವರು ಕಾನೂನಿನ ಮೂಲಕ ವಿಶೇಷ ಉಪಬಂಧಗಳನ್ನು ರಚಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸಿದ್ದೇವೆ. ಮೇಲ್ಕಂಡ ಕಾರ್ಯನೀತಿಯ ಆಧಾರದ ಮೇಲೆ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಅನುಸೂಚಿತ ಜಾತಿ/ ಪಂಗಡದವರಿಗೆ ಇತರೆ ಹಿಂದುಳಿದ ವರ್ಗಗಳವರಿಗೆ ಶೇಕಡ 50 ರಷ್ಟರವರೆಗೆ ಸರ್ಕಾರಿ ಅನುದಾನಿತ, ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿಗಾಗಿ ಉಪಬಂಧವನ್ನು ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಹಾಗಾಗಿ ಈ ವಿಧೇಯಕ ತಮಗೆಲ್ಲಾ ಗೊತ್ತಿರುವ ಹಾಗೆ 2003ನೇ ಇಸವಿ, ಆಗ ಒಂದು ತರಹ ಈ ಇಂಜಿನಿಯರಿಂಗ್ ಮತ್ತು ಪ್ರೊಫೆಷನಲ್ ಕಾಲೇಜುಗಳ ಇವುಗಳ ಎಂಟ್ರಿ, ರಾಜ್ಯಗಳಲ್ಲಿ ನಡೆದಿರತಕ್ಕಂಥ ಇತಿಹಾಸವನ್ನು ಪೂರ್ತಿಯಾಗಿ ಹೇಳಲಿಕ್ಕೆ ಇಷ್ಟಪಡುವುದಿಲ್ಲ, ಅದು ಎಲ್ಲರಿಗೂ ಗೊತ್ತಿದೆ, 2003ರಲ್ಲಿ ಉನ್ನಿ ಕೃಷ್ಣನ್ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ತೀರ್ಪನ್ನು ನೀಡಿರುವಂತಹ ಹಿನ್ನೆಲೆಯಲ್ಲಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಸಹ ಶೇಕಡ 85ರಷ್ಟು ಸೀಟುಗಳನ್ನು ಸರ್ಕಾರ ಮೀಸಲಿರಿಸಿ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದುದು ಎಲ್ಲರಿಗೂ ಗೊತ್ತಿದೆ. ಆದರೆ ಕ್ರಮೇಣ ಟಿ.ಎಂ.ಪೈ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಖಾಸಗಿ ಅನುದಾನ ರಹಿತ ಕಾಲೇಜುಗಳು ಅವರದೇ ಆದ ಪ್ರವೇಶಾತಿಗಳನ್ನು ಮಾಡಲು ಹಕ್ಕುಳ್ಳವರಾಗಿದ್ದರೂ, ಅರ್ಹತೆಯನ್ನು ಕಡೆಗಣಿಸುವಂತಿಲ್ಲವೆಂಬ ಆದೇಶವನ್ನು ನೀಡಿ ಇಸ್ಲಾಮಿಕ್ ಅಕಾಡೆಮಿ ಪ್ರಕರಣಕ್ಕೆ

ಸಂಬಂಧಿಸಿದಂತೆ ನೀಡಿರುವ ತೀರ್ಪಿನಲ್ಲಿ ಒಂದು ಮೇಲುಸ್ತುವಾರಿ ಸಮಿತಿ ಓವರ್ ಸೀಯಿಂಗ್ ಹಾಗೂ ಫೀ ರೆಗ್ಯುಲೇಟರಿಂಗ್ ಕಮಿಟಿಗಳನ್ನು ಮಾತ್ರ ಮಾಡಬೇಕೆಂದು ತೀರ್ಮಾನ ಆಯಿತು. ಈ ರೀತಿಯ ಒಂದು ಚರ್ಚೆ ನಡೆದು ಕಳೆದ ವರ್ಷ ಒಂದು ಕಾಂಪ್ರಮೈಸ್ ಆಗಿ ಒಂದು ಸುವ್ಯವಸ್ಥಿತವಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ಸೀಟುಗಳನ್ನು ಮತ್ತು ಫೀಸುಗಳನ್ನು ನಾವು ಈ ವರ್ಷ ಮಾಡಿಕೊಳ್ಳತ್ತೇವೆಂದು ಹೇಳಿ ಸರ್ವೋಚ್ಚ ನ್ಯಾಯಾಲಯಕ್ಕೆ ಹೋದ ಹಿನ್ನೆಲೆಯಲ್ಲಿ ಅದೂ ಸಹ ಹೋದ ವರ್ಷ ನಡೆಯಿತು, ಆದರೆ ಮಾನ್ಯ ಸಭಾಧ್ಯಕ್ಷರೆ, ಈಗ ಈ ಇನಾಂದಾರ್ ಪ್ರಕರಣದ ತೀರ್ಪು ಬಂದ ಮೇಲೆ ಮತ್ತು 93ನೇ ಅಮೆಂಡ್ಮೆಂಟಿನ ಮಧ್ಯಭಾಗದಲ್ಲಿ ಒಂದು ರೀತಿಯ ಪರಿಸ್ಥಿತಿ ನಿರ್ಮಾಣವಾಯಿತು. ಸರ್ಕಾರ ಮತ್ತು ಅನುದಾನಿತ ಕಾಲೇಜುಗಳಲ್ಲಿ ಮಾತ್ರ, ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ಮಾತ್ರ ಈ ರಿಸರ್ವೇಷನ್ ಮಾಡಬಹುದು ಮತ್ತು ಏನು ಬೇಕಾದರೂ ಮಾಡಬಹುದು ಆದರೆ ಅನುದಾನಿತವಲ್ಲದ ಮತ್ತು ಧಾರ್ಮಿಕ ಹಾಗೂ ಭಾಷಾ ಅಲ್ಪಸಂಖ್ಯಾತರು ನಡೆಸತಕ್ಕಂಥ ಕಾಲೇಜುಗಳಲ್ಲಿ ಯಾವುದೇ ರೀತಿಯ ನಿಯಂತ್ರಣವನ್ನು ನಾವು ಮಾಡಲಿಕ್ಕೆ ಬರುವುದಿಲ್ಲ. ಅವರು ನಡೆಸತಕ್ಕಂಥ ಪ್ರತಿಯೊಂದು ಕಾಲೇಜುಗಳಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಒಂದೇ ಫೀಸು ಇರಬೇಕು ಎಂಬ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯ ಕೊಟ್ಟ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಅನುಸೂಚಿತ ಜಾತಿ ಪಂಗಡದವರಿಗೆ, ಹಿಂದುಳಿದವರಿಗೆ ಯಾವುದೇ ರೀತಿಯ ರಿಸರ್ವೇಷನ್ ಕೊಡುವ ಸಾಧ್ಯ ಇರಲಿಲ್ಲ. ಆದರೆ ಸುದೈವವಶಾತ್ ಸಂಸತ್‌ನಲ್ಲಿ 1993ನೇ ಒಂದು ಕಾನ್ಸ್‌ಟಿಟ್ಯೂಷನ್ ಅಮೆಡ್‌ಮೆಂಟ್ ಆದಮೇಲೆ ಅದನ್ನು ಸೇರಿಸಿಕೊಂಡು ಕಾನೂನನ್ನು ಮಾಡಿದರೆ ನಿಮಗೆ ಅಧಿಕಾರ ಬರುತ್ತದೆಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಹಾಗಾಗಿ ಇವತ್ತು ಯಾರೇ ನಡೆಸುತ್ತಿರುವಂತಹ ಶಾಲಾ ಕಾಲೇಜುಗಳಿರಬಹುದು, ಅದು ಅನುದಾನಿತ ಹಾಗೂ ಅನುದಾನರಹಿತವಾಗಿರಬಹುದು, ಅಲ್ಪಸಂಖ್ಯಾತರಿಗೆ ಅದು ಅನ್ವಯಿಸುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ, ಆದರೆ ಖಾಸಗಿಯವರು ನಡೆಸತಕ್ಕಂಥ ಎಲ್ಲಾ ಕಾಲೇಜುಗಳಲ್ಲಿ ನಾವು ರಿಸರ್ವೇಷನ್ ಅನ್ನು ತರಬಹುದು. ಅಂತ ಹೇಳಿ ಹಾಗಾಗಿ ಸರ್ವೋಚ್ಚ ನ್ಯಾಯಾಲಯದ ಇನ್ನೊಂದು ತೀರ್ಪಿನನ್ವಯ ನಮ್ಮ ರಾಜ್ಯದಲ್ಲಿ ಈ ವರ್ಗದಲ್ಲಿ ಎಷ್ಟು ಪ್ರಪೋರ್ಷನೇಟ್‌ನಲ್ಲಿ ಜನಸಂಖ್ಯೆಯಿದ್ದಾರೆಂದು ನೋಡಿದರೆ ಆಗ ಅವರಿಗೆ ಜಾಸ್ತಿ ಸೀಟುಗಳನ್ನು ರಿಸರ್ವ್ ಮಾಡಬೇಕು.

ಆದರೆ ನಮಗೆ ಸುಪ್ರೀಂಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ 50% ಅನ್ನು ನಾವು ದಾಟುವ ಹಾಗಿಲ್ಲ. ಹಾಗಾಗಿ ಈ ಒಂದು ವಿಧೇಯಕದಲ್ಲಿ ಮೂರು-ನಾಲ್ಕು ಪ್ರಮುಖ ಅಂಶಗಳನ್ನು ನಾವು ಅಳವಡಿಸತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ. ಮೊದಲನೆಯದಾಗಿ ಎಲ್ಲಾ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ : ಪಂಗಡ ಹಾಗೂ ಹಿಂದುಳಿದ ವರ್ಗದವರಿಗೆ 50% ಸೀಟುಗಳನ್ನು ಕಾದಿರಿಸಲಿದ್ದೇವೆ ಅಂದರೆ ಅವರ ಇಂಟರೆಸ್ಟ್ ಅನ್ನು ನಾವು ಸೇಫ್‌ಗಾರ್ಡ್ ಮಾಡಿದ್ದೇವೆ. 50% ಅನ್ನು ಅವರಿಗೆ ಕೊಡಲೇ ಬೇಕೆಂಬುದನ್ನು ಮಾಡಿದ್ದೇವೆ. ಎರಡನೆಯದು ಅವರು ಈ ಫೀ ರೆಗ್ಯುಲೇಟರಿ ಕಮಿಟಿಗೆ ಏನು ಸುಪ್ರೀಂಕೋರ್ಟ್ ಹೇಳಿರುವ ಹಾಗೆ ನಾವೇನು ಕಮಿಟಿಯನ್ನು ಮಾಡಿದ್ದೇವೆ, ಆ ಕಮಿಟಿ ಆಧಾರದ ಮೇಲೆ ಅವರೇನು ಹೇಳಿದ್ದಾರೆ ಅದು ಜಾಸ್ತಿಯಾಯಿತು ಎಂದು ಕೆಲವರು, ಕಡಿಮೆಯಾಯಿತು ಎಂದು ಕೆಲವರು ಹೇಳುತ್ತಿದ್ದಾರೆ. ಜಾಸ್ತಿ ಅಥವಾ ಕಡಿಮೆ ಮಾಡುವ ಅಧಿಕಾರ ಸರ್ಕಾರಕ್ಕಿಲ್ಲ. ಆದರೆ ಅವರೇನು ಹೇಳಿದ್ದಾರೆಂದರೆ ಅಷ್ಟನ್ನಾದರೂ ಅವರು ಸರಿಯಾಗಿ ಮಾಡುತ್ತಿದ್ದಾರೆಯೇ ಎಂಬುದನ್ನು ನೋಡಲಿಕ್ಕೆ ಒಂದು ಮೇಲುಸ್ತುವಾರಿ ಸಮಿತಿಯನ್ನು ಮಾಡಲಿಕ್ಕೆ ನಮಗೆ ಅಧಿಕಾರ ಬೇಕು. ಅದನ್ನು ಈ ವಿಧೇಯಕದಲ್ಲಿ ಸೇರಿಸಿದ್ದೇವೆ. ಇನ್ನೊಂದು ಫೀ ರೆಗ್ಯುಲೇಟರಿ ಕಮಿಟಿ ಮಾತ್ರವಲ್ಲ, ಈ ಓವರ್‌ಸೀಯಿಂಗ್ ಕಮಿಟಿಯನ್ನೂ ಸಹ ಮಾಡಬೇಕು, ಅವರು ಅಡ್ಮಿಷನ್ಸ್ ಸರಿಯಾಗಿ ಮಾಡುತ್ತಿದ್ದಾರೆಯೇ? ಏನು ಮಾಡಿದ್ದಾರೆ? ಮೆರಿಟ್ ಬಂದಿರತಕ್ಕಂಥ ವಿದ್ಯಾರ್ಥಿ ಹೋಗಿ ಕೇಳಿದಾಗ ಅವರಿಗೆ ಅಡ್ಮಿಷನ್ ಕೊಡುತ್ತಾರೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಲಿಕ್ಕೆ ಒಂದು ಓವರ್‌ಸೀಯಿಂಗ್ ಕಮಿಟಿಯನ್ನು ಮಾಡತಕ್ಕಂಥ ಅಧಿಕಾರ ನಮಗೆ ಸುಪ್ರೀಂ ಕೋರ್ಟಿನ ತೀರ್ಪಿನಲ್ಲೇ ಬಂದಿರತಕ್ಕಂಥ ಹಿನ್ನೆಲೆಯಲ್ಲಿ ಈ ವಿಧೇಯಕದೊಳಗೆ ಅದನ್ನು ನಾವು ಸೇರಿಸಿದ್ದೇವೆ. ಹಾಗಾಗಿ ಈ ಮೂರು ಪ್ರಮುಖ ಅಂಶಗಳ ಹಿನ್ನೆಲೆಯಲ್ಲಿ ಈ ವಿಧೇಯಕವನ್ನು ನಾನು ಇವತ್ತು ಸದನದಲ್ಲಿ ಮಂಡಿಸುತ್ತಿದ್ದೇನೆ. ದಯಮಾಡಿ ತಾವು ಈ ಸಭೆ ಅದಕ್ಕೆ ಒಪ್ಪಿಕೊಂಡು ನಮಗೆ ಜವಾಬ್ದಾರಿ ಕೊಟ್ಟರೆ ನಮ್ಮ ರಾಜ್ಯದ ಎಲ್ಲಾ ವಿದ್ಯಾರ್ಥಿಗಳು, ಅದರಲ್ಲಿಯೂ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಹಿತರಕ್ಷಣೆ ಕಾಪಾಡುವುದಕ್ಕಾಗಿ ಮತ್ತು ಯಾವುದೇ ಕಾಲೇಜಿನವರು ಅನಾವಶ್ಯಕವಾಗಿ ಆ ವಿದ್ಯಾರ್ಥಿಗಳಿಗೆ ಹೆಚ್ಚಿನ ಶುಲ್ಕವನ್ನು ವಿಧಿಸದ ಹಾಗೆ ಮತ್ತು ಎಲ್ಲರಿಗೂ ಸಾಮಾಜಿಕ ನ್ಯಾಯ ಸಿಗುವ ಹಾಗೆ ಸರ್ಕಾರಕ್ಕೆ ಒಂದು ಜವಾಬ್ದಾರಿ, ಅಧಿಕಾರ

ಇದರೊಳಗೆ ಬರುವ ಹಾಗೆ ಸುಪ್ರೀಂಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ಈ ತರಹದ ಒಂದು ಕಾನೂನನ್ನು ನಾವು ಮಾಡಬೇಕು. ನಿನ್ನೆ ಇಲ್ಲಿ ಒಂದು ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಒಂದು ಮಾತನ್ನು ಹೇಳಿದ್ದೆ. ಕೇಂದ್ರಸರ್ಕಾರ ಈ ಒಂದು ಕಾನೂನನ್ನು ಮಾಡುವವರೆಗೆ ನಾವು ರಾಜ್ಯ ಸರ್ಕಾರದವರು ಮಾಡಲೇಬೇಕಾದಂಥ ಹಿನ್ನೆಲೆಯಿದೆ, ಇದನ್ನು ನಾವು ಮಾಡದೇ ಹೋದರೆ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಬಹಳ ತೊಂದರೆ ಮತ್ತು ಅನ್ಯಾಯವಾಗಿಬಿಡುತ್ತದೆ. ನಾವು ಈ ಕಾನೂನು ಮಾಡದೇ ಹೋದರೆ ಯಾವುದೇ ಕಾಲೇಜಿನೊಳಗೆ ರಿಸರ್ವೇಷನ್ ಅನ್ನು ಎನ್‌ಫೋರ್ಸ್ ಮಾಡಲಿಕ್ಕೆ ಬರುವುದಿಲ್ಲ. ಈ ಅಧಿಕಾರ ನಮ್ಮ ಸರ್ಕಾರಕ್ಕೆ ಬಾರದೇ ಹೋದರೆ ನಮ್ಮ ರಾಜ್ಯದ ಪರಿಶಿಷ್ಟ ಜಾತಿ:ವರ್ಗದ ಮಕ್ಕಳಿಗೆ ಮತ್ತು ಬ್ಯಾಕ್‌ವರ್ಡ್‌ನ ಮಕ್ಕಳಿಗೆ ರಿಸರ್ವೇಷನ್ ಇರುವುದಿಲ್ಲ ಮತ್ತು ಫೀಸಿನ ಬಗ್ಗೆ ಸಹ ಅದನ್ನು ರೆಗ್ಯುಲೇಟ್, ಕಂಟ್ರೋಲ್ ಮಾಡತಕ್ಕಂಥದ್ದು ಅದನ್ನು ಓವರ್‌ಸೀಯಿಂಗ್ ಮಾಡತಕ್ಕಂಥ ಜವಾಬ್ದಾರಿ, ಅಧಿಕಾರ ಸಹ ನಮ್ಮಿಂದ ತಪ್ಪಿಹೋಗುತ್ತದೆ. ಹಾಗಾಗಿ ತೀರಾ ಅವಶ್ಯಕತೆಯಿರತಕ್ಕಂಥ ಈ ಒಂದು ಕಾನೂನನ್ನು ನಾನು ಈ ಸದನದಲ್ಲಿ ತಮ್ಮ ಎದುರಿಗೆ ಮಂಡಿಸಿದ್ದೇನೆ. ಇದನ್ನು ತಾವೆಲ್ಲಾ ಪರಾಂಬರಿಸಿ ನೋಡಿ ಇದಕ್ಕೆ ಬೆಂಬಲ ಕೊಟ್ಟು ಪಾಸ್ ಮಾಡಿಕೊಡಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಧರಂಸಿಂಗ್ (ವಿರೋಧ ಪಕ್ಷದ ನಾಯಕರು) : ಸಭಾಧ್ಯಕ್ಷರೇ, ಇದು ಕರ್ನಾಟಕ ವೃತ್ತಿ ಶಿಕ್ಷಣ ಮಸೂದೆಯನ್ನು ಇವತ್ತು ಮಂಡಿಸಿದ್ದಾರೆ ಮತ್ತು ಮಂಡಿಸತಕ್ಕಂಥ ಕಾಲದಲ್ಲಿ ಬಹಳಷ್ಟು ವಿಷಯಗಳನ್ನು ಹೇಳಿದ್ದಾರೆ, ಕೊನೆಯದಾಗಿ ಈ ರಾಜ್ಯದಲ್ಲಿರತಕ್ಕಂಥ ಪರಿಶಿಷ್ಟ ಪಂಗಡ : ಜಾತಿ, ಹಿಂದುಳಿದ ವರ್ಗದವರ, ಏಕೋ ಅಲ್ಪಸಂಖ್ಯಾತರ ಪ್ರಸ್ತಾಪ ಮಾಡಲಿಲ್ಲ, ಅದೆಲ್ಲವನ್ನೂ ನಾವು ನೋಡಿ.

ಶ್ರೀ ಡಿ. ಹೆಚ್. ಶಂಕರಮೂರ್ತಿ : ಅಲ್ಪಸಂಖ್ಯಾತರ ವಿದ್ಯಾಸಂಸ್ಥೆಗಳಿಗೆ ರಿಸರ್ವೇಷನ್ ಮಾಡುವ ಅಧಿಕಾರ ನಮಗೆ ಇಲ್ಲ, 93 ಅಮೆಂಡ್‌ಮೆಂಟಿನಲ್ಲಿ ಅದು ಸೇರಿಲ್ಲ.

ಶ್ರೀ ಧರಂಸಿಂಗ್ : ಅದರ ಬಗ್ಗೆ ಸುಪ್ರೀಂಕೋರ್ಟಿನ ತೀರ್ಪು ಇದೆಯೆಂಬುದು ನಮಗೆ ಗೊತ್ತಿದೆ. ಆದರೆ ಒಂದು ಮಾತನ್ನು ನಾನು ಹೇಳುತ್ತಿದ್ದೇನೆ. ಈ ವಿಧೇಯಕವನ್ನು ತರತಕ್ಕಂಥ ಸಂದರ್ಭದಲ್ಲಿ ಈ ಸರ್ಕಾರಕ್ಕೆ ಏನಾಗಿದೆಯೆಂದು ನನಗೆ ಗೊತ್ತಾಗುತ್ತಿಲ್ಲ, ಇವತ್ತು ಅಧಿಕಾರಿಗಳು ಕೂಡ ಕುಳಿತಿದ್ದಾರೆ. ಸಮಗ್ರವಾದ ಈ ಮಸೂದೆಯನ್ನು ತರತಕ್ಕಂಥ ಕಾಲದಲ್ಲಿ ನಾನು

ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಎಷ್ಟೋ ಸಭೆಗಳನ್ನು ನಡೆಸಿದ್ದೆನು, ಆ ಸಭೆಗೆ ಶಂಕರಮೂರ್ತಿ, ಮಾನ್ಯ ಯಡಿಯೂರಪ್ಪನವರು ಬಂದಿದ್ದರು. ಎಷ್ಟೋ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಅವರು ಕೊಟ್ಟ ಮೇಲೆ ಅವರ ಹಾಗೂ ನಮ್ಮ ನಡುವೆ ಬಹಳಷ್ಟು ಭಿನ್ನಾಭಿಪ್ರಾಯಗಳೂ ಕೂಡ ಬಂದಿದೆ.

ಇವತ್ತು ಮಸೂದೆ ತರತಕ್ಕಂಥ ಕಾಲದಲ್ಲಿ ಮೊದಲು ನೋಟಿಫಿಕೇಷನ್ ಏನು? ಮೊದಲು ತಾವು ಏನು ಹೇಳಿದಿರಿ, ಯಾರ್ಯಾರು ಶಿಕ್ಷಣ ಸಂಸ್ಥೆಗಳನ್ನು ರಾಜ್ಯದಲ್ಲಿ ನಡೆಸುತ್ತಿದ್ದಾರೆ ಅವರು ಯಾರೇ ಆಗಲಿ ಅವರು ಇದನ್ನು ಪಾಲಿಸದೇ ಹೋದರೆ ಅವರಿಗೆ 7 ವರ್ಷ ಶಿಕ್ಷೆ ಅಂತ ಹೇಳಿದಿರಿ. ಮತ್ತೇನು ತಾವು ಹೇಳಿದಿರಿ ಒನ್ಲಿ ಸಿ ಇ ಟಿ ಪರೀಕ್ಷೆಯಲ್ಲಿ ಎಷ್ಟು ಮಾರ್ಕ್ಸ್ ಬರುತ್ತದೆಯೋ ಅದರ ಆಧಾರದ ಮೇಲೆ ಇಟ್ಟುಕೊಂಡು ಅಂತ, ಮತ್ತು 7 ವರ್ಷ ಶಿಕ್ಷೆ ಕೊಡತಕ್ಕಂಥಾದ್ದನ್ನು ಬಿಟ್ಟುಬಿಟ್ಟಿರಿ. ನಮ್ಮ ವಾದ ಏನು ಅಂದರೆ ಈ ಸಿ ಇ ಟಿ ಕೇವಲ ಪಟ್ಟಣ ಪ್ರದೇಶದಲ್ಲಿರತಕ್ಕಂಥ ಜನರು ಅಲ್ಲ ಇವತ್ತು ರಾಜ್ಯದ ಎಲ್ಲಾ ಕಡೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ಏನು ಇರುತ್ತಾರೆ ಹಳ್ಳಿಯಲ್ಲಿ, ರೈತರ ಮಕ್ಕಳು ಏನು ಇದ್ದಾರೆ, ಅವರಿಗೆ ಅನುಕೂಲವಾಗಲು ಸಿ ಇ ಟಿ ಕೂಡಿಸಿ ಮಾಡಬೇಕು ಅಂತ. ಮತ್ತೆ ಮಸೂದೆಗಳನ್ನು ಮಾಡಿ ಮಾಡಿ ಕೊಟ್ಟಿದ್ದಾರೆ. ನಾನು ತಮಗೆ ಹೇಳಬಯಸುತ್ತಿದ್ದೇನೆ ಮಾನ್ಯ ಅಧ್ಯಕ್ಷರೇ, ಇಡೀ ರಾಷ್ಟ್ರದಲ್ಲಿ ಕರ್ನಾಟಕ ಸರ್ಕಾರ, ಆಗಿನ ಸರ್ಕಾರ, ಆಗಿನ ಸರ್ಕಾರದಲ್ಲಿ ಮಾನ್ಯ ಹೊರಟ್ಟಿಯವರೂ ಸಹ ನಮ್ಮ ಜೊತೆಯಲ್ಲಿದ್ದರು. ಶಿಕ್ಷಣ ಮಸೂದೆ ಪಾಸ್ ಮಾಡತಕ್ಕಂಥ ಯಾರಾದರೂ ಧೈರ್ಯ ತಾಳಿದ್ದರೆ ಆಗಿನ ಸರ್ಕಾರ ಎಲ್ಲರ ಸಮಕ್ಷಮದಲ್ಲಿ ಶಿಕ್ಷಣ ಮಸೂದೆಯನ್ನು ನಾವು ಎರಡೂ ಸದನಗಳಲ್ಲಿ ಪಾಸ್ ಮಾಡಿದ್ದೇವೆ. ನಮ್ಮದು ವಾದ ಏನೆಂದರೆ ಸೆಂಟ್ರಲ್ ಸ್ಟೇಷನ್ ಆಗಬೇಕು. ಅದೊಂದೇ ಪರ್ಯಾಯ ಮಾರ್ಗ. ಅಷ್ಟೇ ಅಲ್ಲ ನಾನು ಈ ಸದನದ ಹಾಗೂ ಆ ಸದನದ ಎಲ್ಲಾ ಸದಸ್ಯರನ್ನು ಕರೆದುಕೊಂಡು ಹೋಗಿ ಮಾನ್ಯ ಅರ್ಜುನ್‌ಸಿಂಗ್‌ರವರನ್ನು ಭೇಟಿ ಮಾಡಿದ್ದೆವು, ಅವರೂ ಕೂಡ ಬಂದಿದ್ದರು, ಅವರ ಸಮಕ್ಷಮದಲ್ಲಿ ಮಾತನಾಡಿದೆವು. ಆಗ ಮಾನ್ಯ ಅರ್ಜುನ್‌ಸಿಂಗ್‌ರವರು ಹೆಚ್. ಆರ್. ಡಿ ಮಂತ್ರಿಗಳಾಗಿದ್ದರು ಅವರಿಗೆ ಒಂದು ಕ್ಲಾರಿಟಿ ಇದೆ. ಈ ದೇಶದ, ಈ ಸಮಾಜದ ಒಳಿತಿಗಾಗಿ, ಶೋಷಿತ ವರ್ಗದ ಬಗ್ಗೆ ಒಂದು ರೀತಿ ಹೆಚ್ಚಿನ ಆದ್ಯತೆ ಕೊಡತಕ್ಕಂಥಾದ್ದರಲ್ಲಿ ಅವರು ಎರಡನೇ ಮಾತಿಲ್ಲ. ಮತ್ತೆ ಮಾನ್ಯ ಪ್ರಧಾನ ಮಂತ್ರಿಗಳನ್ನೂ ಕೂಡ ಭೇಟಿ ಮಾಡಿದ್ದರು. ಆವತ್ತು ನಾನು ಇರಲಿಲ್ಲ. ನಮ್ಮ ಮಾನ್ಯ ಸಿದ್ದರಾಮ್‌ಯ್ಯನವರ ನೇತೃತ್ವದಲ್ಲಿ ಮಾನ್ಯ

ಖರ್ಗೆಯವರು, ಮಾನ್ಯ ದೇಶಪಾಂಡೆಯವರು ಮತ್ತು ಮಾನ್ಯ ಜಗದೀಶ್ ಶೆಟ್ಟರೂ ಸಹ ಇರಬಹುದು, ಎಲ್ಲರೂ ಹೋಗಿದ್ದರು. ಸಮಗ್ರವಾದ ಮಸೂದೆ ತರತಕ್ಕಂಥ ರೀತಿಯಲ್ಲಿ ಇದನ್ನೆಲ್ಲಾ ಮಾಡಿದ್ದೆವು. ಇವತ್ತು ನಾನು ಏನು ಹೇಳುತ್ತಿದ್ದೇನೆ ಅಂದರೆ ಹೋದ ವರ್ಷ ಆದಂಥ ಈ ಒಂದು ತೊಂದರೆಯಾಗ ಬಾರದು ಎನ್ನತಕ್ಕಂಥ ರೀತಿಯಲ್ಲಿ ಮ್ಯಾನೇಜ್‌ಮೆಂಟ್‌ನವರು ಸುಪ್ರೀಂ ಕೋರ್ಟ್‌ಗೆ ಹೋದರು. ಈ ರಾಜ್ಯದಲ್ಲಿರತಕ್ಕಂಥ ಜನರಿಗೆ ಬಡ ಮಕ್ಕಳಿಗೆ ನಾವು ನ್ಯಾಯ ಕೊಡಬೇಕಾದರೆ ಕೇವಲ ಬಿಲ್ ಪಾಸ್ ಮಾಡಿದರೆ ಆಗುವುದಿಲ್ಲ ಅದಕ್ಕೆ ಒಂದು ಕಮಿಟ್‌ಮೆಂಟ್ ಬೇಕಾಗುತ್ತದೆ. ಸರ್ಕಾರದ್ದು ಕಮಿಟ್‌ಮೆಂಟ್ ಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ತಾವು ಯಾವ ತರದ ಒಂದೂ ಕೆಲಸ ಮಾಡಿಲ್ಲ. ಇವತ್ತು ನಮ್ಮನ್ನೂ ಕೂಡ ಕರೆಸಿಲ್ಲ. ಮಾತನಾಡತಕ್ಕಂಥ ಸೌಜನ್ಯತೆ ಕೂಡ ತೋರಿಸಿಲ್ಲ. ಮಾನ್ಯ ಅಧ್ಯಕ್ಷರೇ, ಸ್ವಲ್ಪ ಕೇಳಿ, ಈಗ ಮೆಡಿಕಲ್ ಸೀಟು ಕೊಡತಕ್ಕಂಥಾದ್ದು ಸಿ ಇಟಿ ಮಾರ್ಕ್ಸ್ ಮೇಲೆ ಇಂಜಿನಿಯರಿಂಗ್ ಸೀಟು ಕೊಡುವುದು ಪಿ ಯು ಸಿ ಮತ್ತು ಸಿ ಇಟಿ ಮಾರ್ಕ್ಸ್ ಮೇಲೆ. ಇದೇನು ಇದು? ಮತ್ತೆ ತಾವು ನೋಟಿಫಿಕೇಷನ್ 22ನೇ ತಾರೀಖು ಮಾಡಿದ್ದೀರಿ. ಇದೇನು ದ್ವಂದ್ವ? ಮತ್ತೊಂದು ತಾವು ಹೇಳಬೇಕಾಗುತ್ತದೆ. ನಾನು ಮುಖ್ಯಮಂತ್ರಿಯಾದ ಮೇಲೆ ಮಾನ್ಯ ಅರ್ಜುನ್‌ಸಿಂಗ್‌ರವರನ್ನು ಕರ್ನಾಟಕ ರಾಜ್ಯಕ್ಕೆ ಕರೆದು ಇಡೀ ರಾಷ್ಟ್ರದ ಶಿಕ್ಷಣ ಸಚಿವರ ಸಮ್ಮೇಳವನ್ನು ಇಲ್ಲಿ ಮಾಡಿದ್ದೇವೆ. ಬೇರೆ ಬೇರೆ ರಾಜ್ಯದಲ್ಲಿರತಕ್ಕಂಥ ಸಾಮಾಜಿಕ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಒಂದೇ ರೀತಿ ನಾವು ಯಾವ ತರಹದ ಲೆಜಿಸ್ಲೇಷನ್ ಮಾಡಬೇಕು ಎನ್ನತಕ್ಕಂಥಾದ್ದನ್ನೂ ಕೂಡ ನಾವು ಮಾಡಿದ್ದೇವೆ. ತಮಗೆಲ್ಲಾ ಕೂಡ ಅದು ಗೊತ್ತಿದೆ. ಇವತ್ತು ತಾವು ಮಸೂದೆ ತಂದಂತಹ ರೀತಿಯಲ್ಲಿ ಇವತ್ತು ಫ್ರೀಸ್ಟ್ರಕ್ಚರ್, ಬೇರೆ ಬೇರೆ ತರಹದ್ದೂ ಕೂಡ ಇದೆ. ಇವತ್ತು ನಿಮ್ಮ ವಿಧೇಯಕಕ್ಕೆ ವಿರೋಧ ಮಾಡತಕ್ಕಂಥಾದ್ದು ಅಲ್ಲ. ನಿನ್ನೆ ಕೂಡ ತಾಂತ್ರಿಕ ವಿಶ್ವವಿದ್ಯಾನಿಲಯಗಳ ಮಸೂದೆ ಬಂದಾಗ ಸುಮಾರು 16 ಜನ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ವಿಶೇಷವಾಗಿ ಮಾನ್ಯ ಖರ್ಗೆಯವರು ಮತ್ತು ಇತರೇ ಸದಸ್ಯರೂ ಕೂಡ ಬೆಳಕು ಚೆಲ್ಲಿದರು. ತಾವು ಒಬ್ಬ ಶಿಕ್ಷಣ ಸಚಿವರಾಗಿ, ಸ್ಪಷ್ಟವಾದ ಉತ್ತರ ಕೊಡಬೇಕಾಗಿತ್ತು. ಸ್ಪಷ್ಟವಾದ ಉತ್ತರ ಕೊಡಲಾರದೇ ವಿಧೇಯಕ ಮಂಡನೆ ಮಾಡಿದಿರಿ. ನಮಗೆ ಬೇರೆ ಗತ್ಯಂತರವಿರಲಿಲ್ಲ. ಬೇರೆ ವಿಚಾರಗಳು ಬೇರೆ. ಇವತ್ತು ತಾವು ಈ ಮಸೂದೆ ತಂದಂತಹ ಕಾಲದಲ್ಲಿ ನಮ್ಮಗಳ ಅಭಿಪ್ರಾಯ ಕೇಳಬೇಕು, ಅಭಿಪ್ರಾಯ ಏಕೆಂದರೆ ಈ ರಾಜ್ಯದಲ್ಲಿರತಕ್ಕಂಥ ಬಡವರ ಭವಿಷ್ಯ ನಿರ್ಮಾಣ

ಮಾಡತಕ್ಕಂಥ ವಿಧೇಯಕವನ್ನು ತಾವು ತಂದಿದ್ದೀರಿ. ಎಲ್ಲರಿಗೂ ಅವಕಾಶ ಕಲ್ಪಿಸಿ ಕೊಡತಕ್ಕಂಥ ರೀತಿಯಲ್ಲಿ ನಾವು 6 ಮೆಡಿಕಲ್ ಕಾಲೇಜುಗಳನ್ನು ತೆರೆಯತಕ್ಕಂಥ ಅರ್ಥ ಏನು? ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈ ರಾಜ್ಯದಲ್ಲಿರತಕ್ಕಂಥ 600 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮೆಡಿಕಲ್ ಕಾಲೇಜುಗಳಲ್ಲಿ ಅವಕಾಶ ಸಿಗುತ್ತಿದೆ. 1961ರಲ್ಲಿ ಬಳ್ಳಾರಿ ಮೆಡಿಕಲ್ ಕಾಲೇಜು ಒಂದು ಮಾತ್ರ ಇತ್ತು. ನಮ್ಮ ಸಮ್ಮಿಶ್ರ ಸರ್ಕಾರ ಇವತ್ತು 6 ಮೆಡಿಕಲ್ ಕಾಲೇಜು ತೆರೆಯಬೇಕು ಹಾಗೂ ಎಲ್ಲಾ ಕಡೆಗೆ ಮುಂದೆ ಕೂಡ ಕಾರವಾರದಲ್ಲಿ ತೆರೆಯಬೇಕು ಅಂತ ನಿರ್ಧರಿಸಿತ್ತು. ಆದರೆ ನೀವು ಏನು ಮಾಡುತ್ತೀರೊ ಗೊತ್ತಿಲ್ಲ. ಧಾರವಾಡದ ವಾಲ್ಮಿಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ, ಆದರೆ ಇವತ್ತು ಮಾನ್ಯ ಜಗದೀಶ ಶೆಟ್ಟರ್‌ರವರು ಮತ್ತು ಮಾನ್ಯ ಹೊರಟ್ಟಿಯವರು ಏನೋ ಹುಬ್ಬಳ್ಳಿಯಲ್ಲಿ ಮಾಡಬೇಕು ಅಂತ ಅನ್ನುತ್ತಾರೆ.

ಶ್ರೀ ಜಗದೀಶ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಪ್ರತಿಪಕ್ಷದ ನಾಯಕರಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ. ಹುಬ್ಬಳ್ಳಿಯಲ್ಲಿ ಮಾಡಬೇಕು ಅಂತ ಮಾನ್ಯ ಹೊರಟ್ಟಿಯವರಾಗಲಿ, ಜಗದೀಶ್ ಶೆಟ್ಟರ್ ಆಗಲಿ ಎಲ್ಲಿಯೂ ನಮ್ಮ ಅಭಿಪ್ರಾಯ ಎಕ್ಸ್‌ಪ್ರೆಸ್ ಮಾಡಿಲ್ಲ. ಏಕೆಂದರೆ ಕಾರ್ಡ್ ಸ್ಟ್ರೈಟ್ ಇರಲಿ. ಜಗದೀಶ್ ಶೆಟ್ಟರ್ ಮತ್ತು ಮಾನ್ಯ ಹೊರಟ್ಟಿಯವರ ಹೆಸರನ್ನು ತಾವು ತೆಗೆದುಕೊಂಡಿರಿ. ವಾಲ್ಮಿಯಲ್ಲಿ ಆಗಬೇಕು ಅಂತ ಹೇಳುವವರು ನಾವು. ಇವತ್ತು ಯಾವುದೇ ಸರ್ಕಾರ ಇರಲಿ ಆ ಸರ್ಕಾರ ತೆಗೆದುಕೊಂಡ ನಿರ್ಣಯಕ್ಕೆ ನಾವು ಬದ್ಧರಿದ್ದೇವೆ. ಒಂದು ಸಲ ಸರ್ಕಾರ ನಿರ್ಣಯ ತೆಗೆದುಕೊಂಡ ಮೇಲೆ ನಾವು ಬದ್ಧರಿದ್ದೇವೆ.

ಶ್ರೀ ಎನ್ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಈಗ ರಾಜ್ಯಪಾಲರು, ಚೀಫ್ ಜಸ್ಟೀಸ್ ನಾನು ಮತ್ತು ಮಾನ್ಯ ಜಗದೀಸ್ ಶೆಟ್ಟರ್ . . .

ಶ್ರೀ ಡಿ ಎಚ್ ಶಂಕರಮೂರ್ತಿ : ಒಂದೇ ಒಂದು ನಿಮಿಷ ತಾವು ಈಲ್ಡ್ ಆಗುವುದಾದರೆ. ನಾನು ತಮಗೊಂದು ಧನ್ಯವಾದ ಹೇಳಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ನಮ್ ರಾಜ್ಯದಲ್ಲಿ ಸರ್ಕಾರೀ ವೈದ್ಯಕೀಯ ಕಾಲೇಜುಗಳು ಇರುವುದು (4). ಅನುದಾನಿತ ಕಾಲೇಜುಗಳು ತುಂಬಾ ಇವೆ. ಹಾಗಾಗಿ ಹಿಂದಿನ ಸರ್ಕಾರ ಶ್ರೀಯುತ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಂತಹ ಸರ್ಕಾರ ಈ ತಾಪತ್ರಯವನ್ನು ನೋಡಿ ರಾಜ್ಯದೊಳಗೆ ಸುಮಾರು 40 ವರ್ಷಗಳ ನಂತರ ಇರಬಹುದು ಬಳ್ಳಾರಿ ಮೆಡಿಕಲ್ ಕಾಲೇಜು 1961-62ರ ನಂತರ ಯಾವುದೇ ಮೆಡಿಕಲ್ ಕಾಲೇಜು ಸರ್ಕಾರ ಒಪನ್ ಮಾಡಿರಲಿಲ್ಲ. 6 ಮೆಡಿಕಲ್

ಕಾಲೇಜುಗಳನ್ನು ಪ್ರಾರಂಭ ಮಾಡತಕ್ಕಂಥ ಒಂದು ದಿಟ್ಟ ನಿರ್ಣಯವನ್ನು ಅವರು ತೆಗೆದುಕೊಂಡರು. ಅದಕ್ಕೆ ನಾವು ಅವರನ್ನು ಅವತ್ತು ಅಭಿನಂದಿಸಿದೆವು. ಆ 6 ಮೆಡಿಕಲ್ ಕಾಲೇಜುಗಳಿಗೆ, ತಾವೇನು ಒಂದು ಒಳ್ಳೆಯ ನಿರ್ಣಯ ತೆಗೆದುಕೊಂಡು ರಾಜ್ಯಕ್ಕೆ ವಿದ್ಯಾರ್ಥಿಗಳ ದೃಷ್ಟಿಯಿಂದ ಒಂದು ಒಳ್ಳೆಯ ನಿರ್ಣಯ ತೆಗೆದುಕೊಂಡಿದ್ದಿರಿ ಅವು ಪ್ರಗತಿ ಹಂತದಲ್ಲಿವೆ. ತಾವೇನು ಪ್ರಾರಂಭ ಮಾಡಿದಿರಿ, ಚೆನ್ನಾಗಿಯೇ ಪ್ರಾರಂಭ ಮಾಡಿದಿರಿ. 6 ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆನ್ನುವ ಪ್ರಾಮಾಣಿಕ ಪ್ರಯತ್ನವನ್ನು ನಾವು ನಡೆಸಿದ್ದೇವೆ. ತಾವು ಹಾಕಿಕೊಟ್ಟ ವೇಗದಲ್ಲಿ ಯಾವುದೇ ಕಡಿಮೆಯಾಗಿಲ್ಲ. ಕೆಲಸಗಳು ಚನ್ನಾಗಿಯೇ ನಡೆಯುತ್ತಿವೆ. ಆ ಬಗ್ಗೆ ತಮಗೆ ಒಂದು ಧನ್ಯವಾದ ಹೇಳಬೇಕು. ಅದಕ್ಕೆ ಅವಕಾಶ ಕೊಡಿ ಅಂದೆ ಅಷ್ಟೇ.

ಶ್ರೀ ಎನ್ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಏಕೆ ನಾವು ಮಾಡಿದೆವು ಅಂದರೆ ರೂರಲ್ ಸ್ಟೂಡೆಂಟ್ಸ್‌ಗೆ ಅನುಕೂಲವಾಗಲಿ ಎಂದು. ಬಹಳಷ್ಟು ಅನುಕೂಲವಾಗಲಿ ಎಂದು ಕೂಡ ಪ್ರೈವೇಟ್ ಮ್ಯಾನೇಜ್‌ಮೆಂಟ್ಸ್ ಬರುತ್ತಿವೆ. ಅದಕ್ಕೆ ನಾವು ಸರ್ಕಾರಿ ವೈದ್ಯಕೀಯ ಕಾಲೇಜು ತೆರೆಯುವಂಥಾದ್ದನ್ನು ಮಾಡಿದ್ದೇವೆಂದು ಹೇಳುತ್ತಿದ್ದೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಸಚಿವರೇ, ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಮತ್ತೊಂದು ನಿರ್ಣಯ ಮಾಡಿದರು. ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದೆ, ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ತಂದೆ ಮಾನ್ಯ ಮೆಡಿಕಲ್ ಎಜ್ಯುಕೇಶನ್ ಮಂತ್ರಿಗಳ ಗಮನಕ್ಕೆ ತಂದೆ. ಅದು ಏನೆಂದರೆ ಕಾರವಾರದಲ್ಲಿ ಈಗ ಮೆಡಿಕಲ್ ಕಾಲೇಜು ಇಲ್ಲ. ಹಾಗಾಗಿ ಕಾರವಾರ, ಗುಲ್ಬರ್ಗಾ ಕೊಪ್ಪಳದಲ್ಲಿ ಮಾಡಬೇಕೆಂದು ಸರ್ಕಾರದಲ್ಲಿ ನಿರ್ಣಯ ಆಯಿತು. ಕಡತ ಹಣಕಾಸಿನ ಇಲಾಖೆಗೂ ಬಂತು. ನಾನು ಹೇಳಿದೆ ಈ ವರ್ಷವಾದರೂ ಮಂಜೂರು ಮಾಡಿ ಅಂತ. ಮಾನ್ಯ ಮೆಡಿಕಲ್ ಎಜ್ಯುಕೇಶನ್ ಮಂತ್ರಿಗಳು ನನಗೆ ಒಂದು ಪತ್ರ ಬರೆದಿದ್ದಾರೆ. ಎರಡನೇ ಹಂತದಲ್ಲಿ ನಾವು ಪರಿಶೀಲನೆ ಮಾಡುತ್ತೇವೆಂದು, ಈ ವಿಷಯ ತಮ್ಮ ಗಮನಕ್ಕೆ ತರುತ್ತಿದ್ದೇನೆ ಏಕೆಂದರೆ ಎಲ್ಲಿ ಮೆಡಿಕಲ್ ಕಾಲೇಜು ಇಲ್ಲ ಆ ಭಾಗಕ್ಕೆ ಪ್ರಾತಿನಿಧ್ಯ, ಪ್ರಾಶಸ್ತ್ಯ ಕೊಟ್ಟರೆ ಒಳ್ಳೆಯದು ಅಂತ ತಮಗೆ ಒಂದು ಸಲಹೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಮಂತ್ರಿಗಳೇ, ಈ ಮೂರು ಜಿಲ್ಲೆಗಳಲ್ಲಿ ಬಹಳ ಅವಶ್ಯಕತೆ ಇದೆ. ಕಾರವಾರ, ಗುಲ್ಬರ್ಗ ಮತ್ತು ಕೊಪ್ಪಳದಲ್ಲಿ. ಈಗ ಅನೌನ್ಸ್ ಮಾಡಿ.

ಶ್ರೀ ಡಿ.ಎಚ್.ಶಂಕರ್‌ಮೂರ್ತಿ : ಮಾನ್ಯ ಅಧ್ಯಕ್ಷರೇ ಮಾನ್ಯ ಗೌರವಾನ್ವಿತ ಸದಸ್ಯರುಗಳು ಹೇಳಿದರು. ಇದು ಒಳ್ಳೆಯ ಅಭಿಪ್ರಾಯ ಇದೆ. 6 ಮೆಡಿಕಲ್ ಕಾಲೇಜುಗಳ ನಿರ್ಮಾಣ ಮುಗಿದ ತಕ್ಷಣ ಇವುಗಳನ್ನು ಕಂಪ್ಲೀಟ್ ಮಾಡಬೇಕಾಗಿದೆ. ಸಾಕಷ್ಟು ಹಣ ಹಿಂದಿನ ಸರ್ಕಾರ ಬಿಡುಗಡೆ ಮಾಡಿತ್ತು, ಅದಕ್ಕಿಂತ ಜಾಸ್ತಿ ಹಣವನ್ನು ನಾವು ಬಿಡುಗಡೆ ಮಾಡಿ ಅವು ಪ್ರಗತಿ ಪಥದಲ್ಲಿವೆ. ಈಗ ತುಂಬಾ ಚನ್ನಾಗಿ ಕೆಲಸ ಆಗುತ್ತಿದೆ. ಸಿವಿಲ್ ವರ್ಕ್ಸ್ ಎಲ್ಲಾ ತುಂಬಾ ಚೆನ್ನಾಗಿ ಬರುತ್ತಿವೆ. ಬೇರೆ ಸ್ಟ್ಯಾಫ್ ಸಿಗುತ್ತಿಲ್ಲ ಎನ್ನುವ ಸಮಸ್ಯೆ ಇದೆ. ಇವು ಮುಗಿದ ತಕ್ಷಣ ಇನ್ನು ಉಳಿದ 3 ಮಾಡುವುದು ಏನೂ ತಪ್ಪಲ್ಲ. ಮಾಡಲೇಬೇಕು. ಅದು ಬಿಟ್ಟು ಕರ್ನಾಟಕಕ್ಕೆ ಬೇರೆ ದಾರಿ ಇಲ್ಲ ಇದು ಬಹಳ ಒಳ್ಳೆಯ ಸಲಹೆ ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಎನ್ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಮೆಡಿಕಲ್ ಕಾಲೇಜು ಪ್ರಾರಂಭ ಮಾಡಿದ ಮೇಲೆ ಪ್ರತಿ ವರ್ಷ ದುಡ್ಡು ಕೊಡಲೇಬೇಕಾಗುತ್ತದೆ. ಕೆಲಸ ನಡೆಯಲೇಬೇಕಾಗುತ್ತದೆ. ತಾವು ಮಾಡುತ್ತಿದ್ದೀರಿ ತಮಗೂ ಕೂಡ ಧನ್ಯವಾದಗಳು. ಮಾನ್ಯ ಯಡಿಯೂರಪ್ಪನವರು ಮತ್ತು ತಾವು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಬಂದು ಹೇಳಿದಿರಿ ಶಿವಮೊಗ್ಗದಲ್ಲಿ ಮೆಡಿಕಲ್ ಕಾಲೇಜು ಆಗಬೇಕು ಅಂತ. ಆಗ ನಾನು ಹೇಳಿದೆ ಮುಖ್ಯಮಂತ್ರಿಯಾಗಿ ನಾನು ಮಾಡಿ ಕೊಡುತ್ತೇನೆಂದು. ಅದೇ ರೀತಿ ಪ್ರಾರಂಭ ಮಾಡಿದ್ದೇವೆ. ನಾನು ಏಕೆ ಈ ಮಾತು ಹೇಳುತ್ತಿದ್ದೇನೆಂದರೆ ಇವತ್ತಿನದಿವಸ ಹಳ್ಳಿ ಪ್ರದೇಶದಲ್ಲಿರತಕ್ಕಂಥ ಪ್ರತಿಭಾವಂತ ವಿದ್ಯಾರ್ಥಿಗಳ ಮೇಲೆ ಕಣ್ಣು ಹಾಕಬೇಕು. ತಾವೇನು ಈಗ ಈ ವಿಧೇಯಕವನ್ನು ತರುತ್ತಿದ್ದೀರಿ ಇದರ ಬಗ್ಗೆ ತಾವು ಎಲ್ಲಾ ವಿರೋಧಪಕ್ಷದ ನಾಯಕರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುವುದರಲ್ಲಿ ವಿಫಲರಾಗಿದ್ದೀರಿ. you have finleor to take an oppinion leaders into confidence. ನಮ್ಮಗಳ ಜೊತೆ ಕನ್‌ಸಲ್‌ಟೇಶನ್ ಏಕೆ ಆಗುತ್ತಿಲ್ಲ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಇದೇನು ಬುಲ್‌ಡೋಜ್ ಮಾಡುತ್ತಾ ಹೋಗುತ್ತಿದ್ದೀರಿ. ಈಗ ನಿಮ್ಮ ಧೋರಣೆ ಬಗ್ಗೆ ನಾವು ಪ್ರತಿಭಟನೆ ಮಾಡತಕ್ಕಂಥಾದ್ದಕ್ಕೆ ಅವಕಾಶ ಕೊಡಬೇಡಿ.

ಕೊನೆಯಪಕ್ಷ ಈ ಒಂದು ಬಿಲ್ ತರುವಾಗ, ರಾಜ್ಯದ ಹಿತದೃಷ್ಟಿಯಿಂದ ಆಗಬೇಕು. ಯೂನಿಫಾರಂ ಲಾ ಆಗಬೇಕು, ಇವತ್ತು ಕೇಂದ್ರದಿಂದಲೂ ಕೂಡ ಬಂದಿದೆ, ಯಾವಾಗ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಕೊಟ್ಟ ಮೇಲೆ ಪ್ರಧಾನಮಂತ್ರಿಗಳು ಏನು ಮಾಡಿದ್ದಾರೆ, ಪಾರ್ಲಿಮೆಂಟ್‌ನಲ್ಲಿ, ವಿಶೇಷವಾಗಿ ಸುಪ್ರೀಂಕೋರ್ಟ್ ತೀರ್ಪು ಮಂಡನೆ ಮಾಡಿ, ಇದಕ್ಕೆ ನಾವು ಸಂರಕ್ಷಣೆ

ಕೊಡಬೇಕೆಂದು ಮಾನ್ಯ ಅರ್ಜುನ್‌ಸಿಂಗ್‌ರವರೂ ಕೂಡ ಹೇಳಿದ್ದಾರೆ. ಇವತ್ತು ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಬಂದ ಮೇಲೆ ಏನಾಯಿತು, ಅದರ ಬಗ್ಗೆ ನಾವು ಮಾತನಾಡುವುದಲ್ಲ, ಈ ದೇಶದಲ್ಲಿರುವ ಅಲ್ಪಸಂಖ್ಯಾತರ, ಸಾಮಾನ್ಯ ದೀನದಲಿತರ, ಹಿಂದುಳಿತ ವರ್ಗದ ವಿದ್ಯಾರ್ಥಿಗಳಲ್ಲಿ ನಮ್ಮ ಭವಿಷ್ಯ ವೇನೆಂಬುದಾಗಿ ಹುಟ್ಟುತ್ತದೆ. ಇವತ್ತು ಅದೂ ಕೂಡ ಚರ್ಚೆಯಾಗಿದೆ, ಅದರ ಆದೇಶವನ್ನೂ ಕೂಡ ಸರ್ಕಾರಕ್ಕೆ ಕೊಟ್ಟಿದ್ದಾರೆ, ಆ ಒಂದು ಹಿನ್ನೆಲೆಯಲ್ಲಿ ಫೀ ಸ್ಟ್ರಕ್ಚರ್ ಏನಿದೆ ಮತ್ತೊಂದನ್ನು ಯಾವ ರೀತಿಯಾಗಿ ಮಾಡಬೇಕೆಂಬುದರ ಬಗ್ಗೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಇವತ್ತು ನಮ್ಮ ಚೆಲುವರಾಯಸ್ವಾಮಿ, ಬೇರೆ ಮಂದಿ ಯಾಕೋ ಬಂದಿಲ್ಲ. ಅವರೆಲ್ಲಾ ಎದ್ದು ನಿಂತರೆ ನಾವು ಏನು ಮಾಡಬೇಕು. ನಾನೇನು ಹೇಳುವುದೆಂದರೆ ಈ ವಿಧೇಯಕವನ್ನು ತರುವುದಕ್ಕೆ ಮುಂಚೆ, ನೀವು ಕನ್ಸಲ್ಟೇಷನ್ ಮಾಡಿಲ್ಲ. ಈಗಿನ ಸರ್ಕಾರ ಪ್ರಸ್ತುತ ಎರಡು ತಿಂಗಳಲ್ಲಿ, ಜಗದೀಶ್ ಶೆಟ್ಟರ್‌ರವರೇ, ತಾವು ಒಪ್ಪಬೇಕಾಗುತ್ತದೆ, ಡೆಮಾಕ್ರಾಟಿಕ್ ಸೆಟ್ ಅಪ್‌ನಲ್ಲಿ ಮ್ಯೂಚುಯಲ್ ಕನ್ಸಲ್ಟ್ ಏನಾಗುತ್ತದೆ, ಸಮಾಲೋಚನೆಯಾಗ ಬೇಕಾಗಿರುವುದು ಬಹಳ ಮುಖ್ಯ. ತಾವು ಮೊದಲು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಿರಿ. ಮತ್ತೊಂದು ಸ್ಟೆಟ್‌ಮೆಂಟ್ ಕೊಟ್ಟಿದ್ದೀರಿ, ಒಂದು ಪರಿಪಕ್ವವಾದ ಬಿಲ್ ಮಂಡಿಸುವ ರೀತಿಯಲ್ಲಿ ಬಹಳಷ್ಟು ಸಲ ಪರಿವರ್ತನೆಯನ್ನು ಮಾಡಿದ್ದೀರಿ, ಆ ಬಗ್ಗೆಯೂ ಕೂಡ ತಾವು ವಿವರಣೆಯನ್ನು ಕೊಟ್ಟಿಲ್ಲ. ಈಗೇನಾಗಿದೆ ಈ ಮಹಾರಾಷ್ಟ್ರದಲ್ಲಿ ಇನಾಂದಾರ್-ಸ್ಟೆಟ್ ಆಫ್ ಮಹಾರಾಷ್ಟ್ರದಲ್ಲಿ, Para 155;

> "It is for the Central Government or for the State Government in the absence of Central legislation to come out with a detailed well thought out legislation on the Subject : such a Legislation is long awaited. The States must act towards this direction. The Judicial wing of the State is called upon to act when the other two wings, the Legislature and the Executive do not act. The earlier the Union Government of India and the State Governments act the better it

would be shall continue to exist."

ನೀವು ತರತಕ್ಕಂಥ ಮಸೂದೆಯಲ್ಲಿ, ಪ್ರಸ್ತುತವಿರತಕ್ಕಂಥದ್ದು, ನಾವು ಯಾರ ಪರವಾಗಿ ಮಾತನಾಡುವುದಕ್ಕೆ ಇಲ್ಲಿ ನಿಂತಿಲ್ಲ, ಈ ಬಿಲ್ ಮೇಲೆ ಸವಿಸ್ತಾರವಾದ ಚರ್ಚೆ ನಡೆಯಬೇಕು, ಇದು ಸ್ಟ್ಯಾಂಡ್ ಆಗಬೇಕು, ಮತ್ತೆ ಯಾರೂ ಕೂಡ ಸುಪ್ರೀಂಕೋರ್ಟಿಗೆ ಹೋಗಿ ದಾವೆ ಹಾಕುವುದಕ್ಕೆ ಅನುವು ಮಾಡಿಕೊಡಬಾರದು. ಹೋದ ಸಲ ಇವತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಒಂದು ವರ್ಷಕ್ಕೆ ಕಾಂಪ್ರಮೈಸ್ ಪಿಟಿಷನ್ ಏನು ಹಾಕಿದ್ದೆವು, ಅದನ್ನೂ ನೋಡಿ, ಮುಂದುವರೆಸಿಕೊಂಡು ಹೋಗಬೇಕೆಂಬುದು, ಇಲ್ಲವಾದರೆ ಇವತ್ತಿನ ದಿವಸ ಏನೇನು ಈ ಬಿಲ್‌ನಲ್ಲಿ ನಾವು ಉಲ್ಲೇಖ ಮಾಡಿದ್ದೇವೆ. ಅದನ್ನು ಸಮಗ್ರವಾಗಿ ಮಾಡಬೇಕಾದ್ದನ್ನು ಮಾಡಬೇಕು, ಏಕೆಂದರೆ ಅನೇಕ ಸದಸ್ಯರು ಈ ಬಗ್ಗೆ ಬೆಳಕು ಚೆಲ್ಲಿದವರಿದ್ದಾರೆ. ಮೊದಲು ಇದನ್ನು ಸೆಲೆಕ್ಟೆಡ್ ಮಂದಿಯಲ್ಲಿ ಸಮಾಲೋಚನೆ ಮಾಡಿ ಇತ್ಯರ್ಥ ಮಾಡುವುದು, in that meeting you call all the Principal Secretaries, Educationists. ಬೇರೆ ಕಡೆ ಇವತ್ತು ಯಾರ್‍ಯಾರು ಎಜ್ಯುಕೇಷನ್ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ, you have to take their opinion. Without taking the opinion ಈ ರೀತಿ ಮಾಡಿದರೆ ಅದು ಸರಿಯಾಗುವುದಿಲ್ಲ. ಆದರೂ ನಾವು ವಿರೋಧ ಮಾಡುತ್ತಿಲ್ಲ, ಈ ಬಗ್ಗೆ ಸಾಕಷ್ಟು ಕನ್ಸಲ್ಟೇಷನ್ ಮಾಡಬೇಕಾಗಿತ್ತು. ಕನ್ಸಲ್ಟೇಷನ್ ಇಲ್ಲದೆ ತಾವು ಇವತ್ತು ಬಿಲ್ ಅನ್ನು ಮಂಡಿಸಿದ್ದೀರಿ. ಈ ಬಗ್ಗೆ ನಾವೇನು ಪ್ರಸ್ತಾಪ ಇವತ್ತು ಮಾಡಿದ್ದೇವೆ. ನಮ್ಮ ಸದಸ್ಯರು ಏನು ಪ್ರಸ್ತಾಪ ಮಾಡುತ್ತಾರೆ, ಕೊನೆಯದಾಗಿ ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ.

ಶ್ರೀ ಡಿ. ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ನಾನು ತಾವು ಹೇಳಿದ್ದಕ್ಕೆಲ್ಲಾ ಉತ್ತರ ಹೇಳುವುದಿಲ್ಲ. ಈ ದರ್ಜೆ ತುಂಬಾ ಚೆನ್ನಾಗಿ ಆಗಬೇಕೆನ್ನುವುದಾದರೆ, Wrong presumptions ಮೇಲೆ ಚರ್ಚೆ ಮಾಡಿದರೆ ತಪ್ಪಾಗುತ್ತದೆ. ಸರಿಯಾದ ವಿಷಯದ ಮೇಲೆ ಚರ್ಚೆ ಮಾಡಿದರೆ ಒಳ್ಳೆಯದಾಗುತ್ತದೆ. ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು, ವಿರೋಧಪಕ್ಷದ ನಾಯಕರು ಒಂದಂಶವನ್ನು ಹೇಳಿದರು. ಆ ಬಗ್ಗೆ ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬರೀ ಸಿಇಟಿ ಮಾರ್ಕ್ಸ್ ಮಾತ್ರ ಗಣನೆಗೆ ತೆಗೆದುಕೊಳ್ಳುವುದನ್ನು ಮಾಡಿದ್ದು ಸರಿಯಲ್ಲವೆನ್ನುವ ಮಾತನ್ನು ಅವರು ಹೇಳಿದರು. ಗೌರವಾನ್ವಿತ

ಸದಸ್ಯರೆಲ್ಲಾ ಗಮನಿಸಿದ್ದಾರೆಂದು ತಿಳಿದುಕೊಂಡಿದ್ದೇನೆ, ಅದನ್ನೂ ಸಹ ನಾವೇನೂ ಒಪ್ಪಿದ್ದಲ್ಲ.

ಶ್ರೀ. ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಉತ್ತರವನ್ನು ಆ ಮೇಲೆ ಕೊಡಿ, ತಾವೇನಾದರೂ ಈಗ ಉತ್ತರ ಕೊಟ್ಟರೆ, ಚರ್ಚೆ ಆ ದಿಕ್ಕಿಗೆ ಹೋಗಿಬಿಡುತ್ತದೆ. Try to understand. ನಾವು ಅದನ್ನು ಬಿಟ್ಟು ಈ ಬಗ್ಗೆ ಚರ್ಚೆ ಮಾಡಲು ಹೋಗುತ್ತೇವೆ, ಕೊನೆಯಲ್ಲಿ ಹೇಳಿದರೆ ಅನುಕೂಲವಾಗುತ್ತದೆ. ಮುಂದೆ ಮಾತನಾಡುವವರು ನಾವೆಲ್ಲಾ Let it not be leading ಸಿಇಟಿ ಬಗ್ಗೆ ಹೊರಟುಬಿಡುತ್ತೇವೆ. ಮಾನ್ಯ ಅಧ್ಯಕ್ಷರೆ, ಈ ಬಿಲ್ ಅನ್ನು ಇಲ್ಲಿ ಇಂಟ್ರಡ್ಯೂಸ್ ಮಾಡಬೇಕಾಗಿತ್ತೋ ಬೇಡವೋ ಎನ್ನುವ ಜಿಜ್ಞಾಸೆ ಮಾನ್ಯ ವಿರೋಧಪಕ್ಷದ ನಾಯಕರನ್ನು ಕಾಡಿದಂತೆ ನನ್ನನ್ನೂ ಕಾಡುತ್ತಿದೆ. ಇದರಲ್ಲಿ ಎರಡಂಶವಿದೆ, ಒಂದು ಶೆಡ್ಯೂಲ್ಡ್ ಕ್ಯಾಸ್ಟ್, ಶೆಡ್ಯೂಲ್ಡ್ ಟ್ರೈಬ್ ಬ್ಯಾಕ್‌ವರ್ಡ್ ಕಮ್ಯುನಿಟಿಗೆ ಸೀಟನ್ನು ರಿಸರ್ವ್ ಮಾಡುವುದು, ಮೈನಾರಿಟಿ ಇನ್‌ಸ್ಟಿಟ್ಯೂಷನಲ್ಲಿ, ಮೈನಾರಿಟಿ ಕಮ್ಯೂನಿಟಿಗಳಿಗೆ ಅಡ್ಮಿಷನ್ಸ್ ಆಗಿದೆಯೋ ಇಲ್ಲವೆಂದು ಮಾನಿಟರ್ ಮಾಡುವುದು. ಅದರ ಜೊತೆಗೆ ಫೀ ಅನ್ನೂ ಕೂಡ ಮಾನಿಟರ್ ಮಾಡಬೇಕೆಂದು ಈ ಬಿಲ್‌ನಲ್ಲಿ ತಂದುಬಿಟ್ಟಿದ್ದೀರಿ. ನಾವು ಈ ಹಿಂದೆ ಇಲ್ಲಿ ಒಂದು ಸಲ ಚರ್ಚೆ ಮಾಡಿದ್ದೆವು ಸೀಟ್ ಶೇರಿಂಗ್ ಹೇಗಾಗಬೇಕು, ಫೀ ಸ್ಟ್ರಕ್ಚರ್ ಹೇಗೆ ನಿಗದಿಯಾಗಬೇಕು ಎಂದು ಒಂದು ರೆಸಲ್ಯೂಷನ್ ತಂದು, ಅದನ್ನೇ ಆಮೇಲೆ ಎನ್ಯಾಕ್ಟ್ ಮಾಡಿ, ಅದಕ್ಕೆ ಮೂರು ಕವಡೆ ಕಿಮ್ಮತ್ತಿಲ್ಲವೆಂದು ಸುಪ್ರೀಂಕೋರ್ಟ್‌ನಲ್ಲಿ ಈ ಶಾಸನಸಭೆ ಅನ್ನಿಸಿಕೊಂಡು, ಮತ್ತೆ ಬಿಲ್ ಅನ್ನು ಇಂಟ್ರಡ್ಯೂಸ್ ಮಾಡುವ ಸ್ಥಿತಿಗೆ ಬಂದು ನಿಂತಿದ್ದೇವೆ. ಇದಕ್ಕೆ ತಮಗೆ ಹೊಸದಾಗಿ ಬಂದಿರುವ ಅವಕಾಶವೇನೆಂದರೆ, ಸಂವಿಧಾನದ 93ನೇ ತಿದ್ದುಪಡಿ ನಮಗೆ ಸ್ವಲ್ಪ ಎನ್ವಿಸೇಜ್ ಮಾಡುತ್ತಿದೆ, ನಾವು ಈ ತಿದ್ದುಪಡಿ 15(6) ಕೆಳಗೆ ಅವಕಾಶವಿರುವುದರಿಂದ ನಾವು ಬಿಲ್‌ಅನ್ನು ತರುತ್ತಿದ್ದೇವೆಂದು ಹೇಳುತ್ತಿದ್ದೀರಿ, ನನಗೆ ಆ ಕಾಪಿ ಸಿಕ್ಕಿಲ್ಲ ನಾನು ಅವರ ಹತ್ತಿರ ತರಿಸಿಕೊಂಡು ಓದಿದೆ, ಅದರಲ್ಲಿ ಕ್ಲಿಯರ್ ಆಗಿ ಹೇಳುತ್ತಾರೆ,

> "Nothing in this Article or in sub clause (g) of clause of Article 19 shall prevent the State from making any special provision by law for the advancement of any social and educational backward classes of citizens or for the schedule Caste or the Schedule Tribes in so far such special provisions relate to the admission to Educational Institutions including private Educational Institutions whether aided or unaided by the State other than the Minority Educational Institutions referred to in Clause (1) of the Article 30."

ಮೊದಲನೆ ಪ್ರಶ್ನೆ ಅಡ್ಮಿಷನ್ ಅನ್ನು ನೀವು ಶೆಡ್ಯೂಲ್ಡ್ ಕ್ಯಾಸ್ಟ್, ಶೆಡ್ಯೂಲ್ಡ್ ಟ್ರೈಬ್‌ಗೆ, ಬ್ಯಾಕ್‌ವರ್ಡ್ ಕಮ್ಯುನಿಟಿಸ್‌ಗೆ, ಬಹುಶಃ ಅನ್ ಏಡೆಡ್ ಇನ್‌ಸ್ಟಿಟ್ಯೂಷನ್‌ನಲ್ಲಿ ಕೊಡಬೇಕಾಗಿರುವುದಕ್ಕೆ ತಕ್ಷಣ ಸೀಟ್ ರಿಸರ್ವೇಷನ್‌ನ್ನು ಮಾಡಬೇಕು. ಹಾಗಾಗಿ ಒಂದು ಸೋಷಿಯಲ್ ಜಸ್ಟೀಸ್ ಅನ್ನು ಇಲ್ಲಿ ಸರ್ವ್ ಮಾಡಬೇಕೆಂದು ಸರ್ಕಾರದ ಉದ್ದೇಶವನ್ನಿಟ್ಟುಕೊಂಡು ಈ ಮಸೂದೆಯನ್ನು ತಂದಿದ್ದೀರೆಂದು ನಾನು ಭಾವಿಸುತ್ತೇನೆ. ಇಲ್ಲಿ ಪ್ರಶ್ನೆ ಇಷ್ಟೆ, ಇದನ್ನು ಇಲ್ಲಿ ತಾವು ಮಾಡುತ್ತೀರಿ, ಈ ಬಿಲ್ ಅಷ್ಟಕ್ಕೇ ಸೀಮಿತವಾಗಿದ್ದರೆ, ಬಹುಶಃ ತಮಗೆ ಕಾನ್ಸಿಟ್ಯೂಷನ್ ವ್ಯಾಲಿಡಿಟಿ ಇರುತ್ತಿತ್ತು ಎಂದು ನಾನು ಭಾವಿಸುತ್ತೇನೆ ಎರಡನೆಯದು, ಮೈನಾರಿಟಿಸ್ ಇನ್‌ಸ್ಟಿಟ್ಯೂಷನ್‌ಗೆ 65 ಪರ್ಸೆಂಟ್, within the State ಮೈನಾರಿಟಿ ಕಮ್ಯೂನಿಟಿಗೆ ಕೊಡಬೇಕು, ಯಾವ ಮೈನಾರಿಟಿ ಇನ್‌ಸ್ಟಿಟ್ಯೂಷನ್ ಯಾವ ಕಮ್ಯುನಿಟಿಗೋಸ್ಕರ ಮಾಡಿದೆ ಆ ಕಮ್ಯುನಿಟಿಗೆ ಹೊರಗಡೆಯಿಂದ 33 ಪರ್ಸೆಂಟ್ ಸೀಟನ್ನು ಜನರಲ್ ಎಂದು ಭಾವಿಸಬೇಕು ಅದರಲ್ಲಿ ಮತ್ತೆ 15 ಪರ್ಸೆಂಟ್ ಎನ್‌ಆರ್‌ಐ ಆಗಿರಬಹುದು ಎಂದೇನು ಪ್ರಾವಿಷನ್ ಮಾಡಿದ್ದೀರಿ, ಅಷ್ಟಕ್ಕೇ ಸೀಮಿತವಾಗಿದ್ದರೆ ಈ ಬಿಲ್‌ಗೆ ಸ್ವಲ್ಪ ವೈಟ್ ಇರುತ್ತಿತ್ತು ಎಂದು ನನ್ನ ಭಾವನೆ ಆದಾಗಲಿಲ್ಲ, you have questioned the authority of supreme Court again. You have questioned. ಈ ಬಿಲ್‌ನಲ್ಲಿದೆ, ನೀವು ಅವರಿಗೆ ಫೀ ಸ್ಟ್ರಕ್ಚರ್ ಫಿಕ್ಸ್ ಮಾಡುವುದು ಹೇಗೆ, ಅದನ್ನು

ಮಾನಿಟರ್ ಮಾಡುವುದು ಹೇಗೆ, ಅದನ್ನೆಲ್ಲಾ ಈ ಒಂದೇ ಬಿಲ್‌ನಲ್ಲಿ ಉಲ್ಲೇಖ ಮಾಡಿಬಿಟ್ಟಿದ್ದೀರಿ, and there is every chance this will be struck down in Supreme Court. ಈಗಾಗಲೇ ಎರಡು ಮೂರು ಸಲ ಆಗಿದೆ ಮತ್ತೆ ನಾವೇನು ಕೇಸ್ ಲಾಗಳನ್ನು ಕೋಟ್ ಮಾಡಲು ಹೊರಟಿದ್ದೇವೆ, ಇನಾಂದಾರ್ ಕೇಸ್ ಇರಬಹುದು, ಇನ್ನೊಂದು ಇರಬಹುದು, they are not final decisions of the Court. --- ಒಂದೊಂದು ಕೇಸ್‌ನಲ್ಲಿ ಒಂದೊಂದು ರೀತಿಯಾಗಿ ಕೋರ್ಟ್ ಡಿಸಿಷನ್ ಕೊಟ್ಟಿದೆ. ಕೋರ್ಟ್ ಒಂದು ರೀತಿಯಲ್ಲಿ ಕಾಂಟ್ರಡಿಕ್ಷನ್‌ನಲ್ಲಿದೆ.

ಶ್ರೀ ಜೆ ಸಿ ಮಾಧುಸ್ವಾಮಿ : ಫೈನಲಾಗಿ ಕೋರ್ಟ್ ಇದನ್ನು ಸಾಲ್ವ್ ಮಾಡುವುದಕ್ಕೆ ಆಗುವುದಿಲ್ಲ ಅಂತ Government of India shall have to come out with some legislation to solve this and to avoid all the future problems ಅಂತ ಅವರು ಹೇಳಿಬಿಟ್ಟಿದ್ದಾರೆ. ಯಾಕೆ? In the absence of a law, ಕೊಟ್ಟುಕೊಂಡುಬಂದುಬಿಟ್ಟಿದೆ. As time passed, ಕೋರ್ಟಿಗೂ ಕೂಡ ಈಗ ಅರ್ಥವಾಗುತ್ತಿಲ್ಲ ಏನು ಮಾಡಬೇಕು ಅಂತ. Court cannot sit and administer an institution or a department.
ಇದೊಂದು ದೊಡ್ಡ ತಪ್ಪು ಕೋರ್ಟ್‌ಗೆ ರೆಫರ್ ಮಾಡಿದ ದಿವಸ ಆಗಿಬಿಟ್ಟಿತು. ಕೋರ್ಟ್‌ಗೇ ಅರ್ಥವಾಗಿಬಿಟ್ಟಿದೆ ನಾನೆಲ್ಲೋ ದಾರಿ ತಪ್ಪಿಬಿಟ್ಟಿದ್ದೇನೆ. ಇದು ನನ್ನ ಕೆಲಸವಲ್ಲ, ಇದಕ್ಕೆ ಏನೇ ಆದರೂ ಲೆಜಿಸ್ಲೇಷನ್ನೇ ಅನಿವಾರ್ಯ ಅಂತ. ದುರದೃಷ್ಟ, ಕೇಂದ್ರ ಸರ್ಕಾರ ಆ ಲೆಜಿಸ್ಲೇಷನ್ ತರಲಿಲ್ಲ. ಇದರಲ್ಲಿ ಎರಡು ಮಾತಿಲ್ಲ. ಮಾನ್ಯ ಅರ್ಜುನ್‌ಸಿಂಗರು ಇಲ್ಲಿ ಬಂದು ಹೋದರು, ಪಾಪ ಡಿ. ಮಂಜುನಾಥ್ ಅವರಿಗೆ ಸತ್ಕರಿಸಿ ಏನೋ ಒಂದು ಆಗುತ್ತದೆ ಅಂತ ಆಸೆ ಇಟ್ಟುಕೊಂಡರು. ನಮ್ಮ ಹತ್ತಿರ ಎಲ್ಲಾ ಮಾತನಾಡಿದರು, ಲೆಜಿಸ್ಲೇಷನ್ ಬರುತ್ತದೆ. ಸುಮಾರು ರಾಜ್ಯಗಳ ಮಂತ್ರಿಗಳೆಲ್ಲ ಕನ್ವಿನ್ಸ್ ಮಾಡಿದ್ದೇವೆ ಅಂತ ಹೇಳಿದರು. ನನಗೆ ಗೊತ್ತಿಲ್ಲ I cannot question the wisdom of the Government of India or parliament. ಈವರೆಗೆ ಲೆಜಿಸ್ಲೇಷನ್ ಇಲ್ಲ. ಹಾಗಾದಾಗ what prevails? earlier decision prevails. ಏನು ಸುಪ್ರೀಂಕೋರ್ಟಿನಲ್ಲಿ ಡಿಸಿಶನ್ಸ್ ಆಗಿದೆ ಅದೇ ಪ್ರಿವೇಲಾಗುತ್ತದೆ ಅಧ್ಯಕ್ಷರೇ. ಸುಪ್ರೀಂಕೋರ್ಟ್ ತೀರ್ಪು ಏನಾಗಿತ್ತು ? It has to be transparent. Only merit oriented. There can be no concession. You cannot seek for that. ಈಗ ನಾವು ತಾತ್ವಿಕವಾಗಿ ಮಾತನಾಡೋಣ. ಒಂದು ಶೆಡ್ಯೂಲ್ಡ್‌ಕ್ಯಾಸ್ಟಿಗೆ, ಬ್ಯಾಕ್‌ವರ್ಡ್‌ಕ್ಯಾಸ್ಟಿಗೆ ಒಂದು

ಸೀಟನ್ನು ರಿಸರ್ವ್ ಮಾಡಬೇಕಾದರೆ Can he afford that fee? ಅನ್ನುವುದು ಈಗ ಪ್ರಶ್ನೆ it he can afford, can he be treated as backward? ಅನ್ನುವುದು ಪ್ರಶ್ನೆ ಈಗ ನಮಗೆ. ತಾವೇ ಹೇಳಬೇಕು ಇದಕ್ಕೆ ಉತ್ತರ. If he can afford that much of fee, can he be treated as a backward community man? ನಾನು ಎಸ್‌ಸಿ, ಎಸ್‌ಟಿ ಸಂವಿಧಾನಾತ್ಮಕವಾದ ಮೀಸಲಾತಿಯನ್ನು ಪ್ರಶ್ನೆ ಮಾಡುವುದಿಲ್ಲ. Can a creamy layer man be treated as backward and can he take over the meritorious seat of some other student? ಇದನ್ನೂ ತಾವು ಯೋಚನೆ ಮಾಡಬೇಕು. ಸಾಮಾಜಿಕ ನ್ಯಾಯ ಯಾರಿಗೆ ಕೊಡುತ್ತೀರಿ? ಒಬ್ಬ ಹಳ್ಳಿಯವನಿಗೆ, ಹಿಂದುಳಿದವನಿಗೆ ಪಾಪ ಶಕ್ತಿಯಿಲ್ಲದವನಿಗೆ, ನಾನು ನಿಮಗೆ ಕೇಳುವುದು if at all you are going to serve genuine cause of a backward man or a scheduled caste man, come out with some other solution.

ಅವರಿಗೇನಾದರೂ See subsidise ಮಾಡುವುದೆ ಅವನಿಗೆ ಸರ್ಕಾರವೇ ನಿಂತು ಒಬ್ಬ ನಿಜವಾದ ಬ್ಯಾಕ್‌ವರ್ಡ್ ಇಷ್ಟು ಇನ್‌ಕಂಗಿಂತ ಒಳಗಿರುವವನಿಗೆ ಬ್ಯಾಕ್‌ವರ್ಡ್ ಅಂತ ಏನು ಹೇಳುತ್ತೀರಿ ಅವನಿಗೆ ಬ್ಯಾಂಕ್‌ಲೋನ್ ಕೊಡಿಸಿಕೊಡುವುದು ಅವನು ಈ ಉಪಯೋಗ ಬಳಸಿಕೊಂಡು ಅಕಾಡೆಮಿಕ್ ಕೋರ್ಸ್ ಮುಗಿಸುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಬೇಕಾಗಿತ್ತು. See, we are State. We are enacting. ಹಿಂದುಳಿದವನಿಗೆ ಅಂತ ಸೀಟ್ ಕೊಟ್ಟುಬಿಟ್ಟು ಇಲ್ಲಿ ಯಾರೋ ಅರಾಕ್ ಡಿಸ್ಟಿಲರಿ ಇಟ್ಟುಕೊಂಡಿರುವವನು ನಾನು ಹಿಂದುಳಿದವನು ಅಂತ ಸೀಟ್ ಕೊಟ್ಟರೆ ಇನ್ನೊಬ್ಬ ಯಾರೋ meritorious studentನ್ನೂ ಮನೆಗೆ ಕಳಿಸಬೇಕು ಅನ್ನುವುದು ಒಂದು ರಾಜ್ಯ ಮಾಡಬೇಕಾದ ಶಾಸನ ಆಗಬೇಕಾ? ಇಲ್ಲಿ ತಾವು ಏನು ಹೇಳಿದ್ದೀರಿ? Just because of the birth, if he were to be Treated Backward what is the Need of getting reservation in these institutions. ಫೀನಲ್ಲೇನು ಕನ್‌ಸಿಶನ್ ಕೊಡುವುದಿಲ್ಲ ಅವರು. ತಾವು ಹೇಳೂ ಇಲ್ಲ ನಾವು ಕೊಡಿಸುತ್ತೇವೆ ಅಂತ, ಹಾಗೆ ಕೊಡಿಸಲು ನಿಮಗೆ ಅಧಿಕಾರವೂ ಇಲ್ಲ, ಸುಪ್ರೀಂಕೋರ್ಟೂ ಕ್ಲಿಯರಾಗಿ ಹೇಳಿದೆ You are not empowerd to interfere with the admissions of the management. ಮುರುಗೋಡು ಕಮಿಟಿ ಏನು ನಿಗದಿ ಮಾಡಿದೆ, ಅಲ್ಲಿಗೇ ಫಿನಿಶ್ ಆಗಿದೆ ಅದನ್ನು ಮಾನಿಟರ್

ಮಾಡಲಿಕ್ಕೆ ಜಡ್ಜ್‌ಗಳ ಅಧ್ಯಕ್ಷತೆಯಲ್ಲಿ ನಾವು ಕಮಿಟಿ ಮಾಡಿದ್ದೇವೆ ಅಂತ ಅವರು ಹೇಳಿಬಿಟ್ಟಿದ್ದಾರೆ. ಸ್ಟ್ರಕ್ಚರೂ ಅವರೇ ಕೊಟ್ಟಿದ್ದಾರೆ. ನಮ್ಮ ಉದ್ದೇಶವೇನು ಹಾಗಾದರೆ? ಏತಕ್ಕೆ ನಾವು ಈ ಬಿಲ್ಲನ್ನು ಇಲ್ಲಿ ತರುತ್ತಿದ್ದೇವೆ, ನಮ್ಮ ಉದ್ದೇಶ ಸಫಲವಾಗಬೇಕಲ್ಲಾ? ಮೂರು ಲಕ್ಷ, ನಾಲ್ಕು ಲಕ್ಷ, ಕನಿಷ್ಟ ಒಂದೂವರೆಯಿಂದ ಎರಡು ಲಕ್ಷ ರೂ ಫೀಜು ಕೊಟ್ಟು ಮೆಡಿಕಲ್ ಕಾಲೇಜಿಗೆ ಸೇರುವವರನ್ನು will you identify him as a backward community man? ಸೈದ್ಧಾಂತಿಕವಾಗಿ ಒಂದು ಚರ್ಚೆ ಆಗಬೇಕು ಇಲ್ಲಿ, ನೀವು ನಿಜವಾಗಿ ಹಿಂದುಳಿದ ಸಮಾಜಕ್ಕೆ ಸಹಾಯ ಮಾಡುವುದಾಗಿದ್ದರೆ, ಇನ್ನೊಂದು ಲೆಜಿಸ್ಲೇಷನ್ ಇದರ ಜೊತೇಲಿ ತರಬೇಕು. You have to subsidise the fees of the student. You have to fix a ceiling of income to that boy. ಇಷ್ಟು ಇನ್‌ಕಂಗಿಂತ ಒಳಗಿರುವವನನ್ನು ನಾವು ಹಿಂದುಳಿದವನು ಅಂತ ಟ್ರೀಟ್ ಮಾಡುತ್ತೇವೆ ಅಂತ. Then only justice is served on a poor back ward boy. ನಾನು ಹುಟ್ಟಿದಾಕ್ಷಣಕ್ಕೇ ಹೀಗೆ ಆಗಬೇಕು ಅಂತ ಏನಿಲ್ಲ, You need not be socially backward. ಇವತ್ತು, ನೀವು ತಂದಿಟ್ಟುಬಿಟ್ರಿ. ಎರಡನೆಯದು, ತಾವು ಈ ಬಿಲ್‌ನಲ್ಲಿ ಉಸ್ತುವಾರಿಗೆ ಕಮಿಟಿಗಳನ್ನು ಮಾಡಬಹುದು ಅಂತ ಹೇಳಿದ್ದೀರಿ. ಉಸ್ತುವಾರಿ ಕಮಿಟಿಗಳು ಇಂಟರ್‌ಫಿಯರ್ ಆಗಬಹುದು ಅಂತ ನೀವೇನು ಭಾವಿಸುತ್ತೀರಿ ನೀವು ಬಹಳ ಉದ್ದಕ್ಕೆ ತೆಗೆದುಕೊಂಡು ಹೋಗಿಬಿಟ್ಟದ್ದೀರಿ ಅವನ್ನು. ಸುಪ್ರೀಂಕೋರ್ಟ್ ನಿಮಗೆ ಅಷ್ಟೊಂದು ಅವಕಾಶ ಕೊಟ್ಟಿದೆಯೆಂದು ನಾವು ಭಾವಿಸಿಕೊಳ್ಳುವುದಕ್ಕಾಗುವುದಿಲ್ಲ. You can monitor the Admıssions of a private institution conduct under Comed-K, common test, universal test ಅಂತ ಅವರು ಹೇಳುವುದನ್ನು State can monitor the irregularities; you can take action ಅಂತ ಹೇಳಿದೆ. You cannot have a one more committee to conduct all these issues. There will be an Entrance Test. ಆ ಎನ್‌ಟ್ರೆನ್ಸ್‌ನಲ್ಲಿ ನಿಮಗೇನಾದರೂ ಅನ್ಯಾಯವಾಗಿದೆ ಮತ್ತೊಂದಾಗಿದೆ ಅಂತ ನೀವು ವಾದ ಮಾಡುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ತಾವು ಒಂದು ಮಾತು ಹೇಳಿದ್ದೀರಿ: This committee can interfere at any stage. Yes, I accept. ಯಾಕೆ? ಅವರು ಯಾರೋ ಹುಡುಗ ಬಂದಿರಲೇ ಇಲ್ಲ ಅಂತ ಮಾಡಬಹುದು, ಇನ್ಯಾವುದೋ ಬೇಕಾದವನಿಗೆ ಮ್ಯಾನುಪಲೇಟ್ ಮಾಡಿ ಅವನಿಗಿಂತ ಹೈಯಸ್ಟ್ ಮಾರ್ಕ್ಸ್ ತೆಗೆದುಕೊಂಡವನ ಅರ್ಜಿಯನ್ನು

ತೆಗೆದಿಡಬಹುದು; ಅವನ ಹೆಸರನ್ನು ನೋಟೀಸ್ ಬೋರ್ಡಿಗೆ ಹಾಕದೇ ಇರಬಹುದು. ಅವನಿಗೆ ನೋಟೀಸ್ ಕೊಟ್ಟಂತೆ ಕೊಟ್ಟು ಅವನು ಆ ಟೈಮಲ್ಲಿ ಬಂದು ಸೇರಿಕೊಳ್ಳಲಿಲ್ಲ ಅನ್ನಬಹುದು. ಈ ತಂತ್ರಗಳೆಲ್ಲಾ ಏನು ನಡೀತಾ ಇದೆ ಅಲ್ಲೆಲ್ಲಾ ಮಾನಿಟರ್ ಮಾಡಬೇಕಾದ್ದು, ಆ ಕಾಮೆಡ್‌ಕೆನಲ್ಲಿ ಸೆಲೆಕ್ಟಾದವನಿಗೆ ಅಡ್ಮಿಶನ್ ಕೊಡಿಸಲು ನೋಡಿಕೊಳ್ಳುವುದಕ್ಕೆ ನಿಮ್ಮ ಕಮಿಟಿಗೆ ಅಧಿಕಾರ ಕೊಟ್ಟು ಇಂಟರ್‌ಫಿಯರ್ ಮಾಡಿ ಅಂತ ಹೇಳುವುದು ಸರಿ. ಅದಕ್ಕೆ ಈ ಬಿಲ್ಲೇನೂ ಬೇಕಾಗಿಲ್ಲ. ಈಗಾಗಲೇ ಸುಪ್ರೀಂಕೋರ್ಟ್ ನಿಮಗೆ ಹೇಳಿದೆ : You can monitor the admissions of the aided and unaided institutions. ಅಂತ. ಇಲ್ಲೇನಾಗಿದೆ ಪ್ರಶ್ನೆ ತಾವು ತೀರಾ ಹೆಚ್ಚಿನ ಅಧಿಕಾರ ಬಳಸಲು ಹೋಗುತ್ತಿದ್ದೀರಿ, which is against or which is in contradiction to the already given decisions of Supreme Court. ಇದು ನನ್ನ ವ್ಯೂ ನೀವೇನು ಮಾಡುತ್ತೀರಿ? ಕಮಿಟಿಗೆ ಕೊಡಬಹುದು, ಯಾವುದೋ ಸೀಟ್ ಫಿಲಪ್ ಆಗಲಿಲ್ಲ, ಅದನ್ನು ಹೇಗೆ ಫಿಲಪ್ ಮಾಡಬಹುದು, You are not empowered to give all there solutions. Only Supreme Court is empowered to give solutions. ನಿಮಗೆ ಅಧಿಕಾರ ಎಲ್ಲೂ ಕೊಡಲಿಲ್ಲ. ನಾವು ಅದನ್ನೇ ಹಿಂದೆಯೆಲ್ಲಾ ವಾದ ಮಾಡಿದ್ದೆವು. ವೇಕೆನ್ಸಿ ಫಿಲಪ್ ಆಗದಿದ್ದರೆ ಹೇಗೆ ಮಾಡುತ್ತೀರಿ? How will you take this decision? ಏನೋ ಒಂದು ಸೀಟ್ ಫಿಲಪ್ ಆಗದಿದ್ದರೆ ಯಾರಿಗೆ ಬಿಡುತ್ತೀರಿ? ನಿಮಗೇನು ಅಧಿಕಾರ? ನೀವೇನು ಹೇಳುತ್ತೀರಿ: ಒಂದು ವೇಕೆನ್ಸಿ ಫಿಲಪ್ ಆದರೆ ಅದನ್ನು ಸರ್ಕಾರಿ ಎನ್‌ಟ್ರೆನ್ಸ್‌ನಲ್ಲೇನಾಗಿತ್ತು ಆ ಸೀಟಿಗೆ ಪ್ರಥಮ ಪ್ರೈಯಾರಿಟಿ ಕೊಡಿ ಅದರಲ್ಲೂ ಬರದಿದ್ದರೆ ನೀನೇ ಮಾಡಿಕೊಂಡು ಕಾಮೆಡ್‌ಕೆನೋ ಮತ್ತೊಂದೋ ಒಂದು ಕಾಮನ್ ಎನ್‌ಟ್ರೆನ್ಸ್ ಟೆಸ್ಟ್‌ನಲ್ಲಿ ಮೆರಿಟ್‌ನಲ್ಲಿರುವ ಹುಡುಗನಿಗೇ ಕೊಡಿ ಅಂತ ಒಂದು ತಿದ್ದುಪಡಿ ಹೇಳುತ್ತೀರಿ ಅದಕ್ಕೆ ತಮಗೇನು ಅಧಿಕಾರ ಇದೆ? ಸುಪ್ರೀಂಕೋರ್ಟ್ ಎಲ್ಲಿ ಕೊಟ್ಟಿತು ಆ ಅಧಿಕಾರವನ್ನು? ತಾವು ಹೇಳಬೇಕು. How can you do this? ನಿಮ್ಮ ಎನ್‌ಟ್ರೆನ್ಸನ್ನು ಅವರು ರೆಕಾಗ್ನೈಸ್ ಮಾಡುವುದಿಲ್ಲ ಎಂಬ ಪರಿಸ್ಥಿತಿ ಇವತ್ತು ರಾಜ್ಯದಲ್ಲಿರುವಾಗ ಒಂದು ಮೆಡಿಕಲ್ ಇನ್‌ಸ್ಟಿಟ್ಯೂಷನ್, ನಾನೊಂದು ಕಾಮೆಡ್‌ಕೆ ಇಟ್ಟುಕೊಂಡಿದ್ದೇನೆ ನಮ್ಮದೇ ಒಂದು ಎನ್‌ಟ್ರೆನ್ಸ್ ಇಟ್ಟುಕೊಂಡಿದ್ದೇವೆ ಅಂತ ಅವರೆಲ್ಲಾ ಸೇರಿಕೊಂಡು ಮಾಡಿದಾಗ, ಅಲ್ಲಿ if vacancy fall, ಯಾರು ಫಿಲಪ್ ಮಾಡಬೇಕು ಸಾರ್ ಅದನ್ನು? How can you allot your candidate

who is selected under Government CET to that institution? ತಾವು ಸ್ಪಷ್ಟೀಕರಣ ಕೊಡಬೇಕು. ಮತ್ತೆ ನಿಮ್ಮ ಕಮಿಟಿ ಹೇಗೆ ಹೇಳುತ್ತದೆ ಇದನ್ನು ಹೋಗಿ ಬಿಟ್ಟು ಅಲ್ಲಿ ಮಾಡಿ ಅಂತ. ಎರಡನೆಯದು ಕಾಲಕಾಲಕ್ಕೆ ನಾವು ಅಧಿಸೂಚಿಸಬಹುದಾದಷ್ಟು ಅಂದರೆ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಸೀಟುಗಳು ಅಂತ ಒಂದು ಪದ ಬಳಸಿದ್ದೀರಿ ಸರ್ಕಾರಿ ಸೀಟುಗಳು ಅಂದರೆ ಯಾವುದು ಅಂತ; How can the State Government notify seats? ಈಗ ತಮಗೇನಾದರೂ ಅಧಿಕಾರ ಇದೆಯಾ? ಯಾಕೆ ಈ ಕ್ಲಾಸ್ ತರುತ್ತಿದ್ದೀರಿ ಶಿಕ್ಷಣ ಸಂಸ್ಥೆಗಳಲ್ಲಿ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರದ ನಡುವೆ ಮೂಡಿಬಂದ ಸಮ್ಮತಾಭಿಪ್ರಾಯಕ್ಕೆ ಅನುಸಾರವಾಗಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತಹ ಸೀಟುಗಳು How can you do this ನಿಮಗೆ ಯಾರು ಅಧಿಕಾರ ಕೊಟ್ಟವರು ಪೇಜ್ ನಂ.3 when you have no power either to enhance or reduce the seats of a management or a college. ಈ ಕ್ಲಾಸ್‌ನೆಲ್ಲಾ ಯಾಕೆ ಹಾಕಿಕೊಳ್ಳುತ್ತಿದ್ದೀರಿ ಎಂಬುದು ನಮಗೆ ಬೇಕಲ್ಲಾ. ಶಾಸನದಲ್ಲಿ ಇಂಥದೆಲ್ಲಾ ತೆಗೆದುಕೊಂಡು ಬಂದು ನಾಳೆ ಹೋಗಿ ಸುಪ್ರೀಂಕೋರ್ಟ್ ಮುಂದೆ ನಿಂತುಕೊಂಡರೆ ನಿಮಗೆ ಯಾರ್ರೀ ಅಧಿಕಾರ ಕೊಟ್ಟರು ಜಾಸ್ತಿ ಸೀಟು ಮಾಡಲಿಕ್ಕೆ ಅಂದರೆ ಏನು ಉತ್ತರ ಕೊಡುತ್ತೀರಿ? ಇದರ ಅರ್ಥ ನೀವೂ ಮ್ಯಾನೇಜ್‌ಮೆಂಟ್ ಕೂತು can you enhance the seats? ಸರ್ಕಾರಿ ಸೀಟುಗಳು ಅಂದರೆ ಸರ್ಕಾರಿ ಕಾಲೇಜುಗಳಲ್ಲಿ ವಿವಿಧ ಘಟಕ ಕಾಲೇಜುಗಳಲ್ಲಿರುವ ಎಲ್ಲಾ ಸೀಟುಗಳು ಅನುದಾನಿತ ಖಾಸಗಿ ವೃತ್ತಿ ಶಿಕ್ಷಣಸಂಸ್ಥೆಗಳಲ್ಲಿ ಸರ್ಕಾರವು ಅಧಿಸೂಚಿಸಬಹುದಾದಷ್ಟು ಸಂಖ್ಯೆಯ ಸೀಟುಗಳು ಮತ್ತು ಅನುದಾನಿತವಲ್ಲದ ಅಲ್ಪಸಂಖ್ಯಾತ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳು ಮತ್ತು ರಾಜ್ಯಸರ್ಕಾರದ ನಡುವೆ ಮೂಡಿಬಂದ ಸಮ್ಮತಾಭಿಪ್ರಾಯಕ್ಕನುಸಾರವಾಗಿ ರಾಜ್ಯಸರ್ಕಾರವು ಅಧಿಸೂಚಿಸಬಹುದಾದಂತಹ ಸೀಟುಗಳು. ಅವರು ಒಪ್ಪಿದರೆ ತಾನೇ ನೀವು ಹೇಗೆ ಜಾಸ್ತಿ ಮಾಡುತ್ತೀರಿ?I have to understand. ಯಾಕೆ ಮಾಡುತ್ತೀರಿ ಅಂತ ಕೇಳಬೇಕಲ್ಲಾ Am I wrong Mr. Jayaprakash Hegde? An Hon. Member There is no sanctity.

ಶ್ರೀ ಎಂ ಬಿ ಪಾಟೀಲ್ (ತಿಕೋಟ) : ಮಾಧುಸ್ವಾಮಿಯವರೇ, There is a provision in Islamic in Case for constitutional agreement.

SRI J.C. MADHUSWAMY : No, no. Only Medical Council of India ನಿಮಗೆ ಅಧಿಕಾರ ಇಟ್ಟುಕೊಂಡಿರುವುದು.

ಇವತ್ತು ಯಾರು ಸೀಟನ್ನು ಜಾಸ್ತಿ ಮಾಡಬಹುದು?

ಶ್ರೀ ಡಿ. ಹೆಚ್. ಶಂಕರ್‌ಮೂರ್ತಿ : ಸೀಟ್ ಜಾಸ್ತಿ ಮಾಡುವುದಲ್ಲ.

ಶ್ರೀ ಎಂ.ಬಿ. ಪಾಟೀಲ್ : ಕಾನ್ಸ್‌ಟಿಟ್ಯೂಷನ್ ಅಗ್ರಿಮೆಂಟ್ ಬಗ್ಗೆ ಹೇಳುತ್ತಿದ್ದೇನೆ.

SRI D.H. SHANKARA MURTHY : We are not going to increase or decrease the number of seats. If they agree to give some seates, I should have an authority to take some seats.

ಶ್ರೀ ಜೆ. ಸಿ. ಮಾಧುಸ್ವಾಮಿ : ಯಾವ ಸೀಟ್ ಸಾರ್? ಅವರೆಲ್ಲಿ ಕೊಡುತ್ತಾರೆ?

ಶ್ರೀ ಡಿ. ಹೆಚ್. ಶಂಕರ್‌ಮೂರ್ತಿ : ಕೊಡುತ್ತಾರೆ. ಕೊಡುವುದಿಲ್ಲವೆಂದು ಹೇಳಬೇಡಿ. ನನಗೆ ಗೊತ್ತಿರುವ ಹಾಗೆ ಎರಡು-ಮೂರು ಕಾಲೇಜಿನವರು ಹೇಳಿದ್ದಾರೆ. ನಮ್ಮಲ್ಲಿರುವ ಕಾಲೇಜುಗಳ ಸೀಟುಗಳನ್ನು ನಿಮಗೇ ಕೊಡುತ್ತೇವೆ. ನೀವೇ ಮಾಡಿ ಎಂದು ಹೇಳಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇಂಜಿನಿಯರಿಂಗ್‌ನಲ್ಲಿ ಕೊಡುತ್ತಾರೆ? ಮೆಡಿಕಲ್‌ಗೆ ಕೊಡುವುದೇ ಇಲ್ಲ.

ಶ್ರೀ ಡಿ. ಹೆಚ್. ಶಂಕರ್‌ಮೂರ್ತಿ : ಇದು ಜನರಲ್ ಅಧಿಕಾರ. ಯಾರು ಕೊಡುತ್ತಾರೋ ಅದನ್ನು ತೆಗೆದುಕೊಳ್ಳುತ್ತೇವೆ. ಕೊಡದಿದ್ದರೆ ಬೇಡ.

SRI BASAVARAJA RAYAREDDY : These are all assumptions. What is the point of law? Assumptions ಮೇಲೆ ಮಾತನಾಡುತ್ತೀರಲ್ಲಾ. ಕಾನೂನು ನಿರ್ದಿಷ್ಟವಾಗಿರಬೇಕು.

SRI J.C. MADHUSWAMY : Why are you introducing a law for that?

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ : ಕೊಟ್ಟರೆ ತೆಗೆದುಕೊಳ್ಳುತ್ತೇನೆ, ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತಾರೆ. ಹಾಗಾದರೆ ಕಾನೂನು ಏಕೆ ಬೇಕು?

ಶ್ರೀ ಡಿ. ಹೆಚ್. ಶಂಕರ್‌ಮೂರ್ತಿ : ಇಲ್ಲ ; ಮಾಧುಸ್ವಾಮಿಯವರಿಗೆ ಅರ್ಥವಾಯಿತು. ಅಂದುಕೊಂಡಿದ್ದೇನೆ.

SRI J.C. MADHUSWAMY : Why do you want a Provision in the law? Law has to be enforceable.

ಶ್ರೀ ಬಸವರಾಜ ರಾಯರೆಡ್ಡಿ : ನೀವು ಊಹೆ ಮಾಡಿಕೊಂಡು ಮಾತನಾಡುತ್ತೀರಿ.

ಶ್ರೀ ರಾಮ್‌ಚಂದ್ರಗೌಡ : ಕೊಟ್ಟರೆ ಯಾವ ರೀತಿ ಡಿಸ್ಟ್ರಿಬ್ಯೂಟ್ ಮಾಡಬೇಕೆನ್ನುವುದಕ್ಕೆ ಕಾನೂನು ಬೇಕು ಅಷ್ಟೇ. ಕೊಡಲೇಬೇಕೆಂದೇನೂ ಇಲ್ಲ. ಕೊಟ್ಟಂಥ ಸಂದರ್ಭದಲ್ಲಿ ಹೇಗೆ ಡಿಸ್ಟ್ರಿಬ್ಯೂಟ್ ಮಾಡಬೇಕು ಎನ್ನುವುದಕ್ಕೋಸ್ಕರವೇ ಕಾನೂನು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ : ಕೊಟ್ಟರೆ ಕಾನೂನು. ಕೊಡದಿದ್ದರೆ ಕಾನೂನು ಇಲ್ಲವಾ?

SRI. J.C. MADHUSWAMY : My understanding is this. ನೀವೊಂದು ಲಾವನ್ನು ಮಾಡಿದರೆ it has to be enforceable. ಒಂದು ಶಾಸನ ಅದು ಎನ್‌ಫೋರ್ಸ್ ಆಗುವ ಹಾಗೆ ಇರಬೇಕು. Enforceable means, it has to be mandatory. Statutory decision has to be mandatory in execution. ತಾವೇ ಹೇಳಿ. ಇಲ್ಲಿ ಒಂದು ಕಾನೂನನ್ನು ಮಾಡಿಕೊಂಡರೆ ಅದನ್ನು ನೀವು ಅನುಷ್ಠಾನ ಮಾಡುವ ಹಾಗೆ ಇರಬೇಕಲ್ಲವೇ? ಜಾರಿ ಮಾಡುವ ಹಾಗೆ ಇರಬೇಕಲ್ಲವೇ? Your compromise need not be implemented as a law. ನೀವು ಆ ಸಂಸ್ಥೆಯ ಜೊತೆ ಕಾಂಪ್ರೊಮೈಸ್ ಮಾಡಿಕೊಂಡರೆ ಕೇಳುವುದಕ್ಕೆ ಯಾರು ಬರುತ್ತಾರೆ ಸಾರ್? ಅವರು ಕೊಡುತ್ತೇವೆಂದರೆ ನೀವು ತೆಗೆದುಕೊಳ್ಳಿ. ನಿಮ್ಮ ಗೌರ್ನಮೆಂಟ್ ಕೋಟಾದಲ್ಲಿ ಹಂಚಿ. ನಾಳೆ ಕೋರ್ಟ್ ಕೇಳಿದರೆ ನೀವು ಹೇಗೆ ಮಾಡುತ್ತೀರಿ? ನೀವು ನಿನ್ನೆ ದಿವಸ ಮಾಡಿದ ಕಾನೂನನ್ನು ಕೋರ್ಟ್ ಒಪ್ಪಲಿಲ್ಲವಲ್ಲಾ. ರಾಮ್‌ಚಂದ್ರಗೌಡರೇ, ಇಂಟರೆಸ್ಟಿಂಗ್ ಪಾಯಿಂಟ್. ಹಿಂದೆ ಒಂದು ರಾಜಿ ಎಲ್ಲಾ ಆದಿರಿ, Supreme court did not agree.
ಸುಪ್ರೀಂ ಕೋರ್ಟ್ ಒಪ್ಪಲಿಲ್ಲವಲ್ಲಾ. ರಾಜಿ ಆದರೂ ಒಪ್ಪಲಿಲ್ಲ. "No I have given decision", ಎಂದಿತು. ಈಗ ಹೇಗೆ ಒಪ್ಪುತ್ತೆ ಕೋರ್ಟ್? How will you justify your stand before the Government?
ಎರಡನೆಯದು ನಿಮ್ಮ ಕಮಿಟಿ. ಈಗ ತಾವು ಉಸ್ತುವಾರಿಗೊಂದು ಕಮಿಟಿಯನ್ನು ಮಾಡಿಬಿಟ್ಟಿದ್ದೀರಿ. ಅದು ಅದರಲ್ಲಿದೆ. ಆ ಕಮಿಟಿಗಳನ್ನು ನಾನು ಪ್ರಶ್ನೆ ಮಾಡುವುದಿಲ್ಲ. ನೀವು ಸಾಮಾನ್ಯ ಪರೀಕ್ಷೆ ಸಮಿತಿಯನ್ನು ಮಾಡಿದ್ದೀರಿ.

ಯೆಸ್. ಧರ್ಮಸಿಂಗ್ ಸಾಹೇಬರ ಜೊತೆ ನಾನು ಈಗ ಸೇರಿಕೊಳ್ಳುತ್ತೇನೆ. ಒಂದು ಕಡೆ just purely on the basis of CET merit, ಮೇಲೆ admission ಮಾಡುತ್ತೇವೆ ಎನ್ನುತ್ತೀರಿ. ಇನ್ನೊಂದು ಕಡೆ on the basis of P.U.C and C.E.T marks aggregate ಮೇಲೆ ಮಾಡುತ್ತೇವೆ ಎಂದು ಹೇಳುತ್ತೀರಿ.

ಶ್ರೀ ಡಿ. ಹೆಚ್. ಶಂಕರ್‌ಮೂರ್ತಿ : ಒಂದು ನಿಮಿಷ. ವಿರೋಧ ಪಕ್ಷದ ನಾಯಕರು ಮಾತನಾಡುವಾಗಲೂ ನಾನು ಮಧ್ಯೆ ಬಾಯಿ ಹಾಕಲಿಲ್ಲ. ಈ ಚರ್ಚೆ ಅಪ್ರಸ್ತುತವಾಗಿಬಿಡಬಾರದು ಎನ್ನುವ ಕಾರಣಕ್ಕಾಗಿ ನಾನು ಮಧ್ಯೆ ಬಾಯಿ ಹಾಕುವುದಕ್ಕೆ ಪ್ರಯತ್ನಮಾಡಿದೆ. ದಯಮಾಡಿ ಗಮನಿಸಿ. ಇಂಜಿನಿಯರಿಂಗ್, ಮೆಡಿಕಲ್ ಎಲ್ಲದಕ್ಕೂ ಇದುವರೆಗೂ ಇದ್ದದ್ದು ಸಿಇಟಿ ಮತ್ತು ಪಿಯುಸಿ ಮಾರ್ಕ್ಸ್ ಅನ್ನು ತೆಗೆದುಕೊಂಡು ಆ್ಯವರೇಜ್ ತೆಗೆದುಕೊಳ್ಳುವುದು. ಆದರೆ ಕಳೆದ ವರ್ಷ ಎಂಸಿಐ ನವರು ಒಂದು ಪಾಯಿಂಟನ್ನು ರೈಜ್ ಮಾಡಿದರು. ನಾವು ಇದೇ ತರಹ ಕಳೆದ ವರ್ಷ ಸೀಟುಗಳನ್ನು ಅನೌನ್ಸ್ ಮಾಡಿದ್ದೆವು. ಅನೌನ್ಸ್ ಮಾಡಿದ ಸಂದರ್ಭದಲ್ಲಿ ಕೆಲವರು ಕೋರ್ಟಿಗೆ ಹೋದರು. ಎಂಸಿಐನವರು ಹೇಳಿದ್ದಾರೆ, ಮೆಡಿಕಲ್ ಕಾಲೇಜು ಸೀಟುಗಳಿಗೆ ತಾವು ಸಿಇಟಿ ಮಾರ್ಕ್ಸ್ ಮಾತ್ರ ತೆಗೆದುಕೊಳ್ಳಬೇಕು, ಪಿಯು ಮಾರ್ಕ್ಸ್‌ನ್ನು ಸೇರಿಸಿಕೊಳ್ಳಕೂಡದು ಎಂದು ಬಂದಾಗ ಸುಪ್ರೀಂ ಕೋರ್ಟಿನಲ್ಲಿ ನಾವು ಒಂದು ಮಾತನ್ನು ಅವತ್ತು ಇದ್ದ ಸರ್ಕಾರ ಹೇಳಿತು. ಸ್ವಾಮಿ, ನಾವು ಬಹಳ ಮುಂದಕ್ಕೆ ಹೋಗಿಬಿಟ್ಟಿದ್ದೇವೆ. ಈ ವರ್ಷ ದಯಮಾಡಿ ಇಂಟರ್‌ಫಿಯರ್ ಆಗಬೇಡಿ. ಮುಂದಿನ ವರ್ಷ ಏನು ಮಾಡಬೇಕೆಂದು ಹೇಳಿ. ಆದರೆ ಈ ವರ್ಷ ನಾವು ಮಾಡಿರುವುದನ್ನು ತಾವು ಒಪ್ಪಿಕೊಳ್ಳಬೇಕು. ಎಂದು ಅದುವರೆಗೂ ನಡೆದುಕೊಂಡು ಬಂದಿರುವ ಹಾಗೆಯೇ ಅದು ಹಾಗೆಯೇ ನಡೆಯಿತು. ಕಳೆದ ವರ್ಷವೂ ಹಾಗೆಯೇ ನಡೆಯಿತು. ಆದರೆ ಈ ವರ್ಷ ಅದರ ಜಡ್ಜ್‌ಮೆಂಟ್ ಫೈನಲ್ ಬಂದಿದೆ. ಏನು ಬಂದಿದೆ ಎಂದರೆ ಆ ಜಡ್ಜ್‌ಮೆಂಟ್ ಹೇಳುವಾಗ ಅದು ಕಳೆದ ವರ್ಷವೇ ಹೇಳಿದ್ದಾರೆ, ಈ ವರ್ಷಕ್ಕೆ ಮಾತ್ರ. ಮುಂದಿನ ವರ್ಷದಿಂದ ತಾವು ಹಾಗೆ ಮಾಡಕೂಡದು. ತಾವು ಮೆಡಿಕಲ್‌ಗೆ ತೆಗೆದುಕೊಳ್ಳುವಾಗ ನೀವು ಅದಕ್ಕೆ ಸಿಇಟಿ ಮಾರ್ಕ್ಸ್ ಮಾತ್ರ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಇದೊಂದು ನಮಗೇನೂ ಸಂತೋಷ ತಂದಿರತಕ್ಕ ಜಡ್ಜ್‌ಮೆಂಟ್ ಎಂದು ತಿಳಿಯಬೇಡಿ. ನಾವು ಇದನ್ನು ಒಪ್ಪಿದ್ದೇವೆಂದು ಹೇಳಿಲ್ಲ. ನಮಗೆ ಬೇರೆ ದಾರಿ ಇಲ್ಲ. ಹಾಗಾಗಿ ಅವರು ಎಷ್ಟಕ್ಕೆ ಕೇಳಿದ್ದಾರೋ ಅಷ್ಟಕ್ಕೆ ಮಾತ್ರ ಸಿಇಟಿಗೆ ಮಾತ್ರ ತೆಗೆದುಕೊಂಡಿದ್ದೇವೆ,

ಬಾಕಿ ಎಲ್ಲದಕ್ಕೂ ಮುಂಚೆ ನಡೆಯುತ್ತಿದ್ದ ಹಾಗೆಯೇ ಸಿಇಟಿ ಪ್ಲಸ್ ಪಿಯು ಮಾರ್ಕ್ಸ್ ಎರಡನ್ನೂ ತೆಗೆದುಕೊಂಡಿದ್ದೇವೆ. It is only to honour the verdict of the Supreme Court High Court.
ಹಾಗಾಗಿ ಈ ವರ್ಷ ನಮಗೆ ಬೇರೆ ಮಾರ್ಗವೇ ಇಲ್ಲ. ಬೇರೆ ದಾರಿ ಇಲ್ಲ. ನಾವೇನಾದರೂ ಎರಡೂ ಸೇರಿಸಿ ಹೋದರೆ ಅಷ್ಟೂ ಮಕ್ಕಳಿಗೆ ಅನ್ಯಾಯವಾಗುತ್ತದೆ. ಯಾರಿಗೂ ಸೀಟು ಕೊಡಲಿಕ್ಕೆ ಬರುವುದಿಲ್ಲ. ಹಾಗಾಗಿ ಮೆಡಿಕಲ್ ಮತ್ತು ಪ್ಯಾರಾ ಮೆಡಿಕಲ್‌ಗೆ ಸಿಇಟಿ ಮಾತ್ರ ಗಣನೆಗೆ ತೆಗೆದುಕೊಳ್ಳುತ್ತೇವೆ. ಬಾಕಿ ಎಲ್ಲದಕ್ಕೂ ಅದನ್ನು ಬಿಟ್ಟು ಉಳಿದದ್ದೆಲ್ಲಕ್ಕೂ ಸಿಇಟಿ ಮತ್ತು ಪಿಯುಸಿ, ಮುಂಚೆ ಹೇಗೆ ಮಾಡುತ್ತಿದ್ದೆವೋ ಹಾಗೆಯೇ ಮಾಡುತ್ತೇವೆ. ನಮಗೇನೂ ಇದರಿಂದ ತುಂಬಾ ಸಂತೋಷವಾಗಿದೆ ಎಂದು ತಿಳಿಯಬೇಡಿ. ಆದರೆ ಬೇರೆ ದಾರಿ ಏನು ಇದೆ, ತಾವೇ ಹೇಳಿ. ಎಂಸಿಐನವರು ಇಂಜಿನಿಯರಿಂಗ್‌ಗೇನೂ ಮಾಡಿಲ್ಲ. ಅವರು ಮೆಡಿಕಲ್‌ಗೆ ಮಾತ್ರ ಮಾಡಿದ್ದಾರೆ. ಅವರು ಇಂಜಿನಿಯರಿಂಗ್‌ಗೆ ಮಾಡುವುದಕ್ಕೆ ಬರುವುದಿಲ್ಲ. ಇಂಜಿನಿಯರಿಂಗ್‌ಗೆ ಹೇಗೆ ಇತ್ತೋ ಹಾಗೆಯೇ ನಾವು ನಡೆದುಕೊಂಡಿದ್ದೇವೆ. ಎಂಸಿಐ ನಾರ್ಮ್ಸ್ ಪ್ರಕಾರ ನಾವು ಪಿಯು ಮಾರ್ಕ್ಸ್‌ನ್ನು ಗಣನೆಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅದಕ್ಕಾಗಿ ಸಿಇಟಿ ಪರೀಕ್ಷೆಗೆ ಕೂರುವವರಿಗೆ ಸಹಾ ಬೇಸ್ ಮಿನಿಮಮ್ ನಂಬರನ್ನು ಫಿಕ್ಸ್ ಮಾಡಿದ್ದಾರೆ. ಅದು ಇದ್ದಿದ್ದರಲ್ಲಿ ಒಂದು ಸ್ವಲ್ಪ ಸಮಾಧಾನ ತರುವುದೇನೆಂದರೆ . . . .

ಶ್ರೀ ಜಿ. ವಿ. ಶ್ರೀರಾಮ್‌ರೆಡ್ಡಿ : ಮೆಡಿಕಲ್ ಅಡ್ಮಿಷನ್‌ಗೆ ಸೈನ್ಸ್ ಕನ್‌ಸಿಡರ್ ಮಾಡುವುದಿಲ್ಲವೆಂದರೆ ಹೇಗೆ?

ಶ್ರೀ ಡಿ. ಹೆಚ್. ಶಂಕರಮೂರ್ತಿ : ಸೈನ್ಸ್ ಅಲ್ಲ. ಪಿ.ಯು. ಮಾರ್ಕ್ಸ್. The Discussion is about P.U. marks. ಇದುವರೆಗೂ ಪಿಯುಸಿಯಲ್ಲಿ ಅಭ್ಯರ್ಥಿ ತೆಗೆದುಕೊಂಡ ಮಾರ್ಕ್ಸ್ . . . .

ಶ್ರೀ ಜಿ.ವಿ.ಶ್ರೀರಾಮ್‌ರೆಡ್ಡಿ : ನನಗೆ ಅರ್ಥವಾಗುತ್ತದೆ. ನಾನು ಕೇಳುತ್ತಿರುವ ಪಾಯಿಂಟ್ ಏನೆಂದರೆ ಪಿಯುಸಿಯಲ್ಲಿರುವ ಸೈನ್ಸ್ ಮಾರ್ಕ್ಸ್‌ನ್ನು ಇಂಜಿನಿಯರಿಂಗ್ ಅಡ್ಮಿಷನ್‌ಗೆ ಕನ್‌ಸಿಡರ್ ಮಾಡುತ್ತೀರಿ.

ಶ್ರೀ ಡಿ. ಹೆಚ್. ಶಂಕರಮೂರ್ತಿ : ಹೌದು.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ : ಮೆಡಿಕಲ್‌ಗೆ ಏಕೆ ಕನ್‌ಸಿಡರ್ ಮಾಡುವುದಿಲ್ಲ?

ಶ್ರೀ ಡಿ. ಹೆಚ್. ಶಂಕರಮೂರ್ತಿ : ಮೆಡಿಕಲ್‌ಗೆ ಇದುವರೆಗೂ ಮಾಡುತ್ತಿದ್ದೆವು. ಈಗ ಮಾಡುವ ಹಾಗೆ ಇಲ್ಲ. ಮಾಡುವುದಕ್ಕೆ ಬರುವುದಿಲ್ಲ. ಕೋರ್ಟ್. ನಾನು ನೀವು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಎಂಸಿಐ ಹೇಳಿದ್ದೇ ಮ್ಯಾಂಡೇಟರಿಯಾ?

ಶ್ರೀ ಡಿ. ಹೆಚ್. ಶಂಕರ್‌ಮೂರ್ತಿ : ಹೌದು.

ಶ್ರೀ ಎಂ. ಬಿ. ಪಾಟೀಲ್ : ತಾವು ಮೆಡಿಕಲ್ ರೆಗ್ಯುಲೇಷನ್ 2000ದ ಬಗ್ಗೆ ಮಾತನಾಡುತ್ತಿದ್ದೀರಿ ಎಂದು ನಾನು ಭಾವಿಸುತ್ತೇನೆ. This Regulations say about the eligibility ಸಿಇಟಿಯಲ್ಲಾಗಲಿ, ಕಾಮೆಡ್‌ನಲ್ಲಿ 50 ಪರ್‌ಸೆಂಟ್ ಅಗ್ರಿಗೇಟ್ ಇರಬೇಕೆಂದು ಹೇಳುತ್ತಿರುವುದು. ನಾಟ್ ಪಿಯುಸಿ ಮಾರ್ಕ್ಸ್‌ಗೆ ವೇಟೇಜ್ ಕೊಡಬೇಡಿ ಎಂಸಿಐನವರು ಮೆಡಿಕಲ್ ರೆಗ್ಯುಲೇಷನ್ 2000ರಲ್ಲಿ ಹೇಳಿಲ್ಲ. ಮೆಡಿಕಲ್ ರೆಗ್ಯುಲೇಷನ್ 2000ರಲ್ಲಿ ಅವರೇನು ಹೇಳುತ್ತಾರೆ, 50 ಪರ್‌ಸೆಂಟ್ ಎಲಿಜಬಿಲಿಟಿ ಇರಬೇಕೆಂದು. ಲಾಸ್ಟ್ ಟೈಮ್ ಅನೇಕ ವಿದ್ಯಾರ್ಥಿಗಳದಾಯಿತು. ಸಿಇಟಿಯಲ್ಲಾಗಲಿ ಕಾಮೆಡ್‌ನಲ್ಲಾಗಲಿ 50 ಪರ್‌ಸೆಂಟ್ ಅವರಿಗೆ ಅಗ್ರಿಗೇಟ್ ಬರಲಿಲ್ಲ. ನಾವು ಅವರನ್ನು ಅಡ್ಮಿಟ್ ಮಾಡಿಕೊಳ್ಳುವ ಪರಿಸ್ಥಿತಿ ಇರಲಿಲ್ಲ ಅದರ ಬಗ್ಗೆ ತಾವು ಮಾತನಾಡುತಿದ್ದೀರಿ ಪಿಯುಸಿ ಮಾರ್ಕ್ಸ್‌ಗೆ ವೇಟೇಜ್ ತೆಗೆದುಕೊಳ್ಳಬೇಡಿ ಎಂದು ಮೆಡಿಕಲ್ ಕೌನ್ಸಿಲ್‌ನವರು ಹೇಳಿಲ್ಲ. ಎಲಿಜಬಿಲಿಟಿ ಬಗ್ಗೆ ಹೇಳಿದೆ. 50% eligibility either in CET or in Comed, ಎಂದು ಅದು ಹೇಳಿದೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ನಿಮಿಷ ಯೀಲ್ಡ್ ಆಗಿ ಸಾರ್. ಎಂಸಿಐ less than 50% ಅಗ್ರಿಗೇಟ್ ಪಿಯುಸಿಯಲ್ಲಿ ಬಂದರೂ ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಲ್ಲ. ಸಿಇಟಿಯಲ್ಲಿ ಬಂದರೂ ತೆಗೆದುಕೊಳ್ಳುವುದಕ್ಕೂ ಅವಕಾಶ ಮಾಡಿಲ್ಲ.

ಶ್ರೀ ರಾಮ್‌ಚಂದ್ರ ಗೌಡ : ಇಂಜಿನಿಯರಿಂಗ್‌ಗೆ ಎಐಸಿಟಿಇ ನವರು ಯಾವುದೇ ಕ್ಲಾಸನ್ನು ಹಾಕಿಲ್ಲ. ಅವರು ಹಾಕದೇ ಇರುವುದರಿಂದ ಇಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಪಿಯುಸಿ ಮತ್ತು ಸಿಇಟಿ ಎರಡನ್ನೂ ಸೇರಿಸಿ ಆ್ಯವರೇಜ್ ಮಾಡುತ್ತಿದ್ದೇವೆ. ಆದರೆ MCI, DCI, both dental and medical, they have given instructions, that we have to consider only the C.E.T. Therefore, we are doing, it that is all. The

question is whether it is mandatory or not. ಪ್ರಶ್ನೆ ಕೇಳಿದರೆ it is mandatory because sanctioning is by that Authority.

(ಗೊಂದಲ)

ಶ್ರೀ ಡಿ. ಹೆಚ್. ಶಂಕರ್‌ಮೂರ್ತಿ : ಮಾನ್ಯ ಅಧ್ಯಕ್ಷರೇ, ನಾನು ಹೇಳುವುದನ್ನು ಸ್ವಲ್ಪ ಗಮನಿಸಬೇಕು. ಕಳೆದ ವರ್ಷ ನಾವು ಆ ಎಂಸಿಐ ನಾರ್ಮ್ಸ್‌ನ್ನು ಪಕ್ಕಕ್ಕೆ ಇಟ್ಟು ಅಂದರೆ ಅದು ಮ್ಯಾಂಡೇಟರಿ ಅಲ್ಲ ಅಂದುಕೊಂಡು ಮುಂಚೆ ಮಾಡುತ್ತಿದ್ದಂತೆ ಪಿಯುಸಿ ಮತ್ತು ಸಿಇಟಿ ಎರಡೂ 50:50 ತೆಗೆದುಕೊಂಡು ಸೀಟುಗಳನ್ನು ಅನೌನ್ಸ್ ಮಾಡಿಬಿಟ್ಟಿದ್ದೆವು. ಅದರ ವಿರುದ್ಧವಾಗಿ ಕೋರ್ಟಿಗೆ ಕೇಸ್ ಹೋಯಿತು. ಕೋರ್ಟಿನೊಳಗೆ ನಾವು ಸರ್ಕಾರದ ಪರವಾಗಿ ಅವರಿಗೆ ಹೋಗಿ ಕೈಮುಗಿದು ಬೇಡಿಕೊಂಡೆವು. ಏನೆಂದರೆ ಸ್ವಾಮಿ, ನಾವು ಬಹಳ ಮುಂದೆ ಹೋಗಿದ್ದೇವೆ, ದಯಮಾಡಿ ಇಂಟರ್‌ಫಿಯರ್ ಆಗಬೇಡಿ. ಮುಂದಿನ ವರ್ಷ ತಾವು ಹೇಗೆ ಹೇಳುತ್ತೀರೋ ಹಾಗೆ ಮಾಡುತ್ತೇವೆ. ಈ ವರ್ಷ ನಾವು ಮಾಡಿರುವುದಕ್ಕೆ ನಮಗೆ ಪರ್ಮಿಷನನ್ನು ಕೊಡಿ ಎಂದು ನಾವು ಕೇಳಿದೆವು. ಕೋರ್ಟ್ ಏನು ಹೇಳಿತು, ಆಯಿತು. ಈ ವರ್ಷ ಮಾತ್ರ ಹೀಗೆ ಮಾಡಬಹುದು. ಮುಂದಿನ ವರ್ಷದಿಂದ ನೀವು ಸಿಇಟಿ ಮಾರ್ಕ್ಸ್ ಮಾತ್ರ ಗಣನೆಗೆ ತೆಗೆದುಕೊಳ್ಳಬೇಕು, ಮೆಡಿಕಲ್ ಮತ್ತು ಡೆಂಟಲಿಗೆ. ಎಂದು ಹೇಳಿ ಜಡ್ಜ್‌ಮೆಂಟ್‌ನ್ನು ಕೊಟ್ಟಿದ್ದಾರೆ. ಆ ಜಡ್ಜ್‌ಮೆಂಟಿನ ಆಧಾರದ ಮೇಲೆ ಈ ವರ್ಷ ನಾವು ಕಳೆದ ವರ್ಷ ಮಾಡಿದ ಹಾಗೆಯೇ ಪಿಯುಸಿ ಮಾರ್ಕ್ಸ್ ಮತ್ತು ಸಿಇಟಿ ಮಾರ್ಕ್ಸ್ 50:50 ಮಾಡುವುದಕ್ಕೆ ಬರುವುದಿಲ್ಲ. ನಾವು ಸಿಇಟಿ ಮಾತ್ರ ಮಾಡಬೇಕು. ಹಾಗಾಗಿ ಮೆಡಿಕಲ್ ಮತ್ತು ಡೆಂಟಲ್‌ಗೆ ಮಾತ್ರ ಸಿಇಟಿ ಮಾಡುತ್ತಿದ್ದೇವೆ, ಇದರ ಮೇಲೆ ಸುಪ್ರೀಂಕೋರ್ಟ್‌ಗೆ ಹೋಗಲು ಬರುತ್ತದೆ, ಆದರೆ ಅದರ ತೀರ್ಪು ಬರುವವರೆಗೆ ಗತಿಯೇನು?

ಶ್ರೀ ಆರ್. ವಿ. ದೇಶಪಾಂಡೆ : ಆ ಜಡ್ಜ್‌ಮೆಂಟ್ ನಮಗೂ ಸಂತೋಷ ತಂದಿಲ್ಲ ಅಂತ ಹೇಳಿದಿರಿ, ಓ.ಕೆ. ಪಿಯುಸಿ ಮತ್ತು ಸಿಇಟಿ ಇದ್ದರೆ ಹಿಂದುಳಿದ ವರ್ಗಕ್ಕೆ, ಹಳ್ಳಿ ಹುಡುಗರಿಗೆ ಇದರಿಂದ ಅವಕಾಶವಾಗುತ್ತದೆ ಎಂಬುದನ್ನು ನೀವು ತಿಳಿದುಕೊಳ್ಳಬೇಕು. You should have gone to supreme court & ostained a stay on that.

ಶ್ರೀ ಡಿ ಎಚ್ ಶಂಕರಮೂರ್ತಿ : ಸ್ಟೇ ಕೊಡುವುದಿಲ್ಲ ಅವರು,

ಶ್ರೀ ಬಸವರಾಜು ರಾಯರೆಡ್ಡಿ : ಯಾಕೆ ಕೊಡುವುದಿಲ್ಲ? ಹಾಗಾದರೆ ಅದರ ಬಗ್ಗೆ ರಾಜ್ಯ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿ.

ಶ್ರೀ ಧರಂ ಸಿಂಗ್ (ವಿರೋಧ ಪಕ್ಷದ ನಾಯಕರು) : ತಾವೇನು 22ನೇ ತಾರೀಖು ಅಧಿಸೂಚನೆ ಇಶ್ಯೂಮಾಡಿ ಮೆಡಿಕಲ್‌ಗೆ ಓನ್ಲಿ ಸಿಇಟಿ ಅಂತ ಹೇಳುತ್ತಿದ್ದೀರಿ, ಅದು ತಪ್ಪು ಇವತ್ತು ಕಾನೂನು ಮಾಡಿರಿ. ಸುಪ್ರೀಂಕೋರ್ಟಿಗೆ ಹೋಗುವುದು ಇದೆ. ಹಳ್ಳಿಗಾಡಿನ ಹುಡುಗರಿಗೆ ಸಹಾಯ ಮಾಡಬೇಕು ಅಂತ ಇಚ್ಛಾಶಕ್ತಿ ಇದ್ದರೆ, ಇವತ್ತು ಮೆಡಿಕಲ್ ಇಂಜಿನಿಯರಿಂಗ್‌ಗೂ ಒಂದೇ ಆಗಲಿ ಅಂತ ಮಾಡಿ. ನನಗನ್ನಿಸುತ್ತದೆ, ರಾಮ್‌ಚಂದ್ರ ಗೌಡರು ಮತ್ತು ಶಂಕರಮೂರ್ತಿಯವರು ಪದವೀಧರ ಶಿಕ್ಷಕ ಕ್ಷೇತ್ರಗಳ ಅಭ್ಯರ್ಥಿಗಳಾಗಿದ್ದಾರೆ. ಅದಕ್ಕೇ ಪಟ್ಟಣ ಜನಗಳಿಗೆ ಬೆಂಬಲ ಕೊಡಬೇಕು ಎಂಬ ಹಿನ್ನೆಲೆಯಲ್ಲಿ ಮಾಡಿದ್ದಾರೆ ಅಂತ ನಾನು ಅನ್ನಬೇಕಾಗುತ್ತದೆ.

ಶ್ರೀ ಡಿ ಎಚ್ ಶಂಕರಮೂರ್ತಿ : ಮಾಧುಸ್ವಾಮಿಯವರೇ, ಎಂಸಿಐ ರೂಲ್ಸ್‌ನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ. ನಾನು ಸುಪ್ರೀಂಕೋರ್ಟ್ ತೀರ್ಪಿನ ವಿರುದ್ಧವಾಗಿ ಮಾಡಲಾ?

ಶ್ರೀ ಧರಂಸಿಂಗ್ : ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಬಂದ ಮೇಲೆ ಪ್ರಧಾನಮಂತ್ರಿಗಳೇ ಲೋಕಸಭೆಯಲ್ಲಿ ನಾವು ಎಲ್ಲಾ ಸಾಮಾನ್ಯಜನರ ಸಂರಕ್ಷಣೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದರ ಪ್ರಕಾರ ಬಿಲ್ ಬರುತ್ತದೆ. ಸುಪ್ರೀಂಕೋರ್ಟಿನಿಂದ ಬಂದ ಮೇಲೆ ರಾಜ್ಯಸರ್ಕಾರಕ್ಕೆ ಅದರ ಬಗ್ಗೆ ಏನಾದರೂ ಮಾಡತಕ್ಕದ್ದು ಇಲ್ಲ. ಒಂದು ವೇಳೆ ಇಚ್ಛಾಶಕ್ತಿ ಇದ್ದರೆ ಮಾಡಬೇಕು ತಾವು.

ಶ್ರೀ ಎಂ ಬಿ ಪಾಟೀಲ್ : ಎಂಸಿಐ ಜಡ್ಜ್‌ಮೆಂಟನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದಿಲ್ಲ, ಮಧುಸಿಂಗ್ ಜಡ್ಜ್‌ಮೆಂಟಿನಲ್ಲಿ ಏನು ಅದನ್ನು ಕೋಟ್ ಮಾಡಿದ್ದಾರೆ ಅದರ ಮೇಲೆ ಅದು ಮೆಡಿಕಲ್ ರೆಗ್ಯುಲೇಶನ್ 2000 ಆಗಿದೆ. ಅಂದರೆ ಎಲಿಜಿಬಿಲಿಟಿ ಕ್ರೈಟಿರಿಯಾ ಬಗ್ಗೆ ಹೇಳಿದ್ದಾರೆ ಮಧುಸಿಂಗ್ ಜಡ್ಜ್‌ಮೆಂಟ್ ಬೇಸ್ ಮಾಡಿ ಇವತ್ತು ಎಂಸಿಐ ರೆಗ್ಯುಲೇಶನ್ಸ್ ಬಂದಿದೆ. ಎನ್‌ಟ್ರೆನ್ಸ್‌ನಿಂದ 50 ಪರ್ಸೆಂಟ್ ಸೀಟ್ ಹೋಗುತ್ತದೆ, ಸಿಮಿಲರ್ಲಿ ಸರ್ಕಾರದ ಸಿಇಟಿಯಲ್ಲೂ 50 ಪರ್ಸೆಂಟ್ ಆಗಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೊ ನೊ ಈಗ ನಮ್ಮ ಇಶ್ಯೂ – Government has stated. Medical examination in entrance ಕೊಡಬೇಕು ಅಂದರೆ purely on the merit of CET ಅಂತ ಹೇಳಿಬಿಟ್ಟಿದೆ. ಪಿಯುಸಿಯಲ್ಲಿ

ನೀವು 99 ಪರ್ಸೆಂಟ್ ತೆಗೆದುಕೊಂಡರೂ it is not for consideration now. ಅವನು ಗೋಲ್ಡ್ ಮೆಡಲಿಸ್ಟ್ ಇದ್ದರೂ ಡೆಂಟಲ್ ಮತ್ತು ಮೆಡಿಸಿನ್‌ಗೆ ಅವನನ್ನು ನಾವು ಪರಿಗಣಿಸುವುದಿಲ್ಲ ಅನ್ನುವ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣ ಮಾಡಿದ್ದೀರಿ. The very principle ಅನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಅರ್ಥ ಮಾಡಿಕೊಂಡಿದ್ದರೆ, You would have fought the case before the Supreme Court of India. ಸಿಇಟಿ ಉದ್ದೇಶವೇನು ಸಾರ್? ಬೇರೆಬೇರೆ ಸಿಲಬಸ್ ಓದಿ ಯಾವುದೇ ಒಂದು ಕೋರ್ಸ್‌ಗೆ ಅಡ್ಮಿಷನ್ ಸೀಕ್ ಮಾಡುವವರು, are they eligible to get admission to that course or not? ಅಂತ ನೋಡಲಿಕ್ಕೆ ಒಂದು ಎಂಟ್ರೆನ್ಸ್ ಟೆಸ್ಟ್ ಮಾಡಲಾಯ್ತು. ಕರ್ನಾಟಕದಲ್ಲಿ ಆ ಪ್ರಶ್ನೇನೇ ಇರಲಿಲ್ಲ. we had only Pre-University Course, which is common. ಇಡೀ ರಾಜ್ಯದಲ್ಲಿ ಒಂದೇ ಒಂದು ಕೋರ್ಸಿದ್ದಾಗ ಸಿಇಟಿ ಇಂಟರ್‌ಡ್ಯೂಸ್ ಮಾಡಿದ್ದೇ ಅಪರಾಧ ಅಂತ ನಾನು ವೈಕೆ ರಾಮ್‌ಯ್ಯನವರೂ ನೀವು ಸಿಇಟಿ ಇಂಟರ್‌ಡ್ಯೂಸ್ ಮಾಡಿದ್ದೇ ಅಪರಾಧ ಅಂತ ನಾನು ವೈಕೆ ರಾಮ್‌ಯ್ಯನವರೂ ನೀವು ಸಿಇಟಿ ತಂದಾಗ ಇಲ್ಲಿ ಹೇಳಿದ್ದೆವು. ನಮ್ಮ ಹಳ್ಳಿ ಹುಡುಗರ ತಲೆ ಬೋಳಿಸಲಿಕ್ಕೆ, ಅವರು ಓದುವುದನ್ನು ತಪ್ಪಿಸಲಿಕ್ಕೆ ಅವರಿಗೇನೂ ಅರ್ಥವಾಗದಂತಹ ಸ್ಥಿತಿ ನಿರ್ಮಾಣ ಮಾಡುವುದಕ್ಕೆ ಈ ರಾಜ್ಯಸರ್ಕಾರ ಒಂದು ಷಡ್ಯಂತ್ರ ಮಾಡುತ್ತಿದೆ, ಸಿಇಟಿ ಇಂಟರ್‌ಡ್ಯೂಸ್ ಮಾಡುತ್ತಿದ್ದೀರಿ ಅಂತ. It is not a curriculum programme of the academic level. ನಾನು ತಮಿಳುನಾಡು ಸುದ್ದಿ ಮಾತನಾಡುವುದಿಲ್ಲ. ನೀವು ಮಾಡಿದಮೇಲೆ ತಮಿಳುನಾಡು ಮಾಡಿದ್ದು. you were the pioneers of CET. ನೀವು ಮಾರಿಕೊಂಡೋರು ಈ ರಾಜ್ಯವನ್ನು ಬೇರೆಯವರಿಗೆ. ಕರ್ನಾಟಕ ರಾಜ್ಯ ಸಾರಾಸಗಟಾಗಿ ಬೇರೆ ರಾಜ್ಯದವರಿಗೆ ಇಲ್ಲಿ ಅಡ್ಮಿಶನ್ ಕೊಟ್ಟು ಮಾರಾಟ ಮಾಡಿಕೊಂಡಿದ್ದು, ಅದರಲ್ಲೇನೂ ಎರಡು ವಾದ ಇಲ್ಲ. ನೀವು ಸಿಇಟಿ ಮಾಡಲು ಹೊರಟಿದ್ದು ಯಾಕೆ? ಹೊರಗಡೆ ರಾಜ್ಯದವರನ್ನು ತಂದು ದುಡ್ಡು ಮಾಡಲಿಕ್ಕೆ. ನಮ್ಮ ಮಕ್ಕಳನ್ನು ಕೊಲ್ಲಲಿಕ್ಕೆ. ಇವತ್ತು ನಾವು ವೈಜ್ಞಾನಿಕವಾಗಿ ವಿಚಾರ ಮಾಡಬೇಕು. ಪಿಯುಸಿ ಯಾಕೆ ಓದಿಸುತ್ತೀರಿ? ತೆಗೆದುಹಾಕಿಬಿಡಿ. ಬರೀ ಸಿಇಟಿ ಇಟ್ಟು ಬಿಡಿ, After two years let him come and take examination in CET. - - - ಪಿಯುಸಿ ಓದೋ ಬರ್ಡನ್ ಯಾಕೆ ಮಾಡುತ್ತಿದ್ದೀರಿ ಹುಡುಗರಿಗೆ ನೀವು? ಮೆಡಿಕಲ್ ಓದುವವನು ಪಿಯುಸಿ

ಓದಬೇಕಾಗಿಲ್ಲ, ನೀವು ಒಂದು ಸಲ ಸಿಇಟಿ ಬರೆದುಬಿಟ್ಟರೆ ಸಾಕು, ಅವನು ಪಿಯು ಪಾಸೋ ಫೇಲೋ ಬೇಕಾಗಿಲ್ಲ. ಇದನ್ನು ಹೇಗಾದರೂ ಮಾಡಿ ಸರ್ಕಾರ ನಿರ್ಬಂಧ ಮಾಡಲೇಬೇಕು. MCI can give guidelines. MCI is not the sovereign authority to dictate as to how admissions are made. It is a body constituted by the Government of India. ಹಾಗಾದರೆ ಎಂಸಿಐ ಎಲ್ಲಾ ಸ್ಟೇಟ್ಸ್‌ಗೂ ಹೀಗೇ ಮಾಡಿದೆಯಾ? ತರಿಸಿ ರೆಕಾರ್ಡ್ಸ್. ಎಲ್ಲಾ ರಾಜ್ಯದಲ್ಲಿ medical admission only on the basis of CET, ಅಂತ ಇದ್ದರೆ ರಾಜಿ ಆಗೋಣ. ತರಿಸಿ. What is their power? What is their responsibilities? Why MCI is meant for? ಇದೆಲ್ಲ ನಮಗೆ ಹೇಳಬೇಕಲ್ಲಾ. MCI direction is statutory obligation ಅಂತ ನಾವು ಭಾವಿಸಿಕೊಳ್ಳುವುದು ಸುಪ್ರೀಂಕೋರ್ಟ್ ಆ ರೂಲ್ಸ್‌ನ್ನು ಒಪ್ಪಿದೆ ಅಂತ ಹೇಳಿದಾಕ್ಷಣಕ್ಕೇ ಅದು Questionable ಅಲ್ಲ ಎಂದು ಭಾವಿಸುವುದು ಈ ರಾಜ್ಯದ ಮಕ್ಕಳಿಗೆ ಮಾರಕವಾಗಿದೆ. ನಾಳೆ ಸಿಟಿ ಮಕ್ಕಳೇ ಮೆಡಿಸಿನ್ ಓದಬೇಕಾಗುತ್ತದೆ. ಹಳ್ಳಿಮಕ್ಕಳಿಗೆ ಯಾರೂ ಸಿಇಟಿ ಪರೀಕ್ಷೆ ಹೇಗೆ ಬರೆಯುವುದು ಅಂತ ಹೇಳಿಕೊಡುವುದಿಲ್ಲ. ಅಲ್ಯಾವುದೇ ಇನ್‌ಸ್ಟಿಟ್ಯೂಟ್ಸ್ ಇಲ್ಲ, ಪಿಯು ಕರಿಕಲಂನಲ್ಲಿ ಆದಿಲ್ಲ, ಹುಡುಗರು ಹೇಗೆ ಮಾಡಬೇಕು ಸಾರ್? ಅಲ್ಲಿಂದ ಬಂದು ಪಟ್ಟಣದ ಮಕ್ಕಳನ್ನು ನೋಡಿ ನಾಚಿಕೆಯಿಂದ ತಲೆತಗ್ಗಿಸಿ ನಿಂತುಕೊಳ್ಳುವ ಹುಡುಗರು ಕಾಂಪಿಟ್ ಮಾಡುತ್ತಾರೆ ಸಿಇಟಿಯಲ್ಲಿ? ಸರ್ಕಾರಕ್ಕೆ ನಿಜವಾಗಿ ಈ ರಾಜ್ಯದ ಬಗ್ಗೆ ಅಭಿಮಾನವಿದ್ದರೆ .....

ಡಾ:ಕೆ.ಅನ್ನದಾನಿ : ಅಧ್ಯಕ್ಷರೇ, ಹಿರಿಯ ಸದಸ್ಯರಾದ ಮಾಧುಸ್ವಾಮಿ ಯವರು ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದಾರೆ, ತುಂಬಾ ಸಂತೋಷ. ಇವತ್ತಿನ ಶಿಕ್ಷಣ ವ್ಯಾಪಾರೀಕರಣದ ಸಂದರ್ಭದಲ್ಲಿ ಸದನದಲ್ಲಿ ಮಂಡಿಸುತ್ತಿರುವ ಅವರ ವಿಚಾರ ಬಹಳ ಉಪಯುಕ್ತ. ಪಿಯುಸಿಯಲ್ಲಿ ಮಕ್ಕಳು ತೆಗೆಯುವ ಮಾರ್ಕ್ಸ್ ಮೇಲೆ ಇವತ್ತು ಮೆಡಿಕಲ್ ಇಂಜನಿಯರಿಂಗ್ ಆಗಬಹುದು ಸೀಟು ಸಿಗುತ್ತದೆ ಹಿಂದೆ. ಯಾವ ತರಹ ಇತ್ತು ಸಿಇಟಿಗಿಂತ ಮುಂಚೆ ಅಂದರೆ ಪಿಯುನಲ್ಲಿ ಹೆಚ್ಚು ಅಂಕ ಗಳಿಸಿದವನಿಗೆ ಮೆಡಿಕಲ್ ಇಂಜಿನಿಯರಿಂಗ್, ಗ್ರಾಮಾಂತರದಲ್ಲೂ ಪಿಯುನಲ್ಲಿ ಹೆಚ್ಚು ಅಂಕ ಗಳಿಸಿದವನಿಗೆ ಮೆಡಿಕಲ್ ಇಂಜಿನಿಯರಿಂಗ್, ಗ್ರಾಮಾಂತರದಲ್ಲೂ ಪಿಯುನಲ್ಲಿ 90 ಅಂಕ ಗಳಿಸುವ ಮಕ್ಕಳು ಇದ್ದಾರೆ ಆದರೆ ಅವರಿಗೂ ಸೀಟು ಸಿಗುತ್ತಿತ್ತು ಈಗ ಆದರೆ ಅವರಿಗೆ

ಸಿಇಟಿ ಯಾವ ರೀತಿ ತೆಗೆದುಕೊಳ್ಳಬೇಕು ಹೇಗೆ ಬರೆಯಬೇಕು ಎಂಬ ಒಂದು ಫೆಸಿಲಿಟಿ ಇಲ್ಲದೇ ಇರುವುದರಿಂದ ಅವರು ಆ ಸಿಇಟಿಯಿಂದ ವಂಚಿತರಾಗುತ್ತಿದ್ದಾರೆ. ಆದ್ದರಿಂದ ಗ್ರಾಮೀಣ ಮಕ್ಕಳಿಗೂ ಅನುಕೂಲವಾಗುವಂತೆ ಪಿಯುದ ಪರ್ಸಂಟೇಜ್ ಅನ್ವಯಿಸಿ ಮೆಡಿಕಲ್ ಅಥವಾ ಇಂಜಿನಿಯರಿಂಗ್ ಕೊಟ್ಟರೆ ಒಳ್ಳೆಯದು, ಸಿಇಟಿ ಎಂಬುದನ್ನೇ ತೆಗೆದುಹಾಕುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯ.

ಶ್ರೀ ಬಸವರಾಜ ರಾಯರೆಡ್ಡಿ : ಇವತ್ತು ಗ್ರಾಮೀಣ ಮಕ್ಕಳಿಗೆ ಅನುಕೂಲವಾಗಬೇಕು ಬರೀ ಸಿಇಟಿ ಮಾರ್ಕ್ಸ್ ತೆಗೆದುಕೊಂಡರೆ ಆ ವಿದ್ಯಾರ್ಥಿಗಳಿಗೆ ಅನಾನುಕೂಲತೆ ಆಗುತ್ತದೆ. ಎಂಸಿಐದು ಮ್ಯಾಂಡೇಟರಿಯಲ್ಲ, ಹೈಕೋರ್ಟ್‌ನಲ್ಲಿ ಹೀಗಾಗಿದೆ. ಅಂತ ಅಂದಿರಿ ಹಾಗಾದರೆ ಕಳೆದ ತಿಂಗಳು ತಮಿಳುನಾಡು ಹೈಕೋರ್ಟ್ has given the judgment, that CET and PUC marks ತೆಗೆದುಕೊಳ್ಳಬೇಕು ಅಂತ. ದಯವಿಟ್ಟು ಅದನ್ನು ತರಿಸಿ. ಅದರ ಬಗ್ಗೆ ಹೇಳಿ.

ಶ್ರೀ ಜಿ ವಿ ಶ್ರೀರಾಮ್‌ರೆಡ್ಡಿ : ಸುಪ್ರೀಂಕೋರ್ಟ್ ಜಡ್ಜ್‌ಮೆಂಟಿನಲ್ಲಿ ಪಿಯು ಮಾರ್ಕ್ಸ್ ಕನ್‌ಸಿಡರ್ ಮಾಡಬೇಕಾಗಿಲ್ಲ ಅಂತ ಹೇಳಿದೆಯಾ? ಎಂಸಿಐ ರೂಲ್ಸ್ ಅದೇನೂ ಮ್ಯಾಂಡೇಟರಿಯಲ್ಲ. It can give only gridetines.

ಶ್ರೀ ಜೆ ಸಿ ಮಾಧುಸ್ವಾಮಿ : ತಮಿಳುನಾಡಿನವರು ಸಿಇಟಿ ಬೇಡ ಅಂತ ವಾದ ಮಾಡಿದರು. Try to understand things. ನನ್ನವಾದವೇ ಅವರದ್ದು. They were against CET itself. ಅವರು ಹಿಂದುಳಿದವರು ದ್ರಾವಿಡರು. ಅವರಿಗೆ ಗೊತ್ತು ಕಷ್ಟ ಹಳ್ಳಿಮಕ್ಕಳದ್ದು. ಆದರೆ ಹೈಕೋರ್ಟ್ ಏನು ಮಾಡಿತು ಸಿಇಟಿಯನ್ನು ವಜಾ ಮಾಡಲು ಆಗುವುದಿಲ್ಲ ಅಂತ ಹೇಳಿ ಅಗ್ರಿಗೇಟ್‌ಗೆ ಒಪ್ಪಿದೆ ಇವತ್ತು for PUC + CETಗೆ Chennai High Court has agreed. ತಮಿಳ್ನಾಡಿನಲ್ಲಿ ಸಿಇಟಿ ಮೇಲೆ ಹೋಗಿದ್ದ ಕೇಸು ಫೇಲಾಯ್ತು ಎಂಬ ಭಾವನೆ ನಮ್ಮದೇನಿದೆ, ಅದರ ಬಗ್ಗೆ ತೀರ್ಪೇನಾಗಿದೆ ಅಂತ ನೋಡಬೇಕು. It has allowed admission on the aggregate or PUC+CET marks. Only on CET. ಮಾಡಲು ಹೈಕೋರ್ಟ್ ಒಪ್ಪಿಲ್ಲ ಅಲ್ಲಿ. MCI is a common authority for all the states.

ಶಾಸನ ಮಾಡಬೇಕಾಗಿರುವವರು ನಾವು, ತಮಿಳು ನಾಡಿನಲ್ಲಿ ಅಲೋ ಮಾಡಿ ಕರ್ನಾಟಕದಲ್ಲಿ ಮಾಡುವುದಿಲ್ಲ ಅನ್ನುವುದಕ್ಕೆ ಅವರಿಗೆ ಯಾರೂ

ಅಧಿಕಾರ ಕೊಟ್ಟಿಲ್ಲ. Education is in the concurrent list now. Otherwise, you could have been in the State list. ಕೆಟ್ಟ ಮಾತು ಆಡಬಾರದು. ವೀಕ್‌ನೆಸ್‌ನಿಂದಾಗಿ concurrent list ಗೆ ಬಂದು ಇವೊತ್ತು ನಾವು ರಾಜ್ಯವನ್ನು ಹಾಳು ಮಾಡಿಕೊಂಡಿದ್ದೇವೆ. ಅದನ್ನೂ ಇವೊತ್ತು ತೆಗೆದುಕೊಂಡು ಹೋಗಿ ಎಂಸಿಐನವರಿಗೋ, ಸುಪ್ರಿಂ ಕೋರ್ಟ್‌ನವರಿಗೋ ನಾವು ಒತ್ತೆ ಇಡುತ್ತಿದ್ದೇವೆ. Then why are we meant for? ಈ ಶಾಸನಸಭೆಯಲ್ಲಿ ನಮ್ಮ ರಾಜ್ಯಪಾಲರು legislation ಮಾಡಿಕೊಳ್ಳುವಂತಿಲ್ಲ, Concurrent list ನಲ್ಲಿರುವ ಒಂದು ಐಟಂ ಮೇಲೆಂದರೆ, ಅಂದ ಮೇಲೆ ಈ ಶಾಸನಸಭೆಯಾದರೂ ಏಕಿರಬೇಕು? You bring in a legislation. ಸಿಇಟಿಯನ್ನು ನೀವೇನಾದರೂ ಕಂಪಲ್ಸರಿಯಾಗಿ ಮಾಡಿದರೆ, Sir, you are killing all rural students. You are killing.

ಶ್ರೀ ಡಿ. ಹೆಚ್. ಶಂಕರಮೂರ್ತಿ : ಒಂದು ಕ್ಲಾರಿಫಿಕೇಶನ್. ಇವೊತ್ತು ಈ ಬಿಲ್ ಅನ್ನು ಏನು ಇಂಟ್ರಡ್ಯೂಸ್ ಮಾಡಿದ್ದೇನೆ, ಈ ಬಿಲ್‌ನೊಳಗೆ ಈ ವಿಷಯ ಪ್ರಸ್ತಾಪ ಇಲ್ಲ. ಇದು ನಂಬರ್ ಒನ್. ಅದೊಂದು ಸಪರೇಟ್ ವಿಷಯ. ಸಪರೇಟ್ ವಿಷಯದ ಬಗ್ಗೆ ಚರ್ಚೆ ಮಾಡುವುದೆಂದರೆ ಅದೊಂದು ಬಹಳ ಒಳ್ಳೆಯ ಚರ್ಚೆಯಾಗುತ್ತದೆ. ಇದು ಆಗಲೇಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಬಿಲ್ ಪಾಸ್ ಮಾಡಿಕೊಂಡು ಹೇಗೆ ಮಾಡುತ್ತೀರಿ? ಬಿಲ್ ಪಾಸ್ ಮಾಡುವುದಕ್ಕಿಂತ ಮುಂಚೆ ಆಗಬೇಕು. ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ದ್ರೋಹ ಮಾಡಿದ ಹಾಗೆ ಆಗುತ್ತದೆ.

(ಗೊಂದಲ)

ಶ್ರೀ ಡಿ. ಹೆಚ್. ಶಂಕರಮೂರ್ತಿ : ಸ್ವಲ್ಪ ಕೇಳಿ ಸಾರ್. ತಾವು ಬುದ್ಧಿವಂತರು.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ : ದಯವಿಟ್ಟು ಒಂದು ವಿಚಾರವನ್ನು ತಾವು ಕೇಳಬೇಕು.

(ಗೊಂದಲ)

ಶ್ರೀ ಡಿ.ಹೆಚ್.ಶಂಕರಮೂರ್ತಿ : ಸ್ವಲ್ಪ ಕೇಳಿ ಸರ್. ತಾವು ಬುದ್ಧಿವಂತರು.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ : ದಯವಿಟ್ಟು ಒಂದು ವಿಚಾರವನ್ನು ತಾವು ಕೇಳಬೇಕು.

(ಗೊಂದಲ)

ಅಧ್ಯಕ್ಷರು: ಈಗ ಯಾರು ಮಾತನಾಡುತ್ತಿದ್ದೀರಿ? ಏನೂ ಅರ್ಥವಾಗುವುದಿಲ್ಲವಲ್ಲಾ. ಎಲ್ಲರೂ ಎದ್ದು ನಿಂತುಕೊಂಡು ಮಾತನಾಡುತ್ತಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ : ಅಲ್ಲಿ ತಮಿಳುನಾಡು ಹೈಕೋರ್ಟ್ ಜಡ್ಜ್‌ಮೆಂಟ್ ಕೊಟ್ಟಿದೆ. ಈ ಬಿಲ್‌ನಲ್ಲಿ ನೀವು ಅದನ್ನು ಇಂಟ್ರಡ್ಯೂಸ್ ಮಾಡಿ. based on that, Supreme Court ಹೇಗೆ Struck down ಮಾಡುತ್ತದೆ? ಈ ಬಿಲ್‌ನಲ್ಲಿ ಅದನ್ನು ತರಬೇಕೆಂದು ನಾವು ಹೇಳುತ್ತಿದ್ದೇವೆ.

ಶ್ರೀ ಎಂ.ಬಿ. ಪಾಟೀಲ್ : ತಾವು ಹೇಳಿದಿರಿ. ಈ ಬಿಲ್‌ನಲ್ಲಿ ಅದರ ಬಗ್ಗೆ ಪ್ರಸ್ತಾಪ ಮಾಡಿಲ್ಲವೆಂದು ಹೇಳಿದಿರಿ. ಆದರೆ, ಈಗ ಸಿಇಟಿ ನೋಟಿಫಿಕೇಶನ್ ಆಗಿದೆಯಲ್ಲಾ. ನಿಮ್ಮ ಸಿಇಟಿ ನೋಟಿಫಿಕೇಶನ್‌ನಲ್ಲಿ only on CET ಮಾರ್ಕ್ಸ್ ಅಂತ ಇದೆ. Weightage ಕೊಡುತ್ತೇವೆಂದು ತಾವು ಹೇಳಿದ್ದೀರಾ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ ಮದ್ರಾಸ್ ಹೈಕೋರ್ಟ್ ಒಂದು ಜಡ್ಜ್‌ಮೆಂಟ್ ಇನ್ನೊಂದು ಹೈಕೋರ್ಟ್‌ನಲ್ಲಿ ಬೈಂಡಿಂಗ್ ಇದೆ. Why don't you move this Court? ಅಲ್ಲಿ ನಿಮ್ಮಲ್ಲಿದೆಯಲ್ಲಾ ಇನಾಂದಾರ್ ಕೇಸ್‌ನಲ್ಲಿ. In case, central legislation ಬರದೇ ಇದ್ದರೆ, you move the Court ಅಂತ. ಅಲ್ಲವೇ? Why don't you move the State High Court? ಆಗುತ್ತದಲ್ಲವೇ?

ಶ್ರೀ ಜಿ. ವಿ. ಶ್ರೀರಾಮ್‌ರೆಡ್ಡಿ : ನೀವು ಸಿಇಟಿ ಪ್ರಶ್ನೆ ಇಲ್ಲಿ ತಂದಿದ್ದೀರಿ. ನಾವೇನು ಹೇಳುತ್ತಿದ್ದೇವೆಂದರೆ, ಸಿಇಟಿ ಪ್ರಕಾರ ಮೆಡಿಕಲ್ ಮತ್ತು ಡೆಂಟಲ್‌ಗೆ ಪಿಯುಸಿ ಮಾರ್ಕ್ಸ್ ಅನ್ನು ಕನ್ಸಿಡರ್ ಮಾಡತಕ್ಕ ಅವಶ್ಯಕತೆ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಕಾಮೆಡ್–ಕೆ ಮಾಡಿ ಅಡ್ಮಿಷನ್ಸ್ ಕೊಡುವುದಕ್ಕಿಂತ ಮೊದಲೇ ನಾವು ಈ ಬಿಲ್ಲನ್ನು ಪಾಸ್ ಮಾಡಬೇಕೆಂದು ತಾವು ಕೇಳಿದ್ದೀರಿ. ಅದು ಸಿಇಟಿಯಲ್ಲೇ ಆಗಬೇಕಲ್ಲಾ. ಈ ಕಾಮೆಡ್–ಕೆನಲ್ಲಾಗಲಿ, ಸಿಇಟಿಯಲ್ಲಾಗಲಿ reservation to medical college ನಮಗೆ ಸೆಟ್ ಆಗಬೇಕಲ್ಲಾ. What is the urgency ಅಂದರೆ? ಅಡ್ಮಿಷನ್ಸ್ ಆಗುವ ಮೊದಲೇ ಈ ಬಿಲ್ ಪಾಸಾಗಬೇಕು, ಇಲ್ಲದಿದ್ದರೆ, ನಮ್ಮ ಬ್ಯಾಕ್‌ವರ್ಡ್ ಕಮ್ಯುನಿಟಿಯವರಿಗೆ ಸೀಟು ಸಿಗುವುದಿಲ್ಲವೆಂಬ ಒಂದು ಭಾವನೆ ಇಟ್ಟುಕೊಂಡು ಹೇಳಿದ್ದೀರಿ. ಅದೇ ಕಾಲಕ್ಕೆ ಸಿಇಟಿನೂ ಇತ್ಯರ್ಥವಾಗಬೇಕು. ತಾವು ದಯಮಾಡಿ ಒಂದು ನಿರ್ಧಾರಕ್ಕೆ ಬರಬೇಕು. ಮಾಮೂಲಿಯಂತೆ ಪಿಯುಸಿ ಮತ್ತು ಸಿಇಟಿಯಲ್ಲಿ ಅಗ್ರಿಗೇಟ್‌ನಲ್ಲಿ ಕರ್ನಾಟಕದ ಹುಡುಗರಿಗೆ ತಾವು ಅಡ್ಮಿಷನ್ಸ್ ಕೊಡುವುದಕ್ಕೆ

ಮಾಡಬೇಕು ಮತ್ತು ಈ ಬಿಲ್‌ನಲ್ಲಿ ವೃತ್ತಿ ಶಿಕ್ಷಣದ ಸ್ಕೋಪ್ ಅನ್ನು ಕಡಿಮೆ ಮಾಡಿಬಿಟ್ಟಿದ್ದೀರಿ. ಪಾಲಿಟೆಕ್ನಿಕ್ ಕಾಲೇಜು, ಐಟಿಐಗಳು, ಬಿಎಡ್, ಡಿಎಡ್, ಇವೆಲ್ಲಾ ಪ್ರೊಫೆಷನಲ್ ಕಾಲೇಜುಗಳು. ಈ ಬಿಲ್‌ನಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳ ಬಗ್ಗೆ ನೀವು ಪ್ರಸ್ತಾಪಿಸಲಿಲ್ಲ. ವೃತ್ತಿ ಶಿಕ್ಷಣ ಎಂದರೆ, ಯಾವ್ಯಾವುವೆಂದು ನೀವು ಡೆಫನೆಶನ್ ಕೊಡುತ್ತೀರಿ. ಅದರಲ್ಲಿ ಇನ್ನೂ ಬೇಕಾದಷ್ಟು Professional Institutions ಅನ್ನು ನೀವು ತರಬಹುದಾಗಿತ್ತೆಂಬುದು ನನ್ನ ಅಭಿಪ್ರಾಯ. ಇನ್ನು ಪೇಜ್ 7ರಲ್ಲಿ ಮೇಲ್ವಿಚಾರಣಾ ಸಮಿತಿ ಮಾಡುತ್ತೀರಿ. ಒಂದು ಸಿಇಟಿ ಮಾನಿಟರ್ ಮಾಡುವುದಕ್ಕೆ. ಇನ್ನೊಂದು ಅನುದಾನಿತವಲ್ಲದ ಶಿಕ್ಷಣ ಸಂಸ್ಥೆಗಳ ಮೇಲ್ವಿಚಾರಣೆಗೆ. ಒಬ್ಬ ನ್ಯಾಯಾಧೀಶರನ್ನು ಅಧ್ಯಕ್ಷರನ್ನಾಗಿ ಮಾಡುತ್ತೀರಿ, ನೀವು ರಾಜೀವ್‌ಗಾಂಧಿ ಯೂನಿವರ್ಸಿಟಿಯ ಕುಲಪತಿಗಳನ್ನು ಮೆಂಬರ್ ಆಗಿ ಮಾಡುತ್ತೀರಿ, ಅಧ್ಯಕ್ಷರನ್ನಾಗಿ ಮಾಡುತ್ತೀರಿ. ಮತ್ತು ನ್ಯಾಯಾಧೀಶರೇ ಬೇಕಾದಷ್ಟು ಜನರನ್ನು ಇದಕ್ಕೆ ನಾಮಿನೇಟ್ ಮಾಡಬಹುದೆಂದು ಮಾಡುತ್ತೀರಿ. ಇದಕ್ಕೆಲ್ಲಾ ತಮಗ್ಯಾರು ಅಧಿಕಾರ ಕೊಟ್ಟವರು ಎಂಬುದನ್ನು ತಾವು ಸ್ಪಷ್ಟವಾಗಿ ಹೇಳಬೇಕು. You can monitor the admissions and fee structure fixed by the Supreme Court of India. You cannot have many more Committees to look after the affairs. ನಿಮಗೆ ಅಧಿಕಾರ ಇಲ್ಲ. ಪುಟ 8ರ (7)ರಲ್ಲಿ ಹೇಳುತ್ತೀರಿ. ಇವರು ಏನು ಮಾಡಬಹುದು? "...ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಲು ಅನುಸರಿಸಬೇಕಾದ ಗುಣಮಟ್ಟವನ್ನೂ ಮತ್ತು ಕಾರ್ಯವಿಧಾನಗಳನ್ನು ಪ್ರವೇಶ ಮೇಲ್ವಿಚಾರಣಾ ಸಮಿತಿಯು ನಿರ್ದಿಷ್ಟಪಡಿಸತಕ್ಕದ್ದು." ಯಾರು ಸ್ವಾಮಿ ನಿಮಗೆ ಅಧಿಕಾರ ಕೊಟ್ಟಿದ್ದು? ಇವರಿಗೆ ಅಧಿಕಾರ ಯಾರು ಕೊಡುತ್ತಾರೆ? ಸುಪ್ರಿಂಕೋರ್ಟ್ ಗೈಡ್‌ಲೈನ್ಸ್ ಕೊಟ್ಟಾಗಿದೆ. ಹೇಗೆ ಮಾಡಬೇಕೆಂದು ಸುಪ್ರಿಂಕೋರ್ಟ್ ಹೇಳಿ ಆಗಿದೆ. ನೀವು ಏತಕ್ಕೆ ಈ ಕಮಿಟಿಗೆ ಆ ಪವರ್ಸ್ ಅನ್ನು ಡೆಲಿಗೇಟ್ ಮಾಡುತ್ತೇವೆಂದು ಹೇಳಿಕೊಳ್ಳುತ್ತೀರಿ? ಇದರ ಬಗ್ಗೆ ಹೇಳಬೇಕು. How can this committee lay guidelines to that?. ತಾವು ಪೇಜ್ ಎಂಟರಲ್ಲಿ ಓದಿ, ಆಮೇಲೆ ಒಂಭತ್ತಕ್ಕೆ ಬನ್ನಿ. "... ಅನುದಾನಿತವಲ್ಲದ ಕಾಲೇಜುಗಳಿಂದ ಲೋಪ-ದೋಷಗಳಾಗಿವೆ ಎಂಬ ತೀರ್ಮಾನಕ್ಕೆ ಬಂದರೆ, ಅದು ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡತಕ್ಕದ್ದು - ಮತ್ತು ರಾಜ್ಯ ಸರ್ಕಾರವು, ಪ್ರತಿಯೊಂದು ಉಲ್ಲಂಘನೆಯ ಸಂದರ್ಭದಲ್ಲಿ 10 ಲಕ್ಷ

ರೂಪಾಯಿಗಳವರೆಗೆ ಜುಲ್ಮಾನೆಯನ್ನು ವಿಧಿಸಲು ಮತ್ತು ಸಂಗ್ರಹಿಸಲು. . ." ಅದೆಲ್ಲಕ್ಕಿಂತಲೂ ಮಿಗಿಲಾಗಿ ಯಾರ್ಯಾರು ಆ ಸಮಿತಿಯ ಪ್ರವೇಶ ಕಡೆಗಣಿಸಿ ಮಾಡಲಾಗಿರುವುದನ್ನು ಅಸಿಂಧು ಎಂದು ಸಹ ಘೋಷಿಸಬಹುದು ಎಂದರೆ ವಿದ್ಯಾಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡತಕ್ಕದ್ದಲ್ಲವೆಂದು ನೀವು ಪ್ರಾವಿಜನ್ ಮಾಡುತ್ತೀರಿ. ಅವನೇನು ಮಾಡುತ್ತಾನೆ ಸರ್? ನಿಮ್ಮ ಮ್ಯಾನೇಜ್‌ಮೆಂಟ್ ಏನೋ ಒಂದು ಮೋಸ ಮಾಡಿ ಯಾವುದೋ ಹುಡುಗನಿಗೆ ಅಡ್ಮಿಷನ್ಸ್ ಸಿಕ್ಕಿ ಇನ್ಯಾವುದೋ ಹುಡುಗನಿಗೆ ಸಿಗದೇ ಇರುವುದು ನಿಮ್ಮ ಗಮನಕ್ಕೆ ಬಂದರೆ, ಆ ಹುಡುಗನಿಗೆ ಮತ್ತೆ ಆ ಕೋರ್ಸಿಗೆ ಎಂಟ್ರೆನ್ಸ್ ಇಲ್ಲವೆಂದು ನೀವು ಹೇಳುತ್ತಿದ್ದೀರಲ್ಲಾ, ಈಗ ತಾವು ಹೇಳಬೇಕು. What is the fault of that candidate? Why he will be disqualified from the examination? ಇದರಲ್ಲಿ ವಿದ್ಯಾರ್ಥಿಯ ಪಾತ್ರವೇನೆಂದು ತಾವು ಈ ಸಭೆಗೆ ಹೇಳಬೇಕಾಗುತ್ತದೆ. ಅಂತಹ ವಿದ್ಯಾರ್ಥಿಯು ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡತಕ್ಕದ್ದಲ್ಲ. Can it be called a malpractice? ಆತನೇನಾದರೂ ಅಲ್ಲಿ ಕಾಪಿ ಹೊಡೆದಿದ್ದಾನೆಯೇ? ಇಲ್ಲವೇ ಯೂನಿವರ್ಸಿಟಿಯಿಂದ ಕ್ವೆಶ್ಚನ್ ಪೇಪರ್ ಏನಾದರೂ ಕೊಡುತ್ತೀರಾ? ಅಡ್ಮಿಷನ್‌ನಲ್ಲಿ ಮ್ಯಾನೇಜ್‌ಮೆಂಟ್ ಏನಾದರೂ ಒಂದು ಮಿಸ್ಟೇಕ್ ಮಾಡಿದರೆ you punish the management. ನಾವ್ಯಾರೂ ಕೂಡ ಅದಕ್ಕೆ ಅಡ್ಡಿಪಡಿಸುವುದಕ್ಕಾಗುವುದಿಲ್ಲ. But are you empowered to punish to the tune of penalising Rs. 10 lakh? ಹತ್ತು ಲಕ್ಷ ರೂ ದಂಡ ಹಾಕುವುದಕ್ಕೆ ನಿಮಗೆ ಸಿಆರ್‌ಪಿಸಿ ಅವಕಾಶ ಕೊಡುತ್ತದೆಯೇ ಎಂದು ನೋಡಬೇಕಲ್ಲಾ. ಸ್ವಲ್ಪ ಓದಬೇಕಲ್ಲಾ ಸರ್. How can you levy Rs. 10 lakh fine? ಆಯಿತು. ಹುಡುಗನನ್ನು ನೀವು ಡಿಸ್‌ಕ್ವಾಲಿಫೈ ಮಾಡುತ್ತೇವೆಂದು ಹೇಳುತ್ತೀರಿ, ದಯಮಾಡಿ ಅದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು. ನಿಮಗೆ ಯಾರೂ ಆ ಅಧಿಕಾರ ತೆಗೆದುಕೊಳ್ಳವುದಕ್ಕೆ ಅವಕಾಶ ಕೊಟ್ಟಿಲ್ಲ. Neither the Supreme Court nor this Hon'ble Assembly can provide you that power. ನನಗೊಂದು ಅಡ್ಮಿಷನ್ಸ್ ಸಿಕ್ಕಿದೆ. ನನಗಿಂತಲೂ ಮೇಲಿರುವವನಿಗೆ ನ್ಯಾಯವಾಗಿ ಸಿಕ್ಕಬೇಕಾಗಿತ್ತು. ನಿಮ್ಮ ಕಮಿಟಿ ಗಮನಕ್ಕೆ ಬಂತು. Is it solely my fault? How can you prove that I am guilty? Candidate guilty ಎಂದು ನೀವು ಹೇಗೆ ಪ್ರೂವ್ ಮಾಡುತ್ತೀರಿ? ಆಮೇಲೆ (9)ರಲ್ಲಿ . . . ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಉದ್ಭವಿಸಬಹುದಾದ ಎಲ್ಲಾ ವಿಷಯಗಳ

ಬಗ್ಗೆ ತನ್ನದೇ ಆದ ಪ್ರಕ್ರಿಯೆಯನ್ನು ವಿನಿಯಮಿಸಿಕೊಳ್ಳುವ ಅಧಿಕಾರ ಹೊಂದಿರುತ್ತದೆ..." ಏನು ಸರ್ ಇದು, ನಮಗರ್ಥವಾಗುವುದಿಲ್ಲ. ಇಷ್ಟೊಂದು universal clauses ಕೊಟ್ಟುಬಿಟ್ಟು ನಿಮಗೆ ಅಂದರೆ ಗವರ್ನಮೆಂಟ್‌ಗೆ ಸುಪ್ರಿಂಕೋರ್ಟ್ ಏನೇನು ಅಧಿಕಾರಗಳನ್ನು ಕಡಿವಾಣ ಹಾಕಿದೆ, ಆ ಅಧಿಕಾರವನ್ನೆಲ್ಲಾ ಆ ಕಮಿಟಿಗೆ ಡೆಲಿಗೇಟ್ ಮಾಡಲು ಹೊರಟಿದ್ದೀರಿ. ನೋಡಿ. ನೀವು ಅದಕ್ಕೆ appellate power ಕೊಡುತ್ತೀರಿ, ಅದಕ್ಕೆ mandatory inspection power ಕೊಡುತ್ತೀರಿ, If a Committee is empowered to inspect at any time, how can it have applellate power? ಸ್ವಲ್ಪ ತಾವು ಯೋಚನೆ ಮಾಡಬೇಕು. ಯಾವುದೇ ಕಾಲದಲ್ಲಿ interpret ಮಾಡಬಹುದು, interefere ಆಗಿಬಿಟ್ಟು, ಸರಿಯಾಗಿ ಆಗುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಬಹುದೆಂಬ appellate power ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇಲ್ಲೇ ನೀವು ಹತ್ತನೇ ಪೇಜ್‌ನಲ್ಲಿ ಬರುತ್ತೀರಿ. ಅನ್ಯಾಯವಾದದ್ದು, ಪಾರದರ್ಶಕವಲ್ಲದ್ದು, ಶೋಷಕವಾದದ್ದು, ಇದೆಲ್ಲಾ non-government seatsಗೆ. This entire Bill is for non-government seats. The Basic question is ಇವರಿಗೆ ಅಧಿಕಾರವೇ ಇಲ್ಲ. ಅದಕ್ಕೆ ಇದೆಲ್ಲಾ ಮಾಡಿದ್ದೀರಿ. ಇವೆಲ್ಲಾ unaided institutionsಗೆ ತಾವು ತಂದಿರುವ ಬಿಲ್ ಇದಾಗಿದೆ. ಅಲ್ಲವೇ ಸರ್? ಇವೆಲ್ಲವನ್ನೂ ನೀವು ಮಾಡುವುದಕ್ಕೆ ಬರುತ್ತಾ? ಆಮೇಲೆ ಫೀಸ್‌ದು. ಪುಟ 11ರ (2) (i) ರಲ್ಲಿ ನೀವು ಏನು ಹೇಳುತ್ತೀರಿ? "ಶೈಕ್ಷಣಿಕ ವರ್ಷದ ಪ್ರಾರಂಭದ ಬಹು ಮುಂಚಿತವಾಗಿಯೇ ಅಂದರೆ, ಹಿಂದಿನ ಶೈಕ್ಷಣಿಕ ವರ್ಷದ ಡಿಸೆಂಬರ್ 31ರೊಳಗೆ ಸಂಬಂಧಪಟ್ಟ ಎಲ್ಲಾ ದಸ್ತಾವೇಜುಗಳನ್ನು . . ." ಇವೆಲ್ಲಾ ಕಮಿಟಿಯವರೇ ಮಾಡಿಕೊಳ್ಳಲಿ. (4)ರಲ್ಲಿ "ಸಮಿತಿಯು ನಿರ್ಧರಿಸಿದ ಶುಲ್ಕಕ್ಕೆ ಮೂರು ವರ್ಷಗಳ ಅವಧಿಯವರೆಗೆ ಆ ವೃತ್ತಿ ಶಿಕ್ಷಣ ಸಂಸ್ಥೆಯು ಬದ್ಧವಾಗಿರತಕ್ಕದ್ದು". Can it happen? ಇದು ಬಹಳ ticklish issue ಸರ್. ತಾವು ಹೇಳುತ್ತೀರಿ. "ಸಮಿತಿಯು ನಿರ್ಧರಿಸಿದ ಶುಲ್ಕಕ್ಕೆ ಮೂರು ವರ್ಷಗಳ ಅವಧಿವರೆಗೆ ಆ ವೃತ್ತಿ ಶಿಕ್ಷಣ ಸಂಸ್ಥೆಯು ಬದ್ಧವಾಗಿರತಕ್ಕದ್ದು. ಸದರಿ ಅವಧಿಯ ಕೊನೆಯಲ್ಲಿ ಪರಿಷ್ಕರಣೆಗಾಗಿ ಅರ್ಜಿ ಸಲ್ಲಿಸಲು ಆ ಸಂಸ್ಥೆಗೆ ಮುಕ್ತ ಅವಕಾಶವಿದೆ." ನೀವ್ಯಾರು ಫಿಕ್ಸ್ ಮಾಡುವುದಕ್ಕೆ ಎಂದು ಪರಿಷ್ಕರಣೆಗಾಗಿ ಅರ್ಜಿ ಸಲ್ಲಿಸಲು ಆ ಸಂಸ್ಥೆಗೆ ಮುಕ್ತ ಅವಕಾಶವಿದೆ". ನೀವ್ಯಾರು ಫಿಕ್ಸ್ ಮಾಡುವುದಕ್ಕೆ ಎಂದು ನಾವು ಆಗಿನಿಂದಲೂ ಕೇಳುತ್ತಿರುವುದು ನೀವು ಫೀಸ್

ಫಿಕ್ಸ್ ಮಾಡುವುದಕ್ಕೆ ಯಾರು? ನಿಮಗೆ ಅಧಿಕಾರ ಕೊಟ್ಟವರು ಯಾರು? ಮೂರು ವರ್ಷವಾಗಲಿ, ಆರು ವರ್ಷವಾಗಲಿ, ನಿಮಗೆ ಎಲ್ಲಿದೆ ಅಧಿಕಾರ? ನಿಮಗೆ ಇದನ್ನೆಲ್ಲಾ ಮಾಡುವುದಕ್ಕೆ ಸುಪ್ರಿಂಕೋರ್ಟ್ ಯಾವತ್ತು ಬಿಟ್ಟಿದೆ? ಅಭ್ಯರ್ಥಿಯಿಂದ ಒಂದು ವರ್ಷದ ಶುಲ್ಕಕ್ಕಿಂತ ಹೆಚ್ಚು ಶುಲ್ಕ ಸಂಗ್ರಹಿಸತಕ್ಕದ್ದಲ್ಲ. Sir, all these things have to be dealt by Hon'ble Supreme Court of India. ಸನ್ಮಾನ್ಯ ಅಧ್ಯಕ್ಷರೆ, fees structure ಅನ್ನು ನಿಗದಿಪಡಿಸುವವರು ಅವರು. ಹೆಚ್ಚಿಗೆ ತೆಗೆದುಕೊಳ್ಳುವುದಲ್ಲ, ಒಂದು ವರ್ಷಕ್ಕೆ ತೆಗೆದುಕೊಳ್ಳಬೇಕು ಎರಡು ವರ್ಷಕ್ಕೆ ತೆಗೆದುಕೊಳ್ಳುವುದಲ್ಲ, ಮುರು ವರ್ಷಕ್ಕೆ ತೆಗೆದುಕೊಳ್ಳುವುದಲ್ಲವೆಂದು ಅವರು ಹೇಳಬೇಕು. ಈ ಸರ್ಕಾರಕ್ಕೆ ಅವರು ಯಾವುದೇ ಮೂರು ಕಾಸಿನ ಅಧಿಕಾರವನ್ನೂ ಉಳಿಸಿಕೊಟ್ಟಿಲ್ಲ. ಇವರು ಇದನ್ನೆಲ್ಲಾ ಬರೆದುಕೊಳ್ಳುತ್ತಾರೆ. All these provisions are there just to interfere in the management. ಅವರು ಯಾರನ್ನೋ ಕೂರಿಸುವುದು, ಅವರು ದಿವಸ ಸಾಯಂಕಾಲ ಮ್ಯಾನೇಜ್‌ಮೆಂಟ್‌ಗಳಿಗೆ ಸತಾಯಿಸುವುದು ಬಿಟ್ಟರೆ ಇದರಿಂದ ನಮ್ಮ ಮಕ್ಕಳಿಗೇನೂ ಸೀಟು ಸಿಗುವುದಿಲ್ಲವಲ್ಲಾ. ಕ್ಯಾಪಿಟೇಷನ್ ಶುಲ್ಕವನ್ನು ಸಂಗ್ರಹಿಸಿದಂತೆ ಎಂಬುದಾಗಿ ಪರಿಗಣಿಸುವುದು. ಎಲ್ಲಿದೆ ಇದಕ್ಕೆಲ್ಲಾ ಪ್ರಾವಿಜನ್? If he takes fee of more than one year's fee ಅದನ್ನು ಕ್ಯಾಪಿಟಿಷನ್ ಎಂದು ಟ್ರೀಟ್ ಮಾಡಬೇಕಂತೆ! ಅದನ್ನು ನೀವು ಸುಪ್ರಿಂ ಕೋರ್ಟ್‌ಗೆ ವರದಿ ಮಾಡುವಂತೆ ಇಲ್ಲ. ನೀವೇ ಟ್ರೀಟ್ ಮಾಡಿ ಫನಿಷ್ ಮಾಡುತ್ತೀರಾ? ದಯಮಾಡಿ ಇಂಥ ಬಿಲ್ಲುಗಳನ್ನು ತಾವು ಇಂಟ್ರಡ್ಯೂಸ್ ಮಾಡಬೇಡಿ. ಈಗಾಗಲೆ ಒಂದು ಸಲ ಇಂಥ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿ ನಾವೆಲ್ಲಾ ಭಾವೋದ್ರೇಕದಿಂದ ಮಾತನಾಡಿ, ನಾವು ರಾಜನ ಪಾತ್ರವಾಯಿತು ಎಂದು ಸುಪ್ರಿಂ ಕೋರ್ಟ್ ಚೀಮಾರಿ ಹಾಕಿ ಬೆಳಕುಹರಿಯುವುದರಲ್ಲಿ ನಾವು ನಾವೇ ಆಗಿರುವ ಕಾಲ ಬಂದುಬಿಟ್ಟಿದೆ. ಮತ್ತೆ ಏಕೆ ವಿಧಾನಸಭೆಯೊಳಗೆ ಇಂಥ ಬಿಲ್ಲುಗಳನ್ನು ತರುತ್ತೀರಿ. ನಿಮಗೆ ಅಧಿಕಾರ ಇಲ್ಲದ್ದನ್ನು ಏಕೆ ತರುತ್ತೀರಿ? ಅನಂತರ ಶುಲ್ಕ ನಿಗದಿಗೆ ಪರಿಗಣನೆಯ ಅಂಶಗಳು : How can you do all these Hon'ble Minister? ಶುಲ್ಕವನ್ನು ನಿಗದಿ ಮಾಡುವುದಕ್ಕೆ ಅವರು ಒಂದು ಕಮಿಟಿ ಮಾಡಿ ಆ ಕಮಿಟಿ ವರದಿಯನ್ನು ಸುಪ್ರಿಂ ಕೋರ್ಟ್ ಮಾಡಿರುವುದು. ನೀವು ಇಲ್ಲಿ ಕ್ಲಾಸ್‌ನ್ನು ಶುಲ್ಕವನ್ನು ಹೇಗೆ ನಿಗದಿ ಮಾಡಬೇಕೆಂದು ಹಾಕಿಕೊಂಡು ಬರುತ್ತೀರಿ. ಅನಂತರ ಅನಿವಾಸಿ ಭಾರತೀಯರ ಪ್ರವೇಶಕ್ಕಾಗಿ ಹೆಚ್ಚಿನ

ಶುಲ್ಕವನ್ನು ಸಂಗ್ರಹಿಸಲು ಅವಕಾಶ ನೀಡಬಹುದಾಗಿದೆ. ರಾಜ್ಯಸರ್ಕಾರವು ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಂದ ಸಂಗ್ರಹಿಸತಕ್ಕ ಕನಿಷ್ಟ ಶುಲ್ಕವನ್ನು ನಿಗದಿಪಡಿಸಬಹುದು ಮತ್ತು ಆ ಸಂಸ್ಥೆಯಲ್ಲಿ ಇತರೆ ವಿದ್ಯಾರ್ಥಿಗಳಿಗೆ ನಿಗದಿಪಡಿಸಲಾದ ಶುಲ್ಕಕ್ಕಿಂತ ಹೆಚ್ಚುವರಿಯಾಗಿ ಸಂಗ್ರಹಿಸಲಾದ ಶುಲ್ಕವನ್ನು ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ ನೀಡಲು ಬಳಸತಕ್ಕದ್ದು. ಇದನ್ನೆಲ್ಲಾ ಏಕೆ ಮಾಡುತ್ತಿದ್ದೀರಿ ಎಂಬುದು ನನಗೆ ಗೊತ್ತಿಲ್ಲ. ತಾವು I think you are misguided. First part of the Bill, I agree. ತಕ್ಷಣ ಶೆಡ್ಯೂಲ್ಡ್ ಕ್ಯಾಸ್ಟ್, ಶೆಡ್ಯೂಲ್ಡ್ ಟ್ರೈಬ್, ಬ್ಯಾಕ್‌ವರ್ಡ್ ಕಮ್ಯುನಿಟಿಯವರಿಗೆ ಅಡ್ಮಿಷನ್‌ನ್ನು ಎನ್‌ವಿಸೇಜ್ ಮಾಡುವುದಕ್ಕೆ ನೀವು unaided institutions ಗೆ ಒಂದು constitution ಪ್ರಕಾರ ಒಂದು ನಿಯಮ ಅಥವಾ ಒಂದು ಕಾನೂನನ್ನು ಮಾಡಿಕೊಳ್ಳಬೇಕು ಎಂಬುದು ಸರಿ. Second part of the Bill ತಾವೇನು ಮಾಡಿಕೊಂಡು ಬಂದಿದ್ದೀರಿ I request you with humbleness, please withdraw this. ಏತಕ್ಕೆ ಇದನ್ನೆಲ್ಲಾ ಮಾಡುತ್ತಿದ್ದೀರಿ ಎಂದು ನನಗೆ ಅರ್ಥವಾಗಿಲ್ಲ. ಈ ಬಿಲ್ಲಿನಲ್ಲಿ ನೀವು ಹೇಳುವಂಥಾದ್ದು ಏನೂ ಇಲ್ಲವೆ ಇಲ್ಲ. ಆದರು ಬಹಳ ಹೇಳಿದ್ದೀರಿ. ಅನುದಾನಿತವಲ್ಲದ ಅಲ್ಪಸಂಖ್ಯಾತವಲ್ಲದ ಸಂಸ್ಥೆಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಿದಂತೆ ಶೇಕಡ ಐವತ್ತರಷ್ಟು ಸೀಟುಗಳನ್ನು ರಾಜ್ಯದ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಮೀಸಲಿರಿಸತಕ್ಕದ್ದು. ಉಳಿದ ಸೀಟುಗಳು ಸಾಮಾನ್ಯ ಪ್ರವರ್ಗಕ್ಕೆ ಸೇರಿದವುಗಳಾಗಿರತಕ್ಕದ್ದು. ಸಾಮಾನ್ಯ ಪ್ರವರ್ಗದ ಸೀಟುಗಳ ಪೈಕಿ ಶೇಕಡಾ ಹದಿನೈದರಷ್ಟು ಸೀಟುಗಳನ್ನು ಅನಿವಾಸಿಭಾರತೀಯ ಕೋಟಾಕ್ಕೆ ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ಭರ್ತಿ ಮಾಡಿಕೊಳ್ಳಬಹುದಾಗಿದೆ. ಅಕಸ್ಮಾತ್ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗಾಗಿ ಮೀಸಲಿರಿಸಲಾದ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿ ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಅರ್ಹತಾ ಪಟ್ಟಿಯಿಂದ ಅದೇ ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಭರ್ತಿ ಮಾಡಿಕೊಳ್ಳತಕ್ಕದ್ದು. ಪರಂತು, ತದನಂತರವೂ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಅಂಥ ಸೀಟುಗಳನ್ನು ಖಾಸಗಿ ಅನುದಾನಿತವಲ್ಲದ

ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಮೆರಿಟ್ ಆಧಾರದ ಮೇಲೆ ಸಾಮಾನ್ಯ ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು. ಇದನ್ನು ಮಾಡಲು ಒಂದು ವರ್ಷ ಹೋಗುತ್ತದೆ. ಇಲ್ಲದಿದ್ದರೆ ನಿಮ್ಮ ಆಫಿಸರ್‌ಗಳಿಗೆ ಕೈತುಂಬ ದುಡ್ಡು ಬರುತ್ತದೆ. ಆ ಮೆನೇಜ್‌ಮೆಂಟ್‌ನವನು ಬಂದು ಇಲ್ಲಿಂದ ಎನ್.ಓ.ಸಿ. ತೆಗೆದುಕೊಂಡು ಹೋಗುತ್ತಾನೆ.

ಶ್ರೀ ಕೆ. ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಈ ಶಾಸನ ಸಭೆಯಲ್ಲಿ ಒಂದು ಶಾಸನ ಮಾಡುವುದಕ್ಕೆ ಕೆಲವು ಇತಿಮಿತಿಗಳು ಇವೆ. ಭಾರತದ ಗಣರಾಜ್ಯವನ್ನು ನಾವು ವ್ಯವಸ್ಥಿತವಾಗಿ ಪರಿಪಾಲನೆ ಮಾಡುವ ದೃಷ್ಟಿಯಿಂದ ಸಿ. ಆರ್.ಪಿ.ಸಿ ಮತ್ತು ಸಿ.ಪಿ.ಸಿ. ಯನ್ನು ಇಟ್ಟುಕೊಂಡಿದ್ದೇವೆ. Cr. P.C. is a central legislation, Criminal Procedure Code. ಯಾವ್ಯಾವ offence ಯಾವ ಸ್ವರೂಪದ offenceಗೆ ಏನು ಶಿಕ್ಷೆ, ಏನು ಜುಲ್ಮಾನೆ ಎಂಬುದು Criminal Procedure Codeನಲ್ಲಿ ಎಲ್ಲಾ ವಿವರಿಸಿದೆ. Criminal Procedure Codeಗೆ amendment ತರತಕ್ಕ ಅಧಿಕಾರವಾಗಲಿ ಅಥವಾ ಅದನ್ನು ಬೈಪಾಸ್ ಮಾಡತಕ್ಕ ಅಧಿಕಾರವಾಗಲಿ ಈ ಸಭೆಗೆ ಇಲ್ಲ. ನೀವೇನು ಜುಲ್ಮಾನೆ ಕ್ಲಾಜ್‌ನ್ನು ಸಜೆಸ್ಟ್ ಮಾಡಿದ್ದೀರಿ...

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಒಂದು ಕ್ಲಾರಿಫಿಕೇಷನ್ ಕೊಡುತ್ತೇನೆ. Cr.P.C.ಗೆ ಖಂಡಿತ ರಾಜ್ಯ ಸರ್ಕಾರ amendmentಗಳನ್ನು ತರಬಹುದು. ಆ ರೀತಿ ತಂದದ್ದು ಸಾಕಷ್ಟು ಇದೆ. ಆದರೆ ಯಾವುದೇ ಅಫೆನ್ಸ್‌ಗಳಿಗೆ ತಾವು ಹೇಳಿದ ರೀತಿಯಲ್ಲಿ ಸಿ.ಆರ್.ಪಿ.ಸಿ.ಯಲ್ಲಿ ಇಲ್ಲ. ಅದು Indian Penal Code ನಲ್ಲಿ ಏನೇನು ಅಫೆನ್ಸ್‌ಗಳಿಗೆ ಏನೇನು ಶಿಕ್ಷೆ, ಏನೇನು punishment ಎನ್ನುವಂಥದ್ದು ಇದೆ. ಆದರೆ ಸಿ.ಆರ್.ಪಿ.ಸಿ. is only a, procedure.

Sri K.R. Ramesh Kumar : All right. I concede your point. I concede your point. Let us not debate. He could be better informed. I don't question him. Presuming that, ಆದರೆ.

Sri J.C. MADHUSWAMY : Unless you amend, You cannot lay a fine.

ಶ್ರೀ ಕೆ. ಆರ್. ರಮೇಶ್‌ಕುಮಾರ್ : ಕಾನೂನು ಇಲಾಖೆಯವರು ಬಿಲ್ಲನ್ನು ಫ್ರೇಮ್ ಮಾಡುವುದಕ್ಕೆ ಮೊದಲು ಹತ್ತು ಲಕ್ಷ ರೂ ಜುಲ್ಮಾನೆ ಎಂದು ಸಜೆಸ್ಟ್ ಮಾಡುವ ಮೊದಲು ಇದು viable ಆಗುತ್ತದೆಯೇ? tenable ಆಗುತ್ತದೆಯೆ? sustain ಆಗುತ್ತದೆಯೇ? ಆಗುವುದಿಲ್ಲವೋ? violation ಆಗುತ್ತದೆಯೆ? ನಾವು ಇದಕ್ಕೆ ಏನಾದರೂ preliminary arrangements ಮಾಡಿಕೊಳ್ಳಬೇಕಾ ಎಂದು have they applied their mind? Bills ನ್ನು ಮಾಡಬೇಕಾಗಿದ್ದರೆ ಅನೇಕ ವೇಳೆ ನಮ್ಮ ಅನುಭವದಲ್ಲಿ ಏನಾಗುತ್ತದೆಂದರೆ not trying to cast aspersions on anybody, ಕೆಲವು ಸಲ ಅಜ್ಞಾನದಿಂದ ತಪ್ಪುಗಳಾಗುತ್ತದೆ, ಕೆಲವು ಸಲ ದುರುದ್ದೇಶದಿಂದ ತಪ್ಪುಗಳಾಗುತ್ತದೆ. ಬೇಕೆಂದೇ ಇದು ಬಿದ್ದುಹೋಗಲಿ ಎಂದು ಮಾಡತಕ್ಕದ್ದು ಒಂದಾಗುತ್ತದೆ. ಏಕೆಂದರೆ, ಸ್ಥಾಪಿತ ಹಿತಾಸಕ್ತಿಗಳು, ತಮ್ಮದೇ ಆದಂಥ ಶೈಲಿಯಲ್ಲಿ ಅನೇಕ ಹಂತಗಳಲ್ಲಿ ಕೆಲಸ ಮಾಡುತ್ತಾರೆ. See, ultimately any law is subjected to the scrutiny by Courts. They can strike down. ನಾನು ಮಾನ್ಯ ಮಂತ್ರಿಗಳಲ್ಲಿ ಇಷ್ಟೇ ವಿನಂತಿ ಮಾಡುತ್ತೇನೆ, ಮಾನ್ಯ ಮಾಧುಸ್ವಾಮಿಯವರು raised a very valid point. At least Law Department ನವರು did they apply their mind to this aspect ಎನ್ನತಕ್ಕ ಒಂದು ವಿಚಾರದಲ್ಲಿ ಕ್ಲಾರಿಫಿಕೇಷನ್ ಕೊಟ್ಟರೆ ಸಾಕು. I am not totally competent to speak about it. ನನಗೆ ತೋಚಿದ ಅನುಮಾನವನ್ನು ಸಭೆಯ ಮುಂದೆ ಇಟ್ಟಿದ್ದೇನೆ. Have they applied their mind?

ಶ್ರೀ ಎಂ. ಬಿ. ಪಾಟೀಲ್ : ಇದಕ್ಕೂ ಮೊದಲು ಮೂರು ವರ್ಷ ಜೈಲು ಎಂಬುದನ್ನು ಇದರಲ್ಲಿ involve ಮಾಡಿದ್ದರು. ಅದನ್ನು ಏಕೆ ತೆಗೆದರೊ ಗೊತ್ತಾಗಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಪವರ್ ಇಲ್ಲವೆಂದು ಅದನ್ನು ತೆಗೆದಿದ್ದಾರೆ. Power ಇಲ್ಲದೆಯೆ ಮಾಡಿದ್ದೇವೆಂದು ಅದನ್ನು ತೆಗೆದಿದ್ದಾರೆ. ಪುಟ 17 ರಲ್ಲಿ 18ನೇ ನಂಬರ್‌ನಲ್ಲಿ ನಿರ್ದೇಶನಗಳನ್ನು ನೀಡಲು ರಾಜ್ಯ ಸರ್ಕಾರದ ಅಧಿಕಾರ ಎಂದು ಒಂದು ಪ್ಯಾರಾವನ್ನು ಮಾಡಿಕೊಂಡಿದ್ದೀರಿ. Under the present circumstances ನಿಮಗೆ ಆ ಅಧಿಕಾರ ಇಲ್ಲ, ಅದನ್ನು ನೀವು ತೆಗೆದುಕೊಳ್ಳಲೂ ಆಗುವುದಿಲ್ಲ. ಅಡ್ಮಿಷನ್ಸ್ ಆಗಲಿ, ಫೀಯಾಗಲಿ ಏನು ಸುಪ್ರಿಂ ಕೋರ್ಟ್ ನಾರ್ಮ್ಸ್‌ನ್ನು ಅಥವಾ ರೂಲ್ಸ್‌ನ್ನು ಲೇ ಮಾಡಿದೆ, ಅದರ ಕೆಳಗೆ ಆಗದಿದ್ದರೆ

You are supposed to take action and report the matter to Supreme Court ಅಷ್ಟನ್ನು ಬಿಟ್ಟರೆ You can't directly take action against any management. And you can't have a clause of that sort. ನಿಯಮಗಳನ್ನು ಆದೇಶಗಳನ್ನು ಉಲ್ಲಂಘಿಸಿದ್ದರೆ ನೀವು ಹಾಗೆ ಮಾಡಬಹುದು ಎಂದು ನೀವೇನು ಬರೆದುಕೊಂಡಿದ್ದೀರಿ, ಆದರೆ ಅದು ಖಂಡಿತವಾಗಿ ಆಗುವುದಿಲ್ಲ. ಪ್ರಾಧಿಕಾರಗಳಿಗೆ ಭಾವಿಸಬಹುದಾದಂಥ ನಿರ್ದೇಶನಗಳನ್ನೂ ಸಹ ನೀಡಬಹುದು ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸುವುದು ಅಂಥ ಅಧಿಕಾರಿಯ ಅಥವಾ ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು ಎಂದು ಹೇಳುತ್ತೀರಿ. ಇಲ್ಲಿ ಪ್ರಾಧಿಕಾರಗಳ ಪ್ರಶ್ನೆಯೇ ಬರುವುದಿಲ್ಲ. Regarding admission and Fee structure is concerned ತಾವು ಈ ಪ್ರಾಧಿಕಾರಗಳನ್ನು ಮಾಡುವುದು ಸಮಂಜಸವೆಂದು ಅನ್ನಿಸುವುದಿಲ್ಲ. You can have a committee. ಒಂದು ಸಿ.ಇ.ಟಿ.ಯನ್ನು ಮಾನೀಟರ್ ಮಾಡುವುದಕ್ಕೆ ಕಮಿಟಿಯನ್ನು ಇಟ್ಟುಕೊಳ್ಳಬಹುದು. Fee structure ಮಾಡುವುದಕ್ಕೆ ಎರಡು ಮೂರು ಕಮಿಟಿ ತಾವೇನು ಪ್ರಪೋಸ್ ಮಾಡಿದ್ದೀರಿ, ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಅನಂತರ ಇದರಲ್ಲಿ ಒಂದು ಲೋಪವಾಗಿದೆ. ಇಲ್ಲೊಬ್ಬ ರಿಟೈರ್ಡ್ ಹೈಕೋರ್ಟ್ ಜಡ್ಜ್ ತೆಗೆದುಕೊಳ್ಳಬೇಕು. other members have to be nominated that Judge ಎಂದು ಹೇಳುತ್ತೀರಿ.. Sovereiginity of the state ನೀವು ಇಲ್ಲದಂತೆ ಮಾಡುತ್ತೀರಿ ನೀವು ನಾಮಿನೇಟ್‌ನ್ನು ಮಾಡಿ ನೀವು ಯಾರಿಗಾದರೂ ಇಬ್ಬರು ಮೂರು ಜನಕ್ಕೆ ಎಕ್ಸ್‌ಪರ್ಟ್ಸ್‌ನ್ಸ್ ಹಾಕಿ ಒಬ್ಬ ಅಧ್ಯಕ್ಷನನ್ನು he need not be a judge ರಿಟೈರ್ಡ್ ಪ್ರೊಫೆಸರ್‌ನ್ನು ತೆಗೆದುಕೊಳ್ಳಬಹುದು. ರಿಟೈರ್ಡ್ ವೈಸ್‌ಚಾನ್ಸಿಲರ್‌ನ್ನು ತೆಗೆದು ಕೊಳ್ಳಬಹುದು. Who knows things, can be made Chairman.. ನೀವು ಏತಕ್ಕೆ ಒಬ್ಬ ಜಡ್ಜ್‌ನ್ನು ತೆಗೆದುಕೊಳ್ಳುತ್ತೀರಿ? ಆ ಜಡ್ಜ್‌ಗೆ ಏತಕ್ಕೆ ಅಷ್ಟು ಅಧಿಕಾರ ಕೊಡುತ್ತಿದ್ದೀರಿ ಎಂಬುದು ಗೊತ್ತಾಗಬೇಕು. ಆ ಜಡ್ಜ್ other membersನ್ನು ನಾಮಿನೇಟ್ ಮಾಡಿಕೊಳ್ಳಲು ಅಧಿಕಾರವನ್ನೇನು ಕೊಟ್ಟಿದ್ದೀರಿ, ಅದನ್ನು withdraw ಮಾಡಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಮಾಧುಸ್ವಾಮಿಯವರು ಬಹಳ ದೀರ್ಘವಾಗಿ ಈ ಒಂದು Bill ಮೇಲೆ ಮಾತನಾಡಿದ್ದಾರೆ ಮತ್ತು ಬೆಳಕು ಚೆಲ್ಲಿದ್ದಾರೆ. ಈ The Karnataka Professional Educational Institutions [Regulation of Admission and Determination of Fee] Bill ಅನ್ನು ಇವತ್ತು ನಮ್ಮ ಮುಂದೆ Higher Education Minister ಮಂಡಿಸಿದ್ದಾರೆ. ಇದರಲ್ಲಿ ಲೋಪದೋಷಗಳು ಏನಿವೆ ಅನ್ನತಕ್ಕಂಥದ್ದರ ಬಗ್ಗೆ ಈಗಾಗಲೇ ಪ್ರತಿಯೊಂದು clause by clause ಮತ್ತು section by section ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ. ಇದರಲ್ಲಿ ನ್ಯೂನತೆ ಏನಿದೆ ಅನ್ನತಕ್ಕಂಥದನ್ನು ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಪ್ರಸ್ತಾಪ ಮಾಡಿದ್ದಾರೆ. ನಾನೂ ಕೂಡ ಮೂಲಭೂತವಾದಂತಹ ಕೆಲವು ಪ್ರಶ್ನೆಗಳನ್ನು ಕೇಳಲು ಇಲ್ಲಿ ನಿಂತಿದ್ದೇನೆ. ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಕೇಳಿದ ಹಾಗೆ, ಈ Bill ಏನು ತಂದಿದ್ದೀರಿ, ಈ Billನಲ್ಲಿ ಮತ್ತು ಕೆಲವು engineering college ಗಳಿಗೆ autonomy ಕೊಡಬೇಕು ಅನ್ನತಕ್ಕಂಥದ್ದಕ್ಕೆ ನಿನ್ನೆ ಏನೊಂದು Amendment Bill ಅನ್ನು ಪಾಸ್ ಮಾಡಿಕೊಂಡು ಹೋಗಿದ್ದೀರಿ, ಅದರಲ್ಲಿ autonomy ಕೊಟ್ಟಿದ್ದೀರಿ, ಆದರೆ ನಿಮ್ಮ Educational Bill ನಲ್ಲಿ institutions ಗಳಿಗೆ autonomy ಕೊಟ್ಟರೆ, ಅವು ಇದರ ವ್ಯಾಪ್ತಿಯಲ್ಲಿ ಬರುತ್ತವೆಯೇ ಎಂಬುದನ್ನು ತಾವು ಹೇಳಿ. ತಾವು ತಮ್ಮ Definitionನಲ್ಲಿ ಏನಿದೆ ಎಂಬುದನ್ನು ನೋಡಿ. Section 2 [1] [i] ನಲ್ಲಿ ಹೀಗೆ ಹೇಳಲಾಗಿದೆ.

> [i] ``Government seats'' means all the seats in Government colleges, university constituent colleges, such number of the seats in Private Aided Professional Educational Institutions as may be notified by State Government and such number of seats in unaided minority and non-minority professional educational institutions as may be notified by the State Government in accordance with the consensus arrived at between the private

professional educational institutions and the State Government.

ಇಲ್ಲಿ autonomous colleges ಈ definition ನಲ್ಲಿ ಬರುವುದಿಲ್ಲ. ಯಾವಾಗ ಈ definition ನಲ್ಲಿ ಬರುವುದಿಲ್ಲವೋ, ಆಗ Government seat ಹಂಚಿಕೆಯಲ್ಲಿ ನೀವು directions ಕೊಡುತ್ತೀರಿ ಎಂದರೂ ಕೂಡ ಅವರು ಆ directions ಅನ್ನು ತೆಗೆದುಕೊಳ್ಳುವುದಿಲ್ಲ. ಅವರು ಹೇಳುತ್ತಾರೆ, ನಿಮ್ಮ ಈ Professional Educational Bill ನಲ್ಲಿ ಅದನ್ನು ನೀವು ಅಳವಡಿಸಿಲ್ಲ. ಅದಕ್ಕಾಗಿ ಆ autonomous collegeಗೆ ಈ admission ಬಗ್ಗೆ ನೀವು ಕೊಟ್ಟಂತಹ directions applicable ಆಗುವುದಿಲ್ಲ ಅನ್ನತಕ್ಕಂಥದ್ದು ಇಲ್ಲಿ ಸ್ಪಷ್ಟವಾಗುತ್ತದೆ. ನೀವು ಈ ಬಿಲ್ introduce ಮಾಡುವುದಕ್ಕಿಂತ ಮುಂಚೆ, ಏನು ನಿನ್ನೆ pass ಮಾಡಿಕೊಂಡು ಹೋಗಿದ್ದೀರೋ, ಆ Bill ಅನ್ನು ಚರ್ಚೆ ಮಾಡುವಾಗಲೇ ನೋಡಿಕೊಂಡು ಅದನ್ನು ಇದರೊಳಗೆ ಸೇರಿಸಬಹುದಾಗಿತ್ತು. ಅದನ್ನು ಸೇರಿಸಲಿಲ್ಲ. ಅದರಿಂದ ಏನಾಗುತ್ತದೆ ಎಂದರೆ ನಾಳೆ 5–10–20–100 engineering collegeಗಳಿಗೆ visveswariah University ಯವರು authnomy ಕೊಟ್ಟರೆ ಅವೆಲ್ಲವೂ ಕೂಡ ನಾಳೆ refuse ಮಾಡಬಹುದು. ಏಕೆಂದರೆ, ಆ definition ನಲ್ಲಿ ನಾವು ಇಲ್ಲ, ನಾವು ಏಕೆ admission ಕೊಡಬೇಕು ಎಂದು ಅವರು ಕೇಳಬಹುದು. ಅದನ್ನು ತಾವು ಓದಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. Definition Section 2[1] [i] ಅದನ್ನು ತಾವು ನೋಡಿದರೆ ತಮಗೆ ಗೊತ್ತಾಗುತ್ತದೆ. ಇಂತಹ ನ್ಯೂನತೆ ಇದರಲ್ಲಿ ಇದೆ. ಎರಡನೆಯದಾಗಿ, ಕೇಂದ್ರ ಸರ್ಕಾರ ಇನ್ನೂ ಕಾನೂನು ಪಾಸ್ ಮಾಡಿಲ್ಲ, ಅದರ ಬಗ್ಗೆ ಇನ್ನೂ ಯೋಚನೆ ಮಾಡುವುದರಲ್ಲೇ ಇದ್ದಾರೆ ಎಂದು ಇವರು ಹೇಳಿದ್ದಾರೆ. ಅದು ನಿಜ, ಕಾನೂನು pass ಆಗಿಲ್ಲ. ಆದರೆ ಒಂದು draft bill ಅನ್ನು ಈಗಾಗಲೇ circulate ಮಾಡಿದ್ದಾರೆ. ಹದಿನೈದು ದಿವಸಗಳೊಳಗಾಗಿ ನೀವು ನಿಮ್ಮ comments ಕೊಡಬೇಕು ಎಂದು ಈಗಾಗಲೇ ನಿಮಗೆ ಕೇಳಿದ್ದಾರೆ. ಆ billನಲ್ಲೂ ಕೂಡ ಅವರು ಸ್ಪಷ್ಟವಾಗಿ ನಮೂದು ಮಾಡಿದ್ದಾರೆ. ಏನೆಂದರೆ, admissions ಯಾವ ರೀತಿಯಾಗಿ ಆಗಬೇಕು ಎಂಬ ಬಗ್ಗೆ, regulatory fees ಬಗ್ಗೆ ಮತ್ತು ಉಳಿದ ವಿಷಯಗಳ ಬಗ್ಗೆಯೂ ಕೂಡ ಅವರು ಪ್ರಸ್ತಾಪ ಮಾಡಿರುವ draft bill ಈಗಾಗಲೇ ನಿಮ್ಮ ಮುಂದಿದೆ. ಆ draft bill ನಿಮ್ಮ ಮುಂದೆ ಇದ್ದಾಗ ತಾವು ಅದರಲ್ಲಿ ಇರತಕ್ಕಂಥ definitions ನೋಡಿಕೊಂಡು

ಮತ್ತು ಅದರಲ್ಲಿ ಏನು committeeಗಳು ಇವೆಯೋ, ಯಾವ ರೀತಿಯಾಗಿ ಅವರು committee ಗಳನ್ನು ಮಾಡಿದ್ದಾರೋ,

> ``Common Entrance Test means, an entrance test conducted by the appropriate authority or an agency authorized by it for the purpose for admission to a professional course."

ಇದರೊಳಗೆ MCI reference ಇಲ್ಲ, AICTE reference ಇಲ್ಲ, Dental Council reference ಇಲ್ಲ, It means that there is a Common Entrance Test authority. They can take any decision, depending on State to State. ಹೀಗಿರುವಾಗ ತಾವು ಇಲ್ಲಿ PUC ಮತ್ತು CET ಇದನ್ನು bifurcate ಮಾಡಿ, Medical College ವಿದ್ಯಾರ್ಥಿಗಳಿಗೆ ಮತ್ತು Dental College ವಿದ್ಯಾರ್ಥಿಗಳಿಗೆ ಕೇವಲ CET exam ಸಾಕು, PUC ಅವಶ್ಯಕತೆ ಇಲ್ಲವೆಂದು ಹೇಳಿದರೆ, ಇದರಿಂದ ದೊಡ್ಡ ಅನ್ಯಾಯ ಹಳ್ಳಿಯ ವಿದ್ಯಾರ್ಥಿಗಳಿಗೂ ಆಗುತ್ತದೆ, ಬಡ ವಿದ್ಯಾರ್ಥಿಗಳಿಗೂ ಆಗುತ್ತದೆ, Cityಯಲ್ಲಿ ಇರತಕ್ಕಂಥ ಬಡವರಿಗೂ ಕೂಡ ಆಗುತ್ತದೆ. ಏಕೆಂದರೆ ನಿಮ್ಮ CET ನಲ್ಲಿ ಪ್ರಶ್ನೆಪತ್ರಿಕೆ objective type ಇರುತ್ತದೆ, ಪ್ರಶ್ನೆಗಳಿಗೆ ಉತ್ತರಗಳನ್ನು Tick ಹೊಡೆದುಕೊಂಡು ಹೋದರೆ 90 ಪರ್ಸೆಂಟ್ ಯಾರಿಗೆ ಬೀಳುತ್ತದೋ ಅವರೇ ಸೆಲೆಕ್ಟ್ ಆಗುತ್ತಾರೆ. ಆದರೆ ಇಲ್ಲಿ ವಿದ್ಯಾರ್ಥಿ PUC ಯಲ್ಲಿ ಎರಡು ವರ್ಷ ಕಷ್ಟ ಪಟ್ಟು ಓದಿ ಎಲ್ಲಾ ಪ್ರಯತ್ನ ಮಾಡಿರುತ್ತಾನೆ. ಯಾವ ವಿದ್ಯಾರ್ಥಿ ಸುಮಾರು 12–13 ವರ್ಷಗಳು ಓದಿರುತ್ತಾನೋ, ತನ್ನ ಇಡೀ ಶಕ್ತಿಯನ್ನು ಅದರಲ್ಲಿ ಹಾಕಿರುತ್ತಾನೋ, ಅಂತಹ ವಿದ್ಯಾರ್ಥಿಗೆ ತಾವು ಇದರಿಂದ ವಂಚಿತರನ್ನಾಗಿ ಮಾಡಿದ್ದೀರಿ. ಕೇವಲ CET ಪರೀಕ್ಷೆಗೆ ಒಂದು ತಿಂಗಳೋ ಅಥವಾ ಎರಡು ತಿಂಗಳೋ mug up ಮಾಡಿಕೊಂಡು ಅದಕ್ಕೆ ಎಷ್ಟು ಬೇಕೋ ಅಷ್ಟನ್ನು ತಯಾರು ಮಾಡಿಕೊಂಡು ಬಂದಂತಹ ವಿದ್ಯಾರ್ಥಿಗಳಿಗೆ ಮಾತ್ರ ಇದರಿಂದ ಅನುಕೂಲವಾಗುತ್ತದೆಯೇ ಹೊರತಾಗಿ ಬೇರೆಯವರಿಗೆ ಯಾವುದೇ ಅನುಕೂಲವಾಗುವುದಿಲ್ಲ. ಸರ್ಕಾರದ ಉದ್ದೇಶವೇನು? ಸರ್ಕಾರದವರು ಎಲ್ಲಾ ಕಡೆಗೂ PUC institutions ತೆರೆದಿದ್ದೀರಿ. ಹಳ್ಳಿಯಿಂದ ಪಟ್ಟಣದವರೆಗೆ PUC colleges ಇವೆ. ಅವು ಮತ್ತೆ ಏಕೆ ಬೇಕು? ಎಲ್ಲಾ abolish ಮಾಡಿ, ಅದರ examination ಕೂಡ conduct ಮಾಡಬೇಡಿ. ಅಲ್ಲಿನ lecturersಗೆ ಏಕೆ

ಅಷ್ಟೊಂದು ಹೆಚ್ಚಿನ scaleನ salary ಕೊಟ್ಟು, ನಾವು ಎಲ್ಲಾ ಕಡೆ ಇಟ್ಟಿದ್ದೇವೆ. Independent PUC Institutions ಇವೆ, ಕೆಲವು ಕಡೆ High School ಮತ್ತು PUC ಸೇರಿ combined ಇವೆ. So, ಇಷ್ಟೆಲ್ಲಾ ಕೂಡ ವ್ಯವಸ್ಥೆ ಇದ್ದರೂ, ನಾವು ಅದನ್ನು ಬಿಟ್ಟು ತಾವು Dental and Medicalಗೆ ಕೇವಲ CET ಮಾತ್ರ ಗಣನೆಗೆ ತೆಗೆದುಕೊಳ್ಳುತ್ತೇವೆ, ಆದರೆ Engineeringಗೆ PUC, CET ಇವೆರಡೂ ಕೂಡ combine ತೆಗೆದುಕೊಳ್ಳುತ್ತೇವೆ ಎನ್ನುತ್ತಿದ್ದೀರಿ. ಅವರಿಗೆ combined, ಇವರಿಗೆ ಬೇರೆ. ನೀವು ಕಾನೂನು ಮಾಡುವಾಗ ಎರಡಕ್ಕೂ ಕೂಡ CET, PUC ಎಂದು ಸೇರಿಸಿ ಮಾಡಿದ್ದರೆ, ಇದೇನು un-constitutional ಆಗುತ್ತಿತ್ತಾ? When it is constitutionally valid for Engineering College, similarly it is also valid for Dental and Medical. The MCI rules are not above constitution are the MCI rules are not above the act or the legislation after all. They are rules ಅವರೇನಾದರೂ Act pass ಮಾಡಿ ಇದನ್ನು ಮಾಡಿದ್ದಾರಾ? ಹೀಗಿರುವಾಗ ತಾವು ಯಾವುದು ಸಂವಿಧಾನದ ಪ್ರಕಾರ ಇಲ್ಲವೋ ಅದನ್ನು ಅನುಸರಿಸಿ, ಒಂದೇ Act ನಲ್ಲಿ ಎರಡು provisions ಮಾಡಿಕೊಳ್ಳುತ್ತಿದ್ದೀರಿ. ಒಂದು, PUC with CET, ಇನ್ನೊಂದು ಬರೇ CET. ಇದು discrimination ಅಲ್ಲವೇ? ಯಾವುದಾದರೂ ಒಂದು ವಿದ್ಯಾರ್ಥಿ ನಾಳೆ ಕೋರ್ಟಿಗೆ ಹೋಗುತ್ತಾನೆ. ಬೇರೆ ಬೇರೆ professional courses ನವರಿಗೆ PUC ಮತ್ತು CET ಇದೆ, ನಮಗೆ ಬರೇ CET ಮಾತ್ರ ಎಂದು ಮಾಡಿ ಅನ್ಯಾಯ ಮಾಡಿದ್ದಾರೆ ಎಂದರೆ, ಆಗ ಆ ಬಗ್ಗೆ ಕೋರ್ಟ್ Direction ಕೊಟ್ಟರೆ ಇನ್ನೊಂದು ಕಾನೂನು ತರುತ್ತೀರಾ? ಯಾವುದೇ ಒಂದು regulation ಕಾನೂನು ಆಗುವುದಿಲ್ಲ. ಅದು ಕೇವಲ guidelines ಮಾತ್ರ ಆಗುತ್ತದೆ. ಅದನ್ನು ಬರೇ professional ಗೆ CET ಅವರು ಏಕೆ ಮಾಡಿದರು? ಬಹುತೇಕವಾಗಿ urbanized studentsಗಳಿಗೆ ಅನುಕೂಲ ಮಾಡುವುದಕ್ಕೋಸ್ಕರ ಮಾಡಿರಬೇಕು ಅಥವಾ ಶ್ರೀಮಂತ ವಿದ್ಯಾರ್ಥಿಗಳಿಗೆ ಅನುಕೂಲ ಮಾಡುವುದಕ್ಕೆ ಮಾಡಿರಬೇಕೇ ಹೊರತಾಗಿ, ಬಡ ವಿದ್ಯಾರ್ಥಿಗಳಿಗೆ ಅದರಿಂದ ಸಹಾಯ ಆಗುವುದಿಲ್ಲ. ನೀವು ಆತ್ಮಸಾಕ್ಷಿಯಾಗಿ ಹೇಳಿ, ಇದು ಸಂವಿಧಾನ ವಿರೋಧಿಯಲ್ಲವೇ? ಇದರಿಂದ ಬಡವರಿಗೆ ಅನುಕೂಲವಾಗುತ್ತದೆಯೇ ಎಂಬುದನ್ನು ತಾವು ಹೇಳಿ. ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದರಿಂದ ಬಡವರಿಗೆ ಅನುಕೂಲವಾಗುವುದಿಲ್ಲ. ಹಳ್ಳಿ ಮಕ್ಕಳಿಗೆ ಅನುಕೂಲವಾಗುವುದಿಲ್ಲ,

semi-urban areaದಲ್ಲಿ ಇರತಕ್ಕಂಥ ಮಕ್ಕಳಿಗೂ ಅನುಕೂಲವಾಗುವುದಿಲ್ಲ ಇದು ಕೇವಲ convent schoolನಲ್ಲಿ ಓದತಕ್ಕಂಥ ಮಕ್ಕಳು, ಯಾರು ದಿನ TV ನೋಡುತ್ತಾರೋ, ಯಾರಿಗೆ ದಿನಾ ಅಂತಹ ಇಂತಹ ಪುಸ್ತಕಗಳನ್ನು ತಂದು ತಂದೆ ತಾಯಿಗಳು ಕೊಡುತ್ತಾರೋ, CD ತಂದು ಕೊಡುತ್ತಾರೋ, ಯಾರು Century Club ಮುಂತಾದ ಕ್ಲಬ್‌ಗಳಿಗೆ ಅಡ್ಡಾಡುತ್ತಾರೋ, ಅಂತಹವರ ಮಕ್ಕಳಿಗೆ ಇದರಿಂದ ಅನುಕೂಲ ಆಗುತ್ತದೆಯೇ ಹೊರತಾಗಿ ಬಡವರ ಮಕ್ಕಳಿಗೆ ಅನುಕೂಲವಾಗುವುದಿಲ್ಲ. ಇದರಲ್ಲಿ lacuna ಇದೆ, ಆದ್ದರಿಂದ ದಯವಿಟ್ಟು ಇದರ ಬಗ್ಗೆ ಒಂದು Joint Select Committee ಮಾಡಿ, ಅಲ್ಲಿ ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ನಡೆಯಲಿ. ತಪ್ಪು ಇದ್ದುದ್ದನ್ನು ನಾವು ತಿದ್ದಿಕೊಳ್ಳೋಣ. ನಮಗೆ ಎರಡೂ ಬೇಕು. ಈ ಕಡೆ ಮಕ್ಕಳಿಗೂ ಅನುಕೂಲ ಮಾಡಿಕೊಡಬೇಕು, ಈ ಕಡೆ ಸಂಸ್ಥೆಗಳೂ ಕೂಡ ಸಾಯಬಾರದು. ಸಂಸ್ಥೆಗಳು ಕೆಲವು ಸತ್ತರೂ ಸಾಯಲಿ, ಪರವಾಗಿಲ್ಲ, ಆದರೆ ಮಕ್ಕಳಾದರೂ ಬದುಕಬೇಕಲ್ಲಾ? ಕೆಲವು ಕಡೆ ಯಾವಾಗಲೂ ಕೂಡ ಏನು Government aid ತೆಗೆದುಕೊಂಡೇ ಅವರು ಬದುಕಿಲ್ಲ. ಅನೇಕ ಸಾರಿ ಬೇರೆಯವರಿಗೂ ಕೂಡ ಕೊಡುತ್ತಾರೆ. ಅಂತಹ institutions ಸಹಾ ಇವೆ. ಆದರೆ ನಮ್ಮ ಉದ್ದೇಶ ಏನೆಂದರೆ, ಸಂಸ್ಥೆಗಳೂ ಇರಬೇಕು, similarly ಆ ಸಂಸ್ಥೆಯಿಂದ ನಮ್ಮ ಮಕ್ಕಳಿಗೆ maximum ಲಾಭ ಆಗಬೇಕು. ಹೆಚ್ಚಿನ ವಿದ್ಯಾರ್ಥಿಗಳಿಗೆ ಅನುಕೂಲ ಆಗಿ ಅಡ್ಮಿಷನ್ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದು ನಮ್ಮ ಗುರಿ ಇರಬೇಕು. ನಾವು ಸರ್ಕಾರಿ ಮೆಡಿಕಲ್ ಕಾಲೇಜು ಮಾಡಿದ್ದು ಏಕೆ? ಬೇರೆ ಪ್ರೈವೇಟ್ ಕಾಲೇಜುಗಳಲ್ಲಿ ನಮಗೆ ಹೆಚ್ಚಿನ ಸೀಟುಗಳು ಸಿಗುತ್ತಿಲ್ಲ, ಬಡ ಮಕ್ಕಳಿಗೆ ಸೀಟು ಸಿಗುತ್ತಿಲ್ಲವೆಂದು ಹೇಳಿ, ಇಂಟೇಕ್ ಹೆಚ್ಚಿಗೆ ಮಾಡಿದರೆ ಬಡ ಮಕ್ಕಳಿಗೆ ಸಿಗುತ್ತದೆ ಎನ್ನತಕ್ಕಂತಹ ದೃಷ್ಟಿಯಿಂದ ಆರು ಕಾಲೇಜುಗಳನ್ನು ಮಾಡಿದೆವು. ಅದರ ಉದ್ದೇಶ ಏನು? ಆದರೆ ನೀವು ಆ ಉದ್ದೇಶಗಳನ್ನು ಪೂರ್ತಿ ಕಡೆಗಾಣಿಸಿ ಇವತ್ತು ಶ್ರೀಮಂತರ ಮಕ್ಕಳಿಗೆ ಅನುಕೂಲ ಮಾಡುವುದಕ್ಕೋಸ್ಕರ ಅಂದರೆ ಸಿಇಟಿ ಪಾಸ್ ಆದವರಿಗೆ ಈ ಆರು ಮೆಡಿಕಲ್ ಕಾಲೇಜು ತೆಗೆಯುತ್ತಿದ್ದೀರಿ. ಪಿಯುಸಿ ಪಾಸಾದವರಿಗೆ ಇಲ್ಲ. ಹಳ್ಳಿಗಳಲ್ಲಿದ್ದ ಮಕ್ಕಳಿಗೆ ಇಲ್ಲ. ಇದು ಒಂದು ದೊಡ್ಡ ಉಪಕಾರ ನೀವು ಮಾಡಿದಿರಿ. ಥ್ಯಾಂಕ್ಸ್ ನಮಗೆ ಹೇಳಲಿಲ್ಲ ಎಂದಿರಿ, ಮಾನ್ಯ ಧರ್ಮ್‌ಸಿಂಗ್‌ರವರ ನೇತೃತ್ವದಲ್ಲಿ ಆರು ಹೊಸ ಮೆಡಿಕಲ್ ಕಾಲೇಜುಗಳು ತೆಗೆದಿದ್ದಕ್ಕೆ ಅವರಿಗೆ ಧನ್ಯವಾದಗಳು, ತಾವು ಆ ಹೊಸ ಮೆಡಿಕಲ್

ಕಾಲೇಜುಗಳಲ್ಲಿ ಬರೀ ಸಿಇಟಿ ಮತ್ತು ಶ್ರೀಮಂತರ ಮಕ್ಕಳಿಗೆ ಸೇರಿಸತಕ್ಕಂತಹ ಉಪಾಯ ಮಾಡಿ ಈ ಕಾನೂನು ತಂದಿದ್ದೀರಿ ಅದಕ್ಕೆ ನಿಮಗೆ ಧನ್ಯವಾದಗಳು. ನಾನು ಪದೇ ಪದೇ ಹೇಳುತ್ತಿದ್ದೇನೆ, ಯಾವಾಗಲೂ ಹೇಳುತ್ತಿದ್ದೇನೆ, ಮೆಹನತ್ ಕರೆ ಮುರ್ಗಾ ಅಂಡಾ ಖಾಯೆ ಫಕೀರ್, ಎಂದು ಆಗಿದೆ. ಮೆರಿಟ್ ಮಕ್ಕಳಿಗೆ ಅನುಕೂಲ ಆಗಲಿ ಎಂದು ತಂದರೆ ತಾವು ಇದನ್ನು ಒಯ್ದು ಇನ್ನೊಬ್ಬರು ಶ್ರೀಮಂತರ ಮಕ್ಕಳಿಗೆ ಕೊಡುತ್ತಿದ್ದೀರಿ. ಇದು ಎರಡನೆಯದು. ಮೂರನೆಯದು ಏನೆಂದರೆ, ಫೀಸ್. ಈಗ ಫೀಸ್ ಎಷ್ಟು ಫಿಕ್ಸ್ ಮಾಡುತ್ತಾರೆ ಎನ್ನತಕ್ಕಂಥದ್ದು ತಮಗೆ ಗೊತ್ತಿಲ್ಲ. ನಾಳೆ ಈ ಕಮಿಟಿಗಳು ಮಾಡಿದ್ದೀರಿ, ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ. ಎಷ್ಟು ಕಮಿಟಿಗಳು ಒಂದೋ, ಎರಡೂ, ಮೂರೋ, ಇದು ಆ್ಯಕ್ಟ್ ಇರತಕ್ಕಂಥದ್ದೇ ಹೆಚ್ಚು ಕಡಿಮೆ 15–16 ಪೇಜ್. ಆದರೆ ಇದರಲ್ಲಿ ಕಮಿಟಿಗಳು ಇರುವುದು ಸುಮಾರು ನಾಲ್ಕೈದು ಕಮಿಟಿಗಳು. ಅದರ ಜೊತೆಯಲ್ಲಿ ಮತ್ತೆ ಅದಕ್ಕೆ ಸೂಪರ್‌ವೈಸ್ ಮಾಡತಕ್ಕಂತಹ ಒಂದು ಕಮಿಟಿ. ಅಲ್ಟಿಮೇಟ್‌ಲಿ ಈ ಒಂದು ಕಮಿಟಿ ಮಾಡುವುದಕ್ಕೋಸ್ಕರ ಒಂದು ಆ್ಯಕ್ಟ್ ತಂದ ಹಾಗೆ. ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳಿ ಇದನ್ನೂ ತಂದಿದ್ದಲ್ಲ ಕಮಿಟಿಗಳನ್ನು ಕಾನ್‌ಸ್ಟಿಟ್ಯೂಟ್ ಮಾಡಿ ಕಮಿಟಿಗಳಿಗೆ ಸರ್ಕಾರ ದಲ್ಲಿರತಕ್ಕಂತಹ ಎಲ್ಲಾ ಶಸ್ತ್ರಗಳನ್ನು ಅವರ ಕೈಯಲ್ಲಿ ಕೊಟ್ಟು ಬಡಿಸಿಕೊಳ್ಳುವುದು. ಇದು ಈ ರೀತಿಯಾಗಿ ಆಗಬಾರದು ಅಧ್ಯಕ್ಷರೆ, ನಾನು ಹೇಳುವುದು, ಗೋಡೆಯಲ್ಲಿದ್ದುದು ಕಾಲಿನಲ್ಲಿ ಹೊಡೆದುಕೊಂಡಿದ್ದರಂತೆ. ಹಾಗಾಗಬಾರದು. ಅದಕ್ಕೆ ತಾವು ಏನು ಮಾಡಿದ್ದೀರಿ? ಸೆಕ್ಷನ್ ಮೂರರಲ್ಲಿ ಸ್ಟೇಟ್ ಕಾಮನ್ ಎಂಟ್ರೆನ್ಸ್ ಟೆಸ್ಟ್ ಕಮಿಟಿ ಅದಕ್ಕೆ ಛೇರ್ಮನ್‌ರು ಸದಸ್ಯರು. Method of admission in unaided professional educational institutions - ಇದು ಸೆಕ್ಷನ್ 4 ರಲ್ಲಿ ಏನು ಮಾಡಿದ್ದೀರಿ; ಮಾನ್ಯ ಶಂಕರಮೂರ್ತಿಯವರು ಕೇಳುತ್ತಿದ್ದೀರಾ? ಇಲ್ಲ ಕೇಳುತ್ತಿಲ್ಲ, ಕೇಳುತ್ತಿದ್ದೀರಾ, ಏನು ಕೇಳುತ್ತಿದ್ದೀರಿ? ನಾನು ಏನು ಹೇಳಿದೆ ಹೇಳಿ. ದಯವಿಟ್ಟು ಸ್ವಲ್ಪ ಕೇಳಿ. ಸೆಕ್ಷನ್ 4ರಲ್ಲಿ Method of admission in unaided professional educational institutions' - - ಇದರಲ್ಲಿ ಒಂದು ಕ್ಲಾಸ್ ಇದೆ ತಾವು ನೋಡಿದ್ದೀರೋ ಇಲ್ಲ,

Association of unaided professional educational institutions whether minority or non-minority imparting professional education in any one discipline shall make admission through a single common

entrance test conducted on all India basis at State level and followed by centralized counselling throgh a single window agency.

(ಈ ಹಂತದಲ್ಲಿ ಶ್ರೀ ಅರಗ ಜ್ಞಾನೇಂದ್ರರವರು ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಂದರೆ, ಇಡೀ ದೇಶದ ಬಗ್ಗೆ ನಿಮಗೆ ಚಿಂತನೆ ಇದೆ. ಇಲ್ಲಿಯ ಮಕ್ಕಳಿಗೆ ಹೇಗೆ ಅಡ್ಮಿಷನ್ ಕೊಡಿಸಬೇಕೆಂದು ಚಿಂತನೆ ಇಲ್ಲ. ಇದೇ ದುರ್ದೈವ. ಹೊರಗಿನ ಮಕ್ಕಳಿಗೆ ಹೇಗೆ ಅನುಕೂಲ ಆಗಬೇಕೆನ್ನುವುದರ ಬಗ್ಗೆ ಪ್ರಾವಿಷನ್ ಮಾಡಿಕೊಂಡಿದ್ದೀರಿ. ನಮ್ಮ ಮಕ್ಕಳಿಗೆ ಹೇಗೆ ಅನುಕೂಲವಾಗುತ್ತದೆ ಎನ್ನುವುದರ ಬಗ್ಗೆ ಚಿಂತನೆ ಮಾಡಿಲ್ಲ. ಅದು ಹೇಳುವುದಕ್ಕೆ ಹೋದರೆ ಎಂಸಿಐದವರು ಈ ರೀತಿಯಾಗಿ ರೂಲ್ಸ್ ಹೇಳಿದ್ದಾರೆ. ಅದಕ್ಕೆ ಬಿಟ್ಟಿದ್ದೇವೆ ಅನ್ನುತ್ತೀರಿ. ಅಂದರೆ ಎಂಸಿಐ ರೂಲ್ಸ್ ಮೆಡಿಕಲ್, ಡೆಂಟಲ್‌ಗೆ ಇದೆ. ಇವತ್ತು Common Entrance Test ಯಾವಾಗಲೂ ಕೂಡ ಎಲ್ಲಾ ಫ್ರೊಫೆಷನಲ್ ಕೋರ್ಸ್‌ಸ್‌ಗೆ ಒಂದೇ ಇರಬೇಕು. ನೀವು ಕಾನೂನು ಮಾಡಿ, ಅವರು stuckdown ಮಾಡಿದರೆ ನೋಡೋಣ. ಆದರೆ ನೀವು ಕಾನೂನೇ ಮಾಡದೇ ಅದಕ್ಕಿಂತ ಮುಂಚೆ ನೀವೇ ಹೇಳುವುದು. ಎಂಸಿಐದವರು ಹೀಗೆ ಹೇಳಿದ್ದಾರೆ, ಅದಕ್ಕೆ ನಾವು ಹೀಗೆ ಮಾಡಿದ್ದೇವೆಂದು. ಅಂದರೆ ಅವರ ಮಾತಿಗೆ ಬೆಲೆ ಕೊಟ್ಟು ನೀವು ಪ್ರೋತ್ಸಾಹ ಕೊಡುತ್ತಿದ್ದೀರಿ. ಸದನದಲ್ಲಿ ನಾವು ಮಕ್ಕಳ ಹಿತದೃಷ್ಟಿಯಿಂದ ಹೇಳತಕ್ಕಂತಹ ಮಾತಿಗೆ ತಾವು ಬೆಲೆ ಕೊಡುವುದಿಲ್ಲವೆಂದರೆ, ನಿಜವಾಗಿಯೂ ಇದು ದೊಡ್ಡ ಅನ್ಯಾಯ. ಬಡ ಮಕ್ಕಳಿಗೆ ಆಗುತ್ತದೆ. ರೂರಲ್ ಬೇಸ್ಡ್ ಸ್ಟೂಡೆಂಟ್ಸ್‌ಗೆ ಅನ್ಯಾಯವಾಗುತ್ತದೆ, ಪಿಯುಸಿ ಸ್ಟಡಿ ಮಾಡಿ ಸಾಕಷ್ಟು ಕಷ್ಟಪಟ್ಟಂತಹ ವಿದ್ಯಾರ್ಥಿಗಳಿಗೆ ನೀವು ಅನ್ಯಾಯ ಮಾಡಿದ ಹಾಗಾಗುತ್ತದೆ ಎನ್ನತಕ್ಕಂತಹ ಮಾತನ್ನು ನಾನು ಖಂಡಿತವಾಗಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅದರ ಜೊತೆಯಲ್ಲಿ ರಿಟೈರ್ಡ್ ಜಡ್ಜಸ್ ಬಗ್ಗೆ ಈಗಾಗಲೇ ಹೇಳಿದರು. ಅವರ ಮನಸ್ಸಿಗೆ ಬಂದಂತೆ ಅವರೇ ಒಂದು ಟೀಮ್ ಮಾಡಿಕೊಳ್ಳಬಹುದು. ನೀವು ಏಕೆ ಬೇಕು ಮತ್ತೆ? ಆ ರಿಟೈರ್ಡ್ ಜಡ್ಜಸ್ ನಿಮ್ಮ ಮಾತೂ ಕೇಳುವುದಿಲ್ಲ. ಕಳೆದ ಸಾರಿ ಆಗಿದ್ದು ನಿಮಗೆ ಗೊತ್ತಿದೆ ಏನು ಫೀಸ್ಟ್ರಕ್ಚರ್ ಇತ್ತು ಮುರಗೋಡು ಕಮಿಷನ್‌ನದೇ ಫೀಸ್ ಹೆಚ್ಚು ಕಡಿಮೆ ಮಾಡಬೇಕೆಂದರೆ ಒದ್ದಾಡಿದರೂ ನಿಮ್ಮ ಮಾತು ಯಾರೂ ಕೇಳಲಿಲ್ಲ. ನಿಮ್ಮ ಮಾತಾಗಲಿ, ನಮ್ಮ ಮಾತಾಗಲಿ ಕೇಳಲಿಲ್ಲ. ಅಂದಾಗ ಮತ್ತೆ ಹಗ್ಗ ಕೊಟ್ಟು ಏಕೆ ಕೈ ಕಟ್ಟಿಸಿಕೊಳ್ಳುತ್ತೀರಿ? ಬೇರೆ ರೀತಿಯಿಂದ

ಒನ್ ಮ್ಯಾನ್ ಕಮಿಟಿ ಮಾಡಿ. ಒಂದು ಕಡೆ ಹೇಳುತ್ತೀರಿ ಯಾವುದೇ ಕಾನೂನು ಇಲ್ಲವೆಂದು. This is the guideline. A draft Bill is a guideline to your Act. you follow it.
ಇದರೊಳಗೆ ಯಾವುದು ಒಳ್ಳೆಯದು ಇದೆ ಅದನ್ನು ತೆಗೆದುಕೊಂಡು ಅನುಕೂಲ ಮಾಡಿ, ಯಾವುದು ಇಲ್ಲ ಅದನ್ನೂ ಸೇರಿಸಿ ಮಕ್ಕಳಿಗೆ ಅನುಕೂಲ ಮಾಡಿ ಕೊಡಿ. ಅದಕ್ಕಾಗಿ ಇದರ ಬಗ್ಗೆ ನಾವು ಚಿಂತನೆ ಮಾಡುವಂಥದ್ದು ಬಹಳ ಮುಖ್ಯ. ಏಕೆಂದರೆ, ಇದು ಯಾವುದೇ ಪಕ್ಷ ಪಂಗಡದ ಪ್ರಶ್ನೆ ಅಲ್ಲ. ಇದು ನಮ್ಮ ಮಕ್ಕಳ ಅಳಿವು ಉಳಿವಿನ ಪ್ರಶ್ನೆ ಇದೆ. ಅಡ್ಮಿಷನ್ ಪ್ರಶ್ನೆ. ಅದಕ್ಕಾಗಿ ಒಂದು ಸಾರಿ ನಮ್ಮ ಕೈ ತಪ್ಪಿ ಕೈ ಮೀರಿ ಹೋದರೆ, ಪುನಃ ನಮಗೆ ಸಿಗುವುದಿಲ್ಲ. ಆ ಮೇಲೆ ಒಂದು ದೊಡ್ಡ ಅನಾಹುತವಾಗುತ್ತದೆ. ಮೂರನೆಯದಾಗಿ, ಫೀಸ್ ಎಸ್‌ಸಿ, ಎಸ್‌ಟಿ ಸ್ಟೂಡೆಂಟ್ಸ್, ಒಬಿಸಿ ಸ್ಟೂಡೆಂಟ್ಸ್, ಪೂರ್‌ಮೆರಿಟ್ ಬಾಯ್ಸ್‌ಗಳಿಗೆ ನೀವು ಏನು 50 ಪರ್ಸೆಂಟ್ ಮಾಡುತ್ತೀರೋ, ಅಥವಾ ಎಷ್ಟು ಮಾಡುತ್ತೀರೋ ಗೊತ್ತಿಲ್ಲ. ಕಾನೂನು ಪ್ರಕಾರ 50 ಪರ್ಸೆಂಟ್ ಮಾಡಬೇಕೆಂದು ಇದೆ. ಇಲ್ಲಿ ಡ್ರಾಫ್ಟ್ ಬಿಲ್‌ನಲ್ಲಿ ಅವರಿಗೆ ಆ ರಾಜ್ಯದಲ್ಲಿ ಯಾವ ರೀತಿಯಾಗಿ ಮಾಡಿಕೊಳ್ಳಬೇಕೆನ್ನುವುದಕ್ಕೆ ಒಂದು ಡಿಸ್ಕ್ರಿಷನರಿ ಪವರ್ ಕೊಟ್ಟಿದ್ದಾರೆ. ಈ ಫೀಸನ್ನು ನೀವು ಹೇಗೆ ತುಂಬುತ್ತೀರಿ? ಇದು ನಾಳೆ ಎಸ್‌ಸಿ /ಎಸ್ಟಿ ಇದ್ದರೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ ತೆಗೆಯುತ್ತೀರಿ. ಒಬಿಸಿ ಇದ್ದರೆ ಬ್ಯಾಕ್‌ವರ್ಡ್ ಕ್ಲ್ಯಾಸ್‌ನಿಂದ ತೆಗೆದುಕೊಳ್ಳುವುದು. ಈಗಾಗಲೇ ಕೋಟ್ಯಾಂತರ ರೂಪಾಯಿ ಸುಮಾರು ನನಗನ್ನಿಸಿದ ಮಟ್ಟಿಗೆ 150–800 ಕೋಟಿ ರೂಪಾಯಿ ಬಾಕಿ ಇರಬೇಕು. ಇಲ್ಲಿ ತಪ್ಪಿದ್ದರೆ ನಾನು ತಿದ್ದಿಕೊಳ್ಳುತ್ತೇನೆ. ಯಾರೇ ಇರಬಹುದು. ಕೊಡತಕ್ಕಂತಹ ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್‌ಗಳಿಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ ಹೋಗತಕ್ಕಂತಹ ಹಣ ಅನೇಕ ಕಡೆ ಬಾಕಿ ಇದೆ. ಮಕ್ಕಳಿಗೆ ಈಗ ಎಕ್ಸಾಮಿನೇಷನ್‌ಗೆ ಕೂರಿಸುತ್ತಿಲ್ಲ. ಅಂತಹ ಸಂದರ್ಭಗಳಲ್ಲಿ ನೀವು ಮಾಡಿದಂತಹ ಕಮಿಟಿಯವರು ಅವನ ಕೈಗೆ ಎಟುಕದೆ ಇರತಕ್ಕಂತಹ ಫೀಸನ್ನು ಮಾಡಿದ್ದರೆ, ಅವನು ಶಾಲೆಗೆ ಹೋಗಬೇಕೋ ಕಾಲೇಜಿಗೆ ಹೋಗ ಬೇಕೊ ದನ ಕಾಯುವುದಕ್ಕೆ ಹೋಗಬೇಕೊ ನೀವೇ ಹೇಳಿ. ಅವನಿಗೆ ಸಾಧ್ಯವಾದರೆ ಹೋಗುತ್ತಾನೆ. ನೀವು ಅಲೋಕೇಷನ್ ಎರಡು ಪರ್ಸೆಂಟ್ ಜಾಸ್ತಿ ಮಾಡಿದ್ದೀರಿ ಒಪ್ಪಿಕೊಳ್ಳೋಣ. ಆದರೆ 2 ಪರ್ಸೆಂಟ್ ಜಾಸ್ತಿ ಮಾಡಿದ ತಕ್ಷಣ ಇವತ್ತು ಎಷ್ಟು ಕಾಲೇಜುಗಳು ಇವೆ, ಪ್ರೊಫೆಷನಲ್ ಕಾಲೇಜ್ ಎಷ್ಟು, ಅದು ಇಂಜಿನಿಯರಿಂಗ್

ಇರಬಹುದು, ಮೆಡಿಕಲ್ ಇರಬಹುದು, ಬಿಎಡ್ ಇರಬಹುದು, ಟಿಸಿಹೆಚ್ ಇರಬಹುದು, ಡೆಂಟಲ್ ಇರಬಹುದು ಮತ್ತು ಫಾರ್ಮಸಿ ಇರಬಹುದು, ಆ ಎಲ್ಲಾ ಕಾಲೇಜುಗಳಿಗೆ ಸ್ಕಾಲರ್‌ಶಿಫ್ ಕೊಡಬೇಕು. ಫೀಸ್ ಕೊಡಬೇಕು. ಕೋಟ್ಯಾಂತರ ರೂಪಾಯಿ ಆಗುತ್ತದೆ. ಅದೇ ರೀತಿ ಒಬಿಸಿದು ಕೊಡಬೇಕು, ಅದೇ ರೀತಿಯಾಗಿ ಮೆರಿಟ್ ವಿದ್ಯಾರ್ಥಿಗಳಿಗೆ ಕೊಡಬೇಕು, ಅಂದಾಗ ಇಷ್ಟೊಂದು ಹಣದ ಬಗ್ಗೆ ತಾವು ಚಿಂತನೆ ಮಾಡಿಲ್ಲ, ಅಥವಾ ನಾಳೆ ಅವನು ಇನ್‌ಡಿಸ್ಕ್ರಿಮೇಟ್‌ಲಿ ಫೀಸ್ ಮಾಡಿದ, ಅದಕ್ಕೆ ಬಜೆಟ್ ಪ್ರಾವಿಷನ್ ಇದೆಯಾ ಅದಕ್ಕಾಗಿ ನಾವು ಫೀಸನ್ನು ಸುಪ್ರೀಂಕೋರ್ಟ್‌ದವರು ಎಲ್ಲರಿಗೂ ಒಂದೇ ಫೀಸ್ ಎಂದು ಹೇಳಿದ್ದಾರೆಂದು ತಾವು ಮಾಡಿದಿರಿ. ಅವರು ಯಾವಾಗ ಹೇಳಿದ್ದಾರೆ, in absence of law ಹೇಳಿದ್ದಾರೆ. ಲೆಜಿಸ್ಲೇಷನ್ ಇಲ್ಲ, ಅದಕ್ಕಾಗಿ ನೀವು in absence of law ಸದ್ಯಕ್ಕೆ ನೀವು ಎಲ್ಲರಿಗೂ ಒಂದೇ ಫೀಸ್ ಮಾಡಿ ಎಂದು ಹೇಳಿದ್ದಾರೆ. ನೀವು ಮೆರಿಟ್ ಎಸ್‌ಸಿಎಸ್‌ಟಿ, ಒಬಿಸಿಗೆ ಸೋಷಿಯಲ್ ಜಸ್ಟೀಸ್ ಮಾಡಿದಾಗ ನಿಮ್ಮ ಕಮಿಟಿಯವರು ವಿವೇಚನೆಯನ್ನು ಬಿಟ್ಟು ಫೀಸ್ ಫಿಕ್ಸ್ ಮಾಡಿದರೆ ಖಂಡಿತವಾಗಿ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಒಪ್ಪಿಕೊಳ್ಳಲಿಲ್ಲವೆಂದರೆ ಅದಕ್ಕೆ ನೀವು ಸರ್ಕಾರದಿಂದ ಭರಿಸಬೇಕಾಗುತ್ತದೆ. ಆದರೆ ಅದಕ್ಕಾಗಿ ಅಷ್ಟೊಂದು ಬಜೆಟ್ ಪ್ರಾವಿಷನ್ ಇಲ್ಲ. ಈಗೇನು ಈ ಬಿಲ್‌ನಲ್ಲಿ ಹೇಳಲಾಗಿದೆ ಇದರಿಂದ 50 ಪರ್ಸೆಂಟ್ ಬಡ ಮಕ್ಕಳಿಗೆ poor merit students. - ಅವರೆಲ್ಲರನ್ನೂ ಕೂಡ ನೀವು ಸೇಫ್‌ಗಾರ್ಡ್ ಮಾಡದೇ ಹೋದರೆ, ಈ ಬಿಲ್‌ನಿಂದ ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಅದಕ್ಕಾಗಿ ನೀವು ಒನ್ ಮ್ಯಾನ್ ಕಮಿಷನ್ ಮಾಡಿ; ಆದರೆ, ಸಾಮಾಜಿಕ ನ್ಯಾಯವನ್ನು ಕೊಡೆತಕ್ಕಂಥ ಸಮಿತಿ ಇರಬೇಕು. ಮತ್ತು ಸರ್ಕಾರದ ಮೇಲೆ ಹೆಚ್ಚಿನ ಭಾರ ಬೀಳಬಾರದು. ಮ್ಯಾನೇಜ್‌ಮೆಂಟ್‌ಗೂ ಕೂಡ ಒಂದು ಬೇರೆ ವ್ಯವಸ್ಥೆ ಮಾಡಿ ಏನಾದರೂ ಕೋಟಾ ಕೊಡುತ್ತೀರೋ ಅಥವಾ ಉಳಿದಂಥ 50 ಪರ್ಸೆಂಟ್‌ನ್ನು ಅವರು ಯಾವ ರೀತಿಯಾಗಿ ಫೀಸ್ ಹೆಚ್ಚಿಗೆ ಮಾಡಿಕೊಂಡು ನ್ಯಾಯ ಕೊಡಬೇಕೋ ಅದನ್ನು ನೀವು ನೋಡಿ. ಇಲ್ಲದಿದ್ದರೆ ಇದೊಂದು ದೊಡ್ಡ ಅನಾಹುತವಾಗುತ್ತದೆ. ನಾವು ಅವರಿಗೆ ಕನ್ನಡಿಯಲ್ಲಿ ಗಂಟು ತೋರಿಸಿದ ಹಾಗೆ ಆಗುತ್ತದೆ. ಇದು ನೋಡು ನಿನ್ನ ಗಂಟು ಎಂದಂತಾಗುತ್ತದೆ. ಹಾಗೆಯೇ ಎಂ.ಬಿ.ಬಿ.ಎಸ್., ಇಂಜಿನಿಯರಿಂಗ್, ಡೆಂಟಲ್ ಸೀಟ್‌ಗಳನ್ನು ಕನ್ನಡಿಯಲ್ಲಿ ಬಡ ಮಕ್ಕಳಿಗೆ ತೋರಿಸಿದಂತಾಗುತ್ತದೆ ಹೊರತಾಗಿ ಅವರ ಕೈಗೆ ಇದು ಮುಟ್ಟುವುದಿಲ್ಲ. ಇದು

ಒಂದು ನ್ಯೂನತೆ ಇದೆ. ಆಮೇಲೆ ಸಿಂಗಲ್ ಮ್ಯಾನ್ ಕಮಿಟಿ ಮಾಡಬೇಕೆಂಬುದೇ ನಮ್ಮ ವಾದ. ಇನ್ನೊಂದು ಬೇಡಿಕೆ ಈಗಾಗಲೇ ಹೇಳಿರುವ ಹಾಗೆ ಈ ಸಮಸ್ಯೆಯನ್ನು ಕೂಲಂಕುಷವಾಗಿ ಬಗೆಹರಿಸಬೇಕೆಂದರೆ ಆ ಮನೆಯ ಸದಸ್ಯರನ್ನು ಒಳಗೊಂಡ ಜಂಟಿ ಸಮಿತಿಯನ್ನು ಮಾಡಿ ಆ ಸಮಿತಿಯಲ್ಲಿ ಸ್ವಲ್ಪ ಚರ್ಚೆ ಮಾಡಿ ಯಾವ ರೀತಿಯಾಗಿ ಫೀಸ್ಟ್ರಕ್ಚರ್ ಇಟ್ಟುಕೊಳ್ಳಬಹುದು, ಯಾವ ರೀತಿಯಾಗಿ ಮೆರಿಟ್ ಸ್ಟೂಡೆಂಟ್ಸ್‌ಗೆ ಸಹಾಯ ಹೆಚ್ಚೆಚ್ಚು ಮಾಡಬೇಕು, ಇವೆಲ್ಲವುಗಳ ಬಗ್ಗೆ ಕೂಡ ಜಂಟಿ ಸಮಿತಿಯಲ್ಲಿ ಚರ್ಚೆ ಮಾಡಿದ ಹಾಗೆ ಆಗುತ್ತದೆ. ನಾವು ಕೇವಲ ಇಲ್ಲಿ ಒಂದೈದು ನಿಮಿಷಗಳಲ್ಲಿ ನಮ್ಮ ನಮ್ಮ ವಿಚಾರಗಳನ್ನು ಹೇಳಿದರೆ, ಆ ಮೂಲಕ ಇಂಥ ದೊಡ್ಡ ಬಿಲ್‌ನ್ನು ನಾವು ತರಾತುರಿಯಾಗಿ ಪಾಸ್ ಮಾಡಿದರೆ ಲಕ್ಷಾಂತರ ಮಕ್ಕಳಿಗೆ ಅನ್ಯಾಯವಾಗುತ್ತದೆ. ಇದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಮತ್ತು ಯಾರಾದರೊಬ್ಬರು ಸ್ಟೂಡೆಂಟ್‌ಗಳಲ್ಲಿಯೇ ನಮ್ಮನ್ನು ಕೇಳುತ್ತಾರೆ. "ಏನ್ ಸಾರ್ ನಮ್ಮ ಮೆಡಿಕಲ್‌ನವರಿಗೆ ಸಿ.ಇ.ಟಿ. ಇಟ್ಟಿದ್ದೀರಿ, ಇಂಜಿನಿಯರಿಂಗ್‌ಗೆ ಪಿ.ಯಿ.ಸಿ., ಸಿ.ಇ.ಟಿ ಇಟ್ಟಿದ್ದೀರಿ, ಇದರಲ್ಲಿ ವ್ಯತ್ಯಾಸ ಇಲ್ಲವೇನು, ಡಿಸ್ಕ್ರಿಮಿನೇಷನ್ ಇಲ್ಲವೇನು ಎನ್ನುತ್ತಾರೆ. ಸಿ.ಇ.ಟಿ.ಗೆ ಡಿಸ್ಕ್ರಿಮಿನೇಷನ್ ಮಾಡಬಾರದು ಎಂದು ಹೇಳತಕ್ಕಂಥ ಸುಪ್ರೀಂಕೋರ್ಟ್ ಇಲ್ಲಿ ಸಿ.ಇ.ಟಿ., ಪಿಯುಸಿ ಎಕ್ಸಾಮಿನೇಷನ್ ಕಂಡಕ್ಟ್ ಮಾಡುವುದಕ್ಕೆ ಡಿಸ್ಕ್ರಿಮಿನೇಟ್ ಮಾಡುವುದಕ್ಕೆ ಹೇಳುತ್ತಾರೇನು? ನೋಡೋಣ, ಫೈಟ್ ಮಾಡೋಣ. ಸುಪ್ರೀಂಕೋರ್ಟ್‌ವರೆಗೂ ಹೋಗೋಣ. ಒಂದು ಸಲ ಅದಕ್ಕಾಗಿ ಇದು ಒಳ್ಳೆಯ ಕಾನೂನು ಆಗಬೇಕೆಂದರೆ ಇದನ್ನು ಜಂಟಿ ಸಮಿತಿಗೆ ತಾವು ಒಪ್ಪಿಸಿ, ಈ ಬಿಲ್‌ನಲ್ಲಿ ಈಗಾಗಲೇ ನಾವು ಹೇಳಿದಂಥ ಲೋಪದೋಷಗಳನ್ನೂ ಕೂಡ ಸರಿಪಡಿಸಿಕೊಳ್ಳುವುದಕ್ಕೆ ಆಗುತ್ತದೆ. ಆ ಡೆಫನೇಷನ್‌ನಲ್ಲಿ ಅಟಾನಮಿಯನ್ನೂ ಕೂಡ ಕೊಟ್ಟಂಥ ಕಾಲೇಜ್‌ಗಳನ್ನು ತರಬೇಕಾಗುತ್ತದೆ. ಆಮೇಲೆ ನೀವು ಪಿ.ಯು.ಸಿ., ಸಿ.ಇ.ಟಿ.ಗಳಲ್ಲಿ ಏನು ವ್ಯತ್ಯಾಸವಾಗಿದೆ ಅದನ್ನೂ ಸರಿಪಡಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆಮೇಲೆ ಫೀಸ್ ಸ್ಟ್ರಕ್ಚರ್‌ನ್ನು ಮಿನಿಮೈಸ್ ಮಾಡಿ ಮತ್ತು ಮ್ಯಾನೇಜ್‌ಮೆಂಟ್ ಯಾವ ರೀತಿಯಾಗಿ ಬದುಕತಕ್ಕಂಥ ಒಂದು ವ್ಯವಸ್ಥೆಯನ್ನೂ ಕೂಡ ಇದರಲ್ಲಿ ಹಾಕಬೇಕು ಎನ್ನತಕ್ಕಂಥದ್ದರ ಬಗ್ಗೆಯೂ ಯೋಚನೆ ಮಾಡಿದಂತಾಗುತ್ತದೆ, ಇವೆಲ್ಲವುಗಳ ಬಗ್ಗೆ ಕೂಡ ಜಂಟಿ ಸದನ ಸಮಿತಿಗೆ ಒಪ್ಪಿಸಿದಾಗ ಮಾತ್ರ ಸಾಧ್ಯವಾಗುತ್ತದೆ. ಕೇವಲ ಒಂದೊಂದು ಸಲಹೆ ಕೊಟ್ಟು ಇದು ಇಲ್ಲಿಗೇ ಮುಗಿಯಿತು ಎಂದು ಹೇಳಿದರೆ ನಿಜವಾಗಿಯೂ ಇದು ಅನ್ಯಾಯವಾಗುತ್ತದೆ.

ನಾನು ಕಳಕಳಿಯಿಂದ ತಮ್ಮನ್ನು ಕೇಳಿಕೊಳ್ಳುತ್ತೇನೆ, ಇದರಲ್ಲಿ ರಾಜಕೀಯ ಅಥವಾ ಬೇರೆ ಯಾವ ಉದ್ದೇಶವೂ ಇಲ್ಲ. ಅಥವಾ ದುರುದ್ದೇಶದಿಂದ ಸಲಹೆ ಕೊಡುತ್ತಿಲ್ಲ. ನಾನು ನಿಮಗೆ ಕೇಳಿಕೊಳ್ಳತಕ್ಕಂಥದ್ದು ಮಕ್ಕಳ ಹಿತದೃಷ್ಟಿಯಿಂದ ನೀವು ಬೇಕಾದರೆ ಜಂಟಿ ಸಮಿತಿಯವರಿಗೆ 15 ದಿವಸಗಳ ಕಾಲ ಮಾತ್ರ ಟೈಂ ಕೊಡಿ. ಆಮೇಲೆ ಬೇಕಾದರೆ ಆರ್ಡಿನೆನ್ಸ್ ಪಾಸ್ ಮಾಡಿ. ಆದರೆ ಈ ಬಿಲ್ ಬಗ್ಗೆ ಕೂಲಂಕುಷವಾಗಿ ಅಭ್ಯಾಸ ಮಾಡದೇ ಈ ಆ್ಯಕ್ಟ್ ತಂದರೆ ತೊಂದರೆಯಾಗುತ್ತದೆ, ಮತ್ತು 15 ದಿವಸದ ಒಳಗಾಗಿ ಈ ಡ್ರಾಫ್ಟ್ ಬಿಲ್‌ಗೆ ನೀವೇನು ರಿಪ್ಲೈ ಕೊಡುತ್ತೀರಿ ಕೇಂದ್ರ ಸರ್ಕಾರದಿಂದ ಬಂದಿದ್ದಕ್ಕೆ ಅದನ್ನೂ ಕೂಡ ತಿಳಿದುಕೊಂಡು ಎರಡೂ ಕೂಡ ನೋಡಿದ ಹಾಗಾಗುತ್ತದೆ. ಮತ್ತು ಸದಸ್ಯರೂ ಕೂಡ ಈ ಎರಡೂ ಬಿಲ್‌ಗಳನ್ನು ವಿಚಾರ ಮಾಡಿ ಕೊನೆಗೆ ಇದರೊಳಗೆ ಏನು ತರಬೇಕು ಎನ್ನತಕ್ಕಂಥದ್ದರ ಬಗ್ಗೆ ಕೂಡ ಇದರಲ್ಲಿ ಸೇರಿಸುತ್ತಾರೆ. ಆದ್ದರಿಂದ ದಯವಿಟ್ಟು ತಾವು ಇದಕ್ಕೆ ಒಪ್ಪಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತೆ ತಕ್ಷಣ ಇದನ್ನು ಜಂಟಿ ಸಮಿತಿಗೆ ಒಪ್ಪಿಸಿದರೆ ಇಲ್ಲಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ದಯವಿಟ್ಟು ಆ ಕೆಲಸವನ್ನು ಮಾಡಬೇಕೆಂದು ಹೇಳುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಈ ಬಿಲ್ ಬಗ್ಗೆ ನಾಲ್ಕಾರು ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಮೊದಲನೇಯದಾಗಿ ಈ ಬಿಲ್‌ನ್ನು ಏಕೆ ಸರ್ಕಾರ ಇಷ್ಟು ಗೋಜಲು ಮಾಡಿಕೊಂಡಿತೋ ಎಂದು ನನಗರ್ಥವಾಗುತ್ತಿಲ್ಲ. ಯಾರು ಮಾನ್ಯ ಶಂಕರಮೂರ್ತಿಯವರಿಗೆ ಗೈಡ್ ಮಾಡಿದರು; ಲಾ ಡಿಪಾರ್ಟ್‌ಮೆಂಟ್‌ನವರು ಹೇಳಿದರಾ,? 93ರ ಕಾನ್ಸ್‌ಟ್ಯೂಷನಲ್ ಅಮೆಂಡ್‌ಮೆಂಟ್‌ನಲ್ಲಿ ಬಾರಿ ಕ್ಲಿಯರ್ ಆಗಿ ಹೇಳಲಾಗಿದೆ. ಏನು ಮಾಡಬೇಕು ಎಂದು ಹೇಳಿದೆ. ಯಾರು ರಾಜ್ಯ ಸರ್ಕಾರಗಳು. 15(5)ನಲ್ಲಿ ಏನು ಹೇಳುತ್ತಾರೆಂದರೆ. –

'Nothing in this article or in sub-clause (g) of clause (1) of article 19 shall prevent the State from making any special provision, by law, for the advancement of any socially and educationally backward classes of citizens or for the scheduled Castes or the scheduled tribes in so far as such special provisions relate to their admission to educational institutions including private educational institutions, whether aided

or unaided by the state, other than the minority educational institutions referred to in clause (1) of article 30.

ಇದು 93ರ ಕಾನ್ಸ್‌ಟ್ಯೂಷನಲ್ ಅಮೆಂಡ್‌ಮೆಂಟ್. ಏಕೆ ಕಾನ್ಸ್‌ಟ್ಯೂಷನಲ್ ಅಮೆಂಡ್‌ಮೆಂಟ್ ಮಾಡಿದ್ದು ಎಂದರೆ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಒಂದನ್ನು ಕೊಟ್ಟಿತು. ಅನ್‌ಏಡೆಡ್ ಮತ್ತು ಅನ್-ಏಡೆಡ್ ಪ್ರೈವೇಟ್ ಇನ್ಸ್‌ಟಿಟ್ಯೂಶನ್‌ಗಳಲ್ಲಿ ರಿಸರ್ವೇಶನ್ ಪಾಲಿಸಿಯನ್ನು ನೀವು ಇಂಪ್ಲಿಮೆಂಟ್ ಮಾಡತಕ್ಕಂಥ ಅವಶ್ಯಕತೆಯಿಲ್ಲ ಎಂದು ಹೇಳತಕ್ಕಂಥ ತೀರ್ಪನ್ನು ಸುಪ್ರೀಂಕೋರ್ಟ್ ಕೊಟ್ಟಂಥ ಹಿನ್ನೆಲೆಯಲ್ಲಿ ಇಡೀ ದೇಶದ ಎಲ್ಲಾ ರಾಜ್ಯಗಳ ಎಲ್ಲಾ ರಾಜಕೀಯ ಪಕ್ಷಗಳೂ, ಎಲ್ಲಾ ರೀತಿಯ ಸಂಸ್ಥೆಗಳೂ, ಎಲ್ಲಾ ಸಂಘಟನೆಗಳು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿ ಇದು ಬಡ ಮಕ್ಕಳಿಗೆ ಅನ್ಯಾಯವಾಗುತ್ತದೆ ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ವಿದ್ಯಾರ್ಥಿಗಳಿಗೆ ಇದರಿಂದ ಅನ್ಯಾಯವಾಗುತ್ತದೆ. ಇದು ಆಗಬಾರದು. ಆಗಬಾರದು ಎನ್ನುವುದಾದರೆ ಕೇಂದ್ರ ಸರ್ಕಾರ ಒಂದು ಲಿಜಿಸ್ಲೇಷನ್ ತರಬೇಕು ಎಂದು ಒತ್ತಾಯವನ್ನು ಕೇಂದ್ರ ಸರ್ಕಾರದ ಮೇಲೆ ಮಾಡಿದರು. ಈ ರೀತಿಯ ಒತ್ತಾಯವನ್ನು ಕೇಂದ್ರ ಸರ್ಕಾರದ ಮೇಲೆ ಮಾಡುವುದಕ್ಕೆ ಮೊದಲೇ ನಮ್ಮ ರಾಜ್ಯ ಸರ್ಕಾರ ಸರ್ವ ಪಕ್ಷಗಳ ನಿಯೋಗ ಮಾನ್ಯ ಅರ್ಜುನ್‌ಸಿಂಗ್‌ರವರ ಹತ್ತಿರ ಹೋಗಿ ಒತ್ತಾಯವನ್ನು ಮಾಡಿ ಕೇಂದ್ರ ಸರ್ಕಾರ ಲಿಜಿಸ್ಲೇಶನ್ ತರಬೇಕೆಂದು ಹೇಳಿದ್ದೆವು. ಏಕೆಂದರೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಸಿ.ಇ.ಟಿ. ಬಿಕ್ಕಟ್ಟು ಬಹಳ ಗಂಭೀರವಾಗಿ ರಾಜ್ಯದಲ್ಲಿ ನಾಲ್ಕು ಜನ ವಿದ್ಯಾರ್ಥಿಗಳು ಆತ್ಮಹತ್ಯೆಯನ್ನು ಮಾಡಿಕೊಂಡರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಕೈಕಟ್ಟಿಹಾಕಿಬಿಟ್ಟಿತ್ತು. ರಾಜ್ಯ ಸರ್ಕಾರಕ್ಕೆ ಅಧಿಕಾರ ಇರಲಿಲ್ಲ. ಸುಪ್ರೀಂ ಕೋರ್ಟ್ ನಾಲ್ಕೈದು ಜಡ್ಜ್‌ಮೆಂಟ್ ಕೊಟ್ಟು ಒಂದೊಂದರಲ್ಲಿ ಒಂದೊಂದು ರೀತಿ ತೀರ್ಮಾನ ಕೊಟ್ಟು ಹೋಲ್‌ಥಿಂಗ್ ಮೆಸ್ ಆಗಿಬಿಟ್ಟಿತು. ಆದರೆ ಯಾವುದೇ ದಾರಿ ಕಾಣದೇ ಇರತಕ್ಕಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಒಂದು ಕಾನೂನನ್ನು ತರಬೇಕೆಂದು ಹೇಳಿ ನಮ್ಮ ರಾಜ್ಯ ಸರ್ಕಾರ ಮೊಟ್ಟ ಮೊದಲಿಗೆ ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಕೇಂದ್ರ ಸರ್ಕಾರಕ್ಕೆ ನಾವೆಲ್ಲರೂ ಡೆಲಿಗೇಷನ್ ಮುಖಾಂತರ ಹೋಗಿ ಒಂದು ಮನವಿಯನ್ನು ಕೊಟ್ಟೆವು. ಅದಾದ ಮೇಲೆ ಸುಪ್ರೀಂಕೋರ್ಟ್ ಮತ್ತೆ ಜಡ್ಜ್‌ಮೆಂಟ್ ಕೊಟ್ಟಿರುವುದು ಇದು. ಏನಂತ, ಅನ್-ಏಡೆಡ್ ಮತ್ತು ಪ್ರೈವೇಟ್

ಇನ್‌ಸ್ಟಿಟ್ಯೂಶನ್‌ಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಬುಡಕಟ್ಟು ರಿಸರ್ವೇಶನ್ ಪಾಲಿಸಿಯನ್ನು ಇಂಪ್ಲಿಮೆಂಟ್ ಮಾಡಬೇಕಾಗಿಲ್ಲ ಎನ್ನುವ ಜಡ್ಜ್ ಮೆಂಟ್ ಕೊಟ್ಟ ಮೇಲೆ ಇಡೀ ದೇಶದಲ್ಲಿರತಕ್ಕಂಥ ಎಲ್ಲಾ ರಾಜ್ಯಗಳೂ ಎಲ್ಲಾ ರಾಜಕೀಯ ಪಕ್ಷಗಳೂ ಸೇರಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿ ಈ ಬಿಲ್ ಅನ್ನು ಕೇಂದ್ರ ಸರ್ಕಾರ ತರುವುದಕ್ಕೆ ಕಾರಣವಾಗಿದ್ದು ಈ ಬಿಲ್ ಭಾರಿ ಸಿಂಪಲ್ ಇದೆ ಏನು ಅವ ಏಡೆಡ್ ಮತ್ತು ಏಡೆ ಪ್ರೈವೇಟ್ ಇನ್‌ಸ್ಟಿಟ್ಯೂಶನ್‌ಗಳಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್, ಶೆಡ್ಯೂಲ್ಡ್ ಟ್ರೈಬ್ಸ್, ಬ್ಯಾಕ್‌ವರ್ಡ್‌ಕ್ಲಾಸ್ ಸ್ಟೂಡೆಂಟ್ಸ್‌ಗಳಿಗೆ ನೀವು ರಿಸರ್ವೇಶನ್ ಕೋಟಾದಲ್ಲಿ ಅಡ್ಮಿಶನ್ಸ್‌ಗಳನ್ನು ಕೊಡಬೇಕು ಎಂದೂ ಮತ್ತು ಅದಕ್ಕೆ ಬೇಕಾದಂಥ ಕಾನೂನುಗಳನ್ನು ಆಯಾಯ ರಾಜ್ಯ ಸರ್ಕಾರಗಳು ಮಾಡಿಕೊಳ್ಳಬೇಕು ಎಂದು ಅಷ್ಟೇ ಇರತಕ್ಕಂಥದ್ದು ಇದರಲ್ಲಿ. This is all. This contains in the 93rd amendment. ಆದರೆ ನೀವು ಈ ಬಿಲ್‌ನ್ನು ಇಂಟ್ರಡ್ಯೂಸ್ ಮಾಡಿದಿರಲ್ಲಾ, ಈ ಬಿಲ್‌ನಲ್ಲಿ ಏನೇನು ವಿಚಾರಗಳನ್ನೆಲ್ಲಾ ತಂದಿದ್ದೀರಿ ಈ ವಿಚಾರಗಳಿಗೂ ಮತ್ತು 93 ರ ಕಾನ್‌ಸ್ಟಿಟ್ಯೂಶನಲ್ ಅಮೆಂಡ್‌ಮೆಂಟ್‌ಗೂ ಸಂಬಂಧವೇ ಇಲ್ಲ. ಅದರ ಅವಶ್ಯಕತೆನೂ ಇಲ್ಲ. ಮಾನ್ಯ ಶಂಕರ ಮೂರ್ತಿಯವರು, ಮೂರು ಕಮಿಟಿಗಳನ್ನು ಮಾಡಬೇಕೆಂದು ಸುಪ್ರೀಂ ಕೋರ್ಟ್ ಹೇಳಿದೆ, ನಾವೆಲ್ಲ ಹೇಳಿರತ್ಕಂಥಾದ್ದು ಎಂದು ಹೇಳಿದರು.

Supreme Court while answering the 4 questions raised in Inamdar case, 4 questions raise ಮಾಡಿದ್ದಾರೆ. ಆ 4 questions ಏನು ಎಂದು ಮತ್ತೆ ಹೇಳುತ್ತೇನೆ. ಇನಾಂದಾರ್ ಕೇಸ್‌ನಲ್ಲಿ ನಾಲ್ಕು ಪ್ರಶ್ನೆಗಳು ಏನು ಸುಪ್ರೀಂ ಕೋರ್ಟ್ ಸಾಲ್ವ್ ಮಾಡಬೇಕಾಗಿ ಬಂತು, ಆ ನಾಲ್ಕು ಕ್ವೆಶ್ಚನ್‌ನಲ್ಲಿ ಒಂದು ಕ್ವೆಶ್ಚನ್

while answering for question No.4, Supreme Court clearly says, "our conclusion therefore is that the judgement in the Islamic Academy in so for as, the devolve of the scheme of the two committees, one is for admission and fee structure does not go beyond the law. Right down in the Pai foundation and earlier decision of this Court, which have been approved in that case, the challenge to sitting up of the two committees in according to the decision in Islamic Academy therefore raised, however, the

observation by way of clarification contained in the later part of the Para - 19 of Islamic Academy, which speaks of quota and fixation of percentage by the State Government is redundant and must go in view of what has been already held by us in the earlier part of this Judgement while dealing with the question No.1." This is the Supreme Court Judgment. According to this judgment, while answering the question No.4, Supreme Court made it clear only for 2 committees. But you had made it for 3 committees. ಆ ಕಮಿಟಿಗಳು ಮಾಡಿರತಕ್ಕಂಥ validity ಮತ್ತು ಅದರ usefulness, that is different thing. But what our Hon'ble Education Minister has informed that it is 3 committees Supreme Court guidelines ಕೊಟ್ಟಿದೆ ಎಂದು. ಇಲ್ಲಿ ನೀವು ಮೂರು ಕಮಿಟಿ ಇಟ್ಟಿದ್ದೀರಿ. ನಿಮ್ಮ ಆ್ಯಕ್ಟ್‌ನಲ್ಲಿ ಬಂದಿರುವುದು ಮೂರು ಕಮಿಟಿಗಳು. ನೋಡಿ ನಿಮ್ಮ ಆ್ಯಕ್ಟ್‌ನಲ್ಲಿ ಇರತಕ್ಕಂಥಾದ್ದು ಸೆಕ್ಷೆನ್ 3ರಲ್ಲಿ ಒಂದು ಕಮಿಟಿ, ಸೆಕ್ಷನ್ 5 ರಲ್ಲಿ ಒಂದು ಕಮಿಟಿ, ಸೆಕ್ಷನ್ 6 ಶುಲ್ಕ ನಿಯಂತ್ರಣ ಕಮಿಟಿ ಒಟ್ಟು ಮೂರು ಕಮಿಟಿ ಆಯಿತಲ್ಲಾ. ಪ್ರವೇಶ ಮೇಲ್ವಿಚಾರಣ ಸಮಿತಿ ಒಂದು, ಶುಲ್ಕ ನಿಯಂತ್ರಣ ಸಮಿತಿ ಒಂದು, ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿ ಒಂದು. ಕ್ಲಾಜ್ 3 ನೋಡಿ ಅದರಲ್ಲಿ ಮೂರು ಇವೆ. ಆ ಮೂರು ಸಮಿತಿಯನ್ನು ನೀವು ಆ್ಯಕ್ಟ್‌ನಲ್ಲಿ ಇಟ್ಟಿದ್ದೀರಿ. ಸುಪ್ರೀಂ ಕೋರ್ಟ್ ಇನಾಂದಾರ್ ಕೇಸ್‌ನಲ್ಲಿ ಕೋಟ್ ಮಾಡಿ ಹೇಳಿದೆ. while answering, ಸುಪ್ರೀಂ ಕೋರ್ಟ್‌ನಲ್ಲಿ ಯಾವ್ಯಾವ ಕ್ವೆಶ್ಚನ್ ರೈಜ್ ಆಗಿತ್ತು? The 4 questions which came up before the Supreme Court was, the aggrieved persons before the present Bench were classifiable in one clause that is unaided minority and non minority institutions impair in professional education, the questions that arose for decision in these appeals were;

(1) 'To what extent can State regulate admissions made by the unaided minority or non-minority educational institutions? can the State enforces its policy of reservation under or appropriate itself any quota in admission to such institutions? This is the one question came up before the Supreme Court.

(2) 'Whether unaided minority and non-minority educational institutions are free to device their own admission procedure or wherther the direction made in the Islamic Academy 2003 Supreme Court 697 for compulsorily holding an Entrance Test by the State or Association of Institutions and to choose. Therefore, from the students entitled admission in such institutions can be sustainded in the light of the law laid down in the pai foundation case.' This is the question No.2 came up before the Supreme Court for addition.

(3) Whather the Islamic Academy would have issued a guidelines in the matter of regulating the fee payable by students to the educational instituions.

(4) Can the admission procedure, ಇದಕ್ಕೆ ಉತ್ತರ ಕೊಡುತ್ತಾ ಹೇಳಿರತಕ್ಕಂಥದ್ದು, ಯಾವುದಕ್ಕೆ Can the admission procedure and fee structure be regulated or taken over by the Committees ordered to be constituted by Islamic Academy? ಈ 4th question ಗೆ ನಾನು answer ಮಾಡುವಾಗ Supreme Court ಹೇಳಿರತಕ್ಕಂಥದ್ದು Islamic Academy ಕೇಸಿನ ಪ್ರಕಾರ, you are entitled only for 2 committees. How can there be 3 committees in this Bill ? You are telling that you are going to constitute these 3 committees according to the guidance of the Supreme Court. But, Supreme Court Judgment is only for 2 committees. How can there be that 3rd committee? That is what Supreme Court also says. ಆದ್ದರಿಂದ ಈ ಬಿಲ್ ಡ್ರಾಫ್ಟ್ ಮಾಡಿದವರು ಈ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಓದಿದರಾ? ಇಲ್ಲವಾ? ಹಾಗೆಯೇ ಡ್ರಾಫ್ಟ್ ಮಾಡಿದರಾ ಎನ್ನುವುದನ್ನು ಹೇಳಬೇಕು. ಮತ್ತೆ ಫೀಜ್ ಸ್ಟ್ರಕ್ಚರ್ ಬಗ್ಗೆ ಹೇಳುವುದಾದರೆ, ಈಗ ನೀವು ಬಿಲ್ ಏನು ತಂದಿದ್ದೀರಿ ಮಾನ್ಯ ಶಂಕರ ಮೂರ್ತಿಯವರು, ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ ಬಿಲ್ ಇದು. ಅಡ್ಮಿಷನ್ ರೆಗ್ಯುಲೇಷನ್ ಮತ್ತು ಫೀಜ್ ಸ್ಟ್ರಕ್ಚರ್ಸ್ ಅನ್ನು ನಿಗದಿ ಮಾಡತಕ್ಕಂಥ ಬಿಲ್ ಅದು ನೀವೇ ತಂದಿರುವ ಪ್ರಕಾರ ಇರುವಂತಹ ಬಿಲ್. ಇಲ್ಲಿ ಎರಡನ್ನೂ ಬಿಟ್ಟು ಉಳಿದ ಅಂಶಗಳು ಹೇಗೆ ಇದರಲ್ಲಿ ಬಂದವು? ಎಷ್ಟು ಪೇಜ್ ಇದೆ

ನೀವು ತಂದಿರುವಂತಹ ಬಿಲ್ ಎಂದರೆ 24 ಪೇಜ್ ಇದೆ. ಆದರೆ ನೀವು ಬಿಲ್‌ನಲ್ಲಿ ಹೇಳಿರತಕ್ಕಂಥಾದ್ದು ಎರಡೂ ಅಂಶಗಳು. ಅಡ್ಮಿಷನ್ ರೆಗ್ಯುಲೇಟ್ ಮಾಡತಕ್ಕಂಥಾದ್ದು ಹೇಗೆ? ಮತ್ತು ಸರ್ಕಾರದ 93ನೇ ಕಾನ್ಸ್‌ಟಿಟ್ಯೂಷನಲ್ ಅಮೆಂಡ್‌ಮೆಂಟ್ ಪ್ರಕಾರ ರಿಸರ್ವೇಷನ್ ಅನ್ನು ಅನ್ ಏಡೆಡ್ ಮತ್ತು ಏಡೆಡ್ ಪ್ರೈವೇಟ್ ಇನ್ಸ್‌ಟಿಟ್ಯೂಷನಲ್ಲಿ ಇಂಪ್ಲಿಮೆಂಟ್ ಮಾಡುವುದು ಹೇಗೆ? ಈ ಪ್ರಶ್ನೆ ನಿಮ್ಮ ಮುಂದೆ ಇರುವಂಥಾದ್ದು. ಮತ್ತು ಫೀಜ್ ಸ್ಟ್ರಕ್ಚರ್ ಬಗ್ಗೆ ಹೇಳುವುದಾದರೆ ಫೀಜ್ ಸ್ಟ್ರಕ್ಚರ್ ತರುತ್ತೇನೆ ಎಂದು ಹೇಳಿ ನೀವು ಇಲ್ಲಿ ಏನು ಹೇಳಿದ್ದೀರಿ, ಶುಲ್ಕ ನಿಗದಿ ಇದಕ್ಕೆ ಏನು ನಿಯಂತ್ರಣ ಮಾಡಿದ್ದೀರಿ ಸಾರ್? ನೀವು ಕೈ ತೊಳೆದುಕೊಂಡು ಬಿಟ್ಟಿದ್ದೀರಿ. ಯಾರು? ಸರ್ಕಾರ ಕೈ ತೊಳೆದುಕೊಂಡು ಬಿಟ್ಟಿದೆ. ಫೀಜ್ ಸ್ಟ್ರಕ್ಚರ್ ನಿಗದಿ ಮಾಡುವಂತಹ ವಿಚಾರದಲ್ಲಿ. ಅದನ್ನು ಕಮಿಟಿಗಳಿಗೆ ಕೊಟ್ಟು ಬಿಟ್ಟಿದ್ದೀರಿ. ಮುರಗೋಡು ಕಮಿಟಿಗೆ ಕೊಟ್ಟು ಏನಾಯಿತು? ಕೋರ್ಟ್ ಕೊಟ್ಟಿದೆ, ಮತ್ತೆ ನೀವು ನಿಗದಿ ಮಾಡುವಂತಾದ್ದು ಏನಿದೆ? ನೀವು ಅಡ್ಮಿಷನ್‌ಗೆ ಒಂದು ರೆಗ್ಯುಲೇಟರಿ ಕಮಿಟಿ ಫೀಜ್‌ಸ್ಟ್ರಕ್ಚರ್‌ಗೆ ಒಂದು ಕಮಿಟಿ ಮಾಡಿದಿರಿ. ಎರಡು ಮಾಡಬೇಕೆಂದು ಸುಪ್ರೀಂ ಕೋರ್ಟ್ ಹೇಳಿದರೆ ನೀವು ಮೂರು ಕಮಿಟಿ ತಂದಿರಿ. ಆಯಿತು, ನಿಮ್ಮ ಪ್ರಕಾರ ಈ ಕಮಿಟಿಗಳ ಮೆಂಬರುಗಳು ಯಾರ್ಯಾರು? Retired Judge of the High Court. A representative of Karnataka nominated by the Chief Justice of the High Court either Medical council of India or the All India Council or Technical Education as the case may be depending on the course of study. A person repute nominated by the Chair Person. Chartered Accountant of Repute nominated by the Chairperson ಹಾಗಾದರೆ ನಿಮಗೆ ಇದರಲ್ಲಿ ಏನು ಕೆಲಸವಿದೆ? The government absolutely has no authority. ಈ ಫೀಜ್ ಸ್ಟ್ರಕ್ಚರ್ ಬಗ್ಗೆ ಈ ಕಮಿಟಿಯವರು ಏನು ತೀರ್ಮಾನ ಮಾಡುತ್ತಾರೆ ಅದೇ ಫೈನಲ್. ಯಾರೂ ಕೂಡ ಹಸ್ತಕ್ಷೇಪ ಮಾಡುವ ಹಾಗೆ ಇಲ್ಲ. ಈಗ ಮುರಗೋಡು ಸಮಿತಿ ಫೀಜ್ ಸ್ಟ್ರಕ್ಚರ್ ಮಾಡಿತು. ಪರಿಸ್ಥಿತಿ ಏನಾಯಿತು? ಕರ್ನಾಟಕ ರಾಜ್ಯದಲ್ಲಿ ಪರಿಸ್ಥಿತಿ ಎಷ್ಟು ಗಂಭೀರವಾಗಿತ್ತು ಆಗ ನೀವೇಕೆ ಈ ಬಿಲ್ ಡ್ರಾಫ್ಟ್ ಮಾಡುವಾಗ ಗಮನಕ್ಕೆ ತೆಗೆದುಕೊಳ್ಳಲಿಲ್ಲ? ಇಂತಹ ಕಮಿಟಿಯನ್ನು ಮಾಡುವಂತಹ ಸಂದರ್ಭದಲ್ಲಿ ನೀವು ಯಾರ ಅಭಿಪ್ರಾಯವನ್ನೂ ತೆಗೆದುಕೊಳ್ಳಲಿಲ್ಲ. ಇನ್ನು ಸಿ.ಇ.ಟಿ ಎಗ್ಸಾಮಿನೇಷನ್ ಬಗ್ಗೆ ಹೇಳುವುದಾದರೆ, ಈಗ ನೀವು ಎರಡು ಸಿ.ಇ.ಟಿ ಎಗ್ಸಾಮಿನೇಷನ್‌ಗಳನ್ನು

ಮಾಡುತ್ತಿದ್ದೀರಿ? ಒಂದು ಕಾಮೆಡ್ – (ಕೆ)ಯವರು ಸಿ.ಇ.ಟಿ ಎಗ್ಸಾಮ್ ಮಾಡುತ್ತಿದೆ, ನೀವು ಒಂದು ಸಿ.ಇ.ಟಿ. ಎಗ್ಸಾಮ್ ಕಂಡಕ್ಟ್ ಮಾಡುತ್ತಿದ್ದೀರಿ. ಇದು ವಿದ್ಯಾರ್ಥಿಗಳ ಮೇಲೆ ಯಾವ ರೀತಿ ಪರಿಣಾಮವಾಗುತ್ತಿದೆ? ಅದರ ಬದಲು ನೀವು ಇದರಲ್ಲಿ ರೆಗ್ಯುಲೇಟ್ ಮಾಡತಕ್ಕಂಥ ಸಂದರ್ಭದಲ್ಲಿ ಸಿ.ಇ.ಟಿ. ಎಗ್ಸಾಮ್ ಕಂಡಕ್ಟ್ ಮಾಡತಕ್ಕಂಥಾದ್ದು ಸರ್ಕಾರ ಮಾತ್ರವೇ ಬೇರೆ ಯಾರೂ ಕಂಡಕ್ಟ್ ಮಾಡಬಾರದು. ಎರಡನೆಯದಾಗಿ, ಪಿ.ಯು.ಸಿ. ಮಾರ್ಕ್ಸ್‌ನ್ನು ಮೆಡಿಕಲ್‌ಗೆ, ಡೆಂಟಲ್‌ಗೆ ಕನ್ಸಿಡರ್ ಮಾಡಬಾರದು, ಇಂಜಿನಿಯರಿಂಗ್‌ಗೆ ಮಾತ್ರ ಕನ್ಸಿಡರ್ ಮಾಡಿ ಎಂದರೆ, ಇಂಜಿನಿಯರಿಂಗ್ ಕಾಲೇಜಿಗೆ ಈಗ ಮಾರ್ಕೆಟ್ ಕಡಿಮೆಯಾಗಿಬಿಟ್ಟಿದೆ, ಬಿಸಿನೆಸ್ ಕಡಿಮೆಯಾಗಿಬಿಟ್ಟಿದೆ. ಲಾಭ ಕಡಿಮೆಯಾಗಿ ಬಿಟ್ಟರೆ ಅದಕ್ಕೆ ಹೇಗಾದರೂ ಪರವಾಗಿಲ್ಲ. ಆದರೆ ಮೆಡಿಕಲ್‌ಗೂ, ಡೆಂಟಲ್‌ಗೂ ವ್ಯಾಪಾರ ಜಾಸ್ತಿ ಇದೆ. ಅದಕ್ಕೋಸ್ಕರ ಇವುಗಳಿಗೆ ಪಿ.ಯು.ಸಿ. ಮಾರ್ಕ್ಸ್‌ನ್ನು ಕನ್ಸಿಡರ್ ಮಾಡುವುದು ಬೇಡ. ಈಗಾಗಲೇ ಇದರ ಬಗ್ಗೆ ಸಾಕಷ್ಟು ವಿಚಾರಗಳನ್ನು ಮಾಧುಸ್ವಾಮಿಯವರು, ಖರ್ಗೆಯವರು ಮತ್ತು ಧರಂಸಿಂಗ್‌ರವರು ಹೇಳಿದ್ದಾರೆ. ಸಿ ಇ ಟಿ ಎಗ್ಸಾಮಿನೇಷನ್ ಅನ್ನು ತಂದಿರ ತಕ್ಕಂಥಾದ್ದೇ ಒಂದು ರೀತಿಯಲ್ಲಿ ಹಳ್ಳಿಯ ಮಕ್ಕಳಿಗೆ ಮಾಡಿದಂಥ ಅನ್ಯಾಯ. ಮೊಯ್ಲಿಯವರ ಕಾಲದಲ್ಲಿ ಸಿ ಇ ಟಿ ಯನ್ನು ಇಂಟ್ರೊಡ್ಯೂಸ್ ಮಾಡಲಾಯಿತು. ಹೀಗೆ ಇಲ್ಲಿ ಸಿ ಇ ಟಿ ಬಿಲ್ ಇಂಟ್ರೊಡ್ಯೂಸ್ ಮಾಡುವಾಗಲೇ ಅದರಲ್ಲಿ ಅಧಿಕಾರಿಗಳ ಹಸ್ತಕ್ಷೇಪವಿತ್ತು. ಯಾರು ಈ ಬಿಲ್ ಅನ್ನು ಡ್ರಾಫ್ಟ್ ಮಾಡುತ್ತಾರೆ, ಆ ಅಧಿಕಾರಿಗಳ ಮಕ್ಕಳ್ಯಾರೂ ಹಳ್ಳಿಗಳಲ್ಲಿ ಓದುತ್ತಿಲ್ಲ. ಅವರೆಲ್ಲ ಇಲ್ಲೇ ಓದುತ್ತಿರುವುದು. ಇವರ ಪ್ರಪಂಚವೆಲ್ಲಾ ಇಲ್ಲೇ.

ಛೇರ್ಮನ್ : ರೆಡ್ಡಿಯವರೇ, ಆದಷ್ಟು ಬೇಗ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ : ಆದಷ್ಟು ಬೇಗನೇ ಮುಗಿಸುತ್ತೇನೆ. ನಿಧಾನ ಮಾಡಬೇಕು ಎನ್ನುವ ಉದ್ದೇಶವೇನೂ ಇಲ್ಲ. ಆದರೆ ಮಧ್ಯೆ ಮಧ್ಯೆ ಇಂಟರಪ್ಷನ್ಸ್ ಆಗುತ್ತಿರುತ್ತಿದೆ. ನೀವು ಮೆಡಿಕಲ್ ಕಾಲೇಜು ಮತ್ತು ಡೆಂಟಲ್ ಕಾಲೇಜಿಗೆ ಪಿ.ಯು.ಸಿ. ಮಾರ್ಕ್ಸ್‌ನ್ನು ಕನ್ಸಿಡರ್ ಮಾಡಲೇಬೇಕು. ಎಂ.ಸಿ.ಐ.ನವರು ಗೈಡ್‌ಲೈನ್ಸ್ ಕೊಟ್ಟಿದ್ದಾರೆ ಎಂದು ಹೇಳುತ್ತೀರಿ. MCI can give only guidelines. It cannot make rules or law. ಸುಪ್ರೀಂ ಕೋರ್ಟ್ ಎಂ.ಸಿ.ಐ. ಗೈಡ್‌ಲೈನ್ಸ್‌ನ್ನು ಫಾಲೋ ಮಾಡಬೇಕು ಎಂದು ಹೇಳಿದೆಯೇ ಹೊರತು, supreme court has not made it mandatory. ನೀವು ಅದರ

ಪ್ರಕಾರವೇ ಮಾಡಬೇಕು ಎಂದೇನೂ ಸುಪ್ರೀಂ ಕೋರ್ಟ್ ಹೇಳಿಲ್ಲ. Follow that ಎಂದು ಹೇಳಿದ್ದಾರೆ. ಎಂ.ಸಿ.ಐ.ನವರು ರೂಲ್ಸ್ ಮಾಡಿಲ್ಲ, ಅವರು ಮಾಡುವುದು ಗೈಡ್‌ಲೈನ್ಸ್. ಆ ಗೈಡ್‌ಲೈನ್ಸ್‌ನಲ್ಲಿ ನಮಗೆ ಅನುಕೂಲವಾಗ ತಕ್ಕಂಥಾದ್ದು ತೆಗೆದುಕೊಳ್ಳೋಣ. ಆಗಲೇ ಇಲ್ಲಿ ತಮಿಳುನಾಡಿನದು ಎಗ್ಸಾಂಪಲ್ ಹೇಳಿದ್ದಾರೆ. ತಮಿಳುನಾಡಿನಲ್ಲಿ High Court itself has laid down a principle that the CET marks and PUC marks has to be taken into consideration. ನಮ್ಮ ಹಳ್ಳಿಯ ಮಕ್ಕಳು ಪಿ.ಯು.ಸಿ.ಯಲ್ಲಿ ಹೈಯೆಸ್ಟ್ ಮಾರ್ಕ್ಸ್ ತೆಗೆದುಕೊಂಡವರಿಗೂ ಇಲ್ಲಿ ಅವಕಾಶ ಸಿಗುತ್ತಿಲ್ಲ. ಅಂದರೆ, ಸಿ ಇ ಟಿ ಯಲ್ಲಿ ಪಾಸ್ ಆದಂಥ ಮೆರಿಟ್ ಸ್ಟೂಡೆಂಟ್ಸ್‌ಗಳಿಗೆ ನೀವು ಪ್ರೈವೇಟ್ ಇನ್ಸ್‌ಟಿಟ್ಯೂಷನ್‌ಗಳಿಗೆ ಅಡ್ಮಿಷನ್ಸ್ ಕೊಡುತ್ತೀರಲ್ಲಾ, ಆಗ ಇಂಥವರಿಗೆ ಅವಕಾಶ ಸಿಗುತ್ತಿಲ್ಲ. ಸಿ ಇ ಟಿಯಲ್ಲಿ ಪಾಸ್ ಆದಂಥ ಮೆರಿಟ್ ಸ್ಟೂಡೆಂಟ್ಸ್‌ಗಳಿಗೆ ಪ್ರೈವೇಟ್ ಇನ್ಸ್‌ಟಿಟ್ಯೂಷನ್‌ನಲ್ಲಿ ಗವರ್ನಮೆಂಟ್ ಕೋಟಾ ಇರುತ್ತದಲ್ಲಾ, ನೀವು ರಿಸರ್ವೇಷನ್ ಮಾಡುತ್ತೀರಲ್ಲಾ, ಅಲ್ಲಿ ಸಿಗುವುದಿಲ್ಲವೆಂದು ಹೇಳುತ್ತಿದ್ದೇನೆ. ಅದಕ್ಕಾಗಿಯೇ ಫೀಸ್ ಸ್ಟ್ರಕ್ಚರ್ ಮಾಡತಕ್ಕಂಥ ಅಧಿಕಾರವನ್ನು ನೀವು ಉಳಿಸಿಕೊಳ್ಳಿ ಎಂದು ನಾನು ಹೇಳುತ್ತಿರುವುದು. ಇಲ್ಲವೆಂದರೆ, ನೀವು ನಿಯಂತ್ರಣ ಮಾಡುವಂಥ ಕಮಿಟಿಯನ್ನಾದರೂ ಇಡಿ. ನಿಮ್ಮ ಕಂಟ್ರೋಲ್‌ನಲ್ಲಿರತಕ್ಕಂಥ ಕಮಿಟಿಯಾದರೂ ಇರಬೇಕು. ರಿಟೈರ್ಡ್ ಜಡ್ಜ್‌ಗಳನ್ನೆಲ್ಲಾ ಸದಸ್ಯರನ್ನಾಗಿ ಮಾಡಿದರೆ ಏನಾಗುತ್ತದೆಂದರೆ, ಅವರು ಯಾರ ಮಾತೂ ಕೇಳುವುದಿಲ್ಲ, ಅವರಿಗೆ ಇಷ್ಟ ಬಂದಹಾಗೆ ಫೀಸ್ ರೈಸ್ ಮಾಡಿಕೊಂಡು ಹೋಗುತ್ತಾರೆ. ಆಗ ಪ್ರೈವೇಟ್ ಇನ್ಸ್‌ಟಿಟ್ಯೂಷನ್‌ನಲ್ಲಿ ಶೆಡ್ಯೂಲ್ ಕ್ಯಾಸ್ಟ್‌ನವರಿಗೆ ಅಡ್ಮಿಷನ್ ಕೊಟ್ಟರೂ ಕೂಡ ಅವರು ಅಷ್ಟೊಂದು ಫೀಸನ್ನು ಎಲ್ಲಿಂದ ತಂದುಕೊಡುತ್ತಾರೆ? ಅವರಿಗೆ ಅಷ್ಟು ಫೀಸ್ ಕೊಡಲು ಆಗುವುದಿಲ್ಲ. ಆದ್ದರಿಂದ, ಈ ಬಿಲ್‌ನಲ್ಲಿ ಅದನ್ನು ಯಾವುದಾದರೂ ರೂಪದಲ್ಲಿ ಕಂಟ್ರೋಲ್ ಮಾಡಿಲಿಕ್ಕೆ, ಅದನ್ನು ನಿಯಂತ್ರಿಸಲಿಕ್ಕೆ ನೋಡಬೇಕಾಗುತ್ತದೆ. ಫೀಸ್ಟ್ರಕ್ಚರ್ ಬಗ್ಗೆ ಫೀ ರೆಗ್ಯುಲೇಷನ್ ಬಗ್ಗೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟಿನಲ್ಲಿ ಏನು ಹೇಳಿದ್ದಾರೆಂದರೆ,

To set up reasonable fee structure is also component of the right to establish and administer an institution, within the meaning of

Article 31 of the Constitution as per the law declared in pai foundations, every institution is free to device its own fee structure subject to the limitation. But there can be no profiteering and no capitation fee can be charged directly or indirectly and any form or relevant in this regard.
ಫೀಸ್ ಸ್ಟ್ರಕ್ಚರ್ ಬಗ್ಗೆ ಸುಪ್ರೀಂ ಕೋರ್ಟ್ ತನ್ನ ಜಡ್ಜ್‌ಮೆಂಟ್‌ನಲ್ಲಿ ಏನು ಅಬ್ಸರ್ವ್ ಮಾಡಿದೆ ಅದನ್ನು ಇಂಪ್ಲಿಮೆಂಟ್ ಮಾಡಲು ನೀವು ಈ ಬಿಲ್‌ನಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ? ಆ ಬಗ್ಗೆ ಬಿಲ್‌ನಲ್ಲಿ ಏನೂ ತೋರಿಸಿಲ್ಲ. ಅವರು ಏನು ಹೇಳುತ್ತಾರೆಂದರೆ, A fee structure subject to the limitation that there can be no profiteering and no capitation fee can be charged directly or indirectly.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಒಬ್ಬ ಸ್ಟೂಡೆಂಟ್‌ಗೆ 3 ಲಕ್ಷದ 75 ಸಾವಿರ ರೂಪಾಯಿ ಖರ್ಚಾಗುತ್ತದೆ ಎಂದು ಗವರ್ನಮೆಂಟ್‌ನವರು ಹಿಂದೆಯೇ ಅದಕ್ಕೆ ಒಂದು ಅಫಿಡವಿಟ್ ಹಾಕಿದ್ದಾರೆ. ಆದ್ದರಿಂದ, ಹಿಂದೆಯೇ ಅಫಿಡವಿಟ್ ಹಾಕಿ ಅವರಿಗೆ ಏನೂ ಪ್ರಾಫಿಟ್ ಇಲ್ಲ ಎಂದು ಗವರ್ನಮೆಂಟ್‌ನವರೇ ತೋರಿಸಿ ಬಿಟ್ಟಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ : ಹಾಗಾಗಿ, ಈ ಬಿಲ್‌ನಲ್ಲಿ ಇದನ್ನು ಬದಲಾವಣೆ ಮಾಡಬೇಕು. ಕ್ಯಾಪಿಟೇಷನ್ ಫೀಸ್ ಬಗ್ಗೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟಿನಲ್ಲಿ ಪರ್ಟಿಕ್ಯುಲರ್ ಆಗಿ ಹೇಳಿದ್ದಾರೆ. capitation fee cannot be permitted to be charged and no fees can be permitted to be appropriated by payment of capitation fee. The profession has to be distinguised from business or mere occupation, while in business or mere occupation, while in business and to certain extent on occupation, therefore a profit motive profession is primarily a service to society, wherein, earning is secondary or incidental. A student who gets the professional degree by payment of capitation fee, once qualified as a professional is likely to aim at earning either than serving and that becomes the bane of the society.

ಇದು ಕ್ಯಾಪಿಟೇಶನ್ ಫೀಸ್ ಬಗ್ಗೆ ಸುಪ್ರೀಂ ಕೋರ್ಟ್‌ನ ಅಬ್ಸರ್ವೇಷನ್, ಆದರೆ ಇವತ್ತು ಯಾವುದೇ ಮೆಡಿಕಲ್ ಕಾಲೇಜಿನಲ್ಲಿ, ಪ್ರೈವೇಟ್

ಇನ್ಸ್‌ಟಿಟ್ಯೂಷನ್‌ಗಳಲ್ಲಿ ಕ್ಯಾಪಿಟೇಷನ್ ಫೀಸ್ ಎಂದು ಹೆಸರೇ ಹೇಳುವುದಿಲ್ಲ. ಆದರೆ ಅವರು ಎಷ್ಟು ಹಣ ತೆಗೆದುಕೊಳ್ಳುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. It is a open secret. ಇದನ್ನು ರೆಗ್ಯುಲೇಟ್ ಮಾಡಲು ಈ ಬಿಲ್‌ನಲ್ಲಿ ಏನಾದರೂ ಕ್ರಮ ತಂದಿರುವಿರಾ? ಏಕೆಂದರೆ, ನೀವು ತಂದಿರತಕ್ಕಂಥ ಬಿಲ್ ಶುಲ್ಕ ಮತ್ತು ಪ್ರವೇಶ ನಿಯಂತ್ರಣಕ್ಕೆ ಮಾತ್ರ. ಫೀಸ್‌ನ ವೇರಿಯೇಷನ್ ಪ್ರಶ್ನೆ ಬಿಡಿ. ಇದನ್ನು ರೆಗ್ಯುಲೇಟ್ ಮಾಡಲಿಕ್ಕೆ ನೀವು ಈ ಬಿಲ್‌ನಲ್ಲಿ ಏನು ಮಾಡಿದ್ದೀರಿ? ನೀವು ಏನನ್ನೂ ಮಾಡಿಲ್ಲ. ಬರೀ ಕಮಿಟಿಗೆ ಒಪ್ಪಿಸಿ ಬಿಟ್ಟಿದ್ದೀರಿ. ಇದರಿಂದ ಬಡಮಕ್ಕಳಿಗೆ ಏನಾದರೂ ಪ್ರಯೋಜನ ವಾಗುತ್ತದೆಯೇ? ಬಡವರ ಮಕ್ಕಳಿಗೆ ಈ ಬಿಲ್‌ನಿಂದ ಏನಾದರೂ ಪ್ರಯೋಜನವಾಗುತ್ತದೆಯೇ. ನೀವು ಇದನ್ನೆಲ್ಲಾ ಇದರಲ್ಲಿ ತರತಕ್ಕಂಥ ಅವಶ್ಯಕತೆಯೇ ಇರಲಿಲ್ಲ. ನಿಮಗೆ ಅಲ್ಲಿ ಇದ್ದದ್ದು ಒಂದೇ ಪಾಯಿಂಟ್. ಅದೇನೆಂದರೆ, 93ನೇ ಅಮೆಂಡ್‌ಮೆಂಟ್ ಪ್ರಕಾರ ಅನ್ ಏಡೆಡ್ ಇನ್ಸ್‌ಟಿಟ್ಯೂಷನ್‌ಗಳಲ್ಲಿ ರಿಸರ್ವೇಷನ್ ಇರಬೇಕು ಎನ್ನುವುದಷ್ಟೇ ಇದ್ದದ್ದು. not more than that. ಅದನ್ನು ಬಿಟ್ಟು, ಇದನ್ನೆಲ್ಲಾ ಏಕೆ ಇದರಲ್ಲಿ ಇಂಟ್ರೊಡ್ಯೂಸ್ ಮಾಡಿದಿರಿ? What is the intention? ನೀವು ಈ ಬಿಲ್ ತರುವುದರಿಂದ ಯಾರಿಗಾದರೂ ಸಹಾಯವಾಗುತ್ತದೆ ಎಂದು ನೀವು ನಿರೀಕ್ಷೆ ಮಾಡಿದ್ದರೆ, ಅದು ತಪ್ಪು. ಅದರಿಂದ ಯಾರಿಗೂ ಸಹಾಯವಾಗುವುದಿಲ್ಲ. ಬದಲಿಗೆ, ಪ್ರೈವೇಟ್ ಮೇನೇಜ್‌ಮೆಂಟ್‌ನವರಿಗೆ ಹೆಚ್ಚು ಅನುಕೂಲವಾಗುತ್ತದೆ. ಫೀಸ್ ಸ್ಟ್ರಕ್ಚರ್ ನಿಗದಿ ಮಾಡುವುದರಲ್ಲಿ ಇದರಿಂದ ಅವರಿಗೇ ಹೆಚ್ಚು ಅನುಕೂಲವಾಗುತ್ತದೆ. ಈ ಬಿಲ್‌ಅನ್ನು ಇಷ್ಟು ಕಾಂಪ್ಲಿಕೇಟ್ ಮಾಡುವುದರ ಬದಲಿಗೆ, ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಬೇಕಾಗಿತ್ತು. ಇದನ್ನು ಸರಿಯಾದ ರೀತಿಯಲ್ಲಿ ಡ್ರಾಫ್ಟ್ ಮಾಡಬೇಕಾಗಿತ್ತು. ಏಕೆಂದರೆ, ನಾಳೆಯ ದಿವಸ ಇದರಲ್ಲಿ ಇನ್ನೂ ಬದಲಾವಣೆಗಳಾಗುತ್ತವೆ. ನಿಮಗೇನಾದರೂ ಪ್ರಾಮಾಣಿಕ ಕಳಕಳಿ ಇದ್ದಿದ್ದರೆ, ಹೈಕೋರ್ಟ್ ಏನು ತೀರ್ಪು ಕೊಟ್ಟಿತ್ತು, ಅದರ ಮೇಲೆ ಸುಪ್ರೀಂ ಕೋರ್ಟಿಗೆ ಅಪೀಲ್ ಹೋಗಬೇಕಾಗಿತ್ತು. ಆಗ ಸುಮ್ಮನೆ ಇದ್ದುಬಿಟ್ಟಿರಿ, ಸುಪ್ರೀಂ ಕೋರ್ಟಿಗೆ ಅಪೀಲ್ ಹೋಗಲಿಲ್ಲ. ಏಕೆ ಸರ್ಕಾರ ಸುಪ್ರೀಂ ಕೋರ್ಟಿಗೆ ಅಪೀಲ್ ಹೋಗಲಿಲ್ಲ? ಹೈಕೋರ್ಟ್ ತೀರ್ಪಿನ ಮೇಲೆ ನೀವು ಏಕೆ ಸುಪ್ರೀಂ ಕೋರ್ಟಿಗೆ ಅಪೀಲ್ ಹೋಗಲಿಲ್ಲ? ಸುಪ್ರೀಂ ಕೋರ್ಟಿಗೆ ಅಪೀಲ್ ಹೋಗಿದ್ದರೆ ನಮಗೆ ಅನುಕೂಲವಾಗುತ್ತಿತ್ತು. ಈಗಲಾದರೂ ನೀವು ತಮಿಳುನಾಡು ಹೈಕೋರ್ಟಿನ

ಜಡ್ಜ್‌ಮೆಂಟ್ ಆಧಾರದ ಮೇಲೆ ಸುಪ್ರೀಂ ಕೋರ್ಟಿಗೆ ಹೋಗಬಹುದು. ಹೈಕೋರ್ಟ್ ತೀರ್ಪಿನ ಮೇಲೆ ಸುಪ್ರೀಂ ಕೋರ್ಟಿಗೆ ಏಕೆ ಅಪೀಲ್ ಹೋಗಲಿಲ್ಲ ಎನ್ನುವುದಕ್ಕೆ ಸರ್ಕಾರದವರು ಉತ್ತರ ಹೇಳಬೇಕಾಗುತ್ತದೆ. ಆದ್ದರಿಂದ, ನೀವು ದಯವಿಟ್ಟು ಈ ಬಿಲ್‌ಅನ್ನು ವಾಪಸ್ಸು ಪಡೆದು, ಇಷ್ಟೆಲ್ಲಾ ಕಾಂಪ್ಲಿಕೇಷನ್‌ಗೆ ಅವಕಾಶ ಮಾಡಿಕೊಡದೇ, ಕಾನ್ಸ್‌ಟಿಟ್ಯೂಷನಲ್ ಅಮೆಂಡ್‌ಮೆಂಟ್ ಪ್ರಕಾರ ಏನಿದೆ ಅದನ್ನು ತರಲಿಕ್ಕಾಗಿ ನೀವು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕೊಡಬೇಕು ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಧರ್ಮಸಿಂಗ್‌ರವರು, ಮಾನ್ಯ ಖರ್ಗೆಯವರು ಅದರಲ್ಲೂ ಮಾನ್ಯ ಮಾಧುಸ್ವಾಮಿಯವರು effiective ಆಗಿ ಈ ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಹಾಗೆಯೇ ಮಾನ್ಯ ಶ್ರೀರಾಮ್‌ರೆಡ್ಡಿಯವರು ಬಹಳ ವಿಷಯಗಳನ್ನೂ ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಾನು ಅವರೆಲ್ಲಾ ಮಾತನಾಡುವಾಗ ನೋಡುತ್ತಿದ್ದೆ. ಅನೇಕ ಸದಸ್ಯರು ಇದರ ಬಗ್ಗೆ ಅವರ ಅಭಿಪ್ರಾಯಗಳನ್ನು ವ್ಯಕ್ತಮಾಡುತ್ತಿದ್ದರು ಅದನ್ನಾದರು ನೋಡಿ ಸರ್ಕಾರದ ಕಡೆ ಇರುವ ಸದಸ್ಯರುಗಳೇ ಅಭಿಪ್ರಾಯಗಳನ್ನು ನೋಡಿ Joint Select Committee ಗೆ refer ಮಾಡಿ, ಸಮಯವನ್ನು ನಿಗದಿ ಮಾಡಿ, ಬೇಗ ತೀರ್ಮಾನವನ್ನು ತೆಗೆದುಕೊಳ್ಳುವುದಾದರೆ ನಾನು ಮಾತನಾಡುವುದಿಲ್ಲ. ಏಕೆಂದರೆ, ಅಲ್ಲಿ ಚರ್ಚೆ ಆಗಲಿ. ಇಲ್ಲದಿದ್ದರೆ, ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಈ Bill pass ಮಾಡಿದ ಮೇಲೆ ಆಗುವುದಿಲ್ಲ. ಇದರಲ್ಲಿ ಒಂದು ಭಾಗ ಮಾತ್ರ ಜಾರಿಗೆ ಕೊಡುವುದಕ್ಕೆ ಆಗುವುದು ಬಿಟ್ಟರೆ, ಹೆಚ್ಚಿನದೇನೂ ಜಾರಿಗೆ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಈಗ Private Management ನವರು ಇದನ್ನು ತೆಗೆದುಕೊಂಡು ಹೋಗಿ stay ತೆಗೆದುಕೊಂಡು ಬಂದು ಇದು ಯಾವುದು ಜಾರಿಗೆ ಕೊಡದಿರುವಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಅದಕ್ಕಿಂತ ಇದನ್ನು Joint Select Committee ಗೆ ಕೊಟ್ಟು ಇದರ ಬಗ್ಗೆ ಚರ್ಚೆಯನ್ನು ಮಾಡಿ ಅದರ ಪರಿಹಾರವನ್ನು ಕಂಡುಹಿಡಿಯಲಿಕ್ಕೆ ಸಾಧ್ಯವಾಗುತ್ತದೆ. ಸ್ವಲ್ಪ ಜೀವಂತ ಇರಲಿ. ನಾನು ಆಗ ಮಾತನಾಡುವಾಗ ಹೇಳಿದ್ದೇನೆ. C.E.T ಸಮಸ್ಯೆಗಳ ಬಗ್ಗೆ ಚರ್ಚೆಯಾಯಿತು. ಈಗ Medical Council ನವರು ಇದು ಕೇವಲ C.E.T. ಎಂದು ಹೇಳಿದರೆ, Dental Council ನವರು ಅದೇ ರೀತಿ ಕಳುಹಿಸಿದ್ದಾರೆಯೇ ಅಥವಾ Medical Council ನವರದ್ದು Dental Council ನವರಿಗೆ apply

ಆಗುತ್ತದೆಯೇ ಎಂಬುದು ಬೇಕಾಗುತ್ತದೆ. ತಾವು ಹೇಳಿದಿರಿ, ಕೇವಲ Medical Council . . . .

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರೇ, ...C.E.T. ಇದೆ, P.U.C. marks ಅನ್ನು ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಏನು ಸಮಸ್ಯೆ ಇದೆ? ತಮಿಳುನಾಡಿನಲ್ಲಿ ತೆಗೆದುಕೊಳ್ಳುತ್ತಿದ್ದಾರಲ್ಲಾ. ಅಂದರೆ ಆ ರಾಜ್ಯದಲ್ಲಿ ಏಕೆ ಒಂದು ಕಾನೂನು, ಈ ರಾಜ್ಯದಲ್ಲಿ ಒಂದು ಕಾನೂನು ಹೇಗೆ ಆಗುತ್ತದೆ? ಈ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಛೇರ್‌ಮನ್‌ರವರೇ, ತಮಿಳುನಾಡು, ತಮಿಳುನಾಡು ಎಂದು ಹೇಳುತ್ತಾರೆ. ತಮಿಳುನಾಡಿನಲ್ಲಿ Legislative Council ಅನ್ನು cancel ಮಾಡಿದ್ದಾರೆ. Karnataka ದಲ್ಲಿ cancel ಮಾಡಬೇಕೇ? That is not. The Council should remain. ತಮಿಳುನಾಡಿನಲ್ಲಿ M.L.C.ಯನ್ನು cancel ಮಾಡಿದ್ದಾರೆ. ಆ ರೀತಿ ಕರ್ನಾಟಕದಲ್ಲಿ ಮಾಡಬೇಕೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈ guidelines ಅನ್ನೊ ಕೂಡ Dental ಗೆ ನೀವು apply ಮಾಡಿದ್ದೀರಾ ಅಥವಾ Dental Council ನವರು guidelines ಅನ್ನು ಕಳುಹಿಸಿದ್ದಾರೆಯೇ ಎನ್ನುವುದು ಬೇಕಾಗುತ್ತದೆ. ಈಗ ನೀವು Medical ಮತ್ತು Dental ಗೆ ಅದನ್ನು apply ಮಾಡಿ, engineering ಗೆ apply ಮಾಡದಿದ್ದಾಗ, ಮಕ್ಕಳಿಗೆ ಇಲ್ಲಿ confusion start ಆಗುತ್ತದೆ. Engineering ನವರಿಗೆ ಮಾತ್ರ P.U.C. Marks, Medical, Dentalಗೆ, ನೀವು ಹೇಳಿದ ಪ್ರಕಾರ ಇದು Medical ಗೆ ಮಾತ್ರ. Dental ನವರನ್ನು ಮತ್ತು Engineering ನವರನ್ನು ಜೊತೆಗೆ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಅವರು Medical council ಗೆ ಬರುವುದಿಲ್ಲ. ಆಗ ಎಷ್ಟು confusions start ಆಗುತ್ತದೆ? ಅವರು P.U.C ಗೆ ಹೆಚ್ಚು concentration ಮಾಡುವುದೇ ಅಥವಾ C.E.T ಮೇಲೆ ಹೆಚ್ಚು concentration ಮಾಡುವುದೇ? ಏಕೆಂದರೆ, ಕೆಲವು ಮಕ್ಕಳು ಏನು ಮಾಡುತ್ತಾರೆಂದರೆ ಕೇವಲ Medical ಗೆ ಹೋಗಬೇಕೆಂದು C.E.T.ಗೆ concentration ಮಾಡುತ್ತಾರೆ. ಆ ಮೇಲೆ Medical seat ಇಲ್ಲ, Dental seat ಇಲ್ಲ, Engineering seat ಇಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದಕ್ಕೆ ಸರ್ಕಾರ ಜವಾಬ್ದಾರಿಯಾಗುತ್ತದೆ ಎನ್ನುವುದನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅಲ್ಲಿಂದ guidelines ಬಂದ ಕೂಡಲೇ, ನಾವು

Madras High Court ಬಗ್ಗೆ ಚರ್ಚೆ ಮಾಡಿದ್ದೆವು. May be it is not binding on the Karnataka High Court. But there is a precedent. ಅದನ್ನು ಇಲ್ಲಿ cite ಮಾಡಿಬಿಟ್ಟು . . .

SRI BASAVARAJA RAYAREDDY : It will open a channel.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದನ್ನು ಇಲ್ಲಿ CITE ಮಾಡಿಬಿಟ್ಟು, ನಮ್ಮ ಮಕ್ಕಳ ಭವಿಷ್ಯದ ಬಗ್ಗೆ ನಮ್ಮ ನ್ಯಾಯಾಧೀಶರುಗಳಿಗೆ ಕಾಳಜಿ ಇದೆಯೆಂದು ಅಂದುಕೊಂಡಿದ್ದೇನೆ. ಆದ್ದರಿಂದ, ಅವರು ಆ ತಡೆಯಾಜ್ಞೆಯನ್ನು ಕೊಟ್ಟಿದ್ದರೆ, ಸರಿಯಾಗುತ್ತಿತ್ತು. ಇವತ್ತು It is not too late. Government should act. ದಯವಿಟ್ಟು, ನ್ಯಾಯಾಲಯಕ್ಕೆ ಮೊರೆ ಹೋಗಿ ಆದೇಶವನ್ನು ತೆಗೆದುಕೊಂಡು ಬನ್ನಿ. ಎಲ್ಲರೂ ಹೇಳಿದರು. ಒಂದು ಕಡೆಯಲ್ಲಿ ಗ್ರಾಮೀಣ ಪ್ರದೇಶದ್ದು, ಅಲ್ಲಿ ಬಡವರು, ಶ್ರೀಮಂತರು ಎನ್ನುವ ಪ್ರಶ್ನೆ ಬರುವುದಿಲ್ಲ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಈ C.E.T. ಬಗ್ಗೆ ತರಬೇತಿ ಇಲ್ಲದಿದ್ದಾಗ, ಅಥವಾ Medical ಗೆ ಹೋಗಬೇಕೆಂದು ಇದ್ದವರು P.U.C ಬಗ್ಗೆ ಆಲೋಚನೆಯನ್ನು ಮಾಡದಿದ್ದರೆ, ಬಹಳ ತೊಂದರೆಗೀಡಾಗುತ್ತಾರೆ. ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಈಗ ತಾವೇನು ಈ Bill ಅನ್ನು ತರಲಿಕ್ಕೆ ಪ್ರಯತ್ನ ಮಾಡಿದ್ದೀರಿ, INAMDAR VS. STATE OF MAHARASHTRA ಇದರಲ್ಲಿ ಏನು ಹೇಳುತ್ತಾರೆಂದರೆ,

> "It is for the Central or for the State Government in the absence of the central legislation to come out with a detailed well thought out legislation on the subject."

But, I don't think this is a detailed well - thought out legislation. ನೀವೇನು ತಂದಿದ್ದೀರಿ, ಇದನ್ನು ಜಾಸ್ತಿ, ಏಕೆಂದರೆ Central Legislation ನ draft Bill ನ ಒಂದು copy ಯನ್ನು ಕಳುಹಿಸಿಕೊಟ್ಟಿದ್ದಾರೆ. ಅದರಲ್ಲಿ ಒಂದೇ ಒಂದು committee ಅನ್ನು ಮಾಡಬೇಕೆಂದಿದೆ. ತಾವು ಇದನ್ನು ನೋಡಿ. ಅದರಲ್ಲಿ ಮೂರು committee ಇಲ್ಲ. ಇದರಲ್ಲಿ ಸಹ ನೀವು ಒಂದೇ committee ಯನ್ನು ತರಬಹುದಾಗಿತ್ತು. ನೀವು ಒಂದು C.E.T.ಗೆ, C.E.T. Special Officer ರವರನ್ನು Election Dutyಗೆ ಹೋಗಿ

ಎಂದು ಕಳುಹಿಸಿದ್ದಾರೆಂದು Paper ನಲ್ಲಿ ಬಂದಿದೆ. ಅದಕ್ಕೇನು ತೀರ್ಮಾನವನ್ನು ತೆಗೆದುಕೊಳ್ಳುತ್ತೀರೆಂದು confusion ಒಂದು ಕಡೆಯಲ್ಲಿ ಇದೆ. ಈ ಹಿಂದೆ ಯಾರಿದ್ದಾರೆ ಅವರನ್ನು ಪ್ರಾಯಶಃ ಒಂದು ವೇಳೆ ಅದನ್ನು cancel ಮಾಡಿಸಬೇಕು, ಇಲ್ಲದಿದ್ದರೆ ಈ ಹಿಂದೆ Special Officer ಆಗಿ ಯಾರು work ಮಾಡಿದ್ದಾರೆ, ಅವರನ್ನು ತಂದು ಇದನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡಬೇಕು. ಇಲ್ಲದಿದ್ದರೆ ಮತ್ತೂ ಇಲ್ಲಿ ತೊಂಧರೆಯಾಗುತ್ತದೆ. ಈಗಲೇ C.E.T ಬಗ್ಗೆ confusions ಇದೆ. ನಾನು ನಿನ್ನೆ ಹೇಳಿದ್ದೆ. ನಿನ್ನೆ Bill ಏನು pass ಮಾಡಿದ್ದೇವೆ, ಅದು pass ಮಾಡಿದ ಮೇಲೆ ಇದರ ಅಗತ್ಯವಿಲ್ಲವೆಂದು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ, ಎಲ್ಲದನ್ನೂ ಕಾಲೇಜುನವರಿಗೆ autonomy ಕೊಟ್ಟಮೇಲೆ ನಿಮಗೆ ಅವರ ಮೇಲೆ ಹಿಡಿತ ಏನಿದೆ ಎನ್ನುವುದನ್ನು ತಾವು explain ಮಾಡಬೇಕಾಗುತ್ತದೆ. ಈ Courtಗಳ ಸಮಸ್ಯೆಯನ್ನು ಹೇಳುತ್ತೇನೆ. ಹಿಂದೆ ಉನ್ನಿಕೃಷ್ಣನ್ case ನಲ್ಲಿ ಒಂದು ತರಹ ಇತ್ತು. ಅದು ಅನೇಕ ವರ್ಷಗಳ ವರೆಗೆ ನಡೆದುಕೊಂಡು ಬಂತು. ಅದರಲ್ಲೇನೂ confusion ಇರಲಿಲ್ಲ. ನಂತರ 10 years ನಡೆದುಕೊಂಡು ಬಂತು. ಒಳ್ಳೆಯ ರೀತಿಯಲ್ಲಿ C. E.T. ಆಯಿತು. ನಡೆದುಕೊಂಡು ಬಂತು. ನಂತರ T.M.A.Pai caseನಲ್ಲಿ ಒಂದು observation ನಿಂದಾಗಿ the whole confusions started ಅದರ ನಂತರ ಪುನಃ Islamic Academy ಯವರದ್ದು, ಅದರಲ್ಲಿ ಒಂದು ಭಾಗವನ್ನು ಬಿಟ್ಟರೆ ಉಳಿದ ಬಗ್ಗೆ consider ಮಾಡಬಹುದಿತ್ತು. ಆದರೆ ನಾವು ಆಲೋಚನೆ ಮಾಡುವುದು ಯಾವಾಗ ಈ C.E.T. ಬಗ್ಗೆ, ಪ್ರತೀ ವರ್ಷ C.E.T. ಹತ್ತಿರ ಬಂದಾಗ ಇದರ ಬಗ್ಗೆ ಆಲೋಚನೆ ಮಾಡುವುದು, ಪರಿಹಾರ ಕಂಡುಹಿಡಿಯಲಿಕ್ಕೆ ಪ್ರಯತ್ನ ಮಾಡುವುದು. ಹಾಗಾದರೆ, ಪ್ರಾರಂಭದಲ್ಲಿ ಇದರ ಬಗ್ಗೆ ಆಲೋಚನೆಯನ್ನು ಮಾಡಿದ್ದರೆ, ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುತ್ತಿತ್ತು ಎನ್ನುವುದನ್ನು ನೀವು ಆಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ಮಕ್ಕಳ ಸಮಸ್ಯೆಗೆ ನೇರವಾಗಿ ಸರ್ಕಾರಗಳು ಹೊಣೆಯಾಗುತ್ತವೆ. ಅದನ್ನು ತಾವು ಹೇಳಬೇಕಾಗುತ್ತದೆ. ಆದರೆ ಒಂದು court ನಲ್ಲಿ S.C./S.T. ಮತ್ತು Minority ಯವರ reservation ಬಗ್ಗೆ ಪ್ರಾಯಶಃ ಅದು ಒಂದು ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ನಾವು ಈ Billನಲ್ಲಿ ಒಪ್ಪಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದು ಬಿಟ್ಟರೆ ಉಳಿದದ್ದೆಲ್ಲಾ ಏನನ್ನು ಮಾಡಿದ್ದೀರಿ?

ಒಂದರಲ್ಲಿ ಮೂರು Committee ಗಳನ್ನು ಮಾಡಿದ್ದೀರಿ. ಮೂರು Committee ಗಳಲ್ಲಿ ರಾಜ್ಯ ಸರ್ಕಾರದ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಅಥವಾ, ಅಲ್ಲಿ ಪುನಃ 'ಅಥವಾ' ಇದ್ದರೆ, ನಾಳೆ ಅದರಲ್ಲಿ influence ಯಾರು ಬರುವುದು ಯಾರು ಬಿಡುವುದು ಎನ್ನುವ ಗಲಾಟೆ ಪ್ರಾರಂಭವಾಗುತ್ತದೆ. ಆಮೇಲೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು, ಅವರು ಹೇಳಿದಂಥ ಸದಸ್ಯರುಗಳು, ಈ ಅಧಿಕಾರ ಏಕೆ ಸರ್ಕಾರಕ್ಕೆ ಬೇಡ ಅಂದರೆ ಅಲ್ಲಿ ಯಾರು ಇದನ್ನು draft ಮಾಡಲಿಕ್ಕೆ ನಿಮಗೆ ಆಲೋಚನೆಯನ್ನು ಕೊಟ್ಟಿದ್ದಾರೆ, ಅವರ ಹಿಡಿತಕ್ಕೆ ಇದನ್ನು ಕೊಟ್ಟುಬಿಟ್ಟರೆ, ನ್ಯಾಯಾಧೀಶರವರ ಸದಸ್ಯರುಗಳೇ advice ಅನ್ನು ಮಾಡುತ್ತಾರೆ. ನಿಮ್ಮ ಕೈಗೆ ಬರುವುದಿಲ್ಲ ಮತ್ತು ಈ 10 ಲಕ್ಷ ರೂಪಾಯಿಗಳ ಜುಲ್ಮಾನೆ, ಇದನ್ನು ನೀವು ವಸೂಲಿ ಮಾಡಲಿಕ್ಕೆ ಆಗುತ್ತದೆಯೇ? ಸಾಧ್ಯವಿದೆಯೇ? ಈ Bill ನೇರವಾಗಿ Court ನಲ್ಲಿ ಹೋಗಿ stay ಆಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಕ್ಟ್‌ನಲ್ಲಿಯೇ ಇದೆ. ಕೇಂದ್ರ ಸರ್ಕಾರದ್ದು ನೋಡಿ. Committee shall be presided by a person who has been a Vice Chancellor in Central University or State University or Institution deemed to be University and shall include two other members ಎಂದು ಅವರು ತರುತ್ತಿರುವ Bill ನಲ್ಲಿಯೇ Officers ಗೆ Vice Chancellor ಗೆ limit ಮಾಡಿದ್ದಾರೆ. Judge ಅನ್ನು appellate ಆಗಿ ಇನ್ನೊಂದು Committee ಮಾಡುತ್ತೀರಲ್ಲಾ ಅಲ್ಲಿಗೆ ನೀವು Judge ಅನ್ನು ತನ್ನಿ ಎಂದು ಹೇಳಿದ್ದಾರೆ. ನೀವು ಒಂದೇ ಸಲಕ್ಕೆ ಇಲ್ಲಿ Retired High Court Judge ಅನ್ನು ನೀವು Committeeಗೆ ತಂದು ಕೂರಿಸಿಬಿಟ್ಟರೆ Appeal ಏನಾದರೂ ಹೋಗಬೇಕಾದರೆ ಪುನಃ ನೀವು High Court ಗೇ ಹೋಗಬೇಕಾಗುತ್ತದೆ. ಇನ್ನೊಂದು Committee constitute ಮಾಡುವುದಕ್ಕಾಗುವುದಿಲ್ಲ. ಸ್ವಲ್ಪ ಯೋಚನೆ ಮಾಡಿ. Why Judge has to head a Committee? ನಿಮ್ಮ Vice Chancellor ರವರೇ head ಆಗಲಿ. ಇಲ್ಲದಿದ್ದರೆ Retired Officers ಅನ್ನು ಹಾಕಿ.

ಶ್ರೀ ಎಂ.ಬಿ. ಪಾಟೀಲ್ : ಮಾನ್ಯ ಮಾಧುಸ್ವಾಮಿಯವರೇ, ಅಲ್ಲಿ ಒಂದೇ committee ಇದೆ. But Appellate Authority ಇದೆ. Here it is missing.

ಶ್ರೀ ಜೆ.ಸಿ. ಮಾಧುಸ್ವಾಮಿ : ಪ್ರಾವಿಷನ್ ಮಾಡಿದ್ದಾರೆ. That authority is headed by a Judge naturally. ಇಲ್ಲಿ ನೀವು ಒಂದೇ ಸಲಕ್ಕೆ Judge ಅನ್ನು ಏಕೆ Head ಮಾಡುತ್ತಿದ್ದೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ M.C.I. ನವರು guidelines ಕೊಟ್ಟಿದ್ದು Whether it is binding on the State Government ಎನ್ನುವುದರ ಬಗ್ಗೆ ಚರ್ಚೆಯಾಯಿತು. ತಾವು ಹೇಳಿ, if it is binding, or not. M.C.I ನವರು ಈವರೆಗೆ Permission Medical Collegeಗೆ, dental collegeಗೆ ಒಂದು ಸದನ ಸಮಿತಿ ಅದನ್ನು ಹೋಗಿ . . . .

ಶ್ರೀ ಬಸವರಾಜ ರಾಯರೆಡ್ಡಿ : ಆಯಾಯ Medical Collegeಗೆ ಏನೇನು facility ಇರಬೇಕು? ಹೇಗೇಗೆ ಇರಬೇಕೆನ್ನುವ ಸಲುವಾಗಿ ಇದೆಯೇ ಹೊರತು, ನಿಮ್ಮ C.E.T. ಯನ್ನು ಮಾಡುವುದಕ್ಕಲ್ಲ. Infrastucture ಬಗ್ಗೆ.

SRI J.C. MADHUSWAMY : Infrastructure ನೋಡಿ seat ನಿಗದಿ ಮಾಡುವುದಷ್ಟೇ M.C.Iನ ಕೆಲಸ. They cannot come into picture in admission.

SRI K. JAYA PRAKASH HEGDE : I will go a step ಮಾಧುಸ್ವಾಮಿಯವರೆ. ಅವರು ಏನು inspection ಅನ್ನು ಮಾಡಿ permission ಏನು ಕೊಟ್ಟಿದ್ದಾರೆ, ನಮ್ಮ ಸದನ ಸಮಿತಿ ಆ ಕಾಲೇಜುಗಳನ್ನು ಭೇಟಿ ಮಾಡಬೇಕಾಗುತ್ತದೆ. Visit ಮಾಡಬೇಕು. ಯಾವ ರೀತಿಯ ಕಾಲೇಜುಗಳಿಗೆ ಇವರು permission ಅನ್ನು ಕೊಟ್ಟಿದ್ದಾರೆನ್ನುವುದನ್ನು ನೋಡೋಣ. ಇವರು permission ಕೊಟ್ಟ ಎಲ್ಲಾ ಕಾಲೇಜುಗಳಲ್ಲಿ ಒಳ್ಳೆಯ facilities ಇದೆಯಾ?

SRI J.C. MADHUSWAMY : Bangalore Medical College ಗೆ ಕೊಡುವ ಹಾಗಿಲ್ಲ. ನಾನು ಇಲ್ಲಿಯೇ challenge ಮಾಡುತ್ತೇನೆ. Bangalore Medical College cannot be given affiliation or permission from M.C.I. under their norms. Cardiology unit ಇದೆಯೇ? Nephrology unit ಇದೆಯಾ? Docters ಇದ್ದಾರೆಯೇ? Mysore Medical Collegeಗೆ affiliation ಕೊಡುವುದಕ್ಕೆ M.C.I.ಒಪ್ಪುವುದಕ್ಕೆ ಆಗುತ್ತದೆಯೇ? ಹಾಗಾದರೆ

ಎಲ್ಲಾ ರದ್ದು ಮಾಡಿಬಿಡಿ. ಇವತ್ತು 60 posts ಖಾಲಿ ಇದೆ. M.C.I. ಹೇಗೆ ಒಪ್ಪುತ್ತದೆ? ಇದೆಲ್ಲಾ ಕಥೆ ಹೇಳುವುದಕ್ಕೆ ನಾವು ಮಾಡಿರುವುದು.

ಶ್ರೀ ಎಸ್. ರಾಜೇಂದ್ರನ್ : ಇನ್‌ಫ್ರಾಸ್ಟ್ರಕ್ಚರ್‌ಗಳಿಲ್ಲ, ಪರ್ಮಿಷನ್ ಕೊಟ್ಟಿದ್ದಾರೆ. ಅವರ ಮೇಲೆ ಯಾರೂ ಕ್ರಮ ತೆಗೆದುಕೊಳ್ಳುವುದಿಲ್ಲವೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದಕ್ಕೋಸ್ಕರವೇ ಸದನ ಸಮಿತಿ ಹೋಗಿ ಇದನ್ನೆಲ್ಲಾ ಕಂಡುಬರೋಣ. ಯಾವ ರೀತಿ ಕಾಲೇಜ್‌ಗಳಿಗೆ ಇವರು ಪರ್ಮಿಷನ್ ಕೊಟ್ಟಿದ್ದಾರೆಂದು ನೋಡಿ ಬರೋಣ. ಸಂಬಂಧವೇ ಇಲ್ಲ. ನೀವೇಕೆ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತೀರಿ? ಈ ಹೊಸ ಮೆಡಿಕಲ್ ಕಾಲೇಜುಗಳನ್ನೂ ಪ್ರಾರಂಭಿಸುವ ಬಗ್ಗೆ .... ನಾನು ಮಾನ್ಯ ಧರ್ಮಸಿಂಗ್‌ರವರಿಗೆ ಅಭಿನಂದನೆಯನ್ನು ಸಲ್ಲಿಸಿದ್ದೇನೆ. ನನ್ನದು ಇವತ್ತಿಗೂ ಪ್ರಶ್ನೆ, 6 ಮೆಡಿಕಲ್ ಕಾಲೇಜ್‌ಗಳನ್ನು ತೆರೆಯಲಿಕ್ಕೆ ನಿಮಗೆ ಸಾಧ್ಯವಿದೆಯೇ? ನಿಮ್ಮ ಹತ್ತಿರ ಅಷ್ಟು ಪ್ರೊಫೆಸರ್ಸ್ ಇದ್ದಾರೆಯೇ? ಪುನಃ ರಿಟೈರ್ಡ್ ಆದವರನ್ನು, ಮನೆಯಲ್ಲಿ ಕುಳಿತವರನ್ನು ಹುಡುಕಿಕೊಂಡು ಬಂದರೂ ಸಹ ಸಿಗುವುದಿಲ್ಲ. ಏಕೆಂದರೆ, ಅವರೆಲ್ಲಾ ಪ್ರೈವೇಟ್ ಮೆಡಿಕಲ್ ಕಾಲೇಜ್‌ಗೆ ಸೇರಿಯಾಗಿದೆ. They are getting fat salaries.

ಅವರ್‍ಯಾರೂ ನಿಮ್ಮ ಗೌರ್ನಮೆಂಟ್ ಸ್ಯಾಲರಿಗೆ ಬರುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಸ್ಟಾರ್ಟ್ ಮಾಡುವುದಕ್ಕೇ ಆಗಲಿಲ್ಲವಲ್ಲಾ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಆಗಲಿಲ್ಲ. ನಾನು ಕಳೆದ ವಿಧಾನ ಸಭೆಯಲ್ಲಿ ಇದರ ಬಗ್ಗೆಯೇ ಚರ್ಚೆ ಮಾಡಿದ್ದೇನೆ.

ಶ್ರೀ ಬಸವರಾಜರಾಯರೆಡ್ಡಿ : ಬಡ್ಜೆಟ್‌ನಲ್ಲಿ ಹಣ ಇಡುವುದಿಲ್ಲ . . . .

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಸಿದ್ದರಾಮ್‌ಯ್ಯನವರು ಬಡ್ಜೆಟ್ ಅನ್ನು ಮಂಡನೆಯನ್ನು ಮಾಡಿದಾಗ, ನಾನು ಚರ್ಚೆಯನ್ನು ಮಾಡಿದ್ದೆ. ನಿಮಗೆ ಮೆಡಿಕಲ್ ಕಾಲೇಜ್ ಅನ್ನು ಸ್ಟಾರ್ಟ್ ಮಾಡಲಿಕ್ಕೆ ಸಾಧ್ಯವೇ ಇಲ್ಲವೆಂದು ಹೇಳಿದ್ದೆ. ನಿಮಗೆ ಪ್ರೊಫೆಸರ್ಸ್ ಸಿಗುವುದಿಲ್ಲ, ಟ್ರೇನ್ಡ್ ಸ್ಟಾಫ್ ಸಿಕ್ಕುವುದಿಲ್ಲ, ನೀವು ಹೇಗೆ ಮಾಡುತ್ತೀರಿ? ಅದಕ್ಕಿಂತ ಈಗ ಮೊನ್ನೆ ಬೆಂಗಳೂರು ಮೆಡಿಕಲ್ ಕಾಲೇಜ್‌ನಲ್ಲಿ ಅವರು ಹಳೆಯ ವಿದ್ಯಾರ್ಥಿಗಳೆಲ್ಲಾ ಸೇರಿಕೊಂಡು ದುಡ್ಡು ಸಂಗ್ರಹಮಾಡಿ ವಿದೇಶದಲ್ಲಿದ್ದವರೆಲ್ಲಾ ಬಂದು ಕಾಲೇಜು ಅಭಿವೃದ್ಧಿಗೆ ಹಣವನ್ನು ಸಂಗ್ರಹ ಮಾಡಿ ಅಭಿವೃದ್ಧಿಯನ್ನು ಮಾಡಿದ್ದಾರೆ. ಅಂಥ ಕೆಲಸವನ್ನು ನೀವು ಮಾಡಿ. ಸೀಟ್ಸ್ ಜಾಸ್ತಿ ಕೇಳಿ. ಅದನ್ನು ತಕ್ಷಣ ಮಾಡಬೇಕಾದದ್ದು ಬಿಟ್ಟು,

ಹೊಸ ಕಾಲೇಜ್‌ಗಳ ಬಗ್ಗೆ ಇಮ್ಮೀಡಿಯಟ್ ಥಿಂಕಿಂಗ್ ಅಲ್ಲ. ತಕ್ಷಣದ ಆಲೋಚನೆ . . . .

ಶ್ರೀ ಶಿವಾನಂದ ಎಸ್. ಪಾಟೀಲ್ : ಪ್ರೈವೇಟ್ ಮೆಡಿಕಲ್ ಕಾಲೇಜ್ ಜೊತೆ ಕಾಂಪೀಟ್ ಮಾಡುವುದಕ್ಕೆ ಗೌರ್ನಮೆಂಟ್ ಮೆಡಿಕಲ್ ಕಾಲೇಜ್‌ನಲ್ಲಿ ಎನ್. ಆರ್. ಐ. ಕೋಟಾವನ್ನು ನೀವು ಇಂಟ್ರಡ್ಯೂಸ್ ಮಾಡುತ್ತೀರಾ? This suggestion was there.

SRI J.C. MADHUSWAMY : It is there.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾಡಿ ಎಂದು ನಾವು ನಿಮಗೆ ಹೇಳಿದೆವು.

SRI J.C. MADHUSWAMY : Ten percent seats in newly started Government colleges are reserved for N.R.Is. ಮಾಡಿಯಾಗಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಅವರು ಮಾಡುತ್ತಿಲ್ಲವಲ್ಲಾ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಬಟ್, ಸ್ಟಾರ್ಟ್ ಮಾಡಲಿಕ್ಕೆ ಆಗುತ್ತಿಲ್ಲವಲ್ಲಾ.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ : ಎಗ್ಸಿಸ್ಟಿಂಗ್ ಕಾಲೇಜ್‌ಗಳಿಗೆ ಕೊಡಬಹುದಲ್ಲವೇ? ಎಗ್ಸಿಸ್ಟಿಂಗ್ ಗೌರ್ನಮೆಂಟ್ ಮೆಡಿಕಲ್ ಕಾಲೇಜ್‌ಗೆ ಎನ್. ಆರ್. ಐ. ಕೋಟಾ ಕೊಡಬಹುದಲ್ಲವೇ?

ಛೇರ್ಮನ್ : ಜಯಪ್ರಕಾಶ್ ಹೆಗ್ಡೆಯವರೇ ಹೇಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದಕ್ಕೋಸ್ಕರ, ನೀವು ಹೊಸ ಮೆಡಿಕಲ್ ಕಾಲೇಜ್‌ಗಳನ್ನು ಪ್ರಾರಂಭವನ್ನು ಮಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದು ಎಣಿಸಿದ್ದರೆ, ಅದು ಇನ್ನೂ ಕೆಲವು ವರ್ಷಗಳವರೆಗೆ ನಿಮಗೆ ಸಾಧ್ಯವಾಗುವುದಿಲ್ಲ. ಈ ಒಂದು ಬಿಲ್ ಯಾವುದಿದೆ, ಸೆಂಟ್ರಲ್ ಲೆಜಿಸ್ಲೇಷನ್ ಬಿಲ್ ಯಾವುದಿದೆ. ಅದರ ಬಗ್ಗೆ ನಾವು ಆಲೋಚನೆ ಮಾಡಬೇಕಾಗುತ್ತದೆ ಇನ್ನೊಂದು ಲೆಜಿಸ್ಲೇಷನ್ ಅನ್ನು ನೀವು ತಂದು ಅಲ್ಲಿ ಕೋರ್ಟ್‌ನಲ್ಲಿ ಅವರು ಹೋಗಿ ತಡೆಯಾಜ್ಞೆಯನ್ನು ತೆಗೆದುಕೊಂಡರೆ, ಅವರ ಹತ್ತಿರ ಛೀಮಾರಿ ಹಾಕಿಸಿಕೊಂಡು ಬರುವುದು ಬೇಡ. ಏಕೆಂದರೆ, ಕಳೆದ ಬಾರಿ ನಾವಿಲ್ಲಿ ಒಂದು ರಿಸಲ್ಯೂಷನ್ ಅನ್ನು ಪಾಸ್ ಮಾಡಿ ಕಳುಹಿಸಿದ್ದೇವೆ. ಆಗ ಬಹಳ ಚರ್ಚೆಯನ್ನು ಮಾಡಿ ನಾವು ವಿರೋಧವನ್ನು ಮಾಡಿದ್ದೆವು. 50:50 ರೈಟ್. 50 ಪರ್ಸೆಂಟ್ ಪಿಯುಸಿ, 50 ಪರ್ಸೆಂಟ್ ಸಿಇಟಿ. ಅದಕ್ಕೆ ಮಿಕ್ಕಿ ನೀವು ಹೋಗಲೇಬಾರದೆಂದು ನಾನು ಸರ್ಕಾರಕ್ಕೆ ಒತ್ತಾಯವನ್ನು ತರುತ್ತೇನೆ.

ದಯವಿಟ್ಟು, ಈ ಬಿಲ್ ಅನ್ನು As it is ಪಾಸ್ ಮಾಡುವುದಕ್ಕೆ ನಮ್ಮ ಒಪ್ಪಿಗೆ ಇಲ್ಲವೆಂದು ಮಾನ್ಯ ಅಧ್ಯಕ್ಷರ ಮೂಲಕ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಬಿ. ಪಾಟೀಲ್ (ತಿಕೋಟ) : ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಸರ್ಕಾರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ ವಿಧೇಯಕ, 2006 ಅನ್ನು ಇಲ್ಲಿಯ ಸುಪ್ರೀಂಕೋರ್ಟ್‌ನ ಪಿ.ಎ. ಇನಾಂದಾರ್ ವರ್ಚಸ್ ಸ್ಟೇಟ್ ಆಫ್ ಮಹಾರಾಷ್ಟ್ರ ಇದರ ಒಂದು ಪ್ಯಾರಾಗ್ರಾಫ್ 155 ಮುಖಾಂತರ ಈ ಒಂದು ಲೆಜಿಸ್ಲೇಷನ್ ಅನ್ನು ಇವತ್ತಿನ ದಿವಸ ಕೇಂದ್ರದಲ್ಲೂ ಕೂಡ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಆಗಿ ರಿಸರ್ವೇಷನ್ ಬಗ್ಗೆ ಅಲ್ಲಿ ಹೇಳಿ, ಇವತ್ತಿನ ದಿವಸ ಆ ತರಹ 155 ಪಿ.ಎ. ಇನಾಂದಾರ್ ಕೇಸ್ ಏನು ಹೇಳುತ್ತದೆ.

> "It is for the Central Government or for the State Governments, in the absence of a Central Legislation to come out with a detailed well thought out legislation on the subject such a legislation is long awaited. The States must act towards this direction. The Judicial wing of the State is called upon to act when the other two wings, the Legislature and the Executive do not act. The earlier the Union of India and the State Governments act the better it would be. The committees regulating admission procedure and fee structure shall continue to exist. But, only as a temporary measure, and an inevitable passing phase until the Central Government or the State Governments are able to device a suitable mechanism and to appoint a competent authority in consonance with the observations made above.

So, these two committees what you are thinking is the direction of the supreme court.
ಇಸ್ಲಾಮಿಕ್ ಅಕಾಡೆಮಿಯಾಗಲಿ, this is a temporary measure. Unless and until this Government makes an Act.

ಈಗ ತಾವು ಉದಾಹರಣೆಗೆ ಸೆಂಟ್ರಲ್ ಲೆಜಿಸ್ಲೇಷನ್ ತೆಗೆದುಕೊಳ್ಳಿ. Central Legislation ದಿನಾಂಕ 28 ಜುಲೈ 2005, Draft Central Legislation to govern admission and fee structure in private professional institutions being circulated for seeking views of the stake holders-regarding. This is ofcourse pre Inamdar Judgment. ಇಸ್ಲಾಮಿಕ್ ಜಡ್ಜ್‌ಮೆಂಟ್ ಬಂದ ಮೇಲೆ ಮಾಡಿದ್ದು. ಅಲ್ಲೇನು ಹೇಳುತ್ತದೆ,

> "The draft bill which interalia deals with the eligibility, allocation of the seats, manner of admission, reservation of seats, which is being circulated to invite your views, comments and suggestions this draft has not been legally vetted. It will be finalized after receiving comments, views, suggestions from the stake holders."

ಅವರು 15 ಡೇಸ್ ಟೈಂ ಕೊಡುತ್ತಾರೆ. This has been circulated to all State Governments and all Institutions also.

ಎಲ್ಲಾ ಸ್ಟಾಕ್ ಹೋಲ್ಡರ್ಸ್ ಅನ್ನು ಇನ್‌ವಾಲ್ವ್ ಮಾಡಿಕೊಂಡು ಇವತ್ತಿನ ದಿವಸ ಮಾಡುತ್ತಿದ್ದಾರೆ. ಅಲ್ಲೇನು ಮಾಡುತ್ತಿದ್ದಾರೆ, ಟೆಂಪೊರರಿ ಮೆಷರ್ ಎಂದೇನು ಹೇಳಿದೆ, ಪ್ಯಾರಾ 155ನಲ್ಲೇನು ಇನಾಂದಾರ್ ಕೇಸ್‌ನಲ್ಲಿ ಮಾಡುತ್ತಾರೆ, ಅಲ್ಲಿಯೂ ಕೂಡ ಎತ್ತಿದಂಥ ವಿಷಯವನ್ನು ನೋಡಬೇಕಾಗುತ್ತದೆ. ಅಡ್ಮಿಷನ್ ಮತ್ತು ಫೀ ರೆಗ್ಯುಲೇಟರಿ ಕಮಿಟಿಗೆ ಅಲ್ಲಿ ಒಂದೇ ಒಂದು ಕಮಿಟಿ ಇದೆ. ಇಲ್ಲಿ ತರಹ, ಓವರ್‌ಸೀಯಿಂಗ್ ಫಾರ್ ಅಡ್ಮಿಷನ್, ಫೀ ಫಿಕ್ಸೇಷನ್‌ಗೆ ಒಂದು ಕಮಿಟಿ ಎಂದು ಅಲ್ಲಿ ಎರಡು ಇಲ್ಲ. ಅಲ್ಲಿ ಒಬ್ಬ ವೈಸ್-ಛಾನ್ಸಲರ್ ಹೆಡ್ ಮಾಡಿದಂಥ ಕಮಿಟಿಯಲ್ಲಿ plus two other members having experience in matters of finance and administration. ಎಂದಿದೆ. ನಾನು ಸ್ವಲ್ಪ ಸಚಿವರ ಗಮನವನ್ನು ಸೆಳೆಯುತ್ತೇನೆ. ನಿನ್ನೆ ತಾವು ಡೀಮ್ಡ್ ಯೂನಿವರ್ಸಿಟಿ ಬಗ್ಗೆ ಮಾತನಾಡುತ್ತಿದ್ದೀರಿ. ಇವತ್ತು ತಾವು ಸೆಂಟ್ರಲ್

ಲೆಜಿಸ್ಲೇಷನ್ ನೋಡಿ. ರಿಸರ್ವೇಷನ್ ಸೀಟ್ ಬಗ್ಗೆ, ಅಡ್ಮಿಷನ್ ಬಗ್ಗೆ ಹೇಳುತ್ತದೆ. Even deemed universities are covered here.

> A Deemed to be University shall reserve 50% of the sancioned intake of each constituent unit for students from the state in which the constituent unit is located.

That means that even the deemed Universities are coverd here. Not only for State students, it also reserves seats for sanctioned intake for scheduled caste, Scheduled Tribes and other wherever applicable to socially and educationally backward classes and other economically weaker sections of the society.

ಈ ಡ್ರಾಫ್ಟ್ ಬಿಲ್ ಏನು ಮಾಡಿದ್ದಾರೆ, ಇದನ್ನು ಸ್ಟಾಕ್ ಹೋಲ್ಡರ್ಸ್‌ಗೆ ಸರ್ಕ್ಯುಲೇಟ್ ಮಾಡಿದ್ದಾರೆ.

This is called a well thought out legislation.

ಇಲ್ಲಿ ತಾವು ತಪ್ಪು ಅರ್ಥ ಮಾಡಿಕೊಳ್ಳಬಾರದು. ಮುಖ್ಯಮಂತ್ರಿಗಳು ಒಂದು ಸಲ ಎಲ್ಲಾ ಮ್ಯಾನೇಜ್‌ಮೆಂಟ್ಸ್‌ನ ಮೀಟಿಂಗ್ ಅನ್ನು ಕರೆದರು. ನಾನು ಇವತ್ತಿನ ದಿವಸ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಸರ್ಕಾರದ ಹಿತದೃಷ್ಟಿಯಿಂದ ಮತ್ತು ಮ್ಯಾನೇಜ್‌ಮೆಂಟ್ ಹಿತದೃಷ್ಟಿಯಿಂದ ಕರೆದರು. ಈ ಮೂರರಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿ ಬಹಳ ಮುಖ್ಯವಿದೆ. ಅದರ ಜೊತೆಗೆ, ಸಂಸ್ಥೆಗಳೂ ಬದುಕುಳಿಯಬೇಕಾಗಿದೆ. ಸಂಸ್ಥೆಗಳು ಬದುಕುಳಿದ ಮೇಲೆ ಇವತ್ತಿನ ದಿವಸ ವಿದ್ಯಾರ್ಥಿಗಳ ಹಿತದ ಪ್ರಶ್ನೆ ಬರುತ್ತದೆ. ನಾನೇಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಫಾರಿನ್ ಯೂನಿವರ್ಸಿಟಿ ಬಗ್ಗೆ ನಿನ್ನೆ ಕೂಡ ನಮ್ಮ ಕೃಷ್ಣಪ್ಪನವರೂ ಕೂಡ ಮಾತನಾಡುವಾಗ ಹೇಳಿದರು. ಫಾರಿನ್ ಎಜ್ಯುಕೇಷನ್ ಪ್ರೊವೈಡರ್ ಅನ್ನು ಇವತ್ತಿನ ದಿವಸ ಡ್ರಾಫ್ಟ್ ಬಿಲ್‌ನಲ್ಲಿ ಪ್ರೊವೈಡ್ ಮಾಡಿದ್ದಾರೆ. ಈಗ ತಾವು ನೋಡಿದ್ದೀರಿ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಕೂಡ ರಿಸರ್ವೇಷನ್ ತಂದಿದ್ದಾರೆ. ಅದಕ್ಕೆ ಈ ಸರ್ಕಾರ ಏನು ಲೆಜಿಸ್ಲೇಷನ್ ಅನ್ನು ತಂದಿದ್ದೀರಿ, ಇದರಲ್ಲಿ ಒಂದನೆಯದು, ಎಲ್ಲಾ ಸದಸ್ಯರು ಹೇಳಿದ ಹಾಗೆ, ಇವತ್ತಿನ ದಿವಸ ಏನು 50 ಪರ್ಸೆಂಟ್ ಬಗ್ಗೆ ರಿಸರ್ವೇಷನ್ ಇದೆ, ಅದನ್ನು ನಾನು ಸ್ವಾಗತಿಸುತ್ತೇನೆ. ಅದನ್ನು ಒಂದು ಬಿಟ್ಟರೆ, ಇವತ್ತಿನ ದಿವಸ ಈ ಲೆಜಿಸ್ಲೇಷನ್ ಅನ್ನು ತಾವೇನು ತಂದಿದ್ದೀರಿ, ನಾನು ತಮ್ಮ

ಮೂಲಕ ಸನ್ಮಾನ್ಯ ಸಚಿವರಿಗೆ ಕೇಳುತ್ತೇನೆ. ಇದರಿಂದ ಪ್ರಾಬ್ಲಂ ಸಾಲ್ವ್ ಆಗುತ್ತದೆಯೇ? ಇದರಿಂದ ಪ್ರಾಬ್ಲಂ ಸಾಲ್ವ್ ಆಗುವುದಿಲ್ಲ. ಲಿಟಿಗೇಷನ್ ಇನ್ನೂ ಹೆಚ್ಚಿಗೆ ಆಗುತ್ತದೆ. ಮತ್ತೆ ವಿದ್ಯಾರ್ಥಿಗಳು, ಪೇರೆಂಟ್ಸ್ ಮತ್ತು ಮ್ಯಾನೇಜ್‌ಮೆಂಟ್ ಸಂಘರ್ಷ ಪ್ರಾರಂಭವಾಗುತ್ತದೆ. ಈಗಾಗಲೇ ತಾವು ಸಿಇಟಿಯನ್ನು ನೋಟಿಫೈ ಮಾಡಿದ್ದೀರಿ. ಸಿಇಟಿ ಕೇವಲ ಕರ್ನಾಟಕ ಸ್ಟೂಡೆಂಟ್ಸ್‌ಗೆಂದು ಹೇಳಿದ್ದೀರಿ. ಇವತ್ತು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳು ನೋಡುತ್ತಿದ್ದಾರೆ, ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ನಲ್ಲಿ ನಮಗೆ ಸೀಟ್ಸ್ ಇವೆಯೇ ಹೇಗೆ? ಎಂದು ನೋಡುತ್ತಿದ್ದಾರೆ. ಎನ್ನುವ ಪ್ರಶ್ನೆ ಇವತ್ತಿನ ದಿವಸ ಆ ವಿದ್ಯಾರ್ಥಿಗಳ ಮುಂದಿದೆ. ಈ ಬಿಲ್‌ನಲ್ಲಿ ಇವತ್ತಿನ ದಿವಸ ಗೌರ್ನಮೆಂಟ್ ಕೋಟಾ ಪ್ರಾವಿಜನ್ ಇಲ್ಲ. ಆದರೆ, ಕರ್ನಾಟಕ ವಿದ್ಯಾರ್ಥಿಗಳು ಅಥವಾ ಕನ್ನಡ ಮೀಡಿಯಂ ವಿದ್ಯಾರ್ಥಿಗಳಿಗೆ ಯಾವುದೂ ಪ್ರಾತಿನಿಧ್ಯ ಸಿಕ್ಕುವುದಿಲ್ಲ. They have to compete with all India students.

ಇದು ಇರುವಂಥ ಪರಿಸ್ಥಿತಿ. ಇವತ್ತು ಎಸ್‌ಸಿ: ಎಸ್‌ಟಿ, ಓಬಿಸಿ ಸ್ಟೂಡೆಂಟ್ಸ್‌ಗೆ 50 ಪರ್ಸೆಂಟ್‌ರವರೆಗೆ ರಿಸರ್ವೇಷನ್ ಅನ್ನು ತಾವು ಕೊಟ್ಟಿದ್ದೀರಿ ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಅದನ್ನು ಯಾರು ತುಂಬಬೇಕು? ಸರ್ಕಾರ ತುಂಬುತ್ತದೆಯೋ? ಮ್ಯಾನೇಜ್‌ಮೆಂಟ್ ತುಂಬುತ್ತದೆಯೋ? ಅದರ ಬಗ್ಗೆ ಈ ಬಿಲ್‌ನಲ್ಲಿ ಎಲ್ಲೂ ಕ್ಲಾರಿಫಿಕೇಷನ್ ಇಲ್ಲ ಮತ್ತು ಇನ್ನೊಂದು ಈ ವಿಷಯವನ್ನು ನಾನು ತಮ್ಮ ಮುಂದೆ ತರಬಯಸುತ್ತೇನೆ. ಇವತ್ತಿನ ದಿವಸ ಎಸ್‌ಸಿ : ಎಸ್‌ಟಿ, ಓಬಿಸಿ ಸ್ಟೂಡೆಂಟ್ಸ್ ಇವರಿಗೇನು ರಿಸರ್ವೇಷನ್ ಕೊಟ್ಟಿದ್ದೇವೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಇಲ್ಲಿವರೆಗೆ ಕರ್ನಾಟಕದ ಮೆರಿಟ್ ವಿದ್ಯಾರ್ಥಿಗಳು, ಯಾವುದೇ ಬಡ ವಿದ್ಯಾರ್ಥಿಗಳು, ಮತ್ತೆ ಯಾವುದೇ ವರ್ಗಕ್ಕೆ ಸೇರಿದವನಿರಲಿ .

ಶ್ರೀ ಜೆ.ಸಿ. ಮಾಧುಸ್ವಾಮಿ : ಅಷ್ಟೊಂದು ದುಡ್ಡು ಕೊಟ್ಟು ಸೇರುವವರನ್ನೂ ಒಬಿಸಿಯೆಂದು ಹೇಗೆ ಟ್ರೀಟ್ ಮಾಡುತ್ತೀರಿ? ಎಂಬ relevant ಪ್ರಶ್ನೆಯನ್ನು ಎತ್ತಿದ್ದೇನೆ. If he can pay Rs.3.00 lakhs and odd, how can he be treated as OBC person?

ಶ್ರೀ ಎಂ.ಬಿ. ಪಾಟೀಲ್ : ಇದರ ಬಗ್ಗೆ ಇತಿಹಾಸ ಹೇಳಬೇಕೆಂದರೆ, 1992ರಲ್ಲಿ ಉನ್ನಿ ಕೃಷ್ಣನ್ ಕೇಸ್ ಬಂತು, ಯಾವುದೂ ಆ್ಯಕ್ಟ್, ಲಾ, ಇರಲಿಲ್ಲ. 1998 ಕ್ಕಿಂತ ಮುಂಚೆ. ಸರ್ಕಾರದ ಫೆಸಿಲಿಟೀಸ್‌ಗಳನ್ನೂ ಯಾವ್ಯಾವ

ಸಂಸ್ಥೆಗಳು ಉಪಯೋಗಿಸುತ್ತವೆ ಆ ಶಿಕ್ಷಣ ಸಂಸ್ಥೆಗಳು ಅಂದರೆ ಆ ಮೆಡಿಕಲ್ ಕಾಲೇಜ್ 30 ಪರ್ಸೆಂಟ್‌ನ್ನು ಸರ್ಕಾರಕ್ಕೆ ಕೊಡುತ್ತಿತ್ತು, ಮೆರಿಟ್ ಆಧಾರಿತ ಬಡ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದೆವು. 1992 ರಲ್ಲಿ ಉನ್ನಿ ಕೃಷ್ಣನ್ ಜಡ್ಜ್‌ಮೆಂಟ್ ಬಂತು. 1992 ರಿಂದ 2000 ನೇ ಇಸ್ವಿಯವರೆಗೆ, ಅದರಲ್ಲಿ ಉನ್ನಿ ಕೃಷ್ಣನ್ ಜಡ್ಜ್‌ಮೆಂಟ್‌ನಲ್ಲಿ 85 ಪರ್ಸೆಂಟ್ ಏನು ಕೋಟಾ ಇತ್ತು ಇದರಲ್ಲಿ 50 ಪರ್ಸೆಂಟ್ ಫ್ರೀ ಸೀಟ್ಸ್ 35 ಪರ್ಸೆಂಟ್ ಪೇಮೆಂಟ್ ಸೀಟ್ಸ್ 15 ಪರ್ಸೆಂಟ್ ಎನ್‌ಆರ್‌ಐ ಸೀಟ್ಸ್ ಇತ್ತು. ಈ 85 ಪರ್ಸೆಂಟ್‌ಗೆ ಸಿಇಟಿ ಮುಖಾಂತರವೇ ಎಲ್ಲವನ್ನೂ ಸರ್ಕಾರ ಮಾಡುತ್ತಿತ್ತು. 15 ಪರ್ಸೆಂಟ್ ಎನ್‌ಆರ್‌ಐ ಅಂಡ್ ಅದರ್ಸ್ ಎಂದು ಆಗ ಇತ್ತು, ಬರೀ ಎನ್‌ಆರ್‌ಐ ಇರಲಿಲ್ಲ ಎನ್‌ಆರ್‌ಐ ಅಂಡ್ ಅದರ್ಸ್ ಎಂದು ಇತ್ತು. ಅದರಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳ ಮೂಲಕ ಫಂಡ್ಸ್ ರೈಸ್ ಮಾಡಲಿಕ್ಕೆ, ಅನೇಕರು, ಶಾಸಕರು, ಅಧಿಕಾರಿಗಳು, ಬೆನಿಫಿಟ್‌ನ್ನು ಪಡೆದುಕೊಂಡಿದ್ದರು. 2002 ರಲ್ಲಿ ಈ ಉನ್ನಿಕೃಷ್ಣನ್‌ದ್ದು unconstitional ಎಂದು ಹೇಳಿ ಟಿಎಂಎ ಪೈನಲ್ಲಿ ಡಿಸಿಷನ್ ಬಂತು. ಟಿಎಂಎ ಪೈನಲ್ಲಿ ಮುಖ್ಯವಾಗಿ ಡೀಲ್ ಮಾಡುತ್ತಿರುವುದು ಏನೆಂದರೆ, whether the minority institutions can be controlled; whether they can be regulated. Art. 30&31

ಇದರ ಮೇಲೆ ಮುಖ್ಯ ಒತ್ತಡ ತರುವಂಥ ಟಿಎಂಎ ಪೈ 11 ಜನ ಸದಸ್ಯರಿರುವ ಪೀಠ 11-Judges constitution Bench ಅದನ್ನು ಡೀಲ್ ಮಾಡಿತ್ತು, ಹೀಗೆ ಮಾಡುವಾಗ ಈ ಒಂದು ಲಿಬರೈಜೇಷನ್ ಮತ್ತೊಂದು ದೃಷ್ಟಿಯಿಟ್ಟುಕೊಂಡು ಡಿಸಿಷನ್ ಹೇಳಿದರು, ನಾನ್ ಮೈನಾರಿಟಿ ಏನು ಪ್ರೊಫೆಷನಲ್ ಕಾಲೇಜುಗಳಿವೆ, ಯಾರು ಸರ್ಕಾರದಿಂದ ಏಡ್‌ನ್ನು ತೆಗೆದುಕೊಳ್ಳುವುದಿಲ್ಲ, those who do not receive the aid. ಎಲ್ಲಿ ಏಡ್ ಬರುತ್ತದೆ ಅಲ್ಲಿ ಸರ್ಕಾರಕ್ಕೆ ಹಕ್ಕಿದೆ. ಎಲ್ಲಿ ಏಡ್ ಇಲ್ಲ ಅಲ್ಲಿ ಸರ್ಕಾರಕ್ಕೆ ಹಕ್ಕಿಲ್ಲ ಎಂದು ಟಿಎಂಎ ಪೈ ಫೌಂಡೇಷನ್‌ನವರು ವಾದ ಮಾಡಿದರು. ಒಂದನ್ನು ಸ್ಪಷ್ಟಪಡಿಸಿದರು, ಎಲ್ಲವೂ ಕೂಡ ಮೆರಿಟ್ ಆಧಾರದ ಮೇಲೆ ಇರಬೇಕು, ಎಲ್ಲವೂ ಕೂಡ fair and transparent method ನಲ್ಲಿ ಅಡ್ಮಿಷನ್ ಆಗಬೇಕು.

ಎಲ್ಲಿಯೂ ಕೂಡ ಕ್ಯಾಪಿಟೇಷನ್ ಶುಲ್ಕ ವಿಧಿಸುವ ಪದ್ಧತಿ ಇರಬಾರದೆಂದು ಹೇಳಿದರು. ಇದಾದ ಮೇಲೆ ಟಿಎಂಎ ಪೈ ಜಡ್ಜ್‌ಮೆಂಟ್ ಬಂದ ಮೇಲೆ Private institutions, unaided and non-grant-in-aid

institutions ಅದಕ್ಕೆಲ್ಲಾ ಒಂದು ಅಟಾನಮಿ ಕೊಟ್ಟರು. ನಂತರದಲ್ಲಿ ಮತ್ತೆ ಟಿಎಂಎ ಪೈನಲ್ಲಿ ತಮ್ಮೆಲ್ಲರಿಗೂ ಅದಕ್ಕೆಲ್ಲಾ ಒಂದು ಗೊತ್ತಿದ್ದಂತೆ ಪ್ಯಾರಾ 68 ರಲ್ಲಿ ಸರ್ಕಾರ ಮತ್ತು ಮ್ಯಾನೇಜ್‌ಮೆಂಟ್ಸ್ ತಮ್ಮದೇ ಆದ ಒಂದು ಇಂಟರ್ ಪ್ರಿಟೇಷನ್ ಮಾಡಲಿಕ್ಕೆ ಹೋಯಿತು. ಆಗ ಇಸ್ಲಾಮಿಕ್‌ನಲ್ಲಿ – ಫೈವ್ ಜಡ್ಜ್ಸ್ ಕುಳಿತುಕೊಂಡು, ಟಿಎಂಪೈ ನಲ್ಲಿರುವಂಥದ್ದಕ್ಕೆ ಒಂದು ಕ್ಲಾರಿಫಿಕೇಷನ್ ಕೊಡಲಿಕ್ಕೆ ಹೊರಟರು. ಹಾಗೆ ಕ್ಲಾರಿಫಿಕೇಷನ್ ಕೊಡುವ ಮುಖಾಂತರ ಸ್ವಲ್ಪ ಅಲ್ಲಿ ಇಲ್ಲಿ ಕೂಡ ಅದಕ್ಕೆ ಮತ್ತಷ್ಟು ಕನ್‌ಫ್ಯೂಷನ್ ಕೂಡ ಆ್ಯಡ್ ಆಯಿತು. ನಂತರ ಲೇಟೆಸ್ಟ್ ಕೇಸ್ ಇವತ್ತು ಬಂದಿದ್ದು ಪಿ.ಎ.ಇನಾಂದಾರ್ ಕೇಸ್. 11 ಜಡ್ಜ್ಸ್ 5 ಜಡ್ಜ್ಸ್ ಮತ್ತೆ ಇಸ್ಲಾಮಿಕ್‌ನಲ್ಲಿ 5 ಜಡ್ಜ್ಸ್‌ನಲ್ಲಿ ಏನು ಮಾಡಿದರು ಎಂದರೆ, 7 ಜಡ್ಜ್ಸ್. ಇದರರ್ಥ ನಾವು ಒಮ್ಮೆ ಇನಾಂದಾರ್‌ಗೆ ಜಂಪ್ ಮಾಡುವ ಅವಶ್ಯಕತೆಯಿಲ್ಲ. ಟಿಎಂಪಿ ಪೈ, ಅದು ಇವತ್ತಿನ ದಿವಸ ಭಗವದ್ಗೀತೆ, ಅದು ಬೈಬಲ್, ಅದು 11 ಜಡ್ಜ್ಸ್, ಇಸ್ಲಾಮಿಕ್ ಜಡ್ಜ್‌ಮೆಂಟ್ ಏನು ಇದೆ ಅದು 5 ಜಡ್ಜ್ಸ್ ಇನಾಂದಾರ್ 7 ಜಡ್ಜ್ಸ್, ಇಸ್ಲಾಮಿಕ್‌ನಲ್ಲಿ 5 ಜಡ್ಜ್ಸ್ ಏನು ಡೀಲ್ ಮಾಡಿದ್ದಾರೆ, ಏನು ತಪ್ಪು ಇದು ಸರಿಯಲ್ಲವೆಂದು ಹೇಳಿದ್ದಾರೆ ಆ ಒಂದು ಎಕ್ಸ್‌ಟೆಂಟ್‌ಗೆ ಮಾತ್ರ ಇಸ್ಲಾಮಿಕ್ otherwise Islamic decision holds good. TMA Pai decision holds good

ಇನಾಂದಾರ್ ಕೇಸ್‌ನಲ್ಲಿ ಡೀಲ್ ಮಾಡಿದ್ದಾರೆ, ಅದನ್ನು ಬಿಟ್ಟು ಅದೂ ಕೂಡ it holds good ಇವತ್ತೇನು ಮಾಡುತ್ತಿದ್ದೇವೆಂದು ನಾವು ಡೈರೆಕ್ಟ್ಲಿ ಇನಾಂದಾರ್ ಕೇಸ್‌ಗೆ ಹೋಗುತ್ತಿದ್ದೇವೆ. ಇದನ್ನು ಸಮಗ್ರವಾಗಿ, ಇಸ್ಲಾಮಿಕ್ ಆಗಲಿ, ಇನಾಂದಾರ್ ಆಗಲಿ, it has to be read with TMA Pai decision. ಇಂಥ ಪರಿಸ್ಥಿತಿ ಇವತ್ತು ನಮ್ಮ ಮುಂದೆ ಇದೆ. ಸೆಂಟ್ರಲ್ ಗೌರ್ನಮೆಂಟ್‌ನವರು ಡ್ರಾಫ್ಟ್ ಏನು ಮಾಡಿದ್ದಾರೆ ಇದರಲ್ಲಿ ಎಲ್ಲವೂ ಕವರ್ ಆಗಿವೆ. ಇಂಥ ಅಂಶಗಳನ್ನು ಈ ಒಂದು ಬಿಲ್‌ನಲ್ಲಿ ನೋಡುತ್ತಿದ್ದೇವೆ, ಕ್ಲಾರಿಫಿಕೇಷನ್ ಇಲ್ಲ. ನಾನು ಹೇಳುವುದು ಏನೆಂದರೆ, ಇಲ್ಲಿಯವರೆಗೆ ಕರ್ನಾಟಕ ವಿದ್ಯಾರ್ಥಿಗಳಿಗೆ ಮೆಡಿಕಲ್‌ಗೆ 35 ಸಾವಿರಕ್ಕೆ ಸಿಗುತ್ತಿತ್ತು, ಇಂಜಿನಿಯರಿಂಗ್ 15 ಸಾವಿರಕ್ಕೆ ಸಿಕ್ಕುತ್ತಿತ್ತು. 25 ಸಾವಿರಕ್ಕೆ ಡೆಂಟಲ್ ಕಾಲೇಜಿನಲ್ಲಿ ಕೂಡ ಸೀಟ್ ಸಿಕ್ಕುತ್ತಿತ್ತು. ಈ ಒಂದು ಬಿಲ್ ತಾವು ನೋಡಿ; ಎಂಥ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ, ಎಸ್‌ಸಿ–ಎಸ್‌ಟಿ–ಒಬಿಸಿದು ಆದ ಮೇಲೆ ಏನು ಬಡ ಮೆರಿಟ್ ವಿದ್ಯಾರ್ಥಿಗಳು ಇದ್ದಾರೆ ಆ ಒಂದು category has been totally eliminated. They do not

stand any chance. ಬ್ರಾಹ್ಮಣರಿರಬಹುದು, ಲಿಂಗಾಯತರಬಹುದು, ಅವರು ಯಾವುದೇ ಜಾತಿಗೆ ಸೇರಿದವರಾಗಿರಬಹುದು. ಬಡ ವಿದ್ಯಾರ್ಥಿ ಯಾರು ಇದ್ದಾರೆ ಇವತ್ತಿನ ದಿವಸ ಅವರಿಗೇನೂ ಒಂದು ಅವಕಾಶ ಇಲ್ಲ. ಅದಲ್ಲದೆ ಅವರೂ ಕೂಡ ಇವತ್ತು ಆಲ್ ಇಂಡಿಯಾ ಲೆವೆಲ್‌ನಲ್ಲಿ ಕಾಂಪಿಟೇಷನ್ ಮಾಡಬೇಕಾಗುತ್ತದೆ ಕನ್ನಡ ಮೀಡಿಯಂ ಸ್ಟೂಡೆಂಟ್ಸ್ ಆಗಲಿ, ಎಂತಹ ಸ್ಟೂಡೆಂಟ್ಸ್ ಆಗಲಿ. ಬಿಲ್‌ನಲ್ಲಿ uniformity ಬಗ್ಗೆ ಹೇಳುತ್ತೇನೆ, ಎಸ್‌ಸಿ –ಎಸ್‌ಟಿ ಸ್ಟೂಡೆಂಟ್ಸ್ ಮತ್ತು ಒಬಿಸಿ ಸ್ಟೂಡೆಂಟ್ಸ್ uniform fee bear ಮಾಡುವುದಕ್ಕಾಗುತ್ತದಾ? ಆಗುವುದಿಲ್ಲಾ ನಾವು ಆ ದಿವಸ ಸಚಿವರಿಗೆ ಭೇಟಿಯಾಗಿ ಕೇಳಿಕೊಂಡೆ, ತಾವು ದಯವಿಟ್ಟು ಇದರಲ್ಲಿ ವಿದ್ಯಾರ್ಥಿಗಳ ಹಿತದೃಷ್ಠಿ ಇದೆ, ಮ್ಯಾನೇಜ್‌ಮೆಂಟಿನ ಹಿತದೃಷ್ಠಿ ಇದೆ, ನಾನು ಹಾಗೂ ಶಾಸಕರಾದಂಥ ಚರಂತಿಮಠ್‌ರವರೂ ಕೂಡ ಹೋಗಿ ವಿನಂತಿ ಮಾಡಿಕೊಂಡೆವು. ತಾವು ಮ್ಯಾನೇಜ್‌ಮೆಂಟ್‌ನವರನ್ನೆಲ್ಲಾ ಒಂದು ಮೀಟಿಂಗ್ ಕರೆಯಿರಿ. ಕರೆದು ಚರ್ಚೆ ಮಾಡಿರಿ. in the interest of students, as well as the Management as well as the Government.

ನಾನು ಸಚಿವರಿಗೆ ವಿನಂತಿ ಮಾಡುತ್ತೇನೆ, ದಯವಿಟ್ಟು ಈ ಕಡೆ ಗಮನಹರಿಸಬೇಕು. ನಾನು ಆ ದಿವಸ ತಮ್ಮನ್ನು ಕೇಳಿದೆ, ಮೂರು ದಿವಸ ನಾನು ಆವತ್ತು ಯುಗಾದಿ ಹಬ್ಬ ಬಿಟ್ಟು ಇಲ್ಲಿ ಉಳಿದೆ, ನನಗೆ ಕರೆಯುತ್ತಾರೆಂದು ತಿಳಿದು ಇಲ್ಲಿ ಇದ್ದೆ. ನಾನು ಸನ್ಮಾನ್ಯ ಶಾಸಕ ಮಿತ್ರರಾದಂಥ ಶಿವಶಂಕರಪ್ಪನವರಿಗೆ ಕೂಡ ಹೇಳಿದೆ, 31ಕ್ಕೆ ತಾವು ಇಲ್ಲಿಗೆ ಬರಬೇಕಾಗುತ್ತದೆಂದು ಹೇಳಿದೆ. ನಮ್ಮದು ಇಂಥ ಸ್ಥಿತಿಯಾಯಿತು. ವಿದ್ಯಾರ್ಥಿಗಳ ಹಿತದೃಷ್ಠಿಯಿಂದ, ಪೇರೆಂಟ್ಸ್ ಹಿತದೃಷ್ಠಿಯಿಂದ ಮ್ಯಾನೇಜ್‌ಮೆಂಟ್ ಹಿತದೃಷ್ಠಿಯಿಂದ, ನಮಗೂ ಕೂಡ ಇವತ್ತಿನ ದಿವಸ ಬೇಜಾರಾಗಿದೆ. ಇದಕ್ಕೆ ಎಂಡ್ ಅನ್ನು ಕಾಣಬೇಕಾಗಿದೆ. ಪ್ರತಿ ವರ್ಷ ಲಿಟಿಗೇಷನ್, ಗೊಂದಲ, ಹೀಗಾಗಿ ಎಲ್ಲರಿಗೂ ತೊಂದರೆ ಯಾಗುತ್ತದೆ. ವಿದ್ಯಾರ್ಥಿಗೂ ತೊಂದರೆಯಾಗುತ್ತದೆ, ಮ್ಯಾನೇಜ್‌ಮೆಂಟ್ಸ್‌ಗೂ ಕೂಡ ತೊಂದರೆಯಾಗುತ್ತದೆ. ಈ ಬಿಲ್‌ನಲ್ಲಿ ಶೇರಿಂಗ್ ಬಗ್ಗೆ ಏನೂ ಹೇಳುತ್ತಿಲ್ಲ. ನಾನು ಬಜೆಟ್ ಬುಕ್ ನೋಡಿದೆ . . .

ಛೇರ್ಮನ್ : ಪಾರ್ಟ್ ಮಾಡಿ.

ಶ್ರೀ ಎಂ.ಬಿ. ಪಾಟೀಲ್: ಐದು ನಿಮಿಷ, ಇದೊಂದು ವಿಷಯದಲ್ಲಿ, ನಾನು ಯಾವತ್ತೂ ಅವಕಾಶ ಕೇಳಿಲ್ಲ, ದಯವಿಟ್ಟು ಅವಕಾಶ ಕೊಡಿ..

ಛೇರ್ಮನ್ : ರಿಪೀಟ್ ಆಗುವುದು ಬೇಡ, ಇವರು ಹೇಳದೇ ಇರುವುದರ ಮೇಲೆ ಬೆಳಕು ಚೆಲ್ಲುವುದಕ್ಕೆ ಸಾಧ್ಯನಾ?

ಶ್ರೀ ಎಂ.ಬಿ. ಪಾಟೀಲ್ : ಐದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಆಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ಕರೆಕ್ಷನ್ ಆಗಬೇಕು.

he cannot express because he is a part of some management. ನಮಗೆ ಬೇಜಾರಾಗಿದೆ, ನಮಗೆ ಸಾಕಾಗಿದೆ ದಯವಿಟ್ಟು ಆ ಪದಗಳು ಬೇಡ.

SRI BASAVARAJA RAYAREDDY : You cannot represent them, ಹಾಗಂತ ಅವರು ಹೇಳುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಿಮ್ಮ ಮಾತಲ್ಲಿ ಬಂತು ಪಾಟೀಲರೇ ನಾನೇನು ದ್ವೇಷಕ್ಕೆ ಹೇಳುವುದಿಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಅವರು ಏನು ಹೇಳುತ್ತಾರೆಂದರೆ, ಇದು ಆಗಬಾರದು, ಎಂದು not with a bad intention,

ಶ್ರೀ ಜೆ.ಸಿ. ಮಾಧುಸ್ವಾಮಿ : ನನಗೆ, ಚರಂತಿಮಠರವರಿಗೆ ಬೇಜಾರಾಗಿದೆ. ಆ ಪದಗಳು ಬೇಡ.

ಶ್ರೀ ಶಿವಾನಂದ ಎಸ್ ಪಾಟೀಲ್ : ದೇಶಪಾಂಡೆಯವರಲ್ಲಿ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ, ಈ ದೇಶದೊಳಗೆ ಫುಲ್‌ಬೆಂಚ್ ಕೂಡಿಸುವ ಕೆಪ್ಯಾಸಿಟಿ ಯಾರಿಗಾದರೂ ಇದೆಯೇ ಕಾಮನ್ ಪರ್ಸನ್‌ಗೆ?

ಶ್ರೀ ಆರ್.ವಿ. ದೇಶಪಾಂಡೆ : ಅವಶ್ಯಕತೆ ಇದ್ದರೆ ಆ ಬೆಂಚ್ constitutional Benchಗೆ refer ಮಾಡಬೇಕು. That is a supreme court matter. ಅಲ್ಲಿಗೆ individual ಆಗಿ ಏಕೆ ಹೋಗಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲಿ ಆ ಚರ್ಚೆ ಬೇಡ. ಆದರೆ ಒಂದು ಏನೆಂದರೆ, you cannot say you represent the Management.
ನಿಮ್ಮ ಮಾತಿನಲ್ಲಿ, ಭಾವನೆ ಆ ರೀತಿ ಬಂತು, ಪ್ಲೀಸ್ ಕೇಳಿ. ನನಗೆ ಬೇಜಾರಾಗಿದೆ, ನನಗೆ ಸಾಕಾಗಿದೆ, ಎನ್ನುವ ಪದಗಳು ಬೇಡ.

ಶ್ರೀ ಎಂ.ಬಿ. ಪಾಟೀಲ್ : ಇವತ್ತೇನು ಫೀಸ್ ರೀಇಂಬರ್ಸ್ ಮಾಡಬೇಕಾಗಿದೆ, ಸುಮಾರು 1798 ಮೆಡಿಕಲ್ ಸೀಟ್ಸ್ 50 ಪರ್ಸೆಂಟ್ ಕನ್ಸಿಡರ್

ಮಾಡಿದರೆ ಆಗುತ್ತದೆ. ಡೆಂಟಲ್‌ನಲ್ಲಿ 1300 ಸೀಟ್ಸ್ ಆಗುತ್ತದೆ, ಇಂಜಿನಿಯರಿಂಗ್‌ನಲ್ಲಿ ಸುಮಾರು 22117 ಸೀಟ್ಸ್ ಆಗುತ್ತದೆ. 50 ಪರ್ಸೆಂಟ್‌ಗೆ ಕನ್ಸಿಡರ್ ಮಾಡಬೇಕಾಗಿದ್ದರೆ ನಾವು ನಮ್ಮ ಈ ಬಜೆಟ್‌ನಲ್ಲಿ ಸುಮಾರು 200 ಕೋಟಿ ರೂಪಾಯಿಗಳನ್ನು ಪ್ರಾವಿಜನ್ ಮಾಡಬೇಕಾಗುತ್ತದೆ. ಇದರಲ್ಲಿ ಇವತ್ತು ಅನೇಕ ಹಿರಿಯ ಸದಸ್ಯರುಗಳು ಹೇಳಿದ ಹಾಗೆ ಎಂಬಿಎ, ಆಗಲಿ, ಆಯುರ್ವೇದಿಕ್ ಆಗಲಿ ಅವು ಯಾವೂ ಇನ್‌ಕ್ಲೂಡ್ ಆಗಿಲ್ಲ, ಅನೇಕ ಪೋಸ್ಟ್ ಗ್ರಾಜ್ಯುಯೇಟ್ಸ್ ಕೋರ್ಸ್ ಸೇರಿಲ್ಲ. ಸುಮಾರು 300 ಕೋಟಿ ರೂಪಾಯಿ ಅಂದಾಜು ಆಗುತ್ತದೆ. ಒಂದು ಆ್ಯವ್‌ರೇಜ್ ಫೀ ಚಾರ್ಜ್ ಮಾಡಿದರೆ ಅಷ್ಟು ಆಗುತ್ತದೆ. ಆ ಪ್ರಾವಿಜನ್ ಮಾಡಲಿಕ್ಕೆ ಸಾಧ್ಯ ಇದೆಯೇ? ಇದರ ಬಗ್ಗೆ ಬಜೆಟ್‌ನಲ್ಲಿ ಎಲ್ಲೂ ಹೇಳಿಲ್ಲ. 300 ಕೋಟಿ ರೂಪಾಯಿಯ ಬಗ್ಗೆ ಇಲ್ಲ. There was a confusion. ಫೀಜಿಯೋ ಥೆರಪಿ ಇನ್ನಿತರ ಎಲ್ಲಾ ಕೋರ್ಸ್‌ಗಳು ಸೇರಿದರೆ ಸುಮಾರು 300 ಕೋಟಿ ರೂಪಾಯಿ ಆಗುತ್ತದೆ. ಅದಕ್ಕೆ ಬಜೆಟ್ ಪ್ರಾವಿಜನ್ ಮಾಡಿದ್ದಾರಾ? ಅನೇಕ ಹಿರಿಯ ಸದಸ್ಯರು ಹೇಳಿದಂತೆ ಮಾನ್ಯ ಖರ್ಗೆಯವರೂ ಕೂಡ ಹೇಳಿದರು. 1994 ರಿಂದ ಪ್ರೀಯೂನಿವರ್ಸಿಟಿ ಕಾಲೇಜ್ ಆಗಿರಬಹುದು, ಏಡೆಡ್ ಡಿಗ್ರಿ ಕಾಲೇಜ್ ಆಗಿರಬಹುದು, ಅಥವಾ ಇತ್ತೀಚಿಗೆ ಪ್ರೊಫೆಷನಲ್ ಎಜ್ಯುಕೇಷನ್ ಎಂದು ನಾವು ತೆಗೆದುಕೊಳ್ಳಬಹುದು. ಇವತ್ತು ನೂರಾರು ಕೋಟಿ ರೂಪಾಯಿ ಬಾಕಿ ಇದೆ. ಇಂತಹ ಒಂದು ಪರಿಸ್ಥಿತಿ ಇದ್ದಾಗ ನಾವು ಅಡಿಕ್ವೇಟ್ ಬಜೆಟ್ ಪ್ರಾವಿಜನ್ ಮಾಡಿಕೊಳ್ಳದಿದ್ದರೆ, ಸ್ಟೂಡೆಂಟ್ಸ್‌ಗೆ ಮತ್ತು ಮ್ಯಾನೇಜ್‌ಮೆಂಟ್‌ಗೆ ಸಂಘರ್ಷದ ಗೂಡಾಗುತ್ತದೆ. ಮತ್ತೆ ಗೊಂದಲಕ್ಕೂ ಕೂಡ ಕ್ರಿಯೇಟ್ ಆಗುತ್ತದೆ. ಮತ್ತೆ ಮ್ಯಾನೇಜ್‌ಮೆಂಟ್‌ನವರು ವಿದ್ಯಾರ್ಥಿಗಳನ್ನು ಅಡ್ಮಿಷನ್ ಮಾಡಿಕೊಳ್ಳತಕ್ಕಂಥದರಲ್ಲಿ ಕೂಡ ಬಹಳಷ್ಟು ತೊಂದರೆ ಇವತ್ತಿನ ದಿವಸ ಆಗುತ್ತದೆ. ಮತ್ತೆ ಎನ್.ಆರ್.ಐ. ಕೋಟಾದ ಬಗ್ಗೆ ಈಗಾಗಲೇ ಬಹಳಷ್ಟು ಸದಸ್ಯರು ಇಲ್ಲಿ ಹೇಳಿದ್ದಾರೆ ಇವತ್ತು ಎನ್‌ಆರ್‌ಐ ಕೋಟಾ ಏನಿದೆ, ನನಗೆ ತಿಳಿದ ಮಟ್ಟಿಗೆ ಮೆಡಿಕಲ್ ಕಾಲೇಜಿನಲ್ಲಿ ಎರಡು ಮೆಡಿಕಲ್ ಕಾಲೇಜುಗಳು ಬರಬಹುದು. ಅಂದರೆ ಇದರಲ್ಲಿ ರಾಮ್‌ಯ್ಯ ಮತ್ತು ಮೈಸೂರಿನ ಕಾಲೇಜಿಗೆ ಬರಬಹುದು. ಉಳಿದ ಎಲ್ಲಾ ಕಡೆ ಇವತ್ತಿನ ದಿವಸ ಎನ್.ಆರ್.ಐ. ವಿದ್ಯಾರ್ಥಿಗಳು ಬರುತ್ತಿಲ್ಲ. ಬೇಕಾದರೆ ರೆಕಾರ್ಡ್ಸ್ ತೆಗೆಸಿ ನೋಡಿ. ಮತ್ತೆ ಸರ್ಕಾರಿ ಕಾಲೇಜುಗಳಲ್ಲಿಯೂ ಎನ್‌ಆರ್‌ಐಗೆ ಅವಕಾಶ ಕೊಡಬಹುದು. ಆದರೆ, ಏನೂ ಪ್ರಯೋಜನವಾಗಿಲ್ಲ. ಏಕೆಂದರೆ ಇವತ್ತಿನ ದಿವಸ ಎನ್.ಆರ್.ಐ. ವಿದ್ಯಾರ್ಥಿಗಳು ಬರುತ್ತಿಲ್ಲ. ಇವತ್ತಿನ ಪರಿಸ್ಥಿತಿ ಏನಾಗಿದೆ

ಎಂದರೆ, ಯು.ಕೆ. ಅಥವಾ ಆಸ್ಟ್ರೇಲಿಯಾ ಅಥವಾ ನ್ಯೂಜಿಲ್ಯಾಂಡ್ ಯೂನಿವರ್ಸಿಗಳು ಅಥವಾ ಇನ್ಯಾವುದೇ ಯೂನಿವರ್ಸಿಗಳು ಇಲ್ಲಿಗೆ ಬಂದು ವಿವಿಧ ಹೋಟೆಲ್‌ಗಳಲ್ಲಿ ಎಜ್ಯುಕೇಷನ್ ಫೇರ್ ಮಾಡಿ ನಮ್ಮ ವಿದ್ಯಾರ್ಥಿಗಳನ್ನು ರಷ್ಯಾ ಅಥವಾ ಇತರೇ ಯೂನಿವರ್ಸಿಟಿಗಳಿಗೆ ಕರೆದುಕೊಂಡು ಹೋಗುತ್ತಿದ್ದಾರೆ. ಮಾನ್ಯ ಸಚಿವರು ನನ್ನ ಜೊತೆ ಬಹಳಷ್ಟು ಸಲ ಚರ್ಚೆ ಮಾಡುವಾಗ ಒಂದು ಮಾತನ್ನು ಹೇಳಿದರು. ಸುಪ್ರೀಂ ಕೋರ್ಟ್ 15 ಪರ್ಸೆಂಟ್‌ನಷ್ಟು ಸೀಟ್ ಎನ್‌ಆರ್‌ಐ ವಿದ್ಯಾರ್ಥಿಗಳಿಗೆಂದು ಹೇಳಿದೆ. ಆದರೆ, ತಾವು ತಂದಿರತಕ್ಕಂಥ ಬಿಲ್‌ನಲ್ಲಿ ಏನಿದೆ ಎಂದರೆ, out of total intake of 100%, 50% is reserved

category. Another 50% is general category. Out of the general category, 15% is N.R.I. ನಾನು ಅವತ್ತು ಕೇಳಿದಾಗ total intake is 15% ಎಂದು ತಾವು ನನಗೆ ಹೇಳಿದ್ದೀರಿ. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿರತಕ್ಕಂಥ ಬಿಲ್‌ಗಳನ್ನು ತಾವು ದಯವಿಟ್ಟು ಓದಬೇಕು. It means $7\frac{1}{2}$%. It is not 15%. ಇಂಥಾ ಒಂದು ತಪ್ಪುಗಳೆಲ್ಲಾ ಈ ಒಂದು ಬಿಲ್‌ನಲ್ಲಿವೆ. ಇವತ್ತು ನಾನು ಬಹಳಷ್ಟು ವಿಷಯಗಳು ಹೇಳುವುದಿದೆ. ಆದರೆ, ತಾವು ನನಗೆ ಹೆಚ್ಚಿನ ಸಮಯವನ್ನು ಕೊಡುತ್ತಿಲ್ಲ. ಇನ್ನು ಒಂದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತಿನದಿವಸ ಇದು ಏನಾಗುತ್ತದೆಂದರೆ ಇದರಿಂದ ಕನ್‌ಫ್ರಂಟೇಷನ್‌ಗೆ ಹಾದಿಯಾಗುತ್ತದೆ. ಮತ್ತೆ ಲಿಟಿಗೇಷನ್ ಇಲ್ಲದೆ ಇದು ಇವತ್ತಿನ ದಿವಸ ಎಂಡ್ ಆಗುವುದಿಲ್ಲ. ಮತ್ತೆ ಇದರಿಂದ ಗೊಂದಲದ ಗೂಡು ಆಗುತ್ತದೆ. ಆದ್ದರಿಂದ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ. ಮತ್ತೆ ವಿದ್ಯಾರ್ಥಿಗಳು, ಪೇರೆಂಟ್ಸ್ ಮತ್ತು ಮ್ಯಾನೇಜ್‌ಮೆಂಟ್ಸ್‌ರವರನ್ನು ಹಾಗೂ ಸರ್ಕಾರ, ಎಲ್ಲಾ ಸ್ಟೇಕ್ ಹೋಲ್ಡರ್‌ಗಳನ್ನು ಸೇರಿಸಿಕೊಂಡು ಒಂದು ವೆಲ್ ಥಾಟ್ ಆಫ್ ಲೆಜಿಸ್ಲೇಷನ್ ಮಾಡಬೇಕೆಂದು ಜಡ್ಜ್‌ಮೆಂಟ್‌ನಲ್ಲಿ ಏನು ಹೇಳಿದೆ, ಅದರ ಪ್ರಕಾರ ಸಮಗ್ರವಾಗಿ ಚಿಂತನೆ ಮಾಡಿ ಒಂದು ಸಮಗ್ರ ಬಿಲ್‌ನ್ನು ತರಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೋರಿಕೊಳ್ಳುತ್ತೇನೆ.

ಶ್ರೀ ಆರ್. ದಿನೇಶ್ ಗುಂಡುರಾವ್ (ಗಾಂಧಿ ನಗರ) : ಮಾನ್ಯ ಛೇರ್ಮನ್‌ರವರೆ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಈ ಬಿಲ್‌ನ ವಿಚಾರದಲ್ಲಿ ಈಗಾಗಲೇ ಬಹಳಷ್ಟು ವಿಚಾರಗಳು ಇಲ್ಲಿ ಪ್ರಸ್ತಾಪ ಆಗಿದೆ. ಈ ಬಿಲ್ ಅನ್ನು ನೋಡಿದಾಗ ನನಗೆ ಏನನ್ನಿಸುತ್ತದೆಂದರೆ, ಬಹುಶಃ ಇದರಿಂದ ಯಾವುದೇ

ರೀತಿಯ ಪ್ರಯೋಜನ ನಮ್ಮ ರಾಜ್ಯಕ್ಕೆ ಆಗುವುದಿಲ್ಲವೆಂದು ಅನಿಸುತ್ತದೆ. ವಿಶೇಷವಾಗಿ ನಮ್ಮ ಮಕ್ಕಳಿಗೆ ಅದರಲ್ಲಿಯೂ ಮುಖ್ಯವಾಗಿ ಗ್ರಾಮೀಣ ಭಾಗದಲ್ಲಿರತಕ್ಕಂಥ ಮಕ್ಕಳಿಗೆ ಯಾವುದೇ ರೀತಿಯ ಅನುಕೂಲ ಈ ಬಿಲ್‌ನಲ್ಲಿ ಕಾಣಿಸುತ್ತಿಲ್ಲ. ಈಗಾಗಲೇ ಹೇಳಿರುವಂತೆ ಮೆಡಿಕಲ್ ಅಡ್ಮಿಷನ್‌ಗೆ ಸಂಬಂಧಪಟ್ಟಂತೆ ಸಿಇಟಿಯಲ್ಲಿ ಗೊಂದಲವಾಗಿದೆ. ಈ ಸಮಸ್ಯೆಯನ್ನು ಹೋದವರ್ಷ ಕೂಡ ನೋಡಿದೆವು. ಒಂದು ಕಡೆ ಮಕ್ಕಳು ಪಿ.ಯು.ಸಿ. ಚೆನ್ನಾಗಿ ಓದಬೇಕು, ಇನ್ನೊಂದು ಕಡೆ ಸಿ.ಇ.ಟಿ. ಪರೀಕ್ಷೆ ಚೆನ್ನಾಗಿ ಬರೆಯಬೇಕು. ಮತ್ತೆ ಇನ್ನೊಂದು ಕಡೆ ಕಾಮೆಡ್–ಕೆ ಎಂಟ್ರೆನ್ಸ್ ಎಕ್ಸಾಮ್‌ನ್ನು ಬರೆಯಬೇಕು. ಇಷ್ಟೊಂದು ಪರೀಕ್ಷೆಗಳನ್ನು ಒಬ್ಬ ವಿದ್ಯಾರ್ಥಿ ಮೇಲೆ ಹಾಕುವುದರಿಂದ ಇದರಿಂದ ವಿದ್ಯಾರ್ಥಿ ಮೇಲೆ ಆಗತಕ್ಕಂಥ ಒತ್ತಡ ಏನಿದೆ ಅದರ ಬಗ್ಗೆ ಚಿಂತನೆ ಆಗಬೇಕಲ್ಲವೆ? ಏಕೆಂದರೆ ಒಂದು ಕಾಲೇಜಿನಲ್ಲಿ ಅಡ್ಮಿಷನ್ ಆಗಬೇಕಾದರೆ ಮೂರು ಪರೀಕ್ಷೆ ಬರೆಯುವುದಾದರೆ ಇದು ಯಾವ ರೀತಿಯ ನ್ಯಾಯ ಎನ್ನತಕ್ಕಂಥದರ ಬಗ್ಗೆ ತಾವು ಆಲೋಚನೆ ಮಾಡಬೇಕು? ಈ ರೀತಿಯಾಗಿ ಪರೀಕ್ಷೆಗಳ ಒತ್ತಡ ತರತಕ್ಕಂಥದ್ದೂ ಕೂಡ ಅವರಿಗೆ ಒಂದು ರೀತಿಯ ಟೆನ್‌ಷನ್ ಕ್ರಿಯೇಟ್ ಮಾಡಿದಂತೆ ಆಗುತ್ತದೆ. 50 ಪರ್ಸೆಂಟ್‌ಗೋಸ್ಕರ ಈ ಲೆಜಿಸ್ಲೇಷನ್ ತಂದಿದ್ದೇವೆಂದು ಹೇಳಲಾಗುತ್ತಿದೆ. ಉಳಿದ 50 ಪರ್ಸೆಂಟ್ ಸೀಟ್‌ಗಳನ್ನು ಯಾವ ರೀತಿಯಾಗಿ ಭರ್ತಿ ಮಾಡಬೇಕೆಂಬುದರ ಬಗ್ಗೆ ಒಂದು ಸ್ಪಷ್ಟತೆ ಇಲ್ಲ. ರಾಷ್ಟ್ರ ಮಟ್ಟದಲ್ಲಿನ ಡ್ರಾಫ್ಟ್ ಏನು ಬರುತ್ತದೆ ಅದರಲ್ಲಿ ಏನು ಹೇಳುತ್ತಾರೆಂದರೆ, ಖಾಸಗಿ ಸಂಸ್ಥೆಗಳು ಏನಿವೆ, ಒಂದು ಸಂಸ್ಥೆಗಳು ಅಡ್ಮಿಷನ್ ಮಾಡಿಕೊಳ್ಳುವುದಕ್ಕೋಸ್ಕರ ಆಲ್ ಇಂಡಿಯಾ ಬೇಸಸ್‌ನಲ್ಲಿ ನೀವು ಪರೀಕ್ಷೆ ಮಾಡಬೇಕೆಂದು ಅವರಿಗೆ ಹೇಳಿದ್ದಾರೆ. ಆದ್ದರಿಂದ ಅವರು ಆಲ್ ಇಂಡಿಯಾ ಬೇಸಸ್ ಮೇಲೆ ಪರೀಕ್ಷೆ ಮಾಡಿದರೆ ನಮ್ಮ ರಾಜ್ಯದ ಮಕ್ಕಳಿಗೆ ಅನ್ಯಾಯವಾಗುತ್ತದೆ. ಆದ್ದರಿಂದ, ಇದೊಂದು ಕೂಡ ಒಂದು ದೊಡ್ಡ ಸಮಸ್ಯೆ ಆಗಿದೆ. ಒಂದು ಕಡೆ ಮೆಡಿಕಲ್‌ಗೋಸ್ಕರ ಪಿ.ಯು.ಸಿ. ಮಾರ್ಕ್ಸ್ ಕನ್ಸಿಡರೇಷನ್ ಇಲ್ಲ. ಮತ್ತೊಂದು ಕಡೆ ಎಂಟ್ರೆನ್ಸ್ ಪರೀಕ್ಷೆಗಳು ಅಂದರೆ ಇವತ್ತು ಎಂಟ್ರೆನ್ಸ್ ಪರೀಕ್ಷೆ 1,2 ಅಥವಾ 3 ಪರೀಕ್ಷೆ ಎನ್ನತಕ್ಕಂಥ ಗೊಂದಲ ಕೂಡ ಇದೆ. ಇದರ ಬಗ್ಗೆ ಈ ಒಂದು ಬಿಲ್‌ನಲ್ಲಿ ಯಾವುದೇ ರೀತಿಯ ಪ್ರಸ್ತಾವನೆ ಬಂದಿಲ್ಲ. ಅಂದರೆ ಯಾವುದೇ ರೀತಿಯ ಸ್ಪಷ್ಟತೆ ಈ ಒಂದು ಬಿಲ್‌ನಲ್ಲಿ ಇಲ್ಲ. ಮತ್ತೆ ಮೀಸಲಾತಿ ವಿಷಯಕ್ಕೆ ಸಂಬಂಧಪಟ್ಟಂತೆ ಇಲ್ಲಿ ಯಾವ ಚರ್ಚೆಯೂ ಕೂಡ ಅವಶ್ಯಕತೆ ಇಲ್ಲ. ಮತ್ತೆ ಮ್ಯಾನೇಜ್‌ಮೆಂಟ್‌ನವರೂ ಕೂಡ ಮೀಸಲಾತಿ

ಕೊಡಬಾರದೆಂದು ಹೇಳುತ್ತಿಲ್ಲ. ಮೀಸಲಾತಿ 50 ಅಥವಾ 60 ಪರ್ಸೆಂಟ್ ಕೊಡುತ್ತೇವೆಂದು ಮ್ಯಾನೇಜ್‌ಮೆಂಟ್‌ನವರೂ ಕೂಡ ಒಪ್ಪಿಕೊಂಡಿದ್ದಾರೆ. ಗೊಂದಲ ಇರತಕ್ಕಂಥದ್ದು ಕೇವಲ ಒಂದೇ ವಿಚಾರದಲ್ಲಿ. ಅದು ಯಾವುದೆಂದರೆ, ಫೀ ಸ್ಟ್ರಕ್ಚರ್‌ಗೆ ಸಂಬಂಧಪಟ್ಟಿದ್ದು. ಹಿಂದೆ ಇಂಜಿನಿಯರಿಂಗ್ ಸೀಟ್‌ಗೆ ಎಸ್‌ಸಿ:ಎಸ್‌ಟಿ ಮತ್ತು ಓಬಿಸಿ ಕ್ಯಾಟಗೆರಿ ವಿದ್ಯಾರ್ಥಿಗಳಿಗೆ 8 ರಿಂದ 10 ಸಾವಿರ ರೂಪಾಯಿಗಳಲ್ಲಿ ಅಡ್ಮಿಷನ್ ಆಗುತ್ತಿತ್ತು. ಇಷ್ಟು ಕಡಿಮೆ ಬೆಲೆಯಲ್ಲಿ ಆ ದಿವಸಗಳಲ್ಲಿ ಇಂಜಿನಿಯರಿಂಗ್ ವ್ಯಾಸಂಗ ಮಾಡುವುದಕ್ಕೆ ಆಗುತ್ತಿತ್ತು. ಆದರೆ, ಇವತ್ತು ಆಗುತ್ತಿಲ್ಲ. ಏಕೆಂದರೆ, ಕೋರ್ಟಿನ ಒಂದು ಜಡ್ಜ್‌ಮೆಂಟ್‌ನಿಂದ ಈ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. Differential ಫೀಸ್ಟ್ರಕ್ಚರ್ ಇರಬಾರದೆಂದು ಸುಪ್ರೀಂ ಕೋರ್ಟ್ ಒಂದು ಕಡೆ ಹೇಳುತ್ತದೆ. ಈ ಒಂದು ಫೀನಲ್ಲಿ ಕ್ರಾಸ್ ಸಬ್ಸಿಡೈಜ್ ಮಾಡಬಾರದೆಂದು ಹೇಳುತ್ತದೆ. ಆದರೆ, ನೀವು ತಂದಿರತಕ್ಕಂಥ ಬಿಲ್‌ನಲ್ಲಿ ಎನ್.ಆರ್.ಐ. ಕೋಟಾ ಫಿಕ್ಸ್ ಮಾಡಿದ ಬಗ್ಗೆ ಏನು ಹೇಳಲಾಗಿದೆ ಎಂದರೆ, the State Government may prescribe the minimum fee to be collected from the Non Resident Indian students..

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಒಂದು ನಿಮಿಷ ಯೀಲ್ಡ್ ಆಗಿ. ಎನ್‌ಆರ್‌ಐ ಕೋಟಾ ಕೊಡುವಂತಾಗಿದ್ದರೆ we can go back to the original ಈ ಎಲ್ಲಾ ಸಮಸ್ಯೆಗೆ ಪರಿಹಾರ ಆಗುತ್ತದೆ. ಆದ್ದರಿಂದ ಎನ್‌ಆರ್‌ಐ ಕೋಟಾ ಮತ್ತು ಕಾಲೇಜಿನವರಿಗೂ ಕೂಡ ಒಂದು ಕೋಟಾ ಕೊಡಿ. ಇದು ಬರುವುದಿಲ್ಲ. ಈಗ ಇದು ಮತ್ತೆ ಒರಿಜನಲ್‌ಗೆ ಹೋಯಿತು.

ಶ್ರೀ ಆರ್. ದಿನೇಶ್ ಗುಂಡುರಾವ್ : ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದ ಹಾಗೆ, ನಾನು ಹೇಳತಕ್ಕಂಥದ್ದು ಏನೆಂದರೆ ಇದರ ಬಗ್ಗೆ ಮಾನ್ಯ ಶಂಕರಮೂರ್ತಿಯವರು ಗಮನ ಹರಿಸಬೇಕು. ಏಕೆಂದರೆ ಇದು ತಮ್ಮ ಬಿಲ್‌ನಲ್ಲಿಯೇ ಬಂದಿದೆ. ಅದೇನೆಂದರೆ,

"The State Government may prescribe the minimum fee to be collected from the Non-Resident Indian Students, and the higher fee so collected over and above the fee determined, shall be utilized for providing concession in fee to candidates belonging to scheduled castes and other backward classes''.

ಎಂದು ನೀವು ಹೇಳಿದ್ದೀರಿ. ಅಂದರೆ, ಒಂದು ಫೀ ಸ್ಟ್ರಕ್ಚರ್ ಜನರಲ್ ಕ್ಯಾಟಗೆರಿಗೆ ಮತ್ತು ರಿಜರ್ವ್ ಕ್ಯಾಟಗೆರಿಗೆ. ಇನ್ನೊಂದು ಫೀ ಸ್ಟ್ರಕ್ಚರ್ ಅಂದರೆ ಎನ್‌ಆರ್‌ಐ ಕೋಟಾದಲ್ಲಿ ಬರತಕ್ಕಂಥ ವಿದ್ಯಾರ್ಥಿಗಳಿಗೆ ನೀವೇ ಫೀಸ್ಟ್ರಕ್ಚರ್ ಹೇಳುತ್ತಿದ್ದೀರಿ. ನೀವು ಏನು ಹೆಚ್ಚು ಫೀ ಚಾರ್ಜ್ ಮಾಡುತ್ತೀರಿ ಅದರ ಮುಖಾಂತರ ಇಲ್ಲಿ ನೀವು ಕ್ರಾಸ್ ಸಬ್ಸಿಡೈಜ್ ಮಾಡಿ ಎಂದು ನೀವೇ ಹೇಳುತ್ತಿದ್ದೀರಿ. ಆದರೆ ನಾನು ಹೇಳುವುದೇನೆಂದರೆ, ಹಿಂದೆ 20 ಪರ್ಸೆಂಟ್ ಮ್ಯಾನೇಜ್‌ಮೆಂಟ್ ಕೋಟಾ ಕೊಡುತ್ತಿದ್ದರು. ಅವರು ಇದರಲ್ಲಿಯೇ ಎಲ್ಲವನ್ನೂ ಮ್ಯಾನೇಜ್ ಮಾಡುತ್ತಿದ್ದರು. ಮತ್ತೆ ನಮ್ಮ ಬಡ ವಿದ್ಯಾರ್ಥಿಗಳಿಗೂ ಕೂಡ ಅವಕಾಶ ಸಿಗುತ್ತಿತ್ತು. ಅಂದರೆ ಫೀ ಕಡಿಮೆ ಕೂಡ ಆಗುತ್ತಿತ್ತು. ನೀವು ಎನ್‌ಆರ್‌ಐ ಎಂದು ಫಿಕ್ಸ್ ಮಾಡುವ ಬದಲು ಆ ಸೀಟ್‌ಗಳನ್ನು ಯಾರಿಗಾದರೂ ಕೊಡಿ ಎಂದು ನೀವು ನೇರವಾಗಿ ಹೇಳಿ. ಎಷ್ಟು ಬೇಕಾದರೆ ಫೀ ಕಲೆಕ್ಟ್ ಮಾಡಲಿ. ಇದರ ಬದಲಿಗೆ ನಮ್ಮ ವಿದ್ಯಾರ್ಥಿಗಳಿಗೆ 10 ಸಾವಿರ ರೂಪಾಯಿಗಳಿಗೆ ಸೀಟ್‌ಗಳನ್ನಾದರೂ ಕೊಡಿ ಅಂದರೆ, ಎಸ್‌ಸಿ:ಎಸ್‌ಟಿ ಮತ್ತು ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಮತ್ತು ಎಲ್ಲಾ ಬಡಜನರ ಮಕ್ಕಳಿಗೆ 8 ಸಾವಿರ ರೂಪಾಯಿಗಳಲ್ಲಿಯೂ ಸೀಟ್ ಕೊಡಿಸಬಹುದು. ಈ ಒಂದು ಬಿಲ್‌ನಲ್ಲಿ ಇದರ ಬಗ್ಗೆ ಎಲ್ಲಿಯೂ ಪ್ರಸ್ತಾವನೆ ಇಲ್ಲ. ಆದ್ದರಿಂದ ಈ ಬಿಲ್‌ನ ಪ್ರಯೋಜನವಾದರೂ ಏನು? ರಿಜರ್ವೇಶನ್‌ಗೆ ಸಂಬಂಧಪಟ್ಟಂತೆ ಯಾರೂ ಕೂಡ ಗೊಂದಲ ಮಾಡುತ್ತಿಲ್ಲ, ಮತ್ತೆ ಯಾರೂ ಕೂಡ ಅದರ ಬಗ್ಗೆ ಪೈಪೋಟಿ ಮಾಡುತ್ತಿಲ್ಲ. ಎಲ್ಲರೂ ಇದನ್ನು ಒಪ್ಪಿಕೊಂಡಿದ್ದಾರೆ. ಇದರ ಬಗ್ಗೆ ಚರ್ಚೆಯ ಅಗತ್ಯತೆ ಇಲ್ಲ ಮತ್ತೆ ಈ ಬಿಲ್‌ನ ಅಗತ್ಯತೆ ಕೂಡ ಇಲ್ಲ. ಮತ್ತೆ ಈ ಸಭೆಯ ಮುಖಾಂತರ ಅದರ ಬಗ್ಗೆ ಏನೂ ಹೇಳಬೇಕಾಗಿರತಕ್ಕಂಥದ್ದು ಇಲ್ಲ. ನಮ್ಮ ಮುಂದೆ ಇರತಕ್ಕಂಥ ಮುಖ್ಯ ವಿಚಾರ ಏನೆಂದರೆ ಬಡ ವಿದ್ಯಾರ್ಥಿಗಳಿಗೆ ಈಗ ಯಾವ ರೀತಿಯಾಗಿ ಓದಿಸಬಹುದು? ಅಂದರೆ ಇಂಜಿನಿಯರ್ಸ್ ಅಥವಾ ಡಾಕ್ಟರ್ಸ್‌ಗಳಾಗಿ ಮಾಡಬಹುದು ಎಂಬುದು. ಆದರೆ, ಇದು ಇವತ್ತಿನ ದಿವಸ ಆಗುತ್ತಿಲ್ಲ. ಮಾನ್ಯ ಎಂ.ಬಿ. ಪಾಟೀಲ್‌ರವರು ಒಂದು ವಿಚಾರವನ್ನು ಈಗಾಗಲೇ ಹೇಳಿದರು. ಅದೇನೆಂದರೆ, ಇವತ್ತಿನದಿವಸ ಬೇರೆ ಸಮಾಜಕ್ಕೆ ಸೇರಿರತಕ್ಕಂಥ ಬಡಜನರು ಅಂದರೆ, ಅವರು ಬ್ರಾಹ್ಮಣರು ಅಥವಾ ಲಿಂಗಾಯಿತರು ಇರಬಹುದು. ಅವರಿಗೆ ಯಾವುದೇ ರೀತಿಯ ರಕ್ಷಣೆ ಇವತ್ತು ಇಲ್ಲ. ಅವರಿಗೂ ಕೂಡ ಎಲ್ಲೊಂದು ಕಡೆ ರಕ್ಷಣೆ ಕೊಡತಕ್ಕಂಥದ್ದು ಆಗಬೇಕು. ಇವತ್ತಿನ ದಿವಸ ಬಡ ಬ್ರಾಹ್ಮಣ, ಬಡ ಲಿಂಗಾಯಿತ, ಬಡ ವೈಶ್ಯ ಜನಾಂಗದ

ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಆಗುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಈ ರೀತಿಯಾದರೆ ಈ ವಿದ್ಯಾರ್ಥಿಗಳು ಹೇಗೆ ಓದಬೇಕು? ಆದ್ದರಿಂದ ಇದರ ಬಗ್ಗೆ ಕೂಡ ಚಿಂತನೆ ಆಗಬೇಕೆಂದು ಹೇಳುತ್ತಾ ಮಾನ್ಯ ಎಂ.ಬಿ. ಪಾಟೀಲ್‌ರವರು ಹೇಳಿರತಕ್ಕಂಥ ಮಾತನ್ನು ನಾನು ಸಹ ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ಖಂಡಿತ ಚಿಂತನೆ ಆಗಬೇಕು.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಮಾನ್ಯ ಛೇರ್ಮನ್‌ರವರೆ, ಹಲವಾರು ಸೊಸೈಟಿಗಳು ಫಾರ್ಮ್ ಆಗುವಾಗ ಲಿಂಗ್ವಿಸ್ಟಿಕ್ ಆಧಾರದ ಮೇಲೆ ಮತ್ತು ಅಲ್ಲಿನ ರೀಜನಲ್ ಆಧಾರದ ಮೇಲೆ ಈ ಸಂಸ್ಥೆಗಳು ನಿರ್ಮಾಣವಾಗಿದೆ. ಅವರ ಬೈಲಾದಲ್ಲಿ ಅವರು ಹೇಳತಕ್ಕಂಥ ಮೂಲ ಉದ್ದೇಶ ಏನೆಂದರೆ, ನಾವು ನಮ್ಮವರಿಗೆ ಅಡ್ಮಿಷನ್ ಕೊಡುವುದಕ್ಕೆ ಅಂದರೆ ಸ್ಥಳೀಯವಾಗಿರತಕ್ಕಂಥ ಲಿಂಗಾಯಿತರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸೀಟ್ ಪಡೆಯಬೇಕೆಂಬ ಉದ್ದೇಶದಿಂದ ಈ ಸಂಸ್ಥೆಗಳು ನಿರ್ಮಾಣವಾಗಿದೆ. ಆದ್ದರಿಂದ ಆ ಉದ್ದೇಶವನ್ನು ಆ ಸಂಸ್ಥೆಗಳು ಏಕೆ ಈಡೇರಿಸುತ್ತಿಲ್ಲ? ಅಂದರೆ, ಅದನ್ನು ಏಕೆ ಫುಲ್‌ಫಿಲ್ ಮಾಡುವುದಿಲ್ಲ? ಎಲ್ಲಿಯವರೆಗೆ ಆ ಸಂಸ್ಥೆಗಳಲ್ಲಿ ವೆಸ್ಟೆಡ್ ಇಂಟ್ರೆಸ್ಟ್ ಇರುತ್ತದೆಯೋ ಅಲ್ಲಿಯವರೆಗೆ ನಾವು ಯಾವುದೇ ದೃಷ್ಟಿಯಿಂದ ಕಾನೂನನ್ನು ತಂದರೂ ಕೂಡ ಇದು ಗೊಂದಲಕ್ಕೆ ಈಡಾಗುವುದು ನಿಜ.

ಶ್ರೀ ಎಂ.ಬಿ.ಪಾಟೀಲ (ತಿಕೋಟ) : ಮಾನ್ಯ ಛೇರ್ಮನ್‌ರೆ, ಕೆಲವೊಂದು ಇನ್‌ಸ್ಟಿಟ್ಯೂಷನ್‌ಗಳಲ್ಲಿ ಬಿಎಲ್‌ಡಿ ಆಗಿರಬಹುದು, ಕೆಎಲ್‌ಇ ಆಗಿರಬಹುದು, ಇನ್ನಿತರ ಇನ್‌ಸ್ಟಿಟ್ಯೂಷನ್ಸ್‌ಗಳು ಆಗಿರಬಹುದು, ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘವಾಗಲಿ ಆ ಏರಿಯಾ ಮತ್ತು ಆ ಕಮ್ಯುನಿಟಿ ಸಲುವಾಗಿ ಇದ್ದುದ್ದು. ಒಂದು ಸಲ ಉನ್ನಿಕೃಷ್ಣನ್ ಬಂದಾಗ ಆ ಅಧಿಕಾರ ಹೋಗಿಬಿಟ್ಟಿತು.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಅದು ಎಲ್ಲಾ ಇರಲಿ, ಮ್ಯಾನೇಜ್‌ಮೆಂಟ್ ಕೋಟಾದಲ್ಲಿ ಕೊಡಬೇಕು.

ಶ್ರೀ ಎಂ.ಬಿ. ಪಾಟೀಲ್ : ಇವತ್ತು ಆ ತರಹ ಪರಿಸ್ಥಿತಿ ಇಲ್ಲ. ಆ ಒಂದು ಏರಿಯಾಕ್ಕೆ ಆಗಲಿ, ಆ ಒಂದು ಕಮ್ಯುನಿಟಿಗೆ ಆಗಲಿ ಕೊಡುವಂಥ ಅವಕಾಶ ಇವತ್ತಿನ ದಿವಸ ಸುಪ್ರೀಂಕೋರ್ಟಿನಲ್ಲಿ ಒದಗಿಸಿ ಕೊಟ್ಟಿಲ್ಲ.

ಶ್ರೀ ದಿನೇಶ್ ಗುಂಡೂರಾವ್ : ಆದ್ದರಿಂದ ನಾನು ನನ್ನ ಮಾತನ್ನು ಈಗ ಬೇಗ ಮುಗಿಸುತ್ತೇನೆ. ಈ ಒಂದು ಬಿಲ್ ಮುಖಾಂತರ ನಮ್ಮ ರಾಜ್ಯದ ಜನತೆಗೆ ಏನೇನೂ ಪ್ರಯೋಜನ ಇಲ್ಲ. ನಮ್ಮ ಬಡ ವಿದ್ಯಾರ್ಥಿಗಳಿಗೆ ಏನೇನೂ ಪ್ರಯೋಜನ ಆಗುವುದಿಲ್ಲ. ನಾಳೆ ಕಾನೂನು ದೃಷ್ಟಿ ಕೂಡ ಈ ಬಿಲ್ ಎತ್ತಿ

ಹಿಡಿಯುವುದಕ್ಕೆ ಆಗುತ್ತದೋ ಇಲ್ಲವೋ? ಅದೂ ಕೂಡ ಪ್ರಶ್ನೆ ಇದೆ. ಆದ್ದರಿಂದ ದಯವಿಟ್ಟು ತಾವು ಇದನ್ನು ಪುನರ್ ಪರಿಶೀಲನೆ ಮಾಡತಕ್ಕಂಥದ್ದು, ಒಂದು ಸದನ ಸಮಿತಿಯನ್ನು ರಚನೆ ಮಾಡಿ, ಜಾಯಿಂಟ್ ಸೆಲೆಕ್ಷನ್ ಕಮಿಟಿಯನ್ನು ಮಾಡಿ, ಅದಕ್ಕೆ ಒಂದು ರೂಪವನ್ನು ತಂದು, ಬಡ ಗ್ರಾಮೀಣ ಭಾಗದಲ್ಲಿ ಇರತಕ್ಕಂಥ ನಮ್ಮ ವಿದ್ಯಾರ್ಥಿಗಳಿಗೆ ಎಲ್ಲಾ ವರ್ಗದ ಹುಡುಗರುಗಳಿಗೆ ಅವಕಾಶವಾಗುವಂಥ ರೀತಿಯಲ್ಲಿ ನೀವು ಒಂದು ಸಮಾಲೋಚನೆಯನ್ನು ಮಾಡಿ ಒಂದು ತೀರ್ಮಾನಕ್ಕೆ ಬರಬೇಕೇ ಹೊರತು. ಕೇವಲ ಏಕಾಏಕಿ ಇಲ್ಲಿ ಒಂದು ಬಿಲ್‌ನ್ನು ತಂದರೆ ಏನೂ ಪ್ರಯೋಜನವಿಲ್ಲ. ಇದಕ್ಕೆ ನಾವು ಏಕೆ ನಮ್ಮ ವಿರೋಧವನ್ನು ವ್ಯಕ್ತಪಡಿಸುತ್ತೇವೆಂದರೆ, ಪ್ರಯೋಜನವಾಗಬೇಕು, ಆದರೆ ಇದರಿಂದ ಏನೂ ಪ್ರಯೋಜನವಿಲ್ಲ. ಎಲ್ಲರನ್ನೂ ಕರೆಸಿ ಮಾತನಾಡಿ ಎಂದು ನಾನು ಮತ್ತೊಮ್ಮೆ ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

ಶ್ರೀ ಶಾಮನೂರು ಶಿವಶಂಕರಪ್ಪ (ದಾವಣಗೆರೆ) : ಮಾನ್ಯ ಛೇರ್ಮನ್‌ರೆ, ಈ ಮಸೂದೆಯನ್ನು ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ಸರ್ಕಾರದವರು ಇದನ್ನು ಅಭ್ಯಾಸ ಮಾಡಿಲ್ಲವೆಂದು ನನ್ನ ಅಭಿಪ್ರಾಯ. ಈ ಮಸೂದೆಯನ್ನು ತಯಾರು ಮಾಡಬೇಕಾದರೆ ಅಧಿಕಾರಿ ವರ್ಗದವರೂ ಕೂಡ ಇದನ್ನು ಓದಿಲ್ಲ. ಏಕೆಂದರೆ ಇಂತಹದ್ದು ಮೂರು ವರ್ಷದ ಕೆಳಗಡೆ ಇಂತಹ ಒಂದು ಮಸೂದೆಯನ್ನು ಮಾಡಬೇಕೆಂದು ಹೇಳಿ ಒಂದು ಡ್ರಾಫ್ಟ್ ಬಿಲ್ ಲಾ ಡಿಪಾರ್ಟ್‌ಮೆಂಟಿನಲ್ಲಿ ಇತ್ತು. ಆ ಬಿಲ್‌ನ್ನು ತರಿಸಿಕೊಂಡು ಬಿಟ್ಟು ಆ ಬಿಲ್‌ನ್ನು ಕಾಪಿ ಮಾಡಿಬಿಟ್ಟು ಇವತ್ತಿನ ದಿವಸ ಈ ಮಸೂದೆಯನ್ನು ಇಲ್ಲಿ ಮಂಡಿಸುತ್ತಿದ್ದಾರೆಂಬುದು ನನ್ನ ಅನಿಸಿಕೆ. ಇದರಲ್ಲಿ ಅನೇಕ ವಿಚಾರಗಳು ಒಂದಕ್ಕೊಂದು ತದ್ವಿರುದ್ಧವಾಗಿವೆ. ಏಕೆಂದರೆ ಈ ಕರ್ನಾಟಕದಲ್ಲಿ ಈ ಪ್ರೈವೇಟ್ ಕಾಲೇಜುಗಳು ಹುಟ್ಟಿಕೊಂಡು ಇಡೀ ರಾಷ್ಟ್ರದಲ್ಲಿಯೇ ಚೆನ್ನಾಗಿ ಕಾಲೇಜುಗಳನ್ನು ನಡೆಸುತ್ತಿದ್ದಾರೆಂದು ಕೀರ್ತಿಯನ್ನು ಒಂದು ಕಡೆ ಪಡೆದಿದ್ದಾರೆ, ಇನ್ನೊಂದು ಕಡೆ ಅಪಕೀರ್ತಿಯನ್ನು ಹೊಂದಿದ್ದಾರೆ ವ್ಯಾಪಾರೀಕರಣ ಮಾಡುತ್ತಿದ್ದಾರೆಂದು, ಹೇಳಿ. ಈ ರೀತಿ ನಡೆಸಬೇಕಾದರೆ ಈ ಬಿಲ್‌ನ್ನು ತರುವುದಕ್ಕೆ ಮುಂಚೆ ಇವೆಲ್ಲಾ ಆಲೋಚನೆಯನ್ನು ಮಾಡಿದ್ದರೆ ಇಷ್ಟೊಂದು ವಾಗ್ವಾದಕ್ಕೆ ಬರುತ್ತಿರಲಿಲ್ಲವೆಂಬುದು ನನ್ನ ಅಭಿಪ್ರಾಯ. ಇದರಲ್ಲಿ ಮುಖ್ಯವಾಗಿ ಅಧಿಕಾರಿಗಳದ್ದೇ ಪೂರ್ಣ ಕೈವಾಡ ಇರುವುದರಿಂದ ಮಾನ್ಯ ಮಂತ್ರಿಗಳು ಇದನ್ನು ತಮ್ಮ ಪ್ರೆಸ್ಟೀಜ್ ಎಂದು ತೆಗೆದುಕೊಳ್ಳದೆ ಇದನ್ನು ವಾಪಸ್ಸು ಪಡೆದು ಅಥವಾ ಜಾಯಿಂಟ್ ಸೆಲೆಕ್ಷನ್ ಕಮಿಟಿಗೆ ಕಳುಹಿಸತಕ್ಕಂಥದ್ದು ಬಹಳ

ಒಳ್ಳೆಯದೆಂಬುದು ನನ್ನ ಅಭಿಪ್ರಾಯ. ಈಗಾಗಲೇ ನಮ್ಮ ಸ್ನೇಹಿತರುಗಳು ಮಾತನಾಡಿದ್ದಾರೆ. 15 ಪರ್ಸೆಂಟ್ ಎನ್‌ಆರ್‌ಐ ಎಂದು ಏನು ಹೇಳುತ್ತಿದ್ದರು, ಈ ಬಿಲ್‌ನಲ್ಲಿರತಕ್ಕಂಥ ಎನ್‌ಆರ್‌ಐ ಬೇರೆ. ಸುಪ್ರೀಂ ಕೋರ್ಟಿನಿಂದ ಎನ್‌ಆರ್‌ಐ ಆಗಿರತಕ್ಕಂಥ ಬಿಲ್ ಬೇರೆ. ಈ ಮಸೂದೆಯಲ್ಲಿ ಏನು ಹೇಳುತ್ತಿದ್ದಾರೆಂದರೆ, ಫಾರಿನ್‌ನಲ್ಲಿಯೇ ಓದಿ ಬಂದಿರತಕ್ಕಂಥವನು ಮತ್ತು ಫಾರಿನ್‌ದಲ್ಲಿರತಕ್ಕಂಥ ಪೇರೆಂಟ್ಸ್ ಅವರು ಮಾತ್ರ ಎಲಿಜಿಬಲ್ ಎಂದು ಹೇಳುತ್ತಿದ್ದಾರೆ. ಆದರೆ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ Foreigners, NRI & others ಎಂದು ಹೇಳಿದ್ದಾರೆ. ಅಂದರೆ, ಅವರ ಸಂಬಂಧಿಕರೂ ಕೂಡ ಸ್ಪಾನ್ಸರ್ ಮಾಡಿದರೆ ಅವರನ್ನು ತೆಗೆದುಕೊಳ್ಳಬಹುದು. ಹಣ ಮಾತ್ರ ಡಾಲರ್ ರೂಪದಲ್ಲಿ ಬರಬೇಕು ಎನ್ನತಕ್ಕಂಥ ವಿಚಾರ ಮೊದಲು ಇತ್ತು. ಇವತ್ತಿನ ದಿವಸ ಈಗ ಇರತಕ್ಕಂಥ ಎನ್‌ಆರ್‌ಐಗೆ ಅದರಲ್ಲಿ ಈಗ ತಾನೇ ಹೇಳಿದಂತೆ 15 ಪರ್ಸೆಂಟ್ ಎಂದು ಹೇಳುತ್ತಿದ್ದಾರೆ. ಅಲ್ಲಿಗೆ ಏಳುವರೆ ಪರ್ಸೆಂಟ್ ಹೋಯಿತು.

"(b) the remaining seats shall be general category seats. Out of the general category seats upto fifteen percent may be filled by candidates belonging to the Non-Resident Indian quota"

ಆ ತರಹ ಆದರೆ ಏಳೂವರೆ ಪರ್ಸೆಂಟ್ ಬರುತ್ತದೆ, ಎಷ್ಟಾದರೂ ಬರಲಿ. ಅದರ ಬಗ್ಗೆ ನಾನು ಹೆಚ್ಚು ವಿಚಾರ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಫೀಸ್ ಸ್ಟ್ರಕ್ಚರ್‌ನ್ನು ಫಿಕ್ಸ್ ಮಾಡಬೇಕಾದರೂ ಕೂಡ ಪತ್ರಿಕೆಗಳಲ್ಲಿ ಅನೇಕ ಸಾರಿ ಬಂದಿದೆ. ಮ್ಯಾನೇಜ್‌ಮೆಂಟ್‌ನವರು ಫೀಸ್ ಇಂತಿಷ್ಟು ಖರ್ಚಾಗುತ್ತದೆಂದು ಲೆಕ್ಕವನ್ನು ಕೊಟ್ಟಾಗ ಅದನ್ನು ನೋಡಿಕೊಂಡು ಬಿಟ್ಟು ಅವರು ಹುಡುಗರಿಂದ ಜಡ್ಜ್ ಸಾಹೇಬರುಗಳು 5 ವರ್ಷದ ಫೀಸ್ ಬರುತ್ತದೆಂದು ಹೇಳಿಬಿಟ್ಟು ಲೆಕ್ಕಾಚಾರವನ್ನು ಹಾಕಿಕೊಂಡಿದ್ದಾರೆ. ಆದರೆ ಅಲ್ಲಿರುವ ಮ್ಯಾನೇಜ್‌ಮೆಂಟಿನವರು ಹೇಳುತ್ತಾರೆ, ನಿಮಗೆ ನಾಲ್ಕೂವರೆ ವರ್ಷದ ಫೀಸ್ ತೆಗೆದುಕೊಂಡು 5 ವರ್ಷದ ಫೀಸ್‌ನ ಲೆಕ್ಕ ಹಿಡಿದು ಕೊಂಡಿದ್ದಾರೆ. ನಾಲ್ಕುವರೆ ವರ್ಷವಾಗಿದೆ ನೋಡಿ ಎಂದು ಕೇಳಿದರೆ ನೀವು ಕೋರ್ಟಿಗೆ ಹೋಗಿ ಅಥವಾ ಸರ್ಕಾರಕ್ಕೆ ಹೋಗಿ ಎಂದು ಉತ್ತರ ಬರುತ್ತದೆಂಬ ದೂರು ಕೂಡ ಇದೆ. ಈ ರೀತಿ ಅನೇಕ ವಿಧವಾದ 7 ಜನರ ಜಡ್ಜ್‌ಮೆಂಟ್ ಬಂದ ಮೇಲೆ 5 ಜನ ಇರುವ ಬೆಂಚ್‌ನ ಜಡ್ಜ್‌ಮೆಂಟಿಗೆ ಯಾವ ಬೆಲೆ ಇಲ್ಲ. ಆದರೆ ಈ ಮಸೂದೆಯಲ್ಲಿ ಇಸ್ಲಾಮಿಕ್‌ದ್ದು ಅಳವಡಿಕೆ ಮಾಡಿಕೊಂಡಿದ್ದಾರೆ, ಇನಾಮ್‌ದಾರದ್ದು ಅಳವಡಿಕೆ ಮಾಡಿಕೊಂಡು ಎಲ್ಲವನ್ನೂ ಮಿಕ್ಸ್ ಆಫ್ ಮಾಡಿ

ಒಂದು ಬಿಲ್ ಎಂದು ಹೇಳಿ ಇಲ್ಲಿ ತಂದು ಬಿಟ್ಟು ಇವತ್ತಿನ ದಿವಸ ಬಡವರಿಗೆ, ಬಡ ಮಕ್ಕಳಿಗೆ ಹೆಚ್ಚು ಸೀಟು ಸಿಗದಂಥ ಇರುವ ಒಂದು ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಅದೂ ಅಲ್ಲದೆ ಅನೇಕ ಮ್ಯಾನೇಜ್‌ಮೆಂಟ್‌ನವರು ಇವತ್ತು ಕೋರ್ಟಿಗೆ ಹೋಗುತ್ತಿದ್ದಾರೆ. ಹಿಂದಿನ ಅನೇಕ ಕಾಲೇಜುಗಳಿಗೆ ಕೋಟ್ಯಾಂತರ ರೂಪಾಯಿಗಳು ಸರ್ಕಾರದಿಂದ ಬರಬೇಕಾಗಿದೆ ಎಂದು. ಈಗ ಇವರು ಬಜೆಟ್‌ನಲ್ಲಿ ಇವತ್ತಿನ ದಿವಸ ರಿಸರ್ವ್ ಮಾಡಿಲ್ಲ. ಬಡ ಮಕ್ಕಳಿಗೆ ನಾವು ಕೊಟ್ಟಂಥ ಸೀಟ್‌ಗಳನ್ನು ಕೊಡತಕ್ಕಂಥ ಫೀಸ್‌ಗಳನ್ನು ಭರ್ತಿ ಮಾಡಲಿಕ್ಕೆ ಹಣವನ್ನು ಇಡದವರನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಈ ಎಲ್ಲಾ ವಿಚಾರಗಳನ್ನು ನೋಡಿದರೆ, ಇದರಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗೆ ಕರ್ನಾಟಕದಲ್ಲಿ ಈ ಒಂದು ಸೀಟ್‌ಗಳಿಗೆ ಹೆಚ್ಚು ಡಿಮಾಂಡ್ ಎಂಬುದು ಗೊತ್ತಾಗುತ್ತದೆ. ಈಗ ಅಕ್ಕಪಕ್ಕದ ಆಂಧ್ರಪ್ರದೇಶ, ತಮಿಳುನಾಡಿನಲ್ಲಿ ಕೂಡ ಅನೇಕ ಕಾಲೇಜುಗಳು ಬಂದು ಇವತ್ತಿನ ದಿವಸ ಆ ಅಕ್ಕಪಕ್ಕದ ಸ್ಟೇಟ್‌ಗಳಿಗೆ ಹುಡುಗರುಗಳು ಹೋಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈಗ ಆದಷ್ಟೂ ಕಡಿಮೆಯಾಗಿಕೊಂಡು ಹೋಗುತ್ತಿದೆ. ಇಂಜನಿಯರಿಂಗ್‌ಗಳ ಬಗ್ಗೆ ಡಿಮ್ಯಾಂಡ್ ಇಲ್ಲ ಎಂದು ಶ್ರೀರಾಮ್‌ರೆಡ್ಡಿಯವರು ಹೇಳಿದರಲ್ಲಾ ಅಂತ ಹೇಳಿ. ಆ ರೀತಿ ಇಲ್ಲದಂತೆ ಮಾರ್ಕೆಟ್ ಆಗುವವರೆಗೆ ಇದೇ ಪರಿಸ್ಥಿತಿ. ಆದರೂ ಕೂಡ ಒಂದು ಬಿಲ್ ಅಂತೂ ಬರಬೇಕಾಗುತ್ತದೆ. ಬಿಲ್ ತರಲಿ. ಆದರೆ ಅದರ ಬಗ್ಗೆ ಸಮಾಲೋಚನೆಯನ್ನು ಮಾಡಿ ಅದರಲ್ಲಿರತಕ್ಕಂಥ ಲೋಪದೋಷಗಳನ್ನು ತಿದ್ದಿ ಅವೈಜ್ಞಾನಿಕವಾಗಿ ಇಲ್ಲದಂಥ ವೈಜ್ಞಾನಿಕವಾದ ಮಸೂದೆಯನ್ನು ತಂದರೆ ನಾವೆಲ್ಲರೂ ಕೂಡ ಹುತ್ಪೂರ್ವಕವಾದಂಥ ಸ್ವಾಗತವನ್ನು ಮಾಡತಕ್ಕಂಥ ಕೆಲಸವನ್ನು ಎಡಭಾಗದಲ್ಲಿ ಕುಳಿತಿರತಕ್ಕಂಥ ನಮ್ಮ ಮಿತ್ರರು ಹಾಗೂ ಎಲ್ಲಾ ಸದಸ್ಯರು ಮಾಡಬಹುದು ಎಂಬುದು ನನ್ನ ಒಂದು ನಂಬಿಕೆ. ಇದರಲ್ಲಿ ಇನ್ನೂ ಅನೇಕ ಲೋಪದೋಷಗಳು ಇವೆ. ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಫೀಸ್ ನಿಗದಿ ಮಾಡುವಾಗ ಲ್ಯಾಂಡ್ ಅಂಡ್ ಬಿಲ್ಡಿಂಗ್‌ಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳಿದೆ. ಆದರೆ ಈ ಮಸೂದೆಯಲ್ಲಿ ಅದನ್ನು ಗಣನೆಗೆ ತೆಗೆದುಕೊಳ್ಳಬಾರದು ಎನ್ನತಕ್ಕಂಥದ್ದು ಇದೆ. ಇದರಲ್ಲಿ ಪೂರ್ಣ ಅಧಿಕಾರಿಗಳದ್ದೇ ಕೈವಾಡ. ಮಂತ್ರಿಗಳ ಕೈವಾಡ ಇಲ್ಲ, ಶಾಸಕರ ಕೈವಾಡವೂ ಇಲ್ಲ. ಅಧಿಕಾರಿಗಳ ಉದ್ದೇಶ ಇದ್ದರೂ ಇರಬಹುದು, ಕರ್ನಾಟಕದಿಂದ ವಿದ್ಯಾರ್ಥಿಗಳು ಹೊರಗಡೆಯ ಸ್ಟೇಟ್‌ಗಳಿಗೆ ಹೋಗಲಿ ಎನ್ನುವುದು ಇರಬಹುದು ಎನ್ನತಕ್ಕಂಥದ್ದು ಈ ಮಸೂದೆಯನ್ನು ನೋಡಿದರೆ ಅನ್ನಿಸುತ್ತದೆ. ಒಟ್ಟಿನಲ್ಲಿ ಈ

ಬಿಲ್‌ನ್ನು ವಾಪಸ್ಸು ಪಡೆದಿಕೊಳ್ಳುವುದು ಸೂಕ್ತವೆಂಬುದು ನನ್ನದಾದರೂ ಅನಿಸಿಕೆ. ಈ ಮಸೂದೆಯಲ್ಲಿ ಅಧಿಕಾರ ಅಧಿಕಾರಿಗಳಿಗೆ ಇದೆಯೇ ಹೊರತು ಸರ್ಕಾರಕ್ಕೆ ಏನೂ ಇಲ್ಲ. ಕೈಕಟ್ಟಿಸಿಕೊಂಡಂತಾಗುತ್ತದೆ ಈ ಮಸೂದೆಯನ್ನು ಏನಾದರೂ ಹಠಮಾರಿತನಕ್ಕೆ ಬಿದ್ದು ಪಾಸು ಮಾಡಿಕೊಳ್ಳಲೇ ಬೇಕು ಎನ್ನುವುದಿದ್ದರೆ ನಿಮ್ಮ ಕೈಯನ್ನು ನೀವೇ ಕಟ್ಟಿಸಿಕೊಂಡಂತಾಗುತ್ತದೆ. ಆದ್ದರಿಂದ ಈ ಮಸೂದೆಯನ್ನು ನಮ್ಮ ಎಲ್ಲಾ ಹಿರಿಯ ಸದಸ್ಯರ ಅಪೇಕ್ಷೆಯಂತೆ ವಾಪಸ್ಸು ಪಡೆದು ಅಥವಾ ಜಾಯಿಂಟ್ ಸೆಲೆಕ್ಷನ್ ಕಮಿಟಿಗೆ ಕಳುಹಿಸಿ ಸೂಕ್ತವಾದ ತಿದ್ದುಪಡಿಗಳೊಂದಿಗೆ ಮುಂದೆ ತಂದು ಎಲ್ಲಾ ಪೋಷಕರು ಹಾಗೂ ವಿದ್ಯಾರ್ಥಿಗಳಿಗೆ ಒಳ್ಳೆಯದಾಗುವ ರೀತಿಯಲ್ಲಿ ನೀವು ಕೆಲಸವನ್ನು ಮಾಡಬೇಕು ನಾನು ಮ್ಯಾನೇಜ್‌ಮೆಂಟ್‌ನವರಿಗೆ ಒಳ್ಳೆಯದನ್ನು ಮಾಡಿ ಎಂದು ಹೇಳುವುದಿಲ್ಲ. ಒಟ್ಟಿನಲ್ಲಿ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕು, ಮಧ್ಯೆದಲ್ಲಿ ಸಿಕ್ಕಿಹಾಕಿಕೊಳ್ಳಬಾರದು. ಒಂದು ಕಾನೂನು ಮಾಡಿದ ಮೇಲೆ ಆ ಕಾನೂನು ಉಲ್ಲಂಘನೆಯಾಗಬಾರದು. ಆ ನಿಟ್ಟಿನಲ್ಲಿ ಯೋಚನೆ ಮಾಡಿ ತಾವು ಕಾನೂನು ತರಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧಪಕ್ಷದ ನಾಯಕರು) : ಮಾನ್ಯ ಛೇರ್ಮನ್‌ರವರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ. ತಾವು ಉತ್ತರ ಹೇಳುವುದಕ್ಕಿಂತಲೂ ಮುಂಚೆ ಎಲ್ಲರೂ ಕೂಡ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಇದರ ಬಗ್ಗೆ ಸಲಹೆಗಳನ್ನು ಸಹ ಕೊಟ್ಟಿದ್ದಾರೆ. ಸಲಹೆಗಳನ್ನು ಕೊಡತಕ್ಕಂತಹ ರೀತಿಯಲ್ಲಿ ಒಮ್ಮತವಾದ ಅಭಿಪ್ರಾಯ ಏನು ಮೂಡಿದೆ, ಇವತ್ತು. ಜಾಯಿಂಟ್ ಸೆಲೆಕ್ಟ್ ಕಮಿಟಿ 15 ದಿವಸದಲ್ಲಿ ಮಾಡಿ, ಅಥವಾ 8 ದಿವಸಗಳಲ್ಲಿ ಮಾಡಿ; ಇದರಲ್ಲಿ ಸಾಕಷ್ಟು ನ್ಯೂನ್ಯತೆಗಳು ಇವೆ, ಇವತ್ತು ಬಡವರಿಗೆ ಹಾಗೂ ಹಳ್ಳಿ, ಪ್ರದೇಶದಲ್ಲಿರುವವರಿಗೆ ಸಿ.ಇ.ಟಿ ಮತ್ತು ಪಿಯುಸಿ ಮಾರ್ಕ್ಸ್ ಸೇರಿಸದೇ ಇರುವುದರಿಂದ ಮೆಡಿಕಲ್ ಓದಲು ಇದರಿಂದ ಆಗುವುದಿಲ್ಲ. ಇವತ್ತು ಕೇಂದ್ರ ಸರ್ಕಾರದವರು ತಂದಂತಹ ಏನು ಇವತ್ತು ಡ್ರಾಫ್ಟ್ ಬಿಲ್ಲು ಇದೆ. ಅದರ ಬಗ್ಗೆ ಚರ್ಚೆಯನ್ನು ಮಾಡ ಬೇಕಾಗುತ್ತದೆ. ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಪ್ಪಿಸುವ ಬಗ್ಗೆ ಒಮ್ಮತದ ಅಭಿಪ್ರಾಯ ಮೂಡಿದೆ. ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನು ತಾವು ಮಾಡಿ, 15 ದಿವಸದೊಳಗಾಗಿ ವರದಿ ನೀಡಿದ ಮೇಲೆ ತಾವು ಕೂಡ ತರಬಹುದು. ಅದನ್ನು ಒಪ್ಪಿದರೆ ಸಾಕು, ಇದರ ಬಗ್ಗೆ ಚರ್ಚೆಬೇಕಾಗಿಲ್ಲ. ಉತ್ತರವೂ ಕೂಡ ಬೇಕಾಗಿಲ್ಲ.

ಶ್ರೀ ಎಂ.ಬಿ. ಪಾಟೀಲ್ : ಇವತ್ತು ಒಂದು ಪ್ರಶ್ನೆ ಉದ್ಭವಿಸುತ್ತಿದೆ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿದರೆ ಇವತ್ತಿನ ದಿವಸ ಏನಾಗಬಹುದು ಎಂದು ಹೇಳಿ ನಾನು ಸನ್ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಅಲ್ಲಿಯವರೆವಿಗೆ ಇವತ್ತಿನ ದಿವಸ ಒಂದು ಮೆಮೋರ್ಯಾಂಡಮ್ ಆಫ್ ಅಂಡರ್‌ಸ್ಟಾಂಡಿಂಗ್ ಏನು ಹಿಂದೆ ಮಾಡಿದ್ದೀರಿ, ಅದೇ ರೀತಿ ಮ್ಯಾನೇಜ್‌ಮೆಂಟ್ ಮತ್ತು ಗೌರ್ನಮೆಂಟ್ ಇವತ್ತಿನದಿವಸ ಸುಪ್ರೀಂಕೋರ್ಟಿಗೆ ಜಾಯಿಂಟ್ ಆಗಿ ಫೈಲ್ ಮಾಡಿ ಇವತ್ತಿನ ದಿವಸ ಹಾದಿ, 2–3 ತಿಂಗಳಲ್ಲಿ ಆಗಬೇಕು. ಈ ಒಂದು ವರ್ಷದ್ದು ಪ್ರತ್ಯೇಕ, ಒನ್‌ಟೈಮ್ ಎಂದು ಪರಿಗಣಿಸಿ ಒಂದು ವರ್ಷಕ್ಕೆ ಪ್ರತ್ಯೇಕ ಜಾಯಿಂಟ್‌ಮೆಮೋವನ್ನು, ಮ್ಯಾನೇಜ್‌ಮೆಂಟ್ ಮತ್ತು ಸರ್ಕಾರಕ್ಕೆ ಇವತ್ತಿನದಿವಸ ಮಾಡಿಕೊಂಡು ಜಾಯಿಂಟ್ ಸೆಲೆಕ್ಟ್, ಕಮಿಟಿ ಮಾಡಿ ಸಮಗವಾದಂತಹ ಒಂದು ಬಿಲ್ಲನ್ನು 2–3 ತಿಂಗಳಲ್ಲಿ ತರಬಹುದು ಎಂದು ನಾನು ಹೇಳುತ್ತೇನೆ.

ಛೇರ್ಮನ್ : ಹೈಯರ್ ಎಜ್ಯುಕೇಷನ್ ಮಿನಿಸ್ಟರ್‌ರವರೇ, ತಾವು ಮಾತನಾಡಿ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಛೇರ್ಮನ್‌ರವರೆ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ ವಿಧೇಯಕ 2006ರ ಕುರಿತಂತೆ ಸಾಕಷ್ಟು, ವಿಸ್ತಾರವಾದಂತಹ ಒಂದು ಚರ್ಚೆ ಬೆಳಿಗ್ಗೆನಿಂದಲೂ ಕೂಡ ನಡೆದಿರುತ್ತದೆ. ಬಹುಶಃ ಸದನದಲ್ಲಿ ಇಷ್ಟು ಸುದೀರ್ಘವಾಗಿ ಈ ವಿಧೇಯದ ಬಗ್ಗೆ ಚರ್ಚೆ ನಡೆದಿರುವುದು ಬಹಳ ಪ್ರಥಮವೆಂದು ನಾನು ಭಾವಿಸಿಕೊಳ್ಳುತ್ತೇನೆ. ಸಾಕಷ್ಟು ಸೂಕ್ಷ್ಮ ವಿಷಯಗಳು, ಈ ಬಿಲ್ಲಿನಲ್ಲಿ ಅಡಕವಾಗಿದೆ, ಈ ವಿಷಯಗಳೇ ಬಹಳ ಸೂಕ್ಷ್ಮವಾಗಿದೆ. ನಾವು ಸಿಇಟಿ ವಿಷಯ ಬಂದಾಗ ಇಂಜಿನಿಯರಿಂಗ್ ಮೆಡಿಕಲ್ ಡೆಂಟಲ್ ಅಥವಾ ಆಯುರ್ವೇದಿಕ್ ಇತ್ಯಾದಿ ಕಾಲೇಜು ವಿಷಯಗಳು ಬಂದಾಗ ಅನೇಕ ವರ್ಷಗಳಿಂದ ಈ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಆದರೆ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಆಯಾ ಕಾಲದಲ್ಲಿ ಆಯಾ ಪ್ರಯತ್ನಗಳೂ ಸಹ ಆಗುತ್ತಿರುವುದನ್ನು ನಾವು ನೋಡಿದ್ದೇವೆ. ಇದಕ್ಕೆ ಶಾಶ್ವತವಾಗಿ ಒಂದು ಪರಿಹಾರ ಸಿಕ್ಕಬೇಕೆನ್ನುವಂತಹ ದಿಕ್ಕಿನಲ್ಲಿ ಒಂದು ರಚನಾತ್ಮಕವಾದ ಚಿಂತನೆಯೇ ಆಗಿದೆ. ಆಯಾ ಅಡ್ಮಿಷನ್ ಮಾಡುವಂತಹ ಸಂದರ್ಭ ಬಂದಾಗ ವಿದ್ಯಾರ್ಥಿಗಳದ್ದೋ ಅಥವಾ

ಪಾಲಕರದ್ದೋ, ಮ್ಯಾನೇಜ್‌ಮೆಂಟಿನದ್ದೋ ಸರ್ಕಾರದ್ದೋ ಸುಪ್ರೀಂ ಕೋರ್ಟಿನದ್ದೋ ಕೇಂದ್ರ ಸರ್ಕಾರದ್ದೋ ಮಾತುಗಳನ್ನು ಹೇಳಿ ನಾವು ಆಯಾ ಕಾಲಕ್ಕೆ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡು ಮುಂದೆ ಮುಂದೆ ಹೋಗಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರದಲ್ಲಿಯೇ ಒಂದು ಮಸೂದೆ ಆಗಬೇಕು ಎನ್ನುವಂತಹ ಅಗತ್ಯವಿದೆ ಎನ್ನುವಂತಹದ್ದು ಎಲ್ಲಾ ರಾಜ್ಯಗಳ ಅಭಿಪ್ರಾಯವೂ ಇದೆ. ನಮ್ಮೆಲ್ಲರಿಗೂ ಕೂಡ ಮನವರಿಕೆಯಾಗಿದೆ. ಸುಪ್ರಿಂಕೋರ್ಟು ತನ್ನ ಮೂರು ನಿರ್ಣಯಗಳೇನೂ ಕೊಟ್ಟಿದೆ, ಇದರಿಂದ ಸಾಕಷ್ಟು ಗೊಂದಲ ವಿರುವುದನ್ನು ನಾವೆಲ್ಲರೂ ಅದನ್ನು ಮಾತಿನಲ್ಲಿ ನಮ್ಮ ಭಾವನೆಗಳನ್ನು ಮತ್ತು ಅಭಿಪ್ರಾಯಗಳನ್ನು ಹಿಂದೆಯೂ ವ್ಯಕ್ತಪಡಿಸಿದ್ದೇವೆ, ಈಗಲೂ ಕೂಡ ನೋಡುತ್ತಿದ್ದೇವೆ. ಇದರ ಬಗ್ಗೆ ಕೇಂದ್ರದಲ್ಲಿ ಮಸೂದೆಯಾಗಬೇಕು. ಅದರ ಬಗ್ಗೆ ನಮ್ಮ ಒಟ್ಟಾರೆ ಪ್ರಯತ್ನವನ್ನೂ ಕೂಡ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರುವಂತೆ ಆಗಬೇಕಾಗಿದೆ. ಅದಿಲ್ಲದಿದ್ದರೆ ಇದಕ್ಕೊಂದು ಶಾಶ್ವತವಾದಂತಹ ಪರಿಹಾರವನ್ನು ಹುಡುಕುವುದಕ್ಕೆ ಕಷ್ಟವಾಗುತ್ತದೆನ್ನು ವಂತಹದ್ದು ನಮ್ಮೆಲ್ಲರ ಅಭಿಪ್ರಾಯವಾಗಿದೆ. ಹಾಗಾಗಿ ಆ ದಿಕ್ಕಿನಲ್ಲಿಯೂ ಕೂಡ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದು ಅಲ್ಲಿ ಒಂದು ಸಮಗ್ರವಾದಂತಹ ಮಸೂದೆ ಬರುವುದಕ್ಕೆ ನಾವು ನಮ್ಮ ಪ್ರಯತ್ನವನ್ನು ಮುಂದುವರಿಸಬೇಕಾದಂತಹ ಅಗತ್ಯತೆ ಇದೆ. ಈಗ ಈ ಬಿಲ್ಲಿನಲ್ಲಿ ವಿಶೇಷವಾಗಿ ನಾವು ಸಿಇಟಿ ಇತ್ಯಾದಿ ವಿಷಯಗಳಿಗೆ ನೇರವಾಗಿ ವಿಷಯಗಳು ಸಂಬಂಧವಿಲ್ಲದಿದ್ದರೂ ಮುಖ್ಯವಾಗಿ ನಾವು ಶೇಕಡ 50ರಷ್ಟು, ನಮ್ಮ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಮೀಸಲು ಕೊಡುವಂತಹ ಒಂದು ವಿಶೇಷವಾದಂತಹ ಅವಕಾಶವಿದೆ. ಇದು ಅತ್ಯಂತ ಸ್ವಾಗತಾರ್ಹವಾದಂತಹ ಒಂದು ಈ ಬಿಲ್ಲಿನ ಅಂಶ. ಇದನ್ನು ನಾವೆಲ್ಲರೂ ಕೂಡ ಸ್ವಾಗತಿಸಬೇಕು. ಯಾರು ಗ್ರಾಮೀಣ ಭಾಗದ ಅರ್ಹ ಬಡ ಅರ್ಹ ವಿದ್ಯಾವಂತ ಪ್ರತಿಭಾವಂತ ವಿದ್ಯಾರ್ಥಿಗಳಿದ್ದಾರೋ ಅವರಿಗೆ ನಾವು ಬೇರೆ ಬೇರೆ ರೀತಿಯಲ್ಲಿ ಅವಕಾಶವನ್ನು ಕಲ್ಪಿಸಿಕೊಡುವುದರ ಜೊತೆಯಲ್ಲಿ ಈ ರೀತಿಯ ಕಾನೂನಿನ ಮೂಲಕ ಅವಕಾಶವನ್ನು ಕಲ್ಪಿಸಿಕೊಡುವಂತಹದ್ದು ಅತ್ಯಂತ ಸ್ವಾಗತಾರ್ಹವಾದುದು. ಈ ಸದನದಲ್ಲಿ ಇದು ಸರ್ವಾನುಮತದ ಒಂದು ಭಾವನೆ ಒಪ್ಪಿಗೆ ಈ ಫಿಷಯದಲ್ಲಿ ಇದ್ದೇ ಇದೆ. ಇಲ್ಲಿ ಎರಡನೆಯ ಅಭಿಪ್ರಾಯವನ್ನು ಯಾರೂ ವ್ಯಕ್ತಪಡಿಸಿಲ್ಲ, ಅದನ್ನು ವ್ಯಕ್ತಪಡಿಸುವುದಕ್ಕೂ ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಮತ್ತು ಗ್ರಾಮೀಣ ಭಾಗದ ಅರ್ಹ ಪ್ರತಿಭಾವಂತ ವಿದ್ಯಾರ್ಥಿಗಳ

ರಕ್ಷಣೆಯ ದೃಷ್ಟಿಯಿಂದ ಇದು ಅಗತ್ಯವಾಗಿ ಆಗಬೇಕಾಗಿರುವುದು. ಆದರೆ ಇಲ್ಲಿ ಮುಂದೆ ಬರುವಂತಹದ್ದು, ಈ ಓವರ್ ಸೀಯಿಂಗ್ ಕಮಿಟಿ ಏನಿದೆ, ಫೀಸ್ ಸ್ಟ್ರಕ್ಚರ್, ಅಡ್ಮಿಶನ್ ಭಾಗದ ವಿಷಯದಲ್ಲಿ ಇದರೊಳಗೆ ಸಾಕಷ್ಟು ರೀತಿಯ ಭಾವನೆಗಳು ಮತ್ತು ಅಭಿಪ್ರಾಯಗಳು ಬೇರೆ ಬೇರೆಯವರದ್ದು ಇದ್ದೆ ಇದೆ. ಸಹಜವಾಗಿ. ಆದರೆ ಇವತ್ತು ಸುಪ್ರಿಂಕೋರ್ಟಿನ ನಿರ್ದೇಶನದ ಹಿನ್ನೆಲೆಯಲ್ಲಿ ಅಥವಾ 93ನೆಯ ಅಮೆಂಡ್‌ಮೆಂಟಿನ ನಂತರದ ವಿಷಯದಲ್ಲಿ ಇದು ಮಾಡಬೇಕಾದಂತಹ ಅಗತ್ಯವಿದೆ. ಎನ್ನುವುದು ನಮಗೆ ಗೊತ್ತಿದೆ. ಅನೇಕ ಸದಸ್ಯರ ಭಾವನೆ ಏನು, ಎಲ್ಲಾ ಸದಸ್ಯರ ಅಭಿಪ್ರಾಯಗಳನ್ನು ತೆಗೆದುಕೊಂಡು ಈ ಮಸೂದೆಯನ್ನು ಮಾಡಬಹುದಾಗಿತ್ತು, ಕೆಲವು ಚಿಕ್ಕಪುಟ್ಟ ಅಮೆಂಡ್‌ಮೆಂಟ್‌ಗಳನ್ನೆಲ್ಲಾ ಸೂಚಿಸುವುದು ಇದೆ. ಆದರೆ ನಾವು ಎಷ್ಟು ಜಾಗರೂಕರಾದರೂ ಕಡಿಮೆಯೇ. ಸರ್ಕಾರದಲ್ಲಿ ನಾನು ವಿನಂತಿಸಿಕೊಳ್ಳುವುದಕ್ಕೆ ಬಯಸುವುದೇನೆಂದರೆ, ನಾವು ಚಾಪೆಯ ಕೆಳಗೆ ನುಸುಳವುದಕ್ಕೆ ನೋಡಿದರೆ ಕಾಮೆಡ್–(ಕೆ) ಯವರೆಲ್ಲರೂ ಇದ್ದಾರಲ್ಲಾ, ಪ್ರೈವೇಟ್ ಮ್ಯಾನೇಜ್‌ಮೆಂಟ್ ನವರು, ಅವರು ಹೇಗೆ ಹೇಗೆ ಇದ್ದಾರೆಂದು ನಮಗೆಲ್ಲರಿಗೂ ಗೊತ್ತಿದೆ. ಅವರು ರಂಗೋಲೆ ಕೆಳಗೆ ನುಸುಳುವುದಕ್ಕೂ ಆ ಪ್ರಯತ್ನವನ್ನು ಮಾಡುತ್ತಿರುವುದು ನಮಗೆಲ್ಲರಿಗೂ ಗೊತ್ತೇ ಇದೆ. ಹಾಗಾಗಿ ನಾವು ಈ ಸುಪ್ರೀಂಕೋರ್ಟಿನ ನಿರ್ದೇಶನದ ಹಿನ್ನೆಲೆಯಲ್ಲಿ ಈ ರೀತಿಯ ಕಾನೂನುಗಳನ್ನು ಮಾಡಿ ನಮ್ಮ ರಾಜ್ಯದ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಮುಂದಾಗುತ್ತಿರುವುದು ಇದು ಅಗತ್ಯವಾಗಿ ಮಾಡಬೇಕಾಗಿರುವುದು ಆದರೆ ಎಚ್ಚರಿಕೆಯನ್ನು ಬಹಳ ವಹಿಸಬೇಕಾಗಿದೆ. ಇದಕ್ಕೆ ಇವತ್ತು ಈ ಬಿಲ್ಲನ್ನು ಪಾಸು ಮಾಡಿದರೆ ನಾಳೆಯೇ ಸುಪ್ರೀಂಕೋರ್ಟಿಗೆ ಹೋಗುವುದಕ್ಕೆ ಬೇಕಾಗಿರುವಂತಹ ತಯಾರಿಗಳು ಉಳಿದವರು ಮಾಡುತ್ತಿರುವುದು ಎಲ್ಲರಿಗೂ ಗೊತ್ತಿರುವಂತಹ ಸಂಗತಿಯಾಗಿದೆ. ಹಾಗಾಗಿ ಬಹಳ ಎಚ್ಚರಿಕೆಯಿಂದ ನಾವು ನಮ್ಮ ವಿದ್ಯಾರ್ಥಿಗಳ ಹಿತರಕ್ಷಣೆ ಮಾಡುವುದಕ್ಕೆ ಬದ್ಧವಾಗಿರುವುದನ್ನು ನಾವು ಈ ಬಿಲ್ಲಿನ ಮೂಲಕ ತೋರಿಸುತ್ತಿದ್ದೇವೆ. ಇನ್ನು ಮುಂದೆಯೂ ತೋರಿಸಬೇಕಾದಂತಹ ಅಗತ್ಯತೆ ಇದೆ. ನಾಳೆಯ ಕ್ಷಣದಿಂದಲೂ, ಬಿಲ್ ಪಾಸಾಯಿತು ಎನ್ನುವುದಕ್ಕೆ ಅಷ್ಟಕ್ಕೆ ಸೀಮಿತವಾಗದೆ ಬಿಲ್ ಪಾಸು ಆಗುವುದು ಒಂದು ಭಾಗ, ಆದರೆ ಬಿಲ್ ಪಾಸಾದ ನಂತರ ಇದರ repurcussions ನೋಡಬೇಕು. ಮುಂದೆ ಇನ್ಯಾರೂ ಯಾವ ಯಾವ ರೀತಿಯಲ್ಲಿ ಈ ಬಿಲ್ಲಿಗೆ ತಡೆ ಒಡ್ಡುವುದಕ್ಕೆ ಇನ್ಯಾವ ರೀತಿಯಲ್ಲಿ ಪ್ರಯತ್ನಗಳು ಆಗುತ್ತಿವೆ. ಅದಕ್ಕೆ ನಾವು ಯಾವ ಯಾವ ಪ್ರಯತ್ನಗಳನ್ನು

ಕೈಗೊಳ್ಳಬೇಕು. ಎಂಬುದರ ಬಗ್ಗೆಯೂ ಕೂಡ ಯೋಚನೆ ಮಾಡಬೇಕು. ನಾನು ಇನ್ನೂ ಹೆಚ್ಚು ವಿವರಗಳನ್ನು ಹೇಳುವುದಕ್ಕೆ ಹೋಗದೆ ಸಾಕಷ್ಟು ವಿಷಯಗಳು ಇಲ್ಲಿ ಚರ್ಚೆಯಾಗಿದೆ. ನಾನು ಒಂದೇ ಒಂದು ವಿನಂತಿಯನ್ನು ಮಾನ್ಯ ಸಚಿವರಲ್ಲಿ ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ. ಫೀಸ್ಟ್ರಕ್ಚರ್‌ನ ಹಿನ್ನೆಲೆಯಲ್ಲಿ ಕಾಲೇಜಿನ ಗ್ರೇಡಿಂಗ್‌ನ್ನು ಮಾಡಲೇಬೇಕು. ಇದರ ಬಗ್ಗೆ ಅನೇಕ ಸಮಿತಿಗಳು ಹೇಳಿದೆ. ಅನೇಕ ತಜ್ಞರುಗಳೂ ಸಹ ಅಭಿಪ್ರಾಯವನ್ನು ಪಟ್ಟಿದ್ದಾರೆ. ಇಲ್ಲಿ ಏನಾಗಿದೆ ಎಂದರೆ ಕಾಲೇಜಿನ ಗ್ರೇಡಿಂಗ್‌ನ್ನು ಮಾಡುವುದಕ್ಕೆ ನಮಗೆ ಆಗದೆ ನಾವು ಫೀ ಸ್ಟ್ರಕ್ಚರನ್ನು ಡಿಸೈಡ್ ಮಾಡುವುದು ನಡೆದಿದೆ. ಇದು ಬೇರೆ ಬೇರೆ ರಾಜ್ಯಗಳಲ್ಲಿ ಇದೆ. ನಾನು ವಿವರಗಳನ್ನು ಹೇಳುವುದಕ್ಕೆ ಬಯಸುವುದಿಲ್ಲ. ಈಗ ಸಮಯವು ಸಾಕಷ್ಟು ಆಗಿದೆ. ಗ್ರೇಡಿಂಗ್ ಸಿಸ್ಟಮ್‌ನ್ನು ತರಲೇಬೇಕು. ಇಲ್ಲಿ ಮೂಲಭೂತ ಸೌಕರ್ಯಗಳು ಇರಬೇಕೆಂದು ಎಲ್ಲ ನಾರ್ಮ್ಸ್‌ಗಳು ಹೇಳುವುದು ಇದೆ. ಅದು ಬೇರೆ ವಿಷಯ. ಆದರೆ ಯಾವ ಸೌಲಭ್ಯಗಳು ಇದೆ ಎನ್ನುವುದರ ಬಗ್ಗೆ ನಾವು ಆಯಾ ಕಾಲೇಜಿನಲ್ಲಿ ಸೌಲಭ್ಯಗಳು ಇದೆ ಎನ್ನುವ ಆಧಾರದ ಮೇಲೆ ಫೀ ಸ್ಟ್ರಕ್ಚರನ್ನು ತರದೆಹೋದರೆ ನಾವು ವಿದ್ಯಾರ್ಥಿಗಳಿಗೆ ಮತ್ತೆ ಅನ್ಯಾಯ ಮಾಡಿದಂತಾಗುತ್ತದೆ. ಪಾಲಕರಿಗೆ ಇನ್ನೂ ಹೆಚ್ಚು ಹೊರೆಯಾಗುತ್ತದೆ. ಅದಕ್ಕಾಗಿ ಫೀಸ್ಟ್ರಕ್ಚರ್ ಡಿಸೈಡ್ ಮಾಡುವಾಗ ಕಾಲೇಜಿನ ಗ್ರೇಡಿಂಗ್‌ಗಳನ್ನು ಮಾಡಬೇಕು, ಆ ರೀತಿಯ ಗ್ರೇಡಿಂಗ್ ಆಧಾರದ ಮೇಲೆ ಫೀಸ್ಟ್ರಕ್ಚರನ್ನು ಡಿಸೈಡ್ ಮಾಡುವಂತಹದ್ದು ಆಗಬೇಕು ಎನ್ನುವ ಮಾತನ್ನು ಹೇಳಿ ಕೊನೆಯಲ್ಲಿ ಈ ಮೂರು ಸಮಿತಿಗಳು ಇರುವುದರ ಬಗ್ಗೆ ಸಾಕಷ್ಟು ವಿವರವಾಗಿ ಇಲ್ಲಿ ವಿಷಯಗಳು ವ್ಯಕ್ತವಾಗಿದೆ. ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಶಿಕ್ಷಣ ಈ ವಿಷಯಗಳಿಗೆ ಕುರಿತಂತೆ ಇಲ್ಲಿ ಸರ್ಕಾರಿ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ಬಗ್ಗೆ ವಿಶೇಷವಾಗಿ ಇದೆಲ್ಲಾ ಅನ್ವಯವಾಗುವಂತೆ ಮಾಡಬೇಕು ಇನ್ನು ಕೆಲವು ಕಡೆಗಳಲ್ಲಿ ಇದಕ್ಕೆ ವಿದ್ಯಾರ್ಥಿಗಳೆ ಬರುವುದಿಲ್ಲ ಅಲ್ಲಿ ಖಾಸಗಿಯವರಿಗೆ ತುಂಬಿಕೊಳ್ಳುವುದಕ್ಕೆ ಅವಕಾಶ ಕೊಡುವುದಕ್ಕೆ ನಾವು ನಮ್ಮ ಪ್ರಯತ್ನವನ್ನು ಮಾಡಬೇಕು. ಹಾಗಾಗಿ ನನಗನ್ನಿಸುವುದೇನೆಂದರೆ, ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭದ ಇದರೊಳಗೆ ನಾವು ಎರಡನೇಯ ವಿಷಯದಲ್ಲಿ ಸರ್ಕಾರಿ ಮತ್ತು ಅನುದಾನಿತ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಶಿಕ್ಷಣ ಸಂಸ್ಥೆಗಳಲ್ಲಿ ಅನ್ನುವುದನ್ನು ಸೇರಿಸಿಕೊಳ್ಳಬೇಕು. ಎಂದು ನನಗನ್ನಿಸುತ್ತಿದೆ. ಹಾಗೆಯೇ (ಕ್ಯೂ)ನಲ್ಲಿ "ಆದರೆ ಈ ಉದ್ದೇಶಕ್ಕಾಗಿ ಭಾರತೀಯ ವೈದ್ಯ ಪದ್ದತಿ ಮತ್ತು ಹೋಮಿಯೋಪತಿಯ ಅನುದಾನರಹಿತ

ಶಿಕ್ಷಣ ಸಂಸ್ಥೆಗಳನ್ನು ಸೇರಿಸತಕ್ಕದ್ದಲ್ಲ" ಎನ್ನುವುದನ್ನು ಸೇರಿಸಬೇಕಾಗುತ್ತದೆ ಎಂದು ನನಗನ್ನಿಸುತ್ತದೆ. ಅದೇ ರೀತಿ(ಯು)ನಲ್ಲಿ ನಾವು ಅನುದಾನಿತವಲ್ಲದ ಶಿಕ್ಷಣ ಸಂಸ್ಥೆಗಳೆಂದರೆ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನವನ್ನು ಅಥವಾ ಸಹಾಯ ಅನುದಾನವನ್ನು ಸ್ವೀಕರಿಸಿದ ಭಾರತೀಯ ವೈದ್ಯ ಪದ್ಧತಿ ಮತ್ತ ಹೋಮಿಯೋಪತಿ ಶಿಕ್ಷಣ ಸಂಸ್ಥೆಗಳನ್ನು ಉಳಿದ ಇತರ ಯಾವುದೇ ಖಾಸಗಿ ಆಡಳಿತವುಳ್ಳ ಶಿಕ್ಷಣ ಸಂಸ್ಥೆ ಎಂದು ಸೇರಿಸಿಕೊಳ್ಳಬೇಕೆಂಬ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇದರಿಂದಾಗಿ ಆಯುರ್ವೇದಿಕ್ ಕಾಲೇಜುಗಳು ಇತ್ಯಾದಿಗಳು ಏನು ಶುರುವಾಗಿದೆ ಅವರಿಗೆ ಹೆಚ್ಚು ಅನುಕೂಲವಾಗಬಹುದು. ವಿದ್ಯಾರ್ಥಿಗಳು ಅಲ್ಲಿಗೆ ಹೋಗುವುದಕ್ಕೆ ನಮ್ಮ ಸರ್ಕಾರದ ಹಿತಾಸಕ್ತಿ ಸರ್ಕಾರದ ವಿದ್ಯಾರ್ಥಿಗಳು ನಾವು ಅವರಿಗೆ ಅಲಾಟ್ ಮಾಡಿಕೊಡುವುದು ನಮ್ಮೆಲ್ಲಾ ರೀತಿಯ ವಿದ್ಯಾರ್ಥಿಗಳ ಹಿತರಕ್ಷಣೆ ಮಾಡುವುದರ ಜೊತೆಯಲ್ಲಿ ಖಾಲಿ ಉಳಿದಿರುವುದನ್ನು ಮೆರಿಟ್ ಆಧಾರದ ಮೇಲೆ ಅವರು ಆಯ್ಕೆ ಮಾಡಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡುವುದು ಹೆಚ್ಚು ಸೂಕ್ತವೆಂದು ನನ್ನ ಅಭಿಪ್ರಾಯವೆಂದು ಹೇಳುತ್ತೇನೆ. ಈ ಬಿಲ್ಲಿನ ಬಗ್ಗೆ ಸಾಕಷ್ಟು ವಿಸ್ತಾರವಾಗಿ ಚರ್ಚೆಯಾಗಿದೆ. ಸರ್ಕಾರ ಬಿಲ್ ಪಾಸಾದ ನಂತರದಲ್ಲಿ ಈ ಬಿಲ್ಲಿಗೆ ಅಡೆತಡೆಗಳನ್ನು ಉಂಟು ಮಾಡುವಂತಹ ಪ್ರಯತ್ನಗಳನ್ನು ಯಾರ್ಯಾರು ಮಾಡಬಹುದು ಎಂಬುದು ಸರ್ಕಾರಕ್ಕೆ ಗೊತ್ತಿದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಆಗಬೇಕು ಎಂದು ವಿನಂತಿಯನ್ನು ಮಾಡುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ) : ಸನ್ಮಾನ್ಯ ಅಧ್ಯಕ್ಷರೇ, ಒಂದು ನಿಮಿಷದಲ್ಲಿ ರಿಸರ್ವೇಷನ್ ಮೇಲೆ ಹೇಳುತ್ತೇನೆ, ಉಳಿದದ್ದು ಏನನ್ನೂ ಮಾತನಾಡಲಿಕ್ಕೆ ಹೋಗುವುದಿಲ್ಲ. ಇಲ್ಲಿ 9 (i) (ಎ) ರಲ್ಲಿನ "ಅನುದಾನಿತ ಸಂಸ್ಥೆಗಳಲ್ಲಿ, ಎಲ್ಲಾ ಸರ್ಕಾರಿ ಸೀಟುಗಳನ್ನು, ರಾಜ್ಯ ಸರ್ಕಾರದ ಮೀಸಲಾತಿ ನೀತಿಗೊಳಪಟ್ಟು 3(6)ನೇ ಪ್ರಕರಣಕ್ಕೆ ಅನುಸಾರವಾಗಿ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಸಮಿತಿಯ ಮೂಲಕ ಭರ್ತಿ ಮಾಡಿಕೊಳ್ಳತಕ್ಕದ್ದು" ಎಂದು ಹೇಳಿದ್ದೀರಿ, ಇದರಲ್ಲಿ ನಿಯಮದ ಪ್ರಕಾರ 25% ರೂರಲ್ ಹುಡುಗರಿಗೆ ಮೀಸಲಾತಿ ಬರುತ್ತದೆಯೇ? ಇಲ್ಲವಾದರೆ ಹಳ್ಳಿಯ ಎಸ್.ಸಿ. ಜನಾಂಗದ ಮಕ್ಕಳು ಎಲ್ಲಿಗೆ ಹೋಗಬೇಕು? ದಯವಿಟ್ಟು ಈಗ ನಾವು ಅಪಾಯಿಂಟ್ಮೆಂಟ್‌ನಲ್ಲಿ ರಿಸರ್ವೇಷನ್‌ನಲ್ಲಿ ರಿಸರ್ವೇಷನ್ ಏನು ಕೊಟ್ಟಿದ್ದೇವೆ, ಅದನ್ನೂ ಕೂಡ ದಯವಿಟ್ಟು ಇದರಲ್ಲಿ ಸೇರಿಸಬೇಕು. ಇಲ್ಲದಿದ್ದರೆ ಇಲ್ಲಿ ಒಬ್ಬ ಹಳ್ಳಿಯ

ಮಕ್ಕಳನ್ನು ಇಲ್ಲಿ ಸೇರಿಸಿಕೊಳ್ಳಲಿಕ್ಕಾಗುವುದಿಲ್ಲ. ಕೋರ್ಟಿಗೆ ಹೋದರೂ ಏನೂ ಆಗಲಿಲ್ಲ, ಸರಿಯಾಗಿದೆ. ರಿಸರ್ವೇಷನ್ ಸರಿಯಿದೆಯೆಂದೂ ಹೇಳಿದ್ದಾರೆ, ರಿಸರ್ವೇಷನ್‌ನಲ್ಲಿ ರಿಸರ್ವೇಷನ್ ಮಾಡಲಾಗಿದೆ. ಹಿಂದೆ ಇದ್ದಂತಹ 10% ಸಹ ಹೋಗಿದೆ. ಈ ಕಾರಣದಿಂದ ಹಳ್ಳಿಯ ಮಕ್ಕಳು ಬರಬೇಕೆಂದರೆ ಆ 25% ಅನ್ನು ಅಪಾಯಿಂಟ್ಮೆಂಟ್‌ಗೆ ಏನು ಕೊಡುತ್ತಿದ್ದೇವೆ, ಇಲ್ಲಿ ಕೂಡ ಅದನ್ನು ಇದರಲ್ಲಿ ಸೇರಿಸಬೇಕೆಂದು ಸಲಹೆಯನ್ನು ನಾನು ಕೊಡಬಯಸುತ್ತೇನೆ.

ಶ್ರೀ ಆಲಂಗೂರು ಶ್ರೀನಿವಾಸ್ (ಮುಳುಬಾಗಿಲು) : ಇಲ್ಲಿ ಪರಿಶಿಷ್ಟ ಜಾತಿ :ವರ್ಗ ಮೀಸಲಾತಿಯನ್ನು ಇಟ್ಟಿದ್ದೀರಿ. ನೀವು ಯಾವ ಬೇಸಿಸ್ ಮೇಲೆ ಮೀಸಲಾತಿಯನ್ನು ಇಟ್ಟಿದ್ದೀರಿ? ಬರೇ ಜಾತಿ ಆಧಾರದ ಮೇಲೆ ಇದೆಯೇ ಅಥವಾ ಆರ್ಥಿಕವಾಗಿ ಮುಂದಿರತಕ್ಕಂಥ ಜನಕ್ಕೇನಾದರೂ ಮೀಸಲಾತಿ ಇದೆಯೇ? ಇದರ ಬಗ್ಗೆ ಕೂಡ ಕ್ಲಾರಿಫಿಕೇಷನ್ ಕೊಡಬೇಕು, ಏಕೆಂದರೆ ಇಲ್ಲೇನಾಗಿದೆ, ಪರಿಶಿಷ್ಟ ಜಾತಿ : ವರ್ಗ ಎಂದು ಹೇಳಿ ಇಲ್ಲಿ ಮೀಸಲಾತಿ ಸಿಗುವಂತಹದ್ದು ಬರೇ ಟೌನ್‌ನಲ್ಲಿರತಕ್ಕಂಥ ಕೆಲವೇ ಜನಕ್ಕೆ ಮಾತ್ರ ಸಿಗುತ್ತಿದೆ, ಹಳ್ಳಿಯಲ್ಲಿರುವಂತಹ ಜನಕ್ಕೆ ದೊರೆಯುತ್ತಿಲ್ಲ. ಆದ್ದರಿಂದ ಶ್ರೀಮಂತರಿಗೇ ಮಾತ್ರ ಮೀಸಲಾತಿ ಸಿಗುತ್ತಿದೆ, ಆ ದೃಷ್ಟಿಯಲ್ಲಿ ಸಿಗದಿದ್ದವರಿಗೂ ಕೂಡ ಈ ಬಗ್ಗೆ ನೀವು ಸ್ವಲ್ಪ ಪರಿಗಣಿಸಬೇಕಾಗುತ್ತದೆ.

ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಶ್ರೀನಿವಾಸ್ ಎತ್ತಿರುವ ವಿಚಾರವನ್ನು ನಾನೂ ಒಪ್ಪಿಕೊಳ್ಳುತ್ತೇನೆ, ಬರೇ ಇದು ನಗರಕ್ಕೆ ಮಾತ್ರ ಸೀಮಿತವಾಗಬಾರದು, ಗ್ರಾಮಾಂತರ ಜನತೆಗೂ ಕೂಡ ಅನ್ವಯಿಸುವಂತಾಗಬೇಕು. ಅದನ್ನು ಅವರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಡಿ. ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ನಾನು ಈ ಒಂದು ಪರಿಶೀಲನೆಗೆ ಇಟ್ಟಂತಹ ಈ ಮಸೂದೆಯ ಬಗ್ಗೆ ಸಾಕಷ್ಟು ವ್ಯಾಪಕವಾದ ಚರ್ಚೆಯಾಗಿದೆ. ನಾನು ಉತ್ತರ ಹೇಳಿದ ಮೇಲೆ ತಾವು ಮತ್ತೆ ಮಾತನಾಡಿ.

ಶ್ರೀ ಧರಂಸಿಂಗ್ (ವಿರೋಧ ಪಕ್ಷದ ನಾಯಕರು) : ಈಗಾಗಲೇ 2 ಗಂಟೆಯಾಗಿದೆ, ಊಟವಾದ ನಂತರ ತಾವು ಉತ್ತರವನ್ನು ಕೊಡಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ : ಹೌದು ನಾನು ಹೇಳಿಬಿಡುತ್ತೇನೆ. ನೀವು ಹೇಳಿದ ಎಲ್ಲಾ ಪ್ರಶ್ನೆಗಳನ್ನು ಬರೆದುಕೊಂಡಿದ್ದೇನೆ, ಅಷ್ಟೂ ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತೇನೆ.

ಶ್ರೀ ಎನ್. ಧರಂಸಿಂಗ್ : ಈಗಾಗಲೇ ಎರಡು ಗಂಟೆಯಾಗಿದೆ, ಊಟವಾದ ಮೇಲೆ ನೀವು 3.00 ಗಂಟೆಗೆ ಉತ್ತರವನ್ನು ಕೊಡಿ. 3.00 ಗಂಟೆಗೆ ತಾವು ಉತ್ತರವನ್ನು ಪ್ರಾರಂಭ ಮಾಡಿ, ನಾವು ಬಂದು ಸದನದಲ್ಲಿ ಕೂರುತ್ತೇವೆ.

ಶ್ರೀ ಡಿ. ಹೆಚ್. ಶಂಕರಮೂರ್ತಿ : 2.30 ಗಂಟೆಯೊಳಗೆ ಉತ್ತರವನ್ನು ಹೇಳಿಬಿಡುತ್ತೇನೆ, ನಂತರ ಊಟ ಮಾಡಬಹುದು. ಇಷ್ಟೊತ್ತಿನವರೆಗೆ ತಮ್ಮ ಮಾತುಗಳನ್ನು ನಾನು ಕೇಳಿದ್ದೇನೆ, ನನ್ನ ಮಾತನ್ನು ಕೇಳಲಿಕ್ಕೆ ತಾವು ತಯಾರಿಲ್ಲವಲ್ಲಾ. ನಾನು ಈಗ ಮಾತನಾಡೋದು ಬೇಡವೇ?

ಶ್ರೀ ಎನ್. ಧರಂಸಿಂಗ್ : 10.00 ಗಂಟೆಯಿಂದ ಸದನದಲ್ಲಿ ಬಂದು ಕುಳಿತಿದ್ದೇವೆ. ಒಂದು ತಾಸು ಊಟವಾದ ಮೇಲೆ ಸದನ ಸೇರೋಣ, ಈಗ ಯಾರು ಕೇಳುತ್ತಾರೆ. ನಿಮ್ಮ ತರಾತುರಿ ನಮಗೆ ಗೊತ್ತಿದೆ. ನಾವು 3.00 ಗಂಟೆಗೆ ಬರುತ್ತೇವೆ, ಆಗ ಉತ್ತರವನ್ನು ಕೊಡಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ : ನಾನು ತರಾತುರಿಯಲ್ಲಿಲ್ಲ. ಉತ್ತರವನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಎನ್. ಧರಂಸಿಂಗ್ : ಈಗ ಸದನವನ್ನು ಅಡ್ಜರ್ನ್ ಮಾಡಿ 3.00 ಗಂಟೆಗೆ ಬರುತ್ತೇವೆ, ಆಗ ಉತ್ತರವನ್ನು ಕೊಡಿ.

ಶ್ರೀ ಡಿ. ಹೆಚ್. ಶಂಕರಮೂರ್ತಿ : ಈಗ ನಾನು ನೀವು ಹೇಳಿರುವ ಮಾತನ್ನು ಕೇಳಿದ್ದೇನೆ, ನನ್ನ ಮಾತನ್ನು ಕೇಳಲಿಕ್ಕೆ ರೆಡಿಯಿಲ್ಲವಲ್ಲಾ.

ಚೇರ್ಮನ್ : ಈಗ ಮಾನ್ಯ ವಿರೋಧ ಪಕ್ಷದ ನಾಯಕರೇ, 10–15 ನಿಮಿಷದಲ್ಲಿ ಉನ್ನತ ಶಿಕ್ಷಣ ಸಚಿವರು ಉತ್ತರ ನೀಡುತ್ತಾರೆ.

ಶ್ರೀ ಡಿ. ಹೆಚ್. ಶಂಕರಮೂರ್ತಿ : ನಾನು ಇಲ್ಲಿ ಉತ್ತರವನ್ನು ಕೊಟ್ಟ ಮೇಲೆ ಮೇಲ್ಮನೆಗೆ ಹೋಗಬೇಕು.

ಶ್ರೀ ಆರ್. ವಿ. ದೇಶಪಾಂಡೆ : ಅಧ್ಯಕ್ಷರೇ, ಕೇವಲ 10 ನಿಮಿಷದಲ್ಲಿ ಆಗುವುದಿಲ್ಲ. ಉತ್ತರವನ್ನು ಎಲಾಬರೇಟ್ ಆಗಿ ಹೇಳಬೇಕು. ಅವರಿಗೂ ಸಹ ಸಮಯವನ್ನು ಕೊಡಬೇಕಾಗುತ್ತದೆ, ನಾವು ಅವರಿಗೆ ಗಡ್‌ಬಡ್ ಮಾಡಲಿಕ್ಕಾಗುವುದಿಲ್ಲ.

ಶ್ರೀ ಡಿ. ಹೆಚ್. ಶಂಕರಮೂರ್ತಿ : ಮಾನ್ಯ ಸಭಾಧ್ಯಕ್ಷರೇ, ನಾನು ಉತ್ತರ ಕೊಡುತ್ತೇನೆ. ನನ್ನನ್ನು ಕರೆದಿದ್ದೀರಿ.

ಶ್ರೀ ವಿ. ಸೋಮಣ್ಣ : ಅಧ್ಯಕ್ಷರೇ, ಇನ್ನೂ ಕೆಲವರು ಮಾತನಾಡುವವರಿದ್ದಾರೆ, ದಯಮಾಡಿ ತಾವು ಅಪರೂಪಕ್ಕೆ ಅಧ್ಯಕ್ಷರ ಸ್ಥಾನದಲ್ಲಿ

ಕುಳಿತಿದ್ದೀರಿ. ಎಲ್ಲರಿಗೂ ಅವಕಾಶವನ್ನು ಕೊಡಿ, ಆಮೇಲೆ ಅವರು ಉತ್ತರವನ್ನು ಸದನದಲ್ಲಿ ನೀಡಲಿ.

ಶ್ರೀ ಎನ್. ಧರಂಸಿಂಗ್: ಯಾವಾಗಲಾದರೂ ತಾವೇ ಉತ್ತರವನ್ನು ಕೊಡಬೇಕು. ನಾವು ಹತ್ತು ಗಂಟೆಗೆ ಬಂದು ಇಲ್ಲಿ ಕುಳಿತಿದ್ದೇವೆ. You must understand. ನೀವು ಈ ರೀತಿಯ ಹಿಂಸೆಯನ್ನು ನಮಗೆ ಕೊಡಬಾರದು. ನೀವು ಸರ್ಕಾರ ನಡೆಸುವವರು ಈ ರೀತಿ ಮಾತನಾಡಬಾರದು.

ಶ್ರೀ ಡಿ. ಹೆಚ್. ಶಂಕರಮೂರ್ತಿ : ತಾವು ನನಗೆ ಹಿಂಸೆ ಕೊಡುತ್ತಿದ್ದೀರಿ. ನಾನು ಕಾಫಿಯನ್ನು ಕುಡಿಯದೇ ಬಂದು ಸದನದಲ್ಲಿ ಕುಳಿತಿದ್ದೇನೆ. ನೀವೂ ಸಹ ಈ ರೀತಿ ಮಾತನಾಡಬಾರದಲ್ಲವೇ ಸರ್? ನೀವು ಮಾತನಾಡುವುದನ್ನು ಕೇಳುವುದಕ್ಕೆ ನಾನು ಇಲ್ಲಿ ಕುಳಿತಿದ್ದೇನೆ.

ಶ್ರೀ ಎನ್. ಧರಂಸಿಂಗ್ : ಅಧ್ಯಕ್ಷರೇ, ನೀವು ಸದನವನ್ನು ಈಗ ಅಡ್ಜರ್ನ್ ಮಾಡಿ ಕ್ರಮೇಣ ಅವರು ಉತ್ತರವನ್ನು ನೀಡಲಿ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೇ, ತಾವು ಅಪರೂಪಕ್ಕೆ ಅಲ್ಲಿ ಕುಳಿತಿದ್ದೀರಿ, ದಯಮಾಡಿ ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ, ನಮಗೂ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ. ಆಮೇಲೆ ನಿಧಾನವಾಗಿ ಮಾತನಾಡೋಣ.

ಚೇರ್ಮನ್ : ಇಲ್ಲ, ಈಗ ಸಾಕಷ್ಟು ಜನ ಮಾತನಾಡಿದ್ದಾರೆ. ಬಿಲ್ಸ್ ಮೇಲೆ ಮಂತ್ರಿಗಳು ಉತ್ತರ ನೀಡಲಿ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ : ಶಂಕರಮೂರ್ತಿಯವರೇ, ನಾನು ಇಂದು ನಿಮಗೆ ಅಪೀಲ್ ಮಾಡುತ್ತೇನೆ, In the larger interest of the society, it is better you refer this to the Joint Select Committee. ಸ್ವಲ್ಪ ಕೇಳಿ,

ಶ್ರೀ ಡಿ. ಹೆಚ್. ಶಂಕರಮೂರ್ತಿ : ಸರ್, ಅದು ಆಯಿತಲ್ಲಾ, ಅದು ಇಲ್ಲವೆಂದು ಆಯಿತು, ಮತ್ತೆ ಏಕೆ ಚರ್ಚೆ ಮಾಡುತ್ತೀರಿ. ಎಲ್ಲಾ ನೀವು ಹೇಳಿದ ಹಾಗೆ ಕೇಳಬೇಕಾಗುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅರೆ ನೀವು ಆಯಿತಲ್ಲಾ ಎಂದರೆ ಹೇಗೆ? ಮತ್ತೆ ನಾವು ಇದಕ್ಕೆ ಬೇರೆ ಸ್ಟೆಪ್ ಹುಡುಕಬೇಕಾಗುತ್ತದೆ. We have also got other weapons to use. Don't make it a prestige issue.

ಶ್ರೀ ಡಿ. ಹೆಚ್. ಶಂಕರಮೂರ್ತಿ : ನೀವು ಹೇಳಿದ್ದನ್ನು ನಾನು ಇಷ್ಟೊತ್ತಿನವರೆಗೆ ಕೇಳಿದೆ, ನಾನು ಹೇಳುವುದನ್ನು ಕೇಳಲಿಕ್ಕೆ ತಾವು ತಯಾರಿಲ್ಲ.

ತಾವು ಎಲ್ಲಾ ಮಕ್ಕಳಿಗೆ ಮೀಸಲಾತಿ ಕೊಡಬೇಕೆಂದು ಹೇಳುತ್ತಿದ್ದೀರಿ, ನನ್ನ ಉತ್ತರದಿಂದ ಸಮಾಧಾನ ಆಗದಿದ್ದರೆ ಆಮೇಲೆ ಮಾತನಾಡಿ. ನೀವು ಹೇಳಿದ್ದನ್ನೇ ನಾನು ಒಪ್ಪಿಕೊಳ್ಳಬೇಕೇ? ನಾನೇನು ಮಾತನಾಡಲೇಬಾರದೇ? ನಾನು ಮಾತನಾಡುವುದೇ ಬೇಡವೆನ್ನುವುದಾದರೆ ಹೇಗೆ ಸಭಾಧ್ಯಕ್ಷರೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆಯಿತು, ನೀವು 3.00 ಗಂಟೆಗೆ ಉತ್ತರವನ್ನು ನೀಡಿ.

ಚೇರ್ಮನ್ : ಸೋಮಣ್ಣನವರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಡಿ. ಹೆಚ್. ಶಂಕರಮೂರ್ತಿ : ನಾನು ಉತ್ತರವನ್ನು ಕೊಡಲಿಕ್ಕೆ ಬಿಡದಿದ್ದರೇ ಹೇಗೆ? ನಾನು ಏನು ಹೇಳುತ್ತೇನೆ ಎನ್ನುವುದನ್ನು ಕೇಳಿ, ಆಮೇಲೆ ಈ ಸಭೆ ಅದಕ್ಕೆ ಏನು ನಿರ್ಣಯ ಮಾಡುತ್ತದೆಯೋ ಆ ನಿರ್ಣಯಕ್ಕೆ ನಾನು ಬದ್ಧನಿದ್ದೇನೆ. ಅವರು ಒಂದು ಸೈಡ್ ಹೇಳಿಬಿಟ್ಟು ಅದೇ ತೀರ್ಮಾನವೆಂದರೆ ಹೇಗಾಗುತ್ತದೆ? ಸರ್ಕಾರದಿಂದ ಉತ್ತರವನ್ನು ಕೇಳಲಿಕ್ಕೂ ತಯಾರಿಲ್ಲ, ಉತ್ತರ ಬೇಡವೇ?

ಶ್ರೀ ದಿನೇಶ್ ಗುಂಡೂರಾವ್ : ಸರ್, 3.00 ಗಂಟೆಗೆ ಉತ್ತರವನ್ನು ಕೇಳೋಣ. ಊಟವಾದ ಮೇಲೆ ನಾವು ಏನಾದರೂ ಕ್ಲಾರಿಫಿಕೇಷನ್ ಇದ್ದರೆ ಕೇಳಬಹುದು.

ಶ್ರೀ ಎನ್ ಧರಂಸಿಂಗ್ : ನೀವೂ ಕೂಡ ವಿರೋಧ ಪಕ್ಷದ ನಾಯಕರಾಗಿ ಕೆಲಸವನ್ನು ಮಾಡಿದ್ದೀರಿ. 2.00 ಗಂಟೆಗೆ ಡಿಸ್‌ಕಷನ್ ಮುಗಿದಿದೆ. ಮತ್ತೆ ಒಂದು ಗಂಟೆ ಕಾಲ, ಮೂರು ಗಂಟೆ ಕಾಲ ನಮಗೆ ಇಲ್ಲಿ ಕೂರಲಿಕ್ಕಾಗುತ್ತದೆಯೇ?

ಶ್ರೀ ಡಿ. ಹೆಚ್. ಶಂಕರಮೂರ್ತಿ : ಏನು ಮಾಡಲಿಕ್ಕಾಗುತ್ತದೆ?

ಶ್ರೀ ಧರಂಸಿಂಗ್ : ಏನು ಮಾಡಬೇಕೆಂದರೆ 3.00 ಗಂಟೆಗೆ ಉತ್ತರವನ್ನು ಕೊಡಿ.

ಮಾನ್ಯ ಸದಸ್ಯರೊಬ್ಬರು : ನೀವು ಸರಕಾರ ನಡೆಸುವಾಗ ನಾವೂ ಸಹ ಮೂರು ಗಂಟೆಗಳ ಕಾಲ ಕುಳಿತಿಲ್ಲವೇ?

(ಗೊಂದಲ)

ಶ್ರೀ ಡಿ. ಹೆಚ್. ಶಂಕರಮೂರ್ತಿ : ಸಭಾಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ 3.00 ಗಂಟೆಗೆ ಉತ್ತರವನ್ನು ಕೊಡಲಿಕ್ಕೆ ನನಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಆದರೆ ಅದು ಬಿಟ್ಟು ನಮಗೆ ಉತ್ತರ ಬೇಡ. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿ ಎಂದು ಏನು ಹೇಳಿದರು, ಅದರ

ಸಲುವಾಗಿ ನನ್ನ ದೂರು ಇದೆ. ಖರ್ಗೆಯವರು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿ ಎಂದು ಹೇಳಿದರಲ್ಲಾ, ಅದಕ್ಕೆ ನಾನು ಒಪ್ಪಲಿಲ್ಲ. ವಿರೋಧ ಪಕ್ಷದ ನಾಯಕರು ಹೇಳಿದ್ದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಉತ್ತರವನ್ನು ಬೇಡ ಎಂದರೆ ಹೇಗೆ? 3.00 ಗಂಟೆಗೆ ನಾನು ಉತ್ತರವನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಧರಂಸಿಂಗ್ : ಊಟವಾದ ನಂತರ ಸಮಾಧಾನವಾಗಿ ಎರಡು ಗಂಟೆಗಳ ಕಾಲ ಉತ್ತರವನ್ನು ಕೊಡಿ.

ಶ್ರೀ ಡಿ. ಹೆಚ್. ಶಂಕರಮೂರ್ತಿ : ಅದನ್ನು ನಾನು ಒಪ್ಪುತ್ತೇನೆ.

ಚೇರ್ಮನ್ : ಈಗ ಸದನವನ್ನು 3.00 ಗಂಟೆಗೆ ಸೇರುವಂತೆ ಮುಂದೂಡುತ್ತಿದ್ದೇನೆ.

(ಸದನವು 2.07 ಗಂಟೆಗೆ ಮುಂದೂಡಿ ಭೋಜನದ ನಂತರ ಮತ್ತೆ 3.00 ಗಂಟೆಗೆ ಸೇರುವಂತೆ ನಿರ್ಣಯಿಸಿತು)

(ಸದನವು ಮಧ್ಯಾಹ್ನ 3 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರು, (ಶ್ರೀ ಕೃಷ್ಣ) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು).

ಶ್ರೀ. ಡಿ. ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಈ ಒಂದು ವಿಧೇಯಕವನ್ನು ಮಂಡಿಸುವುದಕ್ಕೆ ಕಾರಣವೇ ಬಹಳ ಪ್ರಮುಖವಾದುದು, ಅದನ್ನು ನಾನು ವಿಧೇಯಕದ ಮೊದಲ ಪ್ಯಾರದಲ್ಲೇ ನಾನು ಸ್ಪಷ್ಟ ಮಾಡಿದ್ದೇನೆ. ಈ ವಿಧೇಯಕ ಆಗಲೇಬೇಕು, ಆಗದೇ ಹೋದರೆ ನಮ್ಮ ರಾಜ್ಯದ ಪರಿಶಿಷ್ಟಜಾತಿ : ಪರಿಶಿಷ್ಟಪಂಗಡ ಮತ್ತು ಹಿಂದುಳಿದ ವರ್ಗದ ಸಾವಿರಾರು ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಇವತ್ತು ವಿಧೇಯಕ ಮಾಡಬೇಕೆಂದು ಒಂದು ಸುಪ್ರೀಂಕೋರ್ಟ್ ಹೇಳಿದೆ ಎರಡನೆಯದು ನಮಗೂ ಬದ್ಧತೆ ಇದೆ ಹಾಗಾಗಿ ಈ ವಿಧೇಯಕವನ್ನು ನಾನು ತಂದಿದ್ದೇನೆ. ಮತ್ತೆ ಈ ವಿಧೇಯಕದ ಮೇಲೆ ಚರ್ಚೆ ನಡೆದಂತಹ ಸಂದರ್ಭದಲ್ಲಿ ಗೌರವಾನ್ವಿತ ಸಾಕಷ್ಟು ಸದಸ್ಯರು ವಿರೋಧಪಕ್ಷದ ನಾಯಕರು ಮಾಧುಸ್ವಾಮಿಯವರು, ಖರ್ಗೆಯವರು, ಶ್ರೀರಾಮ್‌ರೆಡ್ಡಿಯವರು, ಜಯಪ್ರಕಾಶ್ ಹೆಗಡೆ ದಿನೇಶ್ ಗುಂಡೂರಾವ್‌ರವರು ಪಾಟೀಲರು ಶಿವಶಂಕರಪ್ಪನವರು ವಿಶ್ವೇಶ್ವರ ಹೆಗಡೆ ಇವರೆಲ್ಲಾ ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ, ನಾನು ಅದನ್ನೆಲ್ಲಾ ಗಮನಿಸಿದ್ದೇನೆ, ಕೆಲವು ಸಂಗತಿಗಳನ್ನೆಲ್ಲಾ ನಾನು ಗುರುತು ಮಾಡಿಕೊಂಡಿದ್ದೇನೆ. ಅವರು ಚರ್ಚೆಯ ಮಧ್ಯೆ ಎತ್ತಿದಂತಹ ಒಂದೆರಡು ಸಂಗತಿಗಳಿಗೆ ಸ್ವಲ್ಪ ಸಮಾಧಾನಪಡಿಸುವಂತಹ

ಪ್ರಯತ್ನವನ್ನು ನಾನು ಮಾಡುತ್ತೇನೆ. ಕೇಂದ್ರ ಸರ್ಕಾರ ಯಾವುದೇ ಕಾನೂನು ಮಾಡುವ ಸ್ಥಿತಿಯಲ್ಲಿಲ್ಲ. ಅವರು ಮಾಡುವುದಿಲ್ಲ. ಮಾಡದಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಕೇಂದ್ರ ಸರ್ಕಾರ ಡ್ರಾಫ್ಟ್ ಬಿಲ್ ಮಾಡಿ, ನಿಮ್ಮ ಕಾಮೆಡ್‌ಗೂ ಕಳುಹಿಸಿದ್ದಾರೆ, ನಿಮ್ಮ ಕಾರ್ಯದರ್ಶಿಯವರಿಂದ ಚೆಕ್‌ಅಫ್ ಮಾಡಿಸಿ, ನಾನು ನಿಮಗೆ ಕೊಡುತ್ತೇನೆ. ಡ್ರಾಫ್ಟ್ ಬಿಲ್ ರೆಡಿ ಮಾಡಿ, ಎಲ್ಲಾ ರಾಜ್ಯಗಳ ಎಜ್ಯುಕೇಷನ್ ಕಾರ್ಯದರ್ಶಿಯವರಿಗೆ ಕಳುಹಿಸಿ ನಿಮ್ಮ ರೀಯಾಕ್ಷನ್ ಕೇಳಿದ್ದಾರೆ. ನೀವು ವಿರೋಧಪಕ್ಷದ ಲೀಡರ್ ಅಲ್ಲ, you are the Government ಮಾತನಾಡುವಾಗ ಗೌರ್ನಮೆಂಟ್ ಆಗಿ ಮಾತನಾಡಬೇಕಾಗುತ್ತದೆ, ಫ್ಯಾಕ್ಟ್ಸ್ ಹೇಳಿ, ಗೌರ್ನಮೆಂಟ್ ಆಫ್ ಇಂಡಿಯಾ initiative ತೆಗೆದುಕೊಂಡಿದ್ದಾರೆ, ಡ್ರಾಫ್ಟ್ ಬಿಲ್ ಅನ್ನು ಕಳುಹಿಸಿದ್ದಾರೆ, 15 ದಿನಗಳೊಳಗೆ ತಮ್ಮ ಅಭಿಪ್ರಾಯವನ್ನು ತಿಳಿಸಿ ಎಂದೂ ಹೇಳಿದ್ದಾರೆ ಇದು ಇರುವ ಸ್ಥಿತಿ, ತಪ್ಪಿದ್ದರೆ ತಪ್ಪೆಂದು ಹೇಳಿ.

ಶ್ರೀ. ಡಿ. ಹೆಚ್. ಶಂಕರಮೂರ್ತಿ : ರಾಂಗೂ ಇಲ್ಲ ರೈಟೂ ಇಲ್ಲ, ಎರಡೂ ಇಲ್ಲ.

ಶ್ರೀ. ಆರ್.ವಿ. ದೇಶಪಾಂಡೆ : ರಾಂಗೂ ಇಲ್ಲ ರೈಟೂ ಇಲ್ಲವೆಂದು ಹೇಗೆ ಹೇಳುತ್ತೀರಿ?

ಶ್ರೀ. ಡಿ.ಹೆಚ್. ಶಂಕರಮೂರ್ತಿ : ಮಾನ್ಯ ಸಭಾಧ್ಯಕ್ಷರೆ, ಕೇಂದ್ರ ಸರ್ಕಾರದವರು ಡ್ರಾಫ್ಟ್ ಬಿಲ್ ಕಳುಹಿಸಿರುವುದು ನಿಜ, ಕೇಂದ್ರ ಸರ್ಕಾರದವರು ಡ್ರಾಫ್ಟ್ ಬಿಲ್ ಕಳುಹಿಸಿ 15 ದಿವಸಗಳೊಳಗೆ ಅಭಿಪ್ರಾಯ ತಿಳಿಸಿ ಎಂದು ಹೇಳಿ ಬಹಳ ದಿವಸಗಳಾಯಿತು, ಅದರ ಬಗ್ಗೆ ಅವರು ನಿರ್ಣಯ ಮಾಡಲಿಲ್ಲ, ಈಗ ನಮ್ಮ ಸರ್ಕಾರ ಒಂದು ಬಿಲ್ ಮಾಡಲೇ ಬೇಕಾದ ಜವಾಬ್ದಾರಿ ಸುಪ್ರೀಂಕೋರ್ಟ್ ತೀರ್ಮಾನದ ಹಿನ್ನೆಲೆಯಲ್ಲಿದೆ, ಹಾಗಾಗಿ ಈ ವಿಧೇಯಕವನ್ನು ನಾನು ತಂದಿದ್ದೇನೆ ಮತ್ತು ಇದನ್ನು ನಾನು ಸುಪ್ರೀಂಕೋರ್ಟ್‌ನ ಮಾತಿಗೆ ಅನುಗುಣವಾಗಿಯೇ ತಂದಿದ್ದೇನೆ, ಬೇರೆ ಯಾವುದೋ ರೀತಿಯಲ್ಲಿ ತಂದಿಲ್ಲ. ಮತ್ತೆ ಹಿಂದೆ ಇದ್ದ ಯಾವುದೇ compromise for male ಗಳನ್ನು ಈಗ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಕಾರಣ, ಈ ಇನಾಂದಾರ್ ಜಡ್ಜ್‌ಮೆಂಟ್ ಆದ ಮೇಲೆ, ಹೋದ ವರ್ಷ ಮೂರು ಟೈರ್ ಇತ್ತು ಅರ್ಧ ಪರ್ಸೆಂಟೇಜ್ ಇತ್ತು ಇದ್ಯಾವುದಕ್ಕೂ ಈಗ ಬೆಲೆ ಇಲ್ಲ, ಅದನ್ನು ಈಗ ನಾವು ಮಾಡುವುದಕ್ಕೆ ಬರುವುದಿಲ್ಲ. ಕೇಂದ್ರ ಸರ್ಕಾರದ

ಯಾವುದೇ ಒಂದು ಕಾನೂನು ಇಲ್ಲದೆ ಇರುವ ಹಿನ್ನೆಲೆಯಲ್ಲಿ, in absence of the central Legislation. it is a duty on my government to enact a Legislation. ಅದಕ್ಕಾಗಿ ನಾನು ಇದನ್ನು ತರುತ್ತಿದ್ದೇನೆ. ನಮ್ಮ ಸರ್ಕಾರ ಬಡ ಮತ್ತು ಗ್ರಾಮೀಣ ಭಾಗದಿಂದ ಬಂದಂತಹ ಮಕ್ಕಳಿಗೆ ಯಾವ ರೀತಿ ಸಹಾಯ ಮಾಡುತ್ತೀರಾ ತೊಂದರೆಯಾಗುತ್ತದೆ ಎಂಬುದು ಸ್ವಾಭಾವಿಕವಾಗಿದೆ, ಅದಕ್ಕೆ ನಾನೂ ಸ್ಪಂದಿಸುತ್ತೇನೆ, ಅವರಿಗೆ ನಾವು ಯಾವ ರೀತಿಯಾಗಿ ಸಹಾಯ ಮಾಡಬಹುದೆನ್ನುವುದರ ಬಗ್ಗೆ ಸರ್ಕಾರ ಬಹಳ ದೀರ್ಘವಾಗಿ ಚಿಂತನೆಯಲ್ಲಿದೆ, ಸ್ಕಾಲರ್ ಶಿಫ್ ಕೊಡಬಹುದಾ ಇಲ್ಲವೇ ಬೇರೆ ರೀತಿಯಾಗಿ ನಾವು ಸಹಾಯ ಮಾಡಬಹುದೆನ್ನುವುದರ ಬಗ್ಗೆ ನಾವು ಬಹಳ ದೀರ್ಘವಾದ ಚಿಂತನೆ ಯಲ್ಲಿದ್ದೇವೆ. ಆಮೇಲೆ ಖಾಸಗಿ ಕಾಲೇಜುಗಳಲ್ಲಿರುವ ಸೀಟುಗಳನ್ನು ಅವರಾಗಿಯೇ ಸ್ವಾಮಿ, ಇಷ್ಟು ಸೀಟುಗಳನ್ನು ನಿಮಗೆ ಬಿಟ್ಟುಕೊಡುತ್ತೇವೆ ಅಂದರೆ ಮಾತ್ರ ಅವು ಸರ್ಕಾರಿ ಸ್ವಾಧೀನಕ್ಕೆ ಬರುತ್ತವೆಯೇ ಹೊರತು ಅವರು ಇಲ್ಲ ಅಂದರೆ ಇಲ್ಲ. ಉದಾಹರಣೆಗೆ ಕೆಲವು ಇಂಜಿನಿಯರಿಂಗ್ ಕಾಲೇಜಿನವರು ನಮಗೆ ಮೌಖಿಕವಾಗಿ ಹೇಳಿದ್ದಾರೆ. ಸ್ವಾಮಿ, ನೀವು ಏನೇ ಕಾನೂನು ಮಾಡಿ ಪರವಾಗಿಲ್ಲ ನಮ್ಮ ಕಾಲೇಜಿನ ಅಷ್ಟೂ ಸೀಟುಗಳನ್ನು ನೀವು ಹೇಳುವವರಿಗೇ ಬಿಟ್ಟುಕೊಡುತ್ತೇವೆ ಅಂತ. ಹಾಗಾಗಿ ಅದನ್ನೂ ಈ ವಿಧೇಯಕದಲ್ಲಿ ಸೇರಿಸಿದ್ದೇನೆ. ಅಪೇಕ್ಷೆ ಪಟ್ಟು ಹಾಗೆ ಬಂದವರು ಸರ್ಕಾರಿ ಸೀಟು ಹೆಡ್ಡಿಂಗ್‌ನಲ್ಲಿ ಬರುತ್ತಾರೆ. ಯಾರು ಬರುವುದಿಲ್ಲವೋ ಇಲ್ಲ ಅಷ್ಟೇ. ಇದು ಸರಳವಾಗಿದೆ, ಇದರ ಬಗ್ಗೆ ಏನೂ ಗೊಂದಲ ಇಲ್ಲವೆಂದು ಅನ್ನಿಸುತ್ತದೆ. ಇನ್ನೊಂದು ಸ್ವಲ್ಪ ಚರ್ಚೆಯಾದ ಸಂಗತಿ ಅಂದರೆ ಮೆಡಿಸಿನ್ ಮತ್ತು ಡೆಂಟಲ್ ಕಾಲೇಜುಗಳಿಗೆ ಸಿಇಟಿ ಮಾರ್ಕ್ಸ್ ಮಾತ್ರ ತೆಗೆದುಕೊಳ್ಳುತ್ತೀರಿ ಬಾಕಿ ಎಲ್ಲದಕ್ಕೆ 50 ಮಾರ್ಕ್ಸ್ ಪಿಯುಸಿದು 50 ಪರ್ಸೆಂಟ್ ಸಿಇಟಿದು ತೆಗೆದುಕೊಳ್ಳುತ್ತೀರಿ, ಇದು ತಪ್ಪಾಗುತ್ತದೆ ಎಂದು ಗೌರವಾನ್ವಿತ ಸದಸ್ಯರು ಹೇಳಿದರು. ನಾನು ಆಗಲೇ ಮಧ್ಯಪ್ರವೇಶ ಮಾಡಿ ಅದನ್ನು ಕಾರಿಫೈ ಮಾಡಲು ಪ್ರಯತ್ನಿಸಿದೆ, ಈಗ ಮತ್ತೊಮ್ಮೆ ಹೇಳಲು ಪ್ರಯತ್ನಿಸುತ್ತೇನೆ. ನಮ್ಮ ರಾಜ್ಯದಲ್ಲಿ ಕಳೆದ ವರ್ಷದ ತನಕ 50 ಪರ್ಸೆಂಟ್ ಪಿಯುಸಿದು 50 ಪರ್ಸೆಂಟ್ ಸಿಇಟಿ ಮಾರ್ಕ್ಸ್ ತೆಗೆದುಕೊಂಡು ಮೆರಿಟ್‌ಲಿಸ್ಟ್ ಮಾಡಲಾಗುತ್ತಿತ್ತು. ಆದರೆ ಕಳೆದ ವರ್ಷ ಕೆಲವರು ಕರ್ನಾಟಕ ಹೈಕೋರ್ಟಿಗೆ. ಹೇಳಿದರು. ಮೆಡಿಕಲ್ ಕಾಲೇಜುಗಳಿಗೆ ಎಂಸಿಐ ನಾರ್ಮ್ಸ್ ಪ್ರಕಾರ ಪಿಯುನಲ್ಲಿ 50 ಪರ್ಸೆಂಟ್ ಇರುವವರು ಸಿಇಟಿಗೆ ತೆಗೆದುಕೊಳ್ಳಬಹುದಷ್ಟೇ ಹೊರತು ಪಿಯು ಮಾರ್ಕನ್ನು ಗಣನೆಗೆ ತೆಗೆದುಕೊಳ್ಳಕೂಡದು ಅಂತ. ಆ ವೇಳೆಗೆ ನಮ್ಮ

ರಾಜ್ಯದ್ದು ಪ್ರೋಸೆಸ್ ಹೆಚ್ಚು ಕಡಿಮೆ ಮುಗಿದು ಹೋಗಿತ್ತು, ಆಗ ಸರ್ಕಾರದ ಪರವಾಗಿ ಹೈಕೋರ್ಟಿಗೆ ಒಂದು ಮನವಿ ಸಲ್ಲಿಸಿ ಸ್ವಾಮಿ, ತಾವು ಏನೇ ಜಡ್ಜ್‌ಮೆಂಟ್ ಕೊಡುವುದಿದ್ದರೂ ಅದು 2006ಕ್ಕೆ ಅನ್ವಯಿಸುವಂತೆ ಕೊಡಿ, 2005ಕ್ಕೆ ಕೊಟ್ಟರೆ ಅನ್ಯಾಯವಾಗುತ್ತದೆ ಲಾಗಾಯ್ತಿನಿಂದ ಬಂದಂತೆ ನಾವು 50.50 ಅನ್ವಯಿಸಿ ಮಾಡಿಬಿಟ್ಟಿದ್ದೇವೆ ಅಂತ. ಆಗ ಕರ್ನಾಟಕ ಹೈಕೋರ್ಟ್ ಒಂದು ತೀರ್ಪು ಕೊಟ್ಟಿತು, ಈಗ ಮಾಡಿರುವುದು ಈ ವರ್ಷಕ್ಕಷ್ಟೇ ಮುಂದಿನ ವರ್ಷದಿಂದ ಎಂಸಿಐನಾರ್ಮ್ಸ್ ಹೇಳುವಂತೆ ಸಿಇಟಿ ಮಾರ್ಕನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬೇಕು ಮೆಡಿಕಲ್ ಮತ್ತು ಡೆಂಟಲ್‌ಗೆ ಅಂತ. ಇದು ನಮಗೆ ಮನಸ್ಸಿದೆಯೋ ಇಲ್ಲವೋ ಅದಲ್ಲ ಪ್ರಶ್ನೆ. ಹೈಕೋರ್ಟ್ ತೀರ್ಪಿಗೆ ನಾನು ಗೌರವ ಕೊಡಲೇಬೇಕು. ಆ ಹಿನ್ನೆಲೆಯಲ್ಲಿ ಈ ಸಲ ಮಾಡಿದ್ದೇವೆ. ಇದರ ಬಗ್ಗೆ ಇನ್ನೊಂದು ಮಾತು ಹೇಳಲು ನಾನು ಇಷ್ಟಪಡುತ್ತೇನೆ : ಈ ವಿಧೇಯಕಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಈ ಬಿಲ್‌ನಲ್ಲಿ ಅದೇನೂ ಸೇರಿಲ್ಲ. ತಾವೆಲ್ಲರೂ ಹೇಳಿದಂತೆ ಇದರ ಬಗ್ಗೆ ಸುಪ್ರೀಂಕೋರ್ಟಿಗೆ ನಮಗೆ ಅವಕಾಶ ಇದೆಯೆಂದು ಲಾ ಡಿಪಾರ್ಟ್‌ಮೆಂಟ್ ನವರು ಹೇಳಿದರೆ ಆ ವಿಷಯ ಬಗ್ಗೆ ಖಂಡಿತವಾಗಿ ಸುಪ್ರೀಂಕೋರ್ಟಿಗೆ ಹೋಗುತ್ತೇವೆ. ಸುಪ್ರೀಂಕೋರ್ಟಿ ನವರೂ ನಮ್ಮ ವಾದ ಒಪ್ಪಿಕೊಂಡು ಆ ರೀತಿ ನಿರ್ಣಯ ಬಂದರೆ ನಾವು ಮುಂದಿನ ರೂಲ್‌ಗಳಲ್ಲಿ ಯಾವುದೇ ರೀತಿ ಬದಲಾವಣೆ ಮಾಡಿಕೊಳ್ಳಲು ನಮಗೆ ಅಧಿಕಾರ ಇದ್ದೇ ಇದೆ. ಅದನ್ನು ನಾವು ಮಾಡಬಹುದೇ ಹೊರತು ಈ ಬಿಲ್‌ಗೂ ಅದಕ್ಕೂ ಏನೂ ಸಂಬಂಧ ಇಲ್ಲ. ಎಂಸಿಐ ಬಗ್ಗೆ ಇದರಲ್ಲಿ ನಾವೇನೂ ಪ್ರಸ್ತಾಪ ಮಾಡಿಲ್ಲ. ಮತ್ತೆ ಈ ಬಿಲ್‌ನಲ್ಲಿ ಮೂರು ಕಮಿಟಿ ಮಾಡಿಬಿಟ್ಟಿದ್ದೀರಿ ಅಂತ ಬಹಳ ಸದಸ್ಯರು ಹೇಳಿದರು. ಇಲ್ಲ, ಸುಪ್ರೀಂ ಕೋರ್ಟ್ ಹೇಳಿರುವುದೇ ಎರಡು ಸಮಿತಿ ಮಾಡುವುದಕ್ಕೆ, ಆ ಎರಡು ಸಮಿತಿ ನಾವು ಮಾಡಿದ್ದೇವೆ. ಒಂದು ಫೀ ರೆಗ್ಯುಲೇಟರಿ ಕಮಿಟಿ, ಇನ್ನೊಂದು ಅಡ್ಮಿಶನ್ ರೆಗ್ಯುಲೇಟರಿ ಕಮಿಟಿ. ಮೂರನೆಯದು ಸರ್ಕಾರದ್ದು ಸ್ವಾಮಿ, ನಮ್ಮ ಸೀಟುಗಳನ್ನು ನೋಡುವುದಕ್ಕೆ ಒಂದು ಸಮಿತಿ ಬೇಕಲ್ಲಾ ಅದಕ್ಕೆ ಮಾಡಿಕೊಂಡಿದ್ದೇವೆ. ಅದಕ್ಕೂ ಪ್ರೈವೇಟ್ ಕಾಲೇಜುಗಳಿಗೂ ಸಂಬಂಧ ಇಲ್ಲ. ಇದರ ಬಗ್ಗೆ ಯಾಕೋ ಕೆಲವು ಸದಸ್ಯರು ತಪ್ಪು ನೋಡಿಕೊಂಡರು ಅಂತ ನನಗನ್ನಿಸುತ್ತದೆ. ಇನ್ನೊಂದು ತಮಿಳುನಾಡು ಸರ್ಕಾರ ಪ್ರಯತ್ನ ಮಾಡಿತು, ನಾವು ಸಿಇಟಿ ಮಾಡುವುದೇ ಇಲ್ಲ, ಪಿಯು ಅಂಕ ಆಧರಿಸಿ ಮಕ್ಕಳಿಗೆ ಸೀಟ್ ಕೊಡುತ್ತೇವೆ ಅಂತ extreme ಸ್ಟಾಂಡ್ ತೆಗೆದುಕೊಂಡರು. ಅದು ಹೈಕೋರ್ಟ್‌ನಲ್ಲಿ struck down ಆಯಿತು. ಅದರ

ವಿರುದ್ಧ ಆ ರಾಜ್ಯಸರ್ಕಾರ ಸುಪ್ರೀಂಕೋರ್ಟಿನಲ್ಲಿ ಚಾಲೆಂಜ್ ಮಾಡಿದೆ. ಆದರೂ ಈ ವರ್ಷ ಅವರು ಹೈಕೋರ್ಟ್ ಆದೇಶವನ್ನು ಉಲ್ಲಂಘಿಸಲು ಬರುವುದಿಲ್ಲ. ಆ ಪ್ರಕಾರವೇ ಮಾಡುತ್ತಿದ್ದಾರೆ, ಸುಪ್ರೀಂಕೋರ್ಟಿನಲ್ಲಿ ಏನಾಗುತ್ತದೋ ಅದು ಆಗುತ್ತದೆ ಏನು ಆಗುತ್ತದೆ ಎಂಬುದು ಗೊತ್ತಿಲ್ಲ ಬಿಡಿ. ತಮಿಳುನಾಡು ಹೈಕೋರ್ಟ್ ಮುಂದೆ ಎಂಸಿಐ ನಾರ್ಮ್ಸ್ ಇಟ್ಟುಕೊಳ್ಳಬೇಕೋ ಬೇಡವೋ ಎಂಬ ವಿಷಯ ಇರಲಿಲ್ಲ, ಅಲ್ಲಿದ್ದುದ್ದು ಪಿ.ಯು ಮಾರ್ಕ್ ತೆಗೆದುಕೊಳ್ಳಬೇಕೋ ಬೇಡವೋ, ಸಿಇಟಿ ನಡೆಸಬೇಕೋ ಬೇಡವೋ, ಅಷ್ಟರ ಮೇಲೆ ಅವರು ತೀರ್ಮಾನ ಕೊಟ್ಟಿದ್ದಾರೆ. ಆದರೆ ಕರ್ನಾಟಕ ಹೈಕೋರ್ಟ್ ಸ್ಪಷ್ಟವಾಗಿ ಎಂಸಿಐ ಮಾರ್ಗಸೂಚಿ ಪ್ರಕಾರವೇ ಮಾಡಬೇಕು ಅಂತ ತೀರ್ಪು ಕೊಟ್ಟಿರುವ ಹಿನ್ನೆಲೆಯಲ್ಲಿ ನಾವು ಅದರೊಳಗೆ ಏನೂ ಮಾಡಲು ಬರುವುದಿಲ್ಲ. ಸುಪ್ರೀಂಕೋರ್ಟಿಗೆ ನಾವು ಹೋಗಬೇಕೋ ಬೇಡವೋ ಎಂಬ ಬಗ್ಗೆ ಲಾ ಇಲಾಖೆ ಜೊತೆ ಚರ್ಚಿಸುತ್ತಿದ್ದೇವೆ. ಅದನ್ನು ನಾವು ನೋಡುತ್ತೇವೆ. Professional courses ಗಳಲ್ಲಿ ಈಗಿರುವ ಕೋರ್ಸ್‌ಗಳ ಜೊತೆ ಬೇರೆ ಕೋರ್ಸ್ ಸೇರಿಸಿಕೊಳ್ಳಲೂ ಈ ಬಿಲ್‌ನಲ್ಲಿ ನಾವು ಅವಕಾಶ ಮಾಡಿಕೊಟ್ಟಿದ್ದೇವೆ. ಮತ್ತೆ admission without merit ಅನ್ನುವುದನ್ನು ಯಾರೂ ಒಪ್ಪುವುದಿಲ್ಲ ಸಾಧ್ಯವೂ ಇಲ್ಲ ಅಂದರೆ ಕಡಿಮೆ ಮೆರಿಟ್ ಇರುವ ಗ್ರಾಮೀಣದವರಿಗೆ ಕೊಡಿ ಅಂತ; ಹಾಗೆ ಕೊಡಲು ಬರುವುದಿಲ್ಲ. ಸುಪ್ರೀಂಕೋರ್ಟ್ ತೀರ್ಪಿನಲ್ಲಿ ಸ್ಪಷ್ಟ ಪದಗಳಲ್ಲಿ ಹೇಳಿದೆ : Set up a mechanism to ensure fair and transparent admission and mechanism proposed for the fee regulation, ಅವೆರಡನ್ನೂ ಇದರಲ್ಲಿ ಮಾಡಿದ್ದೇವೆ. ಮತ್ತೆ ಫೀ ಕಮಿಟಿನವರು ತೀರ್ಮಾನ ಮಾಡಿದ್ದು ಮೂರು ವರ್ಷ ಇರಬೇಕು ಅಂತ ನಾವು ಸೇರಿಸಿರುವುದಕ್ಕೆ ಕಾರಣ ಸ್ವಾಭಾವಿಕ ನ್ಯಾಯದ ಹಿನ್ನೆಲೆ. ಪ್ರತಿವರ್ಷ ಅದನ್ನು ಬದಲಾಯಿಸಲು ಬರುವುದಿಲ್ಲ. ಒಂದು ಸಲ ಮಾಡಿದ್ದು ಕನಿಷ್ಠ 3 ವರ್ಷ ಚಾಲ್ತಿಯಲ್ಲಿರಬೇಕು ಅಂತ ಸೇರಿಸಿದ್ದೇವೆ ಬೇರೇನೂ ಇಲ್ಲ. ಮತ್ತೆ ಈ ಬಿಲ್‌ನಲ್ಲಿ ಬಹಳ ಪ್ರಮುಖ ಅಂಶವನ್ನು ನಾವು ಗಮನಿಸಬೇಕು: ಇದರೊಳಗೆ ನಾವು ಪ್ರಯತ್ನ ಮಾಡುತ್ತಿರುವುದು ಏನು? ಪರಿಶಿಷ್ಟ ಜಾತಿ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ನಮ್ಮ ಬಡ ವಿದ್ಯಾರ್ಥಿಗಳ ಹಿತರಕ್ಷಣೆಗಾಗಿಯೇ ಈ ಬಿಲ್. ಬೇರೆ ಏನೂ ಇಲ್ಲ ಈ ಬಿಲ್ ತಂದಿರುವುದೇ ಅದಕ್ಕಾಗಿ ಬಿಲ್ ನಾವು ತರದೇಹೋದರೆ ಏನಾಗುತ್ತದೆ? ಖಾಸಗಿ ಮ್ಯಾನೇಜ್‌ಮೆಂಟಿಗೆ ಫ್ರೀಹ್ಯಾಂಡ್ ಸಿಕ್ಕಿ

ಬಿಡುತ್ತದೆ. ಏನು ಬೇಕಾದರೂ ಮಾಡಬಹುದು. ಈ ಬಿಲ್‌ನಲ್ಲಿ ನಾವೇನು ಸೇರಿಸಿದ್ದೇವೆ ಖಾಸಗಿ ಕಾಲೇಜುಗಳ ಸೀಟುಗಳನ್ನು ಅವರು ನನಗೆ ಕೊಡಲು ಬರುವುದಿಲ್ಲ, ಕೇಳಲೂ ನನಗೆ ಬರುವುದಿಲ್ಲ. ಇನಾಂದಾರ್ ಕೇಸ್ ತೀರ್ಪಾದ ನಂತರ ಸರ್ಕಾರಿ ಕೋಟಾ ಅಂತ ಯಾವುದೂ ಇಲ್ಲ. ಅವರಿಗಿರುವ ಸೀಟುಗಳಲ್ಲಿ 50 ಪರ್ಸೆಂಟನ್ನು ಪರಿಶಿಷ್ಟ ಜಾತಿ ಪಂಗಡ ಮತ್ತು ಹಿಂದುಳಿದ ವರ್ಗದವರಿಗೇ ಕಾದಿರಿಸಬೇಕು ಅಂತ ನಾವು ನಿಯಮ ಮಾಡಿರುವ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಅಲ್ಲಿ ಅವಕಾಶ ಸಿಗುತ್ತದೆ. ಇಲ್ಲಾಂದ್ರೆ ಖಾಸಗಿ ಕಾಲೇಜುಗಳು ಖುಷಿ ಬಂದರೆ ಕೊಡಬಹುದು ಇಲ್ಲದಿದ್ದರೆ ಇಲ್ಲ, No reservation, ಯಾವುದೇ ಕಾರಣಕ್ಕೆ ಬಿಲ್ಲನ್ನು ನಾವು ಕಂಪ್ಲೀಟ್ ಮಾಡಲಿಲ್ಲ ಅಂದರೆ ನಮ್ಮ ರಾಜ್ಯದ ಪರಿಶಿಷ್ಟ ಜಾತಿ ಪಂಗಡ ಹಾಗೂ ಹಿಂದುಳಿದ ವರ್ಗಗಳ ಮತ್ತು ಗ್ರಾಮೀಣ ವಿದ್ಯಾರ್ಥಿಗಳು ನಮಗೆ ಹಿಡಿಶಾಪ ಹಾಕುತ್ತಾರೆ. ನಾವು ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಬುದ್ಧಿ ಪುರಸ್ಸರವಾಗಿ ಅನ್ಯಾಯ ಮಾಡಿದಂತಾಗುತ್ತದೆ. ಅದಕ್ಕೇ ನಾನು ಕಾನೂನು ಇಲಾಖೆ ಜೊತೇನೂ ಬಹಳ ಮಾತನಾಡಿ ಈ ಬಿಲ್ ಬೇಕೆ ಬೇಕು ಸ್ವಾಮಿ ಅಂತ ಹೇಳಿದ್ದು. ಈ ಬಿಲ್ಲನ್ನು ಕಾನೂನು ಇಲಾಖೆ, ಅಡ್ವೋಕೇಟ್ ಜನರಲ್‌ರವರ ಜೊತೆ ಪೂರ್ಣ ಚರ್ಚೆ ಮಾಡಿ ಅವರ ಪೂರ್ಣ ಸಹಮತದೊಂದಿಗೆ ಈ ಬಿಲ್ ಅನ್ನು ನಾನು ತಯಾರು ಮಾಡಿದ್ದೇನೆ. ಹಾಗಾಗಿ ಈ ಬಿಲ್‌ನಿಂದ ಯಾವುದೇ ಅನ್ಯಾಯ ಆಗುತ್ತದೆ ಅಂತ ಇಲ್ಲ ಕಾನೂನಿಗೆ ವಿರುದ್ಧವಾಗಿಲ್ಲ ಸುಪ್ರೀಂ ಕೋರ್ಟ್ ಹೈಕೋರ್ಟ್‌ಗಳ ಜಡ್ಜ್‌ಮೆಂಟ್ ಆಧಾರದ ಮೇಲೆ ಈ ಬಿಲ್ ನಾನು ತಯಾರು ಮಾಡಿದ್ದೇನೆ. ಅಧ್ಯಕ್ಷರೇ, ಎಲ್ಲಾ ಸದಸ್ಯರನ್ನೂ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ : ನಾನು ಮಂಡಿಸಿರುವ ಈ ಬಿಲ್ಲನ್ನು ಪಾಸು ಮಾಡಿಕೊಡಿ ಅಂತ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇನ್ನೊಮ್ಮೆ ಅವರಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ ಎಸ್‌ಸಿಎಸ್‌ಟಿ ಮತ್ತು ಒಬಿಸಿಯ ಪೂರ್ ಮೆರಿಟೆಡ್ ಸ್ಟೂಡೆಂಟ್ಸ್‌ಗೆ ಕಾನೂನು ಪ್ರಕಾರ ಪ್ರವೇಶ ಕೊಡಿಸುವುದಕ್ಕೆ ಏನು ಬೇಕೋ ಅದರ ಬಗ್ಗೆ ಯಾರೂ ಅಡ್ಡಿ ಆತಂಕ ಮಾಡಿಲ್ಲ. ಇಲ್ಲಿ ಯಾರೂ ಕೂಡ ಅದರ ವಿರುದ್ಧವಾಗಿ ಮಾತನಾಡಿಲ್ಲ. ಅದನ್ನು ಎಲ್ಲರೂ ಕೂಡ ಒಪ್ಪಿಕೊಂಡಿದ್ದೇವೆ. ಅದಕ್ಕಾಗಿ ಸಂವಿಧಾನದಲ್ಲಿ ಕೂಡ ತಿದ್ದುಪಡಿ ಬಂತು. ಈವನ್ ಏಡೆಡ್ ಇನ್‌ಸ್ಟಿಟ್ಯೂಷನ್ ಇದ್ದಲ್ಲಿ ಪ್ರೈವೇಟ್ ಇನ್‌ಸ್ಟಿಟ್ಯೂಷನ್ ಇದ್ದಲ್ಲೂ ಕೂಡ ಎಸ್‌ಸಿ ಎಸ್‌ಟಿಗೆ ರಿಸರ್ವೇಷನನ್ನು ಕೊಡಬೇಕೆಂದು 93 ನೇ

ಅಮೆಂಡ್‌ಮೆಂಟ್‌ನಲ್ಲಿ ಅದು ಬಂದಿದೆ. ಅದಕ್ಕಾಗಿ ಅವರಿಗೆ ರಕ್ಷಣೆ ಇದೆ. ಆ ರೀತಿ ರಕ್ಷಣೆ ಮಾಡುವುದಕ್ಕೋಸ್ಕರ ಏನು ಕಾನೂನನ್ನು ತರಬೇಕು, ಅದಕ್ಕೆ ಎಲ್ಲರ ಬೆಂಬಲ ಕೂಡ ಇದೆ. ಆದರೆ ಇಲ್ಲಿ ನಾವು ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದೇನೆಂದರೆ ಹಳ್ಳಿಯ ಮಕ್ಕಳು ಎರಡು ವರ್ಷ ಪಿಯುಸಿಯನ್ನು ಓದಿ. . .

ಶ್ರೀ ಡಿ. ಹೆಚ್. ಶಂಕರಮೂರ್ತಿ : ಮಾನ್ಯ ಅಧ್ಯಕ್ಷರೇ, ತಾವು ಎರಡು ನಿಮಿಷ ತಡವಾಗಿ ಬಂದಿರಿ. ತಾವು ಎತ್ತಿದ ಪ್ರಶ್ನೆಗೆ ಮತ್ತೊಮ್ಮೆ ಬೇಕಾದರೆ ನಾನು ಹೇಳುವುದಕ್ಕೆ ತಯಾರಾಗಿದ್ದೇನೆ. ತಾವು ಮಾತನಾಡುವಾಗಲೂ ಮಧ್ಯೆ ಬಾಯಿ ಹಾಕಿ ಪ್ರಯತ್ನ ಮಾಡಿದೆ ಬೆಳಿಗ್ಗೆ. ತಾವು ಇಷ್ಟಪಡಲಿಲ್ಲ. ನಾನು ಅದನ್ನು ಸ್ಪಷ್ಟವಾಗಿ ಹೇಳಿದೆ. ಎಂಸಿಐ ನಾರ್ಮ್ಸ್ ಪ್ರಕಾರ ನಾವು ಕರ್ನಾಟಕದಲ್ಲಿ ಹೈಕೋರ್ಟು ತೀರ್ಮಾನದ ಆಧಾರದ ಮೇಲೆ ನಮಗೆ ಇಷ್ಟ ಇದೆ, ಇಲ್ಲ ಎನ್ನುವ ಪ್ರಶ್ನೆ ಇಲ್ಲ. ಎಂಸಿಐ ಪ್ರಕಾರವೇ ನೀವು ಮಾಡಬೇಕು. ಮೆಡಿಕಲ್ ಮತ್ತು ಡೆಂಟಲ್‌ಗೆ ಎಂದು ಹೈಕೋರ್ಟು ಸ್ಪಷ್ಟವಾದ ಆದೇಶವನ್ನು ಕೊಟ್ಟಿದೆ. ಆ ಆದೇಶದ ವಿರುದ್ಧವಾಗಿ ನಾನು ಹೋಗಲಿಕ್ಕೆ ಬರುವುದಿಲ್ಲ. ಆದ್ದರಿಂದ ಈ ಬಾರಿ ಅದನ್ನು ನಾವು ಹಾಗೆ ಮಾಡಬೇಕು. ಕಳೆದ ಬಾರಿ ತಾವೇನು ಮಾಡಿದಿರಿ ಎಂದರೆ 2005ಕ್ಕೆ ಅಡ್ಡ ಬರಬೇಡಿ. ಇದೊಂದು ಬಾರಿ ನಮಗೆ 50:50ಗೆ ಅಲೋ ಮಾಡಿ. 2006ಕ್ಕೆ ತಾವೇಗೆ ಹೇಳುತ್ತೀರೋ ಹಾಗೆ ಮಾಡುತ್ತೇವೆ ಎಂದು ತಾವು ಹೇಳಿದ್ದೀರಿ. ತಾವು ಅಂದರೆ ಸರ್ಕಾರ. ನಾವು ಒಟ್ಟಾಗಿ ಹೋಗಿದ್ದೆವು. ಹೈಕೋರ್ಟು ಕಳೆದ ವರ್ಷಕ್ಕೆ ಆಯಿತು, ನೀವು ಮಾಡಿಕೊಳ್ಳಿ. 2006 ರಿಂದ ಯಾವುದೇ ಕಾರಣಕ್ಕೂ ತಾವು ಎಂಸಿಐ ನಾರ್ಮ್ಸ್‌ನ ಉಲ್ಲಂಘನೆಯನ್ನು ತಾವು ಮಾಡಕೂಡದು ಎಂದು ಹೇಳಿದ್ದಾರೆ. ಎಂಸಿಐ ನಾರ್ಮ್ಸ್ ಎಂದರೆ ಸಿಇಟಿ ಮಾರ್ಕ್ಸ್‌ನ್ನು ಮಾತ್ರ ಗಣನೆಗೆ ಮೆಡಿಕಲ್ ಮತ್ತು ಡೆಂಟಲ್‌ಗೆ ತೆಗೆದುಕೊಳ್ಳಬೇಕೆಂದು ಇರುವ ಕಾರಣಕ್ಕಾಗಿ ಅದರ ಬಗ್ಗೆ ದಯಮಾಡಿ ಚರ್ಚೆ ಬೇಡಿ. ನಾವು ಸುಪ್ರೀಂ ಕೋರ್ಟ್‌ಗೆ ಹೋಗಬೇಕೆಂದು ತಾವು ಆಸೆಪಟ್ಟಿದ್ದೀರಿ. ನನಗೂ ಮನಸ್ಸು ಇದೆ. ಸುಪ್ರೀಂ ಕೋರ್ಟಿಗೆ ಹೋಗುವುದಕ್ಕೆ ಎಕ್ಸಾಮಿನ್ ಮಾಡುತ್ತಿದ್ದೇನೆ. ಸುಪ್ರೀಂ ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಇದ್ದರೆ ಖಂಡಿತಾ ಹೋಗುತ್ತೇನೆ. ಅಲ್ಲೇನಾದರೂ ನಮಗೆ ಗುಣವಾದರೆ ಈ ಬಿಲ್ಲಿಗೂ ಅದಕ್ಕೂ ಏನೂ ಸಂಬಂಧವಿಲ್ಲ. ನಾವೊಂದು ರೂಲ್ ಮಾಡಿಕೊಳ್ಳುವುದಕ್ಕೆ ಬರುತ್ತದೆ. ಅದಕ್ಕೆ ಅವಕಾಶ ಇದೆ. ಅದನ್ನು ಪ್ರಯತ್ನ ಮಾಡೋಣ. ಇಲ್ಲದಿದ್ದರೆ ನಾವು ಅದೂಇಲ್ಲ, ಇದೂ ಇಲ್ಲ,

ನಮ್ಮ ಮಕ್ಕಳು ಬೀದಿಗೆ ಬಿದ್ದುಬಿಡುತ್ತವೆ. ಅದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅವರು ಹೇಗೆ ನಮಗೆ ಹೇಳುತ್ತಿದ್ದಾರೆ, ಇದನ್ನು ಪಾಸು ಮಾಡಿಕೊಡಿ. ನಾವು ಸುಪ್ರೀಂ ಕೋರ್ಟಿಗೆ ಹೋಗಿ ಪ್ರಯತ್ನ ಮಾಡೋಣ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಅದನ್ನೇ ನಾನು ಅವರಿಗೆ ಕೇಳಿಕೊಳ್ಳುತ್ತೇನೆ, ನೀವು ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿ ಏನಾದರೂ ಹೈಕೋರ್ಟಿನದ್ದನ್ನು ಸುಪ್ರೀಂ ಕೋರ್ಟು ಹೊಡೆದು ಹಾಕಿದರೆ ಆಮೇಲೆ ನೋಡೋಣ. ಜಡ್ಜ್‌ಮೆಂಟ್ ಇರಲಿ. We are making a new law.

ಶ್ರೀ ಜೆ.ಸಿ. ಮಾಧುಸ್ವಾಮಿ : ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ವಿರುದ್ಧವಾಗಿ ಇಲ್ಲಿ ಒಂದು ಬಿಲ್ಲನ್ನು ನಾವು ಪಾಸು ಮಾಡಿದ್ದೇವೆ. ಹೈಕೋರ್ಟಿಗೆ ಏಕೆ ಮಾಡಬಾರದು?

ಶ್ರೀ ಡಿ. ಹೆಚ್. ಶಂಕರಮೂರ್ತಿ : ಮಾನ್ಯ ಅಧ್ಯಕ್ಷರೇ, ಬಿಲ್ಲನ್ನು ಇನ್ನೊಮ್ಮೆ ನೋಡಿ. ಈ ಬಿಲ್‌ಗೂ ಈ ಒಂದು ಎಂಸಿಐ ನಾರ್ಮ್ಸ್ ಇದನ್ನೇನು ನಾವು ಚರ್ಚೆ ಮಾಡುತ್ತಿದ್ದೇವೆ, ಅದಕ್ಕೂ ಇದಕ್ಕೂ ಏನೂ ಸಂಬಂಧ ಇಲ್ಲ. ಒಂದಕ್ಕೊಂದಕ್ಕೂ ಏನೂ ಸಂಬಂಧ ಇಲ್ಲ. ಅದು ಬೇರೆ. ಇದು ಬೇರೆ. ಇದು ಟೋಟಲ್ ರೆಗ್ಯುಲೇಷನ್. ಅದೇನಾದರೂ ನಾವು ಹಾಗೆ ಮಾಡಬೇಕಾಗಿದ್ದರೆ ಇವತ್ತು ಇರುವ ಪರಿಸ್ಥಿತಿಗೆ ಹಾಗೆ ಮಾಡಬೇಕು. ನಾವೇನಾದರೂ ಸುಪ್ರೀಂ ಕೋರ್ಟಿಗೆ ಹೋಗಿ ಬೇಗ ನಮಗೆ ಈ ವರ್ಷ ಅಡ್ಮಿಷನ್ ಪ್ರಾರಂಭವಾಗುವುದರೊಳಗೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ನಮ್ಮ ಪರವಾಗೇನಾದರೂ ಬಂದರೆ ಅದನ್ನು ಇನ್‌ಕಾರ್ಪೊರೇಟ್ ಮಾಡುವುದಕ್ಕೆ ನಮಗೆ ಅಧಿಕಾರ ಇದೆ. ಆದರೆ, I don't think that, in this small time frame, ನಾವೇನು ನಮಗೆ ಟೈಮ್ ಕನ್‌ಸ್ಟ್ರೈಂಟ್ ಇದೆ, ಇಷ್ಟರೊಳಗೆ ಸುಪ್ರೀಂ ಕೋರ್ಟಿಗೆ ಹೋಗಿ ಹೈಕೋರ್ಟ್ ಜಡ್ಜ್‌ಮೆಂಟಿನ ವಿರುದ್ಧವಾಗಿ ಸುಪ್ರೀಂಕೋರ್ಟಿನ ವರ್ಡಿಕ್ಟ್ ತೆಗೆದುಕೊಂಡು ಬರುತ್ತೇನೆ ಎನ್ನವುದು ಬಹಳ ಆಸೆಯಾಯಿತೇನೋ ಎಂದು ನನಗನ್ನಿಸುತ್ತದೆ.

ಅಧ್ಯಕ್ಷರು : ಈಗ ಬಹಳ ಚರ್ಚೆಯಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ಮುಗಿಯಲಿ ಸಾರ್. ಇನ್ನೊಂದೆರಡು ಕ್ಲಾರಿಫಿಕೇಷನ್ ಇದೆ. ಆಮೇಲೆ ಪಾಸು ಮಾಡುವಿರಂತೆ.

ಅಧ್ಯಕ್ಷರು : ಬೆಳಿಗ್ಗೆಯಿಂದ ಎಷ್ಟು ಸಾರಿ ಮಾತನಾಡಿದ್ದೀರಿ?

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ : ಮೂರು ಕಮಿಟಿ ಮಾಡಿದ್ದೇವೆ ಎಂದು ಹೇಳಿದರು. ಅದಕ್ಕೆ ಕ್ಲಾರಿಫಿಕೇಷನ್ ಬೇಡವೇ? ಕ್ಲಾರಿಫಿಕೇಷನ್ ಇಲ್ಲದೇ ನೀವು ಪಾಸು ಮಾಡುತ್ತೇವೆಂದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮನಸ್ಸು ಮಾಡಬೇಕು. ನಾವು ಕನ್‌ಫ್ಯೂಷನ್‌ನಲ್ಲಿ ಇಲ್ಲ. ನಾವು ಇಂಜಿನಿಯರಿಂಗ್ ಕಾಲೇಜ್‌ಗೆ ಒಂದು ಮೆತೆಡ್, ನಾಳೆ ಅದೇ ರೀತಿ ಫಾರ್ಮಸಿ ಇದೆ. ಅದೇ ರೀತಿಯಾಗಿ ಎಲ್ಲಾ ಪ್ರೊಫೆಷನಲ್ ಕೋರ್ಸಸ್‌ಗೆ ನಾವು ಸಿಇಟಿಯನ್ನು ಮಾಡುತ್ತೇವೆ. ಅದಕ್ಕಾಗಿ ತಾವು ಯೋಚನೆ ಮಾಡಿ. ಒಬ್ಬ ಹಳ್ಳಿಯ ವಿದ್ಯಾರ್ಥಿ ಎರಡು ವರ್ಷ, ಹಳ್ಳಿಯಾಗಲಿ, ಪಟ್ಟಣದಲ್ಲಾಗಲಿ, ಎರಡು ವರ್ಷ ಪಿಯುಸಿಯನ್ನು ಓದುತ್ತಾನೆ. ಅವನು ಏನು ಓದುತ್ತಾನೆ, ಮುಂದೆ ನಾನು ಹೆಚ್ಚಿನ ಅಂಕಗಳನ್ನು ತೆಗೆದುಕೊಂಡು ಸಿಇಟಿಯಲ್ಲಿಯೂ ಚೆನ್ನಾಗಿ ಮಾಡಿ ಎರಡು ಪರೀಕ್ಷೆಗಳಲ್ಲಿ ಚೆನ್ನಾಗಿ ಮಾಡಿ ಮುಂದೆ ಉತ್ತಮವಾಗಿ ಓದಬೇಕೆಂದು ಮಾಡುತ್ತಾನೆ. ಅದಕ್ಕಾಗಿ ನೀವು ಎರಡು ವರ್ಷ ಅವನು ವಿದ್ಯಾಭ್ಯಾಸ ಮಾಡಿದ್ದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲವೆಂದರೆ ಕೇವಲ ಸಿಇಟಿಯದು ನಿಮ್ಮ ಅಬ್ಜೆಕ್ಟೀವ್ ಟೈಪ್ ಅದನ್ನು ಮಾಡುವುದಕ್ಕೆ ನಾವು ಮಹತ್ವ ಕೊಟ್ಟರೆ ಏನಾಗುತ್ತದೆ? ನಾಳೆ ಅದು ದೊಡ್ಡ ಕೊಡಲಿಪೆಟ್ಟನ್ನು ಗ್ರಾಮೀಣ ಭಾಗದಲ್ಲಿರತಕ್ಕ ಎಲ್ಲಾ ಜಾತಿಯ ಮಕ್ಕಳಿಗೂ ಅನ್ವಯವಾಗುತ್ತದೆ ಬರೀ ಅವರು ಇವರು ಎಂದು ಅಲ್ಲ ಎಲ್ಲಾ ರೈತರ ಮಕ್ಕಳಿಗೆ ದಲಿತರ ಮಕ್ಕಳಿಗೆ ಹಿಂದುಳಿದ ಎಲ್ಲರಿಗೂ ಕೂಡ ಅದು ಪೆಟ್ಟು ಬೀಳುತ್ತದೆ. ಅದಕ್ಕಾಗಿ ನಾನೇನು ಹೇಳುತ್ತೇನೆ, ಹೈಕೋರ್ಟ್ ಅಂತೂ ನಿಮಗೆ ಎಂಸಿಐದನ್ನೇ ನೀವು ಕಡ್ಡಾಯವಾಗಿ ಮಾಡಬೇಕು ಎನ್ನುವುದು ಇದರಲ್ಲೇನೂ ಇಲ್ಲ. ಅವರೊಂದು ಅಬ್ಸರ್ವೇಷನ್ ಮಾಡಿದ್ದಾರೆ. ರೆಗ್ಯುಲೇಷನ್. ಒಂದು, ನೀವು ಈ ರೀತಿಯಾಗಿ ಹೋಗಬೇಕು ಎಂದು. ಆದರೆ ನಾವು ಕಾನೂನನ್ನು ಮಾಡುವಾಗ ಸಮಗ್ರವಾಗಿ ಯೋಚನೆ ಮಾಡಿ. ಕಾನೂನನ್ನು ಮಾಡಬೇಕು. ಆ ದೃಷ್ಟಿಯಿಂದ ನೀವು ಇನ್ನೂ ಯೋಚನೆ ಮಾಡಿ, ಏಕೆಂದರೆ ಏನಾಗುತ್ತೆ ಎಂದರೆ ಕೆಲವು ಕಡೆ ಬರೀ ಪಿಯುಸಿ ಮಾರ್ಕ್ಸ್ ತೆಗೆದುಕೊಂಡರೂ ಸರಿಹೋಗುವುದಿಲ್ಲ. ಏಕೆಂದರೆ ಅನೇಕ ಕಡೆ ನಾವು ನೋಡಿದ್ದೇವೆ, ಕೇಳಿದ್ದೇವೆ. ನಮ್ಮ ಅನುಭವದಲ್ಲಿ ಕೂಡ ಬಂದಿದ್ದು ಎದುರು ನಿಂತೇ ಕಾಪಿ ಮಾಡಿಸುತ್ತಾರೆ. ಒಂದೊಂದು ಶಾಲೆಯಲ್ಲಿ 80 ಪರ್‌ಸೆಂಟ್, 90 ಪರ್‌ಸೆಂಟ್, ನೂರು ಪರ್‌ಸೆಂಟ್ ರಿಸಲ್ಟ್ ಕೂಡ ಬಂದಿರುವುದನ್ನು ನಾವು ನೋಡುತ್ತೇವೆ. ಇನ್ನೊಂದು ಕಡೆ ಏನಾಗುತ್ತದೆ ಪಟ್ಟಣದಲ್ಲಿರುವ ಮಕ್ಕಳು ಬರೀ ಮೂರು

ತಿಂಗಳಲ್ಲಿ ಟ್ಯೂಷನನ್ನು ತೆಗೆದುಕೊಂಡು ಬರೀ ಸಿಇಟಿಯಲ್ಲಿ 80 ಪರ್‌ಸೆಂಟ್, 90 ಪರ್‌ಸೆಂಟ್ ತೆಗೆದುಕೊಂಡು ಇವರು ಪಾಸಾಗುತ್ತಾರೆ. ಅದಕ್ಕೆ ಈ ಕಡೆ ಸಿಇಟಿಯದು ಕೇವಲ ಪಾರ್ಟ ಟರ್ಮ್ ವಿಷನ್ ಇಟ್ಟುಕೊಂಡು ಎರಡು-ಮೂರು ತಿಂಗಳಿಗೋಸ್ಕರವೇ ವಿದ್ಯಾಭ್ಯಾಸ ಮಾಡತಕ್ಕ ಸ್ಟೂಡೆಂಟ್ಸ್‌ಗೂ ಹೆಚ್ಚಿನ ಮಹತ್ವ ಬರಬಾರದು. ಅಲ್ಲಿ ಕಾಪಿ ಹೊಡೆದು ಯಾರಾದರೂ ಬಂದಿದ್ದರೆ ಅದೂ ಕೂಡ ಆಗಬಾರದು. ಅದಕ್ಕಾಗಿ ಇದೊಂದು ರಿಯಲ್ ಟೆಸ್ಟ್.. ಎರಡು ವರ್ಷದಲ್ಲಿ ವಿದ್ಯಾಭ್ಯಾಸ ಮಾಡಿದವರಿಗೂ ಇನ್ನೊಂದು ಟೆಸ್ಟ್ ಸಿಇಟಿಯಾಗುತ್ತದೆ. ಅಥವಾ ಸಿಇಟಿಯಲ್ಲಿ ಪ್ರವೀಣ ಎಂದು ಹೇಳಿ ತಿಳಿದುಕೊಂಡು ಅವನಿಗೆ ಪಿಯುಸಿಯಲ್ಲಿ ಅವನು ಏನು ಮಾಡಿಕೊಂಡಿದ್ದಾನೆ ಎನ್ನುವುದೂ ಬರುತ್ತದೆ. ಅದಕ್ಕಾಗಿ ತಾವು ಇದನ್ನು ಅಳವಡಿಸಿಕೊಂಡು ಹೋದರೆ ಏನೂ ತಪ್ಪಾಗುವುದಿಲ್ಲ. ಬರೀ ಎಂಸಿಐ ನವರು ಹೀಗೆ ಹೇಳಿದ್ದಾರೆ, ಹೈಕೋರ್ಟ್‌ನಲ್ಲೂ ಕೂಡ ಡೈರೆಕ್ಷನ್ ಕೊಟ್ಟಿದ್ದಾರೆ ಅನ್ನುವುದನ್ನೂ ಬಿಟ್ಟು ನೀವು ಅದನ್ನು ಕಾನೂನಿನಲ್ಲಿ ಅಳವಡಿಸಿಕೊಂಡು ಹೋದರೆ ಸುಪ್ರೀಂ ಕೋರ್ಟಿಗೆ ಯಾರು ಅಫೆಕ್ಟೆಡ್ ಪಾರ್ಟಿ ಇದ್ದಾರೆ ಅವರು ಹೋಗಲಿ, ನಾವ್ಯಾಕೆ ಮಾಡಿಕೊಳ್ಳಬೇಕು? Affected party, they will go. ನಾವು ಈಗ ಕಾನೂನನ್ನು ಮಾಡಿದ್ದೇವೆ. ಮೊದಲು ಕಾನೂನು ಇರಲಿಲ್ಲ. ಎಂಸಿಐ ಆರ್ಡರ್ ಯಾವಾಗ ಬಂದಿದೆ? In absence of law - ಬಂದಿತ್ತು. ಇವತ್ತು ಕಾನೂನು ಜಾರಿಯಲ್ಲಿದೆ. ನೀವು ತರುತ್ತಿದ್ದೀರಿ. ನಾವು ಪಾಸು ಮಾಡಿಕೊಡುತ್ತಿದ್ದೇವೆ. ಅದನ್ನು ನೀವು ಆ ಕಾನೂನಿನ ಅಡಿಯಲ್ಲಿ ಹೇಳಬಹುದು. ನಮ್ಮಲ್ಲಿ ಸಿಇಟಿಗೆ ಪ್ರೊಫೆಷನಲ್ ಕಾಲೇಜಸ್‌ಗೆ ಎಲಿಜಬಿಲಿಟಿ ಎಂದರೆ ಅವನು ಪಿಯುಸಿಯನ್ನು ಪಾಸಾಗಿರಬೇಕು. ಸಿಇಟಿಯನ್ನೂ ಪಾಸು ಆಗಿರಬೇಕು. ಅವೆರಡರ ಮಾರ್ಕ್ಸ್‌ನ್ನೂ ತೆಗೆದುಕೊಂಡು ಮೆರಿಟ್ ಮೇಲೆ ಯಾರು ಬರುತ್ತಾರೋ ಅವರಿಗೆ ಕೊಡುತ್ತೇವೆ, ಎನ್ನುವ ವಾದ ನಮ್ಮದು ಇದ್ದರೆ ಯಾವ ಸುಪ್ರೀಂ ಕೋರ್ಟು ಕೂಡ ಹೇಳುವುದಕ್ಕೆ ಬರುವುದಿಲ್ಲ. ಏಕೆಂದರೆ ಸುಪ್ರೀಂ ಕೋರ್ಟ್‌ನವರು ಇಂಜಿನಿಯರಿಂಗ್ ಕಾಲೇಜ್‌ಗೆ ಒಂದು ಟೆಸ್ಟ್ ಮಾಡಿ, ಇದಕ್ಕೆ ಒಂದು ಟೆಸ್ಟ್ ಮಾಡಿ, ಬಿ. ಫಾರ್ಮಾಗೆ ಒಂದು ಮಾಡಿ, ಡಿ.ಫಾರ್ಮಾಗೆ ಒಂದು ಮಾಡಿ ಎಂದೇನೂ ಹೇಳುವುದಿಲ್ಲ. ಅದಕ್ಕೆ ದಯವಿಟ್ಟು ನೀವು ಪ್ರಿಸ್ಟೀಜ್ ಇಷ್ಯೂ ಆಗಿ ಮಾಡಿಕೊಳ್ಳಬೇಡಿ. ಆ ದೃಷ್ಟಿಯಿಂದ ಇವತ್ತು ಇದನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಮತ್ತು ಫೀ ಬಗ್ಗೆ ಕೂಡ ಒನ್ ಮ್ಯಾನ್ ಕಮಿಟಿ ಮಾಡಿ.

ನೀವು ಜಡ್ಜಸ್ ಕೈಕೆಳಗೆ ಕೊಟ್ಟು ಕೈಕಟ್ಟಿಸಿಕೊಳ್ಳಬೇಡಿ. ಈಗಾಗಲೇ ನಾವು ಮುರುಗೋಡ್ ಅವರಿಗೆ ಕೊಟ್ಟು ಏನಾಯಿತು, ಹತ್ತು ಸಾವಿರ ರೂಪಾಯಿ ಫೀಯನ್ನು ಇಳಿಸಲಿಕ್ಕಾಗಲಿಲ್ಲ. ಅದಕ್ಕಾಗಿ ಇದರ ಬಗ್ಗೆ ಸಮಗ್ರವಾಗಿ ಯೋಚನೆ ಮಾಡಿದರೆ ಒಳ್ಳೆಯದು. ಅದಕ್ಕಾಗಿ ಇನ್ನೊಂದು ಬೇಕಾದರೆ ಆಲ್‌ಟರ್‌ನೇಟ್ ಮಾಡಿ, ಎಸ್‌ಸಿ ಎಸ್‌ಟಿ, ಒಬಿಸಿ ಅಂಡ್ ಮೆರಿಟ್ ಸ್ಟೂಡೆಂಟ್ಸ್ ಅವರಿಗೋಸ್ಕರ ಅಡ್ಮಿಷನ್‌ಗೋಸ್ಕರ ನಿಮಗೇನು ಬೇಕೋ ಅದನ್ನು ಮಾಡಿಕೊಳ್ಳಿ. ಉಳಿದದ್ದನ್ನು ಬೇಕಾದರೆ ನೀವು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ. ಅದಾದರೂ ಮಾಡಿ. ನಾವು ಅದಕ್ಕೆ ಒಪ್ಪುತ್ತೇವೆ. ಏಕೆಂದರೆ ನ್ಯಾಯವಾಗಿ ಹೋಗೋಣ. ಮತ್ತೆ ಈಗ ಮಾಡಿರುವ ಕಾನೂನು ಬಹಳ ದಿವಸ ಇರುತ್ತದೆ. ಅದಕ್ಕಾಗಿ ಆ ದೃಷ್ಟಿಯಿಂದ ತಾವು ಚಿಂತನೆ ಮಾಡತಕ್ಕದ್ದು ಅವಶ್ಯಕ ಇದೆ. ಅದಕ್ಕೆ ಪುನರ್‌ಪರಿಶೀಲನೆ ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಹೆಚ್. ಶಂಕರಮೂರ್ತಿ : ಮಾನ್ಯ ಅಧ್ಯಕ್ಷರೇ, ಅವರು ಎತ್ತಿದಂಥ ಎಲ್ಲಾ ಪ್ರಶ್ನೆಗಳಿಗೆ ಅವರು ಎತ್ತಿದಂಥ ಎಲ್ಲಾ ಅನುಮಾನಗಳಿಗೆ ಸಮಾಧಾನ ಮಾಡತಕ್ಕ ಪ್ರಯತ್ನವನ್ನು ಮಾಡಿದ್ದೇನೆ. ಸಮಾಧಾನ ಸರಿಯಾಗಿ ಹೇಳಿದ್ದೇನೆ ಎಂಬ ನಂಬಿಕೆ ನನಗೆ ಇದೆ. ಆದ್ದರಿಂದ ತಮ್ಮಲ್ಲಿ ನಾನು ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾತನಾಡಿದವರಿಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಬಿಡಬೇಕು ಸಾರ್. ಅಷ್ಟೊಂದು ಅರ್ಜೆಂಟ್ ಆಗಿರಬಾರದು.

ಶ್ರೀ ಡಿ. ಹೆಚ್. ಶಂಕರಮೂರ್ತಿ: ಬೆಳಿಗ್ಗೆ ಹತ್ತೂವರೆಯಿಂದ ಕೂತಿದ್ದೇನೆ ಸ್ವಾಮಿ. ಅರ್ಜೆಂಟ್ ಮಾಡಲೇ ಇಲ್ಲ. ನೀವು ಕೇಳಿದ್ದಕ್ಕೆಲ್ಲಾ ನಾನು ಉತ್ತರ ಹೇಳಿದ್ದೇನೆ. ನೀವು ಹೇಳಿದ್ದನ್ನೆಲ್ಲಾ ಕೇಳಿದ್ದೇನೆ.

ಅಧ್ಯಕ್ಷರು : ಕೇಳಿ. ಬಹಳಷ್ಟು ಚರ್ಚೆಯಾಗಿದೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಜೆ ಸಿ ಮಾಧುಸ್ವಾಮಿ : ಚರ್ಚೆಗಳಾದ ಮೇಲೂ ಅವರು ಮೊದಲು ಹೇಳಿದ್ದನ್ನೇ ಹೇಳಿದರೆ ನಾವು ವಿವರಣೆ ಕೇಳಬೇಕಾಗುತ್ತದೆ. ಇದನ್ನು ಪ್ರೆಸ್ಟೀಜ್ ಮಾಡಿಕೋಬೇಕು ಅಂತ ನಮಗ್ಯಾರಿಗೂ ಇಲ್ಲ. ಈ ರಾಜ್ಯದಲ್ಲಿ 50 ಪರ್ಸೆಂಟ್ ಸೀಟು ಎಸ್‌ಸಿ, ಎಸ್‌ಟಿಗೆ ಬ್ಯಾಕ್‌ವರ್ಡ್ ಕಮ್ಯುನಿಟಿಗೆ ಅನ್‌ಏಡೆಡ್ ಕಾಲೇಜಸ್‌ನಲ್ಲಿ ಸಿಗುವುದನ್ನು ತಡೆಯಲಿಕ್ಕೆ ಶಾಸನಸಭೆಯಲ್ಲಿ ನಾವ್ಯಾರೂ ಇಲ್ಲ. ಅಲ್ಲಿಗೇ ದಯಮಾಡಿ ಬಿಲ್ಲನ್ನು ಮಿತಿ ಮಾಡಿ. ನಿಮ್ಮ ಅರ್ಜೆಂಟೇನು? ಪ್ರವೇಶ ಕೊಡಿಸಬೇಕು, ಇತರೆ ಭಾಗ ಏನಿದೆ ಕಮಿಟಿ ಮಾಡುತ್ತೇವೆ, ಫೀ ಸ್ಟ್ರಕ್ಚರನ್ನು

ನೋಡುತ್ತೇವೆ ಎಂಬ ಭಾಗವನ್ನು ನೀವಿಲ್ಲಿ ತರಬಾರದಾಗಿತ್ತು ಎಂಬುದು ನಮ್ಮ ಒಂದನೇ ವಾದ. ಎರಡನೆಯದು ವಿಥ್‌ಡ್ರಾ ಮಾಡಿಕೊಳ್ಳಿ ಆ ಕ್ಲಾಸಸ್‌ನ್ನು. ನಾವೂ ಈ ಶಾಸನಸಭೆಯಲ್ಲಿ ಬಹಳ ವರ್ಷದಿಂದ ಕೆಲಸ ಮಾಡುತ್ತಿದ್ದೇವೆ. ಪ್ರಮುಖವಾಗಿ ಸಿಇಟಿದು. ಅಡ್ಮಿಶನ್‌ಗೇ ತಾನೇ ನಾವು ಸಿಇಟಿ ಮಾಡುತ್ತಿರುವುದು. ಈಗ ಅಡ್ಮಿಶನ್ಸ್ ತರಾತುರಿ ಇದೆ, 50 ಪರ್ಸೆಂಟ್ ಅಲ್ಲಿ ಹೋಗಬೇಕು ಅಂದರೆ ಎಂಸಿಐ ಹೇಳುವುದು ಕಾನೂನಲ್ಲ ಸಾರ್. ಗೈಡ್‌ಲೈನ್ಸ್. ಈಗ ಕಾನೂನು ಮಾಡಲಿಕ್ಕೆ ನಿಮಗೆ ಅವಕಾಶ ಇದೆ. ಒಂದೇ ಸಿಇಟಿ ಮಾಡಿ ಟೆಕ್ನಿಕಲ್ ಕೋರ್ಸ್‌ಗೆ, ನಮ್ಮ ವಾದ ಅದೇ. ಮೊದಲಿನಿಂದ ಏನು ಮಾಡುತ್ತಿದ್ದೀರಿ ಒಂದು ಸಿಇಟಿ ಆಗಬೇಕು. ಮೇಲಿರುವವನಿಗೆ ಮೆಡಿಕಲ್ ಬೇಕು ಅಂದರೆ ಅದು ಸಿಗಬೇಕು ಬೇಡ ಅಂದರೆ ಇಂಜಿನಿಯರಿಂಗ್ ಸಿಗಬೇಕು, ಬಿಟ್ಟರೆ ಮೆಡಿಕಲ್‌ಗೇ ಒಂದು ಸಿಇಟಿ, ಇಂಜಿನಿಯರಿಂಗ್‌ಗೇ ಒಂದು ಸಿಇಟಿ, ಆ ಕಡೆ ನೀವು ಪಿಯು ಮಾರ್ಕ್ಸ್ ತೆಗೆದುಕೊಳ್ಳುವ ಹಾಗೆ ಇಲ್ಲ. ಈ ಕಡೆ ಪಿಯು ಮಾರ್ಕ್ಸ್ ಕನ್‌ಸಿಡರ್ ಮಾಡುತ್ತೇವೆ. ಈ ಗೊಂದಲ ಏನು ಸೃಷ್ಟಿ ಮಾಡಿದಿರಿ ದಯಮಾಡಿ ಇದನ್ನು ವಿಥ್‌ಡ್ರಾ ಮಾಡಬೇಕು. ಇದರಿಂದ ಗ್ರಾಮೀಣ ಮಕ್ಕಳಿಗೆ ತೊಂದರೆಯಾಗುತ್ತದೆ. ಇದು ಸರ್ಕಾರಕ್ಕೆ ಬಿಟ್ಟಿದ್ದೇ. ನೀವು ಪಾಸ್ ಮಾಡಿಕೊಳ್ಳುತ್ತೇವೆ ಅಂದರೆ ನಿಮ್ಮಿಷ್ಟ, ನಾವೇನೋ ನಮ್ಮ ಅಭಿಪ್ರಾಯಗಳು ಹೇಳಬಹುದು, ಅದಕ್ಕಾಗಿ ನಾವು ನಿಂತಿದ್ದೇವೆ. ನೀವೇನಾದರೂ ಹೇಳಿಕೊಳ್ಳಿ, ಮಾಡೋದೇ ನಮ್ಮ ಸರ್ಕಾರದ ಪ್ರೆಸ್ಟೀಜ್, ನಾನು ಲೀಗಲ್ ಅಡ್ವೈಸ್ ತೆಗೆದುಕೊಂಡಿದ್ದೇನೆ, ಆಫೀಸರ್ಸ್ ಕನ್‌ಸಲ್ಟ್ ಮಾಡಿದ್ದೇನೆ ಅಂತ ಮಂತ್ರಿಗಳು ಇಲ್ಲಿ ಹೇಳಿದರೆ ಇಷ್ಟೊಂದು ಜನ ಶಾಸಕರಿಗೆ ಅದು ಗೌರವ ಬರುವ ವಿಷಯವಲ್ಲ. ಬಹಳ ಅನುಭವ ಇಟ್ಟುಕೊಂಡು ಬಹಳ ಕ್ಷೇತ್ರಗಳಲ್ಲಿ ದುಡಿದು ಬಹಳ ಪ್ರಾಕ್ಟಿಕಲ್ ಕಷ್ಟಗಳನ್ನು ಅನುಭವಿಸಿ ಇಲ್ಲಿ ಬಂದು ನಿಂತು ಮಾತನಾಡುತ್ತಿದ್ದೇವೆ, ಇದು ಶಾಸನ ಮಾಡುವ ಸಭೆ. ಇಲ್ಲಿ ವ್ಯಕ್ತವಾಗುವ ಅಭಿಪ್ರಾಯಕ್ಕೆ ಹೆಚ್ಚು ಮಹತ್ವ ಕೊಡಬೇಕು. ಇಲ್ಲಿ ಮಾಡಿದ ಶಾಸನವನ್ನು ಇಂಟರ್‌ಪ್ರಿಟ್ ಮಾಡುವುದಕ್ಕೆ ಅವರು ಬೇಕು ನಿಮ್ಮ ಲೀಗಲ್ ಅಡ್ವೈಸರ್‌ಗಳು ಕೋರ್ಟ್‌ಗಳು ಎಲ್ಲಾ ಶಾಸನ ಮಾಡುವುದಕ್ಕೆ ಅವರಿಲ್ಲ, ನಾವಿರುವುದು. ಪುನರ್‌ಪರಿಶೀಲನೆ ಮಾಡಬೇಕು. ಅಡ್ಮಿಶನ್‌ಗೆ ನೀವೇನು ಪೂರಕವಾಗಿ ಮಾಡುತ್ತೀರಿ ಅದಕ್ಕೆ ನಮ್ಮ ವಿರೋಧವಿಲ್ಲ. ಸಿಇಟಿ ವಿಚಾರದಲ್ಲಿ ತಾವು ಸ್ಪಷ್ಟ ನಿಲುವನ್ನು ತೆಗೆದುಕೊಳ್ಳಬೇಕು. ಗ್ರಾಮೀಣ ಮಕ್ಕಳಿಗೆ ಆಗುತ್ತಿರುವ ಅನ್ಯಾಯವನ್ನೂ ಯಾರೋ ಹೈಕೋರ್ಟಿನವರು ಹೇಳಿದ್ದಾರೆ ಅಂತ

ಸರಿಪಡಿಸದೇ ಇದ್ದರೆ ನಾವು ಒಪ್ಪುವುದಕ್ಕಾಗುವುದಿಲ್ಲ. High court cannot give you a direction on this legislation. When you are bringing in a legislation, how can the High Court interfere?

ಶ್ರೀ ಜಿ ವಿ ಶ್ರೀರಾಮ್‌ರೆಡ್ಡಿ : ಸಚಿವರು ಒಂದು ವಿಚಾರ ಹೇಳಿದರು, ನಾನು ಅಡ್ವೊಕೇಟ್ ಜನರಲ್ ಹತ್ತಿರ, ಲಾ ಸೆಕ್ರೆಟರಿ ಹತ್ತಿರ ಮಾತನಾಡಿದ್ದೇನೆ, ಎಲ್ಲಾ ಕರೆಕ್ಟಾಗಿದೆ ಅಂತ. ಅದು ಅವರು ಈ ಸದನಕ್ಕೆ ಮಾಡುತ್ತಿರುವ ಅಪಮಾನ ಅಂತ ನಾನು ಭಾವಿಸುತ್ತೇನೆ.

ಶ್ರೀ ಜೆ ಸಿ ಮಾಧುಸ್ವಾಮಿ : ಯಾವುದೇ ಬಿಲ್ ನಿಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚೆಯಾಗದೆ ಬರಕೂಡದು. ಯಾವುದೇ ಬಿಲ್ ಕ್ಯಾಬಿನೆಟ್‌ಗೆ ಹೋಗದೆಯೂ ಬರಕೂಡದು. Was it placed before the Legislature Party?

ಶ್ರೀ ಜಿ. ವಿ. ಶ್ರೀರಾಮ್‌ರೆಡ್ಡಿ : ನಮ್ಮ ಅಭಿಪ್ರಾಯ ಹೇಳುತ್ತಿದ್ದೇವೆ.

ಶ್ರೀ ಡಿ ಎಚ್ ಶಂಕರಮೂರ್ತಿ : ಒಬ್ಬ ಸದಸ್ಯರು ಕೇಳಿದರು, ನೀವು ಅಡ್ವೊಕೇಟ್ ಜನರಲ್‌ರನ್ನು, ಲಾ ಇಲಾಖೆಯವರನ್ನು ಕೇಳಿದ್ದೀರಾ ಅಂತ, ಕೇಳಿದ್ದೇನೆ ಅಂತ ನಾನು ಹೇಳಿದೆ. ಯಾರು ಕೇಳಿದ್ದರು ಅದಕ್ಕೆ ಉತ್ತರ ಹೇಳಬೇಕೋ ಬೇಡವೋ?

ಶ್ರೀ ಜಿ ವಿ ಶ್ರೀರಾಮ್‌ರೆಡ್ಡಿ : ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ. ನೀವು ಅಡ್ವೊಕೇಟ್ ಜನರಲ್ ಮತ್ತು ಲಾ ಸೆಕ್ರೆಟರಿಯವರು ಹೇಳಿದ್ದಾರೆ. ಆದ್ದರಿಂದ ಇದರಲ್ಲಿ ಏನೂ ಬದಲಾವಣೆ ಮಾಡತಕ್ಕ ಅವಶ್ಯಕತೆ ಇಲ್ಲವೆಂದರೆ, ಇಲ್ಲಿ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇಲ್ಲ ನೀವು ಬಿಲ್‌ನ್ನು ಪಾಸ್ ಮಾಡಿಕೊಂಡು ಹೋಗಬಹುದು. ಇದು ಒಂದನೆಯದು, ನೀವು ಹೇಳಿದ್ದು ಸರಿಯಲ್ಲ.
ಎರಡನೆಯ ಅಂಶ ನೀವು ಹೇಳಿದಿರಿ ಸುಪ್ರೀಂಕೋರ್ಟ್ ನಮಗೆ ಎರಡು ಸಮಿತಿ ಮಾಡಲು ಹೇಳಿದೆ ಅಂತ. ನಿಮ್ಮದರಲ್ಲಿ ಮೂರು ಇದೆ. ನಮ್ಮ ಸೀಟುಗಳದ್ದನ್ನು ಮಾಡಲು ಒಂದು ಸಮಿತಿ ಮಾಡಿದ್ದೇವೆ ಅಂತ ಹೇಳಿದಿರಿ. ಯಾಕೆ ಬೇಕು ನಿಮಗೆ?

ಶ್ರೀ ಡಿ ಎಚ್ ಶಂಕರಮೂರ್ತಿ : ಅಯ್ಯೋ ರಾಮ್‌ಚಂದ್ರ . . .

ಶ್ರೀ ಮಲ್ಲಿಕಾರ್ಜುನ ಖರ್ಗೆ : ರಾಮ್‌ಚಂದ್ರ ಅಂತ ಹೇಳಿಯೇ ಹಜಾಮತ್ ಮಾಡಿದಿರಿ ದೇಶವನ್ನು; ಯಾಕೆ ಪದೇ ಪದೇ ರಾಮ್‌ಚಂದ್ರ ಅನ್ನುತ್ತೀರಾ.

ಶ್ರೀ ಜಿ ವಿ ಶ್ರೀರಾಮ್‌ರೆಡ್ಡಿ : ಅದನ್ನು ಶುರುಮಾಡಬೇಡಿ ನೀವು. ಮತ್ತೆ ಕೇಂದ್ರ ಸರ್ಕಾರ ಸಂವಿಧಾನ ತಿದ್ದುಪಡಿ ಮಾಡಿದೆ ಬಿಲ್ ಮಾಡಿ ಅಂತ. 93ನೇ ತಿದ್ದುಪಡಿ ಪ್ರಕಾರ ನಿಮಗೆ ಕೊಟ್ಟಿರುವ ಗೈಡ್‌ಲೈನ್ಸ್ ಏನೆಂದರೆ Section 15 of the Constitution after clause (4) the following clause shall be inserted namely State Government was empowered to make their own law on this aspect. ಯಾವುದಕ್ಕೆ ಸಂಬಂಧಪಟ್ಟಿದ್ದು? only for Reservations in the Private Institutions. ಅದೃಷ್ಟಕ್ಕೆ ಮಾತ್ರ ನೀವು ಬಿಲ್ ತರದೆ ಇವೆಲ್ಲಾ ತಂದು ಇದರಲ್ಲಿ ಸೇರಿಸಿಟ್ಟು ಬಿಟ್ಟಿದ್ದೀರಿ. ಫೀಜ್ ಸ್ಟ್ರಕ್ಚರ್‌ಗೆ ಅಂತ ಕಮಿಟಿ ನೀವು ಮಾಡಿದ್ದೀರಲ್ಲಾ ಹೈಕೋರ್ಟ್ ಜಡ್ಜ್ ಅಂತ, ನಾಳೆ ದಿವಸ exhorbitant fee fix ಅವರು ಮಾಡಿದರು, ಆಗ ಸರ್ಕಾರದ ಪಾತ್ರವೇನು? ಅವರು ಹೇಳಿದಂತೆ ಕೇಳಬೇಕಾ? ಆದರೆ ಕೇಂದ್ರದ ಡ್ರಾಫ್ಟ್ ಬಿಲ್‌ನಲ್ಲಿ ಒಂದು ಪ್ರಪೋಸ್ ಮಾಡಿದ್ದಾರೆ, ಏನಂತ? ನೀವು ಆ ಕಮಿಟಿ ಮಾಡುವ ಬದಲು The admission and fee Regulatory Committee shall be presided by a person who has been a Vice Chancellor of the Central University or State University or an Institution deemed to be a University in matters of finance and administration shall be included two other members having experience numbers of finance and administration and shall be included or administration ಅಂತ ಇದೆ. ಆ ಪ್ರಪೋಸಲ್ ಇಟ್ಟಿದ್ದಾರೆ ಅವರು. ಇದನ್ನು ಮಾಡಬಹುದಲ್ಲಾ. ಏನು ಅಡ್ಡಿ ಇದೆ ಇದಕ್ಕೆ? ಆ ರಿಟೈರ್ಡ್ ಜಡ್ಜ್ ಕೈಗೆ ನಿಮ್ಮ ತಲೆಯನ್ನು ಕೊಟ್ಟುಬಿಟ್ಟು ಅವನು ಹೇಳಿದಂತೆ ನಾವೆಲ್ಲಾ ಕುಣಿಯಬೇಕಾ? ಈ ಪ್ರಪೋಸಲ್ ಅನ್ನು ನೀವು ಅಕ್ಸೆಪ್ಟ್ ಮಾಡಿ. ನಾಳೆ ಅವರು ಮಾಡಿದ್ದನ್ನು ಕ್ವೆಶ್ಚನ್ ಮಾಡಲು ಸರ್ಕಾರಕ್ಕೆ ಅಧಿಕಾರ ಇರುವುದಿಲ್ಲ. ಆ ಕಮಿಟಿ ಮಾಡಬಹುದಲ್ಲಾ. ಹೋಗಲಿ, ಜಡ್ಜ್‌ನ್ನು ಇಟ್ಟಿರಿ. ಉಳಿದ ಮೆಂಬರ್ಸ್‌ನ್ನು ನಾಮಿನೇಟ್ ಮಾಡುವ ಅಧಿಕಾರವನ್ನೂ ಆ ಜಡ್ಜ್‌ಗೇ ಕೊಟ್ಟು ಬಿಟ್ಟರೆ, ಹೇಗೆ? ಹಾಗಾದರೆ ನಾವು ಕೈತೊಳೆದುಕೊಂಡ ಹಾಗಾ? Hands off about the fee structure. ಸರ್ಕಾರಕ್ಕೆ ಏನೂ ಅಧಿಕಾರ ಬೇಡವಾ? ನಾಳೆ ದಿವಸ Exhorbitant fee ಮಾಡಿದರು, ಇನ್ನೇನಾದರೂ ಮಾಡಿದರು, ಹಾಗಾದರೆ ಯಾರು ಕ್ವೆಶ್ಚನ್ ಮಾಡುವುದು? ಎಲ್ಲಿ ಹೋಗಿ ಅದನ್ನು

ಕ್ವೊಶ್ಚನ್ ಮಾಡಬೇಕು? ದಯವಿಟ್ಟು ಈ ಕ್ಲಾಜನ್ನಾದರೂ ವಾಪಸ್ ತೆಗೆದುಕೊಳ್ಳಿ. ಇದು ಸರಿಯಾದ ಕ್ರಮವಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅಧ್ಯಕ್ಷರೇ, ಮಂತ್ರಿಗಳು ಹೇಳಿದರು ಎಂಸಿಐ ನಾರ್ಮ್ಸ್ ಪ್ರಕಾರ ನಾವು ಸಿಇಟಿ ಮಾತ್ರ ಮಾಡಬೇಕಾಗುತ್ತದೆ ಅಂತ. ಆದರೆ ಎಂಸಿಐದು ರೆಗ್ಯುಲೇಷನ್ ತಮಿಳುನಾಡಿಗೊಂದು ಕರ್ನಾಟಕಕ್ಕೊಂದು ಇದೆಯಾ ಎಂಬುದನ್ನು ಬೇಕು. ಅಲ್ಲಿಗೂ ಇಲ್ಲಿಗೂ ಎಂಸಿಐ ನಾರ್ಮ್ಸ್ ಇದ್ದರೆ ಅವರಿಗೆ 50 ಪರ್ಸೆಂಟ್ ಸಿಇಟಿಯದ್ದು 50 ಪರ್ಸೆಂಟ್ ಪಿಯುಸಿಯದ್ದು ಆಗುವುದಾದರೆ

ಶ್ರೀ ಡಿ ಎಚ್ ಶಂಕರಮೂರ್ತಿ : ಇದುವರೆಗೂ ನಮ್ಮ ರಾಜ್ಯದಲ್ಲೂ 50:50 ಪರ್ಸೆಂಟ್ ನಡೆದುಕೊಂಡೇ ಬರುತ್ತಿದ್ದು ಕಳೆದ ವರ್ಷ ಕರ್ನಾಟಕ ಹೈಕೋರ್ಟಿನಲ್ಲಿ ಅದನ್ನೂ ಕ್ವೊಶ್ಚನ್ ಮಾಡಲಾಯಿತು. ಹೈಕೋರ್ಟ್ ಕರ್ನಾಟಕಕ್ಕೆ ಒಂದು ತೀರ್ಪು ಕೊಟ್ಟಿದೆ. 2005ರಲ್ಲಿ ನೀವು 50:50 ಮಾಡಿದ್ದೀರಿ. ನಾವು ಸುಮ್ಮನಿರುತ್ತೇವೆ ಆದರೆ 2006ರಿಂದ, ಇದು ಆಗುವುದಿಲ್ಲ ಎಂದು ಹೈಕೋರ್ಟಿನ ಸ್ಪೆಸಿಫಿಕ್ ಆರ್ಡರ್ ಇದು. ಕರ್ನಾಟಕಕ್ಕೆ ಒಂದು ತೀರ್ಪು ಕೊಟ್ಟಿದೆ. 2005ರಲ್ಲಿ ನೀವು 50:50 ಮಾಡಿದ್ದೀರಿ, ನಾವು ಸುಮ್ಮನಿರುತ್ತೇವೆ ಆದರೆ 2006ರಿಂದ, ಇದು ಆಗುವುದಿಲ್ಲ ಎಂದು ಹೈಕೋರ್ಟಿನ ಸ್ಪೆಸಿಫಿಕ್ ಆರ್ಡರ್ ಇದು. ಕರ್ನಾಟಕ ಹೈಕೋರ್ಟಿನ ತೀರ್ಪನ್ನು ತಮಿಳುನಾಡಿನವರು ಇಂಪ್ಲಿಮೆಂಟ್ ಮಾಡಬೇಕು ಅಂತ ಏನಿಲ್ಲ. ಹಾಗಾಗಿ ತಮಿಳುನಾಡಿನ ಹೈಕೋರ್ಟಿನಲ್ಲಿ this matter is not questioned. They have not given their verdict. The question raised in the high court a tamil nadu was ಸಿಇಟಿ ಬೇಕಾಗೇ ಇಲ್ಲ ಪಿಯು ಮಾತ್ರ ಇಟ್ಟುಕೊಳ್ಳುತ್ತೇವೆ ಅಂದಾಗ ಅಷ್ಟರಮಟ್ಟಿಗೆ ನೊ, ಸಿಇಟಿಯನ್ನು ನೀವು ಕನ್‌ಸಿಡರ್ ಮಾಡಲೇಬೇಕು ಅಂತ ಹೇಳಿದ್ದಾರೆಯೇ ಹೊರತು they have not touched the matter of MCI. I cannot take shelter under that.

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ : No, you cannot take shelter ತಮಿಳುನಾಡು ಹೈಕೋರ್ಟ್‌ನ ಒಂದು ಜಡ್ಜ್‌ಮೆಂಟ್ ಇದೆ. Immidiately ನೀವು ಸುಪ್ರೀಂಕೋರ್ಟನ್ನು ಏಕೆ ಮೂವ್ ಮಾಡಲಿಲ್ಲ? ಇಷ್ಟು ದಿವಸ ಕಾಯಬೇಕಾಗಿರಲಿಲ್ಲ. There was no need for jon to wait so lans. Immediate ಆಗಿ ನೀವು ಸ್ಟೆಪ್ಸ್ ತೆಗೆದುಕೊಂಡಿದ್ದಾರೆ.

ಶ್ರೀ ಡಿ. ಹೆಚ್. ಶಂಕರಮೂರ್ತಿ : ಹೋಗುತ್ತೇನೆ ಎಂದು ಹೇಳುತ್ತಿದ್ದೇನೆ. ಇನ್ನೇನಾಗಬೇಕು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಎಷ್ಟು ಸಮಯವಾಯಿತು? ಕರ್ನಾಟಕ ಹೈಕೋರ್ಟ್ ಜಡ್ಜ್‌ಮೆಂಟ್ ಬಂದಿದ್ದು ಲಾಸ್ಟ್ ಸಿ.ಇ.ಟಿ. exam time ನಲ್ಲಿ. ತಮಿಳುನಾಡಿನದ್ದು ಬಂದು ಎಷ್ಟು ತಿಂಗಳಾಯಿತು?

ಶ್ರೀ ಎಂ.ಬಿ. ಪಾಟೀಲ್ : ಸುಪ್ರೀಂ ಕೋರ್ಟ್ ಎಲ್ಲೂ ಪಿ.ಯು.ಸಿ ಮಾರ್ಕ್ಸ್‌ನ್ನು ತೆಗೆದುಕೊಳ್ಳಬೇಡವೆಂದು ಹೇಳುವುದಿಲ್ಲ. ಹೈಕೋರ್ಟ್‌ನ ತೀರ್ಪು ಇದೆ. But only problem is, P.U.C Marks ಅನ್ನು ಮಾಡುವಾಗ ಬೇರೆ ಬೋರ್ಡ್ಸ್ ಏನಿರುತ್ತದೆ, ಬೇರೆ ಸ್ಟೇಟ್ಸ್ ಬೋರ್ಡ್ಸ್ ಮತ್ತು ಸಿ.ಬಿ.ಎಸ್.ಸಿ.ಯದನ್ನೆಲ್ಲಾ equate ಹೇಗೆ ಮಾಡಬೇಕೆಂದು ಹೇಳಿ. ಇದೆಲ್ಲಾ ನೀವು ಮಾತನಾಡುತ್ತಿರುವುದು ಇವತ್ತಿನ ಹೈಕೋರ್ಟ್ ಜಡ್ಜ್‌ಮೆಂಟ್, ಎಂ.ಸಿ.ಎ. ರೆಗ್ಯುಲೇಷನ್ in the absence of a legislation. You can bring in a legislation. ಆಮೇಲೆ ಅದನ್ನೂ ಕೂಡ ಆಗುತ್ತದೆ. ಒಂದು suitable mechanism ತರುವವರೆಗೆ ಎಂದು ಹೇಳಿ. you bring a suitable mechanism to equate these Boards. The problem will be solved. ಇದು ಒಂದು. ಎರಡನೆಯದು, ನಾನು ಸಚಿವರನ್ನು ಕೇಳುತ್ತೇನೆ. ಅವರು ಹೇಳಿದರು ಈವತ್ತಿನ ದಿವಸ, ಮೆನೇಜ್‌ಮೆಂಟ್ಸ್ ಮತ್ತು ಇದಕ್ಕೆ ಒಂದು consensus agreement ಗೆ ಇನಾಮ್‌ದಾರ್‌ನಲ್ಲಿ ಪ್ರಾವಿಜನ್ ಇಲ್ಲ, ಇಸ್ಲಾಮಿಕ್‌ನಲ್ಲಿ ಇತ್ತು ಎಂದು. ಇಸ್ಲಾಮಿಕ್‌ನಲ್ಲಿ ಯಾವ extent ನಷ್ಟು ಅವರು ಇನಾಮ್‌ದಾರ್‌ನಲ್ಲಿ ನಿಗದಿ ಮಾಡಿದ್ದಾರೆ ಅದನ್ನು ತಾವು ನೋಡಬೇಕಾಗುತ್ತದೆ Entire Islamic has not gone. Entire Islamic has not been quashed. Only to a certain extent Islamic has been amended. There is a provision for consensus agreement.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದನ್ನು ಸರಿಯಾಗಿ ಮಾಹಿತಿ ಕೊಟ್ಟಿಲ್ಲ. ಆದ್ದರಿಂದ immediate ಆಗಿ ಸುಪ್ರೀಂ ಕೋರ್ಟ್‌ಗೆ ಹೋಗಿದ್ದರೆ ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ.

ಶ್ರೀ ಹೆಚ್. ಆಂಜನೇಯ : ಹೈಕೋರ್ಟ್ ತೀರ್ಪು ಕೊಟ್ಟಿರುವುದು ಯಾವಾಗ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾನು ಕೇಳುತ್ತಿರುವುದು ಹಿಂದೆ ಇದ್ದ ಸರ್ಕಾರವನ್ನು. ಸರ್ಕಾರವನ್ನು ನಾನು ಕೇಳುತ್ತಿದ್ದೇನೆ. ಅಲ್ಲಿ ಅಧಿಕಾರಿಗಳಿದ್ದರು. ನಾನು ಯಾವ ಪಾರ್ಟಿ ಎಂದು ಕೇಳುತ್ತಿಲ್ಲ.

ಶ್ರೀ ಹೆಚ್. ಆಂಜನೇಯ : ಹೈಕೋರ್ಟ್ ತೀರ್ಪು ಕೊಟ್ಟಿತಲ್ಲಾ, ಅದು ಯಾವಾಗ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಆಂಜನೇಯರವರೆ, ನನಗೆ ಉತ್ತರ ಹೇಳಲಿಕ್ಕೆ ಸರ್ಕಾರ ಇದೆ. ತಾವು ನನಗೆ ಪ್ರಶ್ನೆ ಕೇಳಬೇಕಾಗಿಲ್ಲ.

ಶ್ರೀ ಹೆಚ್. ಆಂಜನೇಯ : ಒಂದೂವರೆ ವರ್ಷಗಳ ಹಿಂದೆ ತೀರ್ಪು ಕೊಟ್ಟದ್ದು. ಹೈಕೋರ್ಟ್ ತೀರ್ಪು ಕೊಟ್ಟಿದ್ದು ಯಾವಾಗ? ಒಂದೂವರೆ ವರ್ಷವಾಯಿತು.

(ಗೊಂದಲ)

SRI M.B. PATIL : Only as a temporary measure ಎಂದು ಹೇಳಿದ್ದಾರೆ.

ಶ್ರೀ ಹೆಚ್. ಆಂಜನೇಯ : ಒಂದೂವರೆ ವರ್ಷದಿಂದ ನಿದ್ರೆ ಮಾಡಿ..

SRI M.B. PATIL : This is Supreme Court Judgment. But only as a temporary measure and as inevitable passing phase until the Central Government or the State Government are able to device a suitable mechanism. ಇಲ್ಲಿ Temporary measure ಎಂದು ಹೇಳುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಮಗೆ ಆಂಜನೇಯರವರಿಂದ ಉತ್ತರ ಬೇಕಾಗಿಲ್ಲ. ನನಗೆ ಸರ್ಕಾರದಿಂದ ಉತ್ತರ ಬೇಕಾಗಿದೆ.

ಶ್ರೀ ಹೆಚ್. ಆಂಜನೇಯ : ನಾನು ನಿಮಗೆ ಉತ್ತರವನ್ನು ಹೇಳಲಿಲ್ಲ. ಮಾನ್ಯ ಅಧ್ಯಕ್ಷರ ಮೂಲಕ ಗಮನಸೆಳೆದೆ ಅಷ್ಟೆ. ತಮಗಲ್ಲ.

ಅಧ್ಯಕ್ಷರು : ಈಗ ಆಯಿತಲ್ಲಾ. ಮಾನ್ಯ ಹೆಗ್ಡೆಯವರೇ, ತಾವು ಬಿಲ್‌ನ ಬಗ್ಗೆ ಮಾತನಾಡಿದ್ದೀರಿ. ಮಧ್ಯೆ ಮಧ್ಯೆ ಮಾತನಾಡಿದ್ದೀರಿ. ಇನ್ನು ಎಷ್ಟು ಸಾರಿ ಕ್ಲಾರಿಫಿಕೇಷನ್ಸ್ ಕೇಳುತ್ತೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಕಾಮೇಡ್–ಕೆಯವರು 20 ನೇ ತಾರೀಖಿಗೆ exam fix ಮಾಡಿದ್ದಾರೆ. ಇಲ್ಲಿ ತಾವು 'ಎಫ್' ನಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ ಬಗ್ಗೆ ಹೇಳುತ್ತೀರಿ. ಒಂದು examination ನ್ನು conduct ಮಾಡಿದರೆ, ಒಳ್ಳೆಯದು. ಈಗ ಐ.ಎ.ಎಸ್. ಮತ್ತು ಐ.ಎಫ್.ಎಸ್.ನ್ನು

ರ್‍ಯಾಂಕಿಂಗ್ ಪ್ರಕಾರ ಕೊಡುತ್ತಾರೆ. ಅದೇ ರೀತಿ ಮೆಡಿಕಲ್, ಡೆಂಟಲ್ ಮತ್ತು ಇಂಜನಿಯರಿಂಗ್ ಸೀಟನ್ನು ಮಾಡಿದರೆ I welcome it. ಆದರೆ, ಪರಿಸ್ಥಿತಿ ಏನಿದೆ ಅದನ್ನು ನೀವು ಇಂಪ್ಲಿಮೆಂಟ್ ಮಾಡುವುದಕ್ಕಾಗುತ್ತದೆಯೆ? ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಇದು ಸಾಧ್ಯವಾಗುವುದಿಲ್ಲ. ದಯವಿಟ್ಟು ತಾವೇನು ಈ reservation ಬಗ್ಗೆ ತಂದಿದ್ದೀರಿ, ಅದನ್ನು ಎಲ್ಲಾ ನಮ್ಮ ವಿರೋಧ ಪಕ್ಷದವರೂ ಒಪ್ಪುತ್ತೇವೆ. ಆದರೆ, ಉಳಿದ ಭಾಗಕ್ಕೆ ದಯವಿಟ್ಟು ಇದನ್ನು withdraw ಮಾಡಿ ಅಷ್ಟು ಮಾತ್ರ ತಾವು ಮಂಡಿಸಿ ಎಂದು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ನಾನು ಹಿಂದೆಯೂ ಹೇಳುತ್ತಿದ್ದೆ, ಈವತ್ತು ಉನ್ನತ ಶಿಕ್ಷಣ ಅಥವಾ ಪ್ರೊಫೆಷನಲ್ ಕೋರ್ಸ್‌ಸ್ ವಿದ್ಯಾರ್ಥಿಗಳು ಕಂಡು ಕನಸು ನನಸಾಗುತ್ತಿಲ್ಲ. ಹಿಂದೆ ಇದ್ದಂಥ ಶುಲ್ಕಕ್ಕೂ ಈಗಿನ ಶುಲ್ಕಕ್ಕೂ ಬಹುಶಃ ಒಂದು ಈ ಒಂದು ಸಮಿತಿ ಮಾಡಿ ಹೈಕೋರ್ಟ್‌ನ ಜಡ್ಜ್‌ನ್ನು ಇಟ್ಟು ಮಾಡಿದರೆ ಮುರುಗೋಡು ಸಮಿತಿಯಲ್ಲಿ ಏನು ಬಂತು ಅದೇ ರೀತಿಯಾಗುತ್ತದೆ. ನಾನು ಒಂದು ವಿನಂತಿ ಮಾಡುವುದೇನೆಂದರೆ, ದಯವಿಟ್ಟು ಪ್ರಿಯೂನಿವರ್ಸಿಟಿಯವನು ಒಬ್ಬ ಬಂದು ಪಾಸ್ ಆಗಬೇಕಾದರೆ, ಹತ್ತು ಓದಿ ಎರಡು ವರ್ಷ Puc, 12 ವರ್ಷ ಓದಿ ಪಾಸಾಗಬೇಕಾಗುತ್ತದೆ, ಅದರಲ್ಲೂ ಪ್ರತಿಯೊಂದು ಪಿ.ಯು.ಸಿ. ಪರೀಕ್ಷೆಯಲ್ಲಿ ತಮಗೆ ಗೊತ್ತು, ಒಂದು ಥಿಯರಿ ಓದಿರುತ್ತಾರೆ, ಪ್ರಾಕ್ಟಿಕಲ್ ಓದಿರುತ್ತಾರೆ, ರೆಕಾರ್ಡ್ ಓದಿರುತ್ತಾರೆ, ಇವನ್ನೆಲ್ಲ ಮಾನದಂಡವನ್ನು ಬದಿಗೊತ್ತಿ ಕೇವಲ ಸಿ.ಇ.ಟಿ.ಯನ್ನೇ ಆಧಾರ ಇಟ್ಟುಕೊಂಡ, ಕರ್ನಾಟಕ ಹೈಕೋರ್ಟ್ ಜಡ್ಜ್‌ಮೆಂಟ್ ಕೊಟ್ಟಿದೆ ಎಂದು ಉಲ್ಲೇಖ ಮಾಡಿ ಮಾಡುವುದಾದರೆ ಬಹುಶಃ ವಿದ್ಯಾರ್ಥಿ ಸಮೂದಾಯಕ್ಕೆ ಮಾಡತಕ್ಕಂಥ ಅನ್ಯಾಯವಾಗುತ್ತದೆ. ಇದು ಆಗಕೂಡದು. ತಮಿಳುನಾಡಿನಲ್ಲಿ ಹೇಗೆ ಈವತ್ತು ಎರಡನ್ನೂ ತೆಗೆದುಕೊಳ್ಳುತ್ತಾರೆ ಆ ರೀತಿ ತೆಗೆದುಕೊಳ್ಳಬೇಕು. ಸುಪ್ರೀಂ ಕೋರ್ಟ್‌ಗೆ ಹೋಗಿ ಅಪೀಲ್ ಮಾಡಬೇಕು. ದಯವಿಟ್ಟು ಗ್ರಾಮೀಣ ವಿದ್ಯಾರ್ಥಿಗಳಿಗೆ ಸಿ.ಇ.ಟಿ. examಗೆ ತರಬೇತಿ ಇಲ್ಲ. ಈವತ್ತು ಬೆಂಗಳೂರು ನಗರದಲ್ಲಿ ಸಿ.ಇ.ಟಿ. ಕೋಚಿಂಗ್ ಕೊಡಬೇಕಾದರೆ ನಲವತ್ತು ಸಾವಿರ ಫೀಯನ್ನು ಕೊಡಬೇಕು. ಇಲ್ಲಿರತಕ್ಕ ಪೇರೆಂಟ್ಸ್‌ಗೂ ಅದು ಗೊತ್ತಿರಬೇಕು. ಬರೇ ಸಬ್ಜೆಕ್ಟ್‌ಗಳಿಗೆ. ಈ ರೀತಿ ಇರುವಾಗ ಒಂದು ಉತ್ಕೃಷ್ಟ ಮತ್ತೊಂದು ನಿಕೃಷ್ಟ. ಒಂದು ಇಂಜಿನಿಯರಿಂಗ್‌ಗೆ ಹೋಗಬೇಕಾದರೆ ಸಿ.ಇ.ಟಿ. ಬೇಡ. ಮೆಡಿಕಲ್‌ಗೆ

ಹೋಗಬೇಕಾದರೆ ಬೇಕು. ಒಂದು ದೊಡ್ಡದು ಇನ್ನೊಂದು ಚಿಕ್ಕದು ಎಂಬ ಭಾವನೆಯನ್ನು ತೆಗೆದು ಹಾಕಬೇಕಾಗುತ್ತದೆ. ದಯವಿಟ್ಟು ಇದರಲ್ಲಿ ಮಾರ್ಪಾಟು ಮಾಡಬೇಕು. ಹಿಂದುಳಿದ ಮತ್ತು ಪರಿಶಿಷ್ಟ ಜಾತಿಯ ಮತ್ತು ವರ್ಗದವರಿಗೆ ಮಾಡಿರತಕ್ಕ 50 ಪರ್‌ಸೆಂಟ್ ಮೀಸಲಾತಿಯನ್ನು ಸ್ವಾಗತಿಸುತ್ತೇವೆ. ಆದರೆ ಇದನ್ನು ದಯವಿಟ್ಟು ಮಾರ್ಪಾಟು ಮಾಡದಿದ್ದರೆ ಖಂಡಿತವಾಗಿ ಗ್ರಾಮೀಣ ಮತ್ತು ಮಧ್ಯಮ ವರ್ಗದ ಜನರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಮತ್ತು ಶುಲ್ಕ ನಿಗದಿ ಮಾಡಲು ನಿವೃತ್ತ ನ್ಯಾಯಧೀಶರನ್ನು ನೇಮಕ ಮಾಡಿ ಸಮಿತಿಯನ್ನೇನು ಮಾಡುತ್ತಿದ್ದೀರಿ ಅದು ದಯವಿಟ್ಟು ಬೇಡ. ಒಂದು ಸಲ ಅದನ್ನು ಮಾಡಿ ಅನುಭವಿಸಿಯಾಗಿದೆ. ಇದರಿಂದ ಯಾವುದೇ ರೀತಿಯ ನ್ಯಾಯ ಗ್ರಾಮೀಣ ಜನತೆಗೆ ಸಿಗುವುದಿಲ್ಲ. ಮಧ್ಯಮ ವರ್ಗದ ಅಥವ ಬಡ ವಿದ್ಯಾರ್ಥಿಗಳು ಮುಂದೆ ಉನ್ನತ ಶಿಕ್ಷಣಕ್ಕೆ ಹೋಗಲು ಸಾಧ್ಯವಾಗುವುದಿಲ್ಲ. ದಯವಿಟ್ಟು ಇದನ್ನು ಪರಿಗಣಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತೇನೆ.

ಶ್ರೀ ಡಿ. ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಎಲ್ಲಾ ಸದಸ್ಯರುಗಳ ಭಾವನೆಗಳನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಸಮಾಧಾನ ಮಾಡತಕ್ಕ ಪ್ರಯತ್ನ ಮಾಡಿದ್ದೇನೆ. ಅವರಿಗೆ ಸಮಾಧಾನವಾಗಿದೆಯೆಂದು ಅಂದುಕೊಂಡಿದ್ದೇನೆ. ದಯಮಾಡಿ ವಿಧೇಯಕವನ್ನು ಅಂಗೀಕರಿಸಬೇಕೆಂದು ತಮ್ಮಲ್ಲಿ ನಾನು ಬೇಡಿಕೊಳ್ಳುತ್ತೇನೆ.

ಶ್ರೀ ಎನ್. ಧರ್ಮ್‌ಸಿಂಗ್ (ವಿರೋಧ ಪಕ್ಷದ ನಾಯಕರು) : ಈವತ್ತು ಸುದೈವದಿಂದ ಮುಖ್ಯಮಂತ್ರಿಗಳೂ ಇಲ್ಲಿ ಕುಳಿತಿದ್ದಾರೆ. ಮುಂಜಾನೆ ಹತ್ತು ಗಂಟೆಗೆ ಚರ್ಚೆ ಪ್ರಾರಂಭವಾಗಿದೆ. ಚರ್ಚೆಯಲ್ಲಿ ಎಲ್ಲರು ಭಾಗವಹಿಸಿದ್ದೇವೆ. ಈವತ್ತು ಈ ಒಂದು ಬಿಲ್ ಏನಿದೆ ಇದು ಸರಿಯಾದ ರೀತಿಯಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಜನರಿಗೆ ಉಪಯೋಗವಾಗತಕ್ಕ ರೀತಿಯಲ್ಲಿ ಆಗಬೇಕು. ನಾವೇನೂ ಇದಕ್ಕೆ ಅಡ್ಡಿ ಆತಂಕ ಮಾಡತಕ್ಕದ್ದಲ್ಲ. ಬಿಲ್ ಪಾಸ್ ಮಾಡಿಕೊಡಬಾರದು ಎಂಬುದು ನಮ್ಮ ಉದ್ದೇಶವಲ್ಲ. ಅದು ಹೊರಗಡೆ ಹೋಗುತ್ತದೆ. ತಾವೂ ಕೂಡ ಇಲ್ಲಿ ಬಂದಿದ್ದೀರಿ. ನಾವು ಏನು ಹೇಳುತ್ತೇವೆಂದರೆ, SC/ST ಹೊರತುಪಡಿಸಿ ಈವತ್ತು ಏನು backward class ನ್ನು ಹೊರತುಪಡಿಸಿ ಈ ವಿಧೇಯಕ ಏನಿದೆ ಇದನ್ನು Joint select committee ಗೆ ರೆಫರ್ ಮಾಡಿ. ಎಂಟು ದಿವಸದಲ್ಲಿ ಅದನ್ನು ಮಾಡಿ.

ಎಲ್ಲರನ್ನೂ ಕರೆಸಿ ಸಮಾಲೋಚನೆ ಮಾಡಬೇಕು. ಮಾನ್ಯ ಯಡಿಯೂರಪ್ಪನವರೂ ಇಲ್ಲೇ ಇದ್ದಾರೆ. ನಾನು ಮಾಡತಕ್ಕ ಕಾಲದಲ್ಲಿ ಎಷ್ಟು ಸಭೆಗಳನ್ನು ಮಾಡುವ ಸಂಪ್ರದಾಯ ಮಾಡಿದ್ದೇವೆ. ಸಭೆಯಲ್ಲಿ ಎಲ್ಲರ ಅನಿಸಿಕೆಗಳನ್ನು ತೆಗೆದುಕೊಂಡಿದ್ದೇವೆ. ಇಂಥ ಒಂದು important Bill ಅಂದರೆ ತರತಕ್ಕ ರೀತಿಯಲ್ಲಿ ನಮ್ಮೆಲ್ಲರ ಸಲಹೆ ಏನಿದೆ, ಈ ಸಾಲಿನಲ್ಲಿ ಕುಳಿತಿರುವ ಎಲ್ಲರ ಸಲಹೆ ಏನಿದೆ, ಅಂದರೆ, Don't make it a prestige issue. You are running the Government. You must take our opinion. ನಾಳೆ ಇದರ ಬಗ್ಗೆ Joint select committee ಯನ್ನು ಎಂಟು ಇಲ್ಲವೇ ಹದಿನೈದು ದಿವಸದಲ್ಲಿ ಮಾಡಿ. ನಿಮ್ಮ ರಥ ಯಾತ್ರೆ ಆದಮೇಲೆ ಮಾಡಿ. ಯಾವಾಗ ಆದರೂ ಮಾಡಿ ಒಟ್ಟಿನಲ್ಲಿ Joint select committee ಯನ್ನು ಮಾಡಿ. ಆದರೆ ನಾವು ಹೇಳತಕ್ಕದ್ದು ಏನೆಂದರೆ, ಮಾನ್ಯ ಶಂಕರಮೂರ್ತಿಯವರಿಂದ ಈ ರೀತಿಯ ಉತ್ತರವನ್ನು ನಿರೀಕ್ಷೆಮಾಡಿರಲಿಲ್ಲ. ನಿಜವಾಗಿಯೂ ನಾವು ಏನೇನು ಉಲ್ಲೇಖ ಮಾಡಿದ್ದೇವೆ ಅದರ ಬಗ್ಗೆ ತಮ್ಮಿಂದ ಸಮಂಜಸವಾದ ಉತ್ತರ ಬಂದಿಲ್ಲ. ಈಗಾಗಲೇ ಶ್ರೀರಾಮ್‌ರೆಡ್ಡಿ, ಮಾಧುಸ್ವಾಮಿ, ಜಯಪ್ರಕಾಶ್ ಹೆಗ್ಡೆ, ಹಾಗೂ ಖರ್ಗೆಯವರು ಹೇಳಿದ್ದಾರೆ. ಯಾರಿಗೂ ಕೂಡ ನೀವು ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ತಾವು ಇದ್ದೀರಿ. ತಾವಾದರೂ ಎದ್ದು ನಮ್ಮ ರೆಸ್ಕ್ಯೂಗೆ ಬರುತ್ತೀರೊ? ಇಲ್ಲದಿದ್ದರೆ ಶಂಕರಮೂರ್ತಿಯವರು ಹೇಳಿದ್ದಕ್ಕೆ ಹೌದು ಎಂದು ಹೇಳುತ್ತೀರೊ? ಈ ರೀತಿಯಾದರೆ ಬಹಳ ಕಷ್ಟ . .

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಬಸವರಾಜ್ ಹೊರಟ್ಟಿಯವರು ಹೇಳಿದ್ದಕ್ಕೆ ಯಡಿಯೂರಪ್ಪ ಬೇಡವೆಂದು ಹೇಳಬೇಕೊ ಶಂಕರಮೂರ್ತಿಯವರು ಹೇಳಿದ್ದಕ್ಕೆ ಕುಮಾರಸ್ವಾಮಿಯವರು ಬೇಡವೆಂದು ಹೇಳಬೇಕೊ?...

ಶ್ರೀ ಎನ್. ಧರ್ಮ್‌ಸಿಂಗ್ : ಇಲ್ಲ. ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಈವತ್ತು ಪಾಸ್ ಮಾಡಲು ಹೋಗುತ್ತಿದ್ದಾರೆ, ತಾವೂ ಕೂಡ ಇದ್ದೀರಿ, ನಾವು ಏನೂ ಹೇಳಿಲ್ಲ, ಇದನ್ನು Joint Select Committee ಗೆ ಇದನ್ನು ರೆಫರ್ ಮಾಡಿ. ಎಂಟು ದಿವಸದಲ್ಲಿ ಇದನ್ನು ಮಾಡಿ. ಆರ್ಡಿನೆನ್ಸ್ ಇಶ್ಯೂ ಮಾಡಿ. ಇದನ್ನು ಬಿಟ್ಟು ನಾನು ಮತ್ತೇನನ್ನು ಹೇಳಬೇಕು?

ಶ್ರೀ ಡಿ. ಹೆಚ್. ಶಂಕರಮೂರ್ತಿ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದನ್ನೆಲ್ಲಾ ಹೇಳಿದ್ದೇನೆ. ಆದ್ದರಿಂದ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಶ್ರೀ ಎನ್. ಧರ್ಮ್‌ಸಿಂಗ್ : ಯಡಿಯೂರಪ್ಪನವರು ಕುಳಿತು, ಅಶೋಕ್‌ರವರನ್ನು ಕರೆಸಿ, ಈ ರೀತಿ ಕೈ ಮಾಡಿ ಪಾಸ್ ಮಾಡತಕ್ಕ ವಿಧೇಯಕ ಇದಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವು ಹಿರಿಯರಿದ್ದೀರಿ. ಮುಖ್ಯ ಮಂತ್ರಿಗಳಾಗಿ ಕೆಲಸ ಮಾಡಿ ಅನುಭವವಿದೆ. ಬೆಳಿಗ್ಗೆಯಿಂದ ಸಾಕಷ್ಟು ಚರ್ಚೆ ಮಾಡಿ ನಿಮ್ಮ ಅಭಿಪ್ರಾಯವನ್ನು ಕೊಟ್ಟಿದ್ದೀರಿ. ಮಾನ್ಯ ಶಂಕರಮೂರ್ತಿಯವರು ಅವರ ಶಕ್ತಿಮೀರಿ ನಿಮ್ಮನ್ನು ಕನ್‌ವಿನ್ಸ್ ಮಾಡುವ ಪ್ರಯತ್ನ ಮಾಡಿದ್ದಾರೆ. ಇದನ್ನು ನೀವೇ ಈ ಹಿಂದೆ ತಂದಂಥದ್ದು.

ಶ್ರೀ ಎನ್. ಧರ್ಮ್‌ಸಿಂಗ್ : ಬೆಳಿಗ್ಗೆ ಹತ್ತು ಗಂಟೆಯಿಂದ ಚರ್ಚೆಯಲ್ಲಿ ಜಾಸ್ತಿ ಭಾಗವಹಿಸಿದ್ದ ವಿರೋಧ ಪಕ್ಷದವರಿಗೆ ...

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ದಿವಸ ನೀವೇ ಈ ಹಿಂದೆ ತಂದಂಥ ಬಿಲ್ಲಿಗೆ, ನೀವು ವಾಕ್‌ಔಟ್ ಮಾಡಬೇಕೆಂದು ತೀರ್ಮಾನ ಮಾಡಿದ್ದರೆ ನಾವು ಹೇಗೆ ನಿಮ್ಮನ್ನು ಹಿಡಿದು ಕೂರಿಸಿಕೊಳ್ಳುವುದು? ನಿನ್ನೆ ನೀವೇ ತಯಾರು ಮಾಡಿದಂಥ ಬಿಲ್ಲಿಗೂ ನೀವು ವಾಕ್ ಔಟ್ ಮಾಡಿದಿರಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನೀವು exam conduct ಮಾಡಿದ್ದರಲ್ಲಿ ರಾಜೀವ್‌ಗಾಂಧಿ ಯೂನಿವರ್ಸಿಟಿಯಲ್ಲಿ ಏನಾಗಿದೆ ಎಂಬುದು ನಿಮಗೆ ಗೊತ್ತಿದೆ. ಯಾವ ರೀತಿ ನಡೆಸಿದ್ದೀರಿ ಎಂಬುದು ನಮಗೆ ಗೊತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆ definition ನಲ್ಲಿ autonomy ಇದೆಯಾ?

ಅಧ್ಯಕ್ಷರು : ನಾನು ಮೂವ್ ಮಾಡುತ್ತೇನೆ. ಆದರೆ ಕೊನೆ ಘಳಿಗೆಯಲ್ಲಿ ಏನಾದರೂ ...

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಮಗೆ ಗೊತ್ತಿದ್ದಂತೆ ಶಾಂತ ರೀತಿಯಿಂದ ಚರ್ಚೆ ನಡೆದಿದೆ.

ಅಧ್ಯಕ್ಷರು : ಹೌದು. ಶಾಂತ ರೀತಿಯಿಂದ ನಡೆದಿಲ್ಲವೆಂದು ಹೇಳಿದೆನಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಬ್ಬರ ಮೇಲೊಬ್ಬರೇನೂ ಆಪಾದನೆ ಮಾಡಲಿಲ್ಲ. ಏನಾಗಿದೆ ಎಂದರೆ, ಇಲ್ಲಿ ಕಾನೂನಿನ ಪ್ರಶ್ನೆ ಬಂದು ಯಾವ

ರೀತಿಯಾಗಿ ಬಡ ಮಕ್ಕಳಿಗೆ ಗ್ರಾಮೀಣ ಭಾಗದವರಿಗೆ ರಕ್ಷಣೆ ಕೊಡಬೇಕು ಸಿ.ಇ.ಟಿ.ಯಲ್ಲಿ ಎನ್ನತಕ್ಕ ಪ್ರಶ್ನೆಯನ್ನು ಮಾತ್ರ ನಿಮ್ಮ ಮುಂದೆ ಎತ್ತಿದ್ದೇವೆ. ಅದು ನಿಮಗೂ ಕೂಡ ಗೊತ್ತಿದೆ. Engineering College ಗೆ CET ಮತ್ತು PUC marks ತೆಗೆದುಕೊಳ್ಳುವುದು, Dental Collegeಗೆ ಮತ್ತು Medicalಗೆ ಬರೇ CET ಎಂದರೆ, ಪಟ್ಟಣದಲ್ಲಿ ಇರತಕ್ಕಂಥ ಮಕ್ಕಳು ಮಾತ್ರ Objective questionsಗಳಿಗೆ ಉತ್ತರ ಕೊಡಬಲ್ಲದು.

ಶ್ರೀ ಡಿ. ಹೆಚ್. ಶಂಕರಮೂರ್ತಿ : ಅದು ಈ ಬಿಲ್‌ನಲ್ಲಿ ಇಲ್ಲಾ ಸ್ವಾಮಿ. ಈ ಬಿಲ್‌ನಲ್ಲಿ ಇಲ್ಲದಿರುವ ವಿಷಯವನ್ನು ತಾವು ಏಕೆ ಚರ್ಚೆ ಮಾಡುತ್ತೀರಿ? ಅದು ಬೇರೆ ವಿಷಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ... ನೀವು ಜಾರಿ ಮಾಡಲು ಅದರಲ್ಲಿ ಸೇರಿಸಿ ಬಿಡಿ. ನಾವು ಬೇಡ ಎನ್ನುವುದಿಲ್ಲ. ನೀವು ಸೇರಿಸಿ ಅದನ್ನು ತೆಗೆದುಕೊಂಡು ಬನ್ನಿ. ಇಲ್ಲವೆಂದರೆ, ಈಗ ನಿಮಗೆ admission ಗೆ ಎಷ್ಟು ಬೇಕೋ ಅದನ್ನು ನೀವು ಮಾಡಿಕೊಳ್ಳಿ. ಬಾಕಿಯದನ್ನು ಬೇಕಾದರೆ ನೀವು ಜಾಯಿಂಟ್‌ಸೆಲೆಕ್ಟ್ ಕಮಿಟಿಗೆ ಕಳುಹಿಸಿಬಿಡಿ. ಅದೊಂದನ್ನು ಬಿಟ್ಟರೆ ನಾವು ನಿಮಗೆ ಇನ್ನೇನು ಕೇಳುತ್ತಿದ್ದೇವೆ?

ಶ್ರೀ ಬಸವರಾಜ ಎಸ್. ಹೊರಟ್ಟಿ : ಹೈಕೋರ್ಟ್‌ಗೆ ಏನು ಹೇಳುತ್ತೀರಿ? ಹೈಕೋರ್ಟ್‌ನವರು ಇದನ್ನು clear ಮಾಡಿದ್ದಾರೆ. ತಾವೂ ಇದನ್ನು clear ಮಾಡಿಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೈಕೋರ್ಟ್ ಜಡ್ಜ್‌ಮೆಂಟ್ ಯಾವಾಗ ಬಂದಿದೆ? .....

(ಗೊಂದಲ)

ಅಧ್ಯಕ್ಷರು : ಮಾನ್ಯ ಖರ್ಗೆಯವರೆ, ನೀವು ಮನವಿ ಮಾಡಿದ್ದೀರಿ, ಮರು ಪರಿಶೀಲನೆ ಮಾಡಿ ಎಂದು ಹೇಳಿದ್ದೀರಿ, ಎಲ್ಲವನ್ನೂ ನೀವು ಹೇಳಿದ್ದೀರಿ. ಆದರೆ ಮಂತ್ರಿಗಳು concede ಆಗಬೇಕಲ್ಲಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಂದು ನಿಮಿಷ, ನಾನು ಹೇಳುವುದನ್ನು ಕೇಳಿ. ನಾನು ಮಾನ್ಯ Law Ministerರವರ ಗಮನಕ್ಕೆ ತರುತ್ತಿದ್ದೇನೆ ಮತ್ತು ಮಾನ್ಯ ಯಡಿಯೂರಪ್ಪನವರೂ ಕೂಡ ಶಾಂತ ರೀತಿಯಿಂದ ಕುಳಿತು ಕೇಳಿದರೆ ಅವರಿಗೂ ಹೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ, ಅವರೂ ಕೇಳಲಿ. ನಾನು ಹೇಳುವುದೇನೆಂದರೆ, ಆ ಜಡ್ಜ್‌ಮೆಂಟ್ ಬಂದಿದೆ. ಏನಿದೆ ಈ

ಕಾನೂನು ಬರುವುದಕ್ಕಿಂತ ಮುಂಚಿನ ಗೈಡ್ ಲೈನ್ಸ್ ಮೇಲೆ ಜಡ್ಜ್‌ಮೆಂಟ್ ಬಂದಿದೆ. ಇವತ್ತು ನಾವೇನು ಕಾನೂನು ತರುತ್ತಿದ್ದೇವೆಯೋ ಇದರ ಮೇಲೆ stay ಇಲ್ಲ ಅಥವಾ ಇದರ ಮೇಲೆ interpretation ಇಲ್ಲ. It is a new legislation we are bringing. ಇದು ಹೊಸ ಕಾನೂನು ಆಗಿರುವುದರಿಂದ ಇದಕ್ಕೆ ಇನ್ನೂ stay ಇಲ್ಲ interpretation ಪ್ರಶ್ನೆಯೇ ಬರುವುದಿಲ್ಲ. ಇದರ ಮೇಲೆ ನಾವು ಕಾನೂನನ್ನು ತಂದ ಮೇಲೂ ಕೂಡ ಹೈಕೋರ್ಟ್ ಇದನ್ನು struck down ಮಾಡಿದರೆ, ನೀವು 'ನಮ್ಮ ಪ್ರಯತ್ನವನ್ನು ನಾವು ಮಾಡಿದ್ದೇವೆ, in spite of that, High Court ಹೀಗೆ ಮಾಡಿತು' ಎಂದು ಹೇಳಬಹುದು. ಏಕೆಂದರೆ, ತಮಿಳುನಾಡಿನಲ್ಲಿ PUC ಮತ್ತು CET ಇದೆ. ನಮ್ಮಲ್ಲೂ ಕೂಡ Engineering Collegeಗೆ PUC ಮತ್ತು CET ಇದೆ, ಆದರೆ ಇಲ್ಲಿ ಕೇವಲ Dental ಮತ್ತು Medical ಎರಡಕ್ಕೆ ಮಾತ್ರ ನಾವು ಈ ರೀತಿಯಾಗಿ ಮಾಡಿಕೊಂಡು ಹೋದರೆ ಮುಂದೆ ತೊಂದರೆಯಾಗುತ್ತದೆ. ಗ್ರಾಮಾಂತರ ಭಾಗದವರಿಗೆ ಕಷ್ಟವಾಗುತ್ತದೆ. ಇದಕ್ಕಾಗಿಯೇ ನಾವು ಹತ್ತು ಸಲ ಕೇಳುತ್ತಿದ್ದೇವೆ. ನೀವು ಪದೇ ಪದೇ ಹೈಕೋರ್ಟ್ ಜಡ್ಜ್‌ಮೆಂಟ್ ಇದೆ ಎಂದು ಹೇಳುತ್ತಿದ್ದೀರಿ. High Court judgment for your regulation of MCI and MCI is not above the Constitution. Constitution ಏನಿದೆ, ಅದಕ್ಕಿಂತ ಅದು ಮೇಲಿಲ್ಲ. ಸಂವಿಧಾನ ಎಲ್ಲರಿಗೂ ಸಮಾನತೆಯಿಂದ ಅವಕಾಶ ಮಾಡಿಕೊಡಿ ಎಂದು ಹೇಳುತ್ತದೆ. ಅದಕ್ಕಾಗಿ ದಯವಿಟ್ಟು ತಾವು ಹಠ ಹಿಡಿಯಬೇಡಿ. ಇದನ್ನು ನೀವೇನು ಮಾಡಿ ಎಂದರೆ, ಬೇಕಾದರೆ SC/ST, OBC and Merit ಹುಡುಗರಿಗೆ 50% admission unaided institutionsನಲ್ಲಿ ತಪ್ಪುತ್ತದೆ ಎನ್ನುವುದಾದರೆ, ಅವರ ಜೊತೆಯಲ್ಲಿ Memorandum of Understanding ಮಾಡಿಕೊಂಡಾದರೂ issue ಮಾಡಿ, ಇಲ್ಲವೆಂದರೆ ಆ ಭಾಗವನ್ನು ನಾವು pass ಮಾಡಿ ಕೊಡುತ್ತೇವೆ, ಉಳಿದಿದ್ದಕ್ಕೆ regulation ಮಾಡುವುದಕ್ಕೆ, fees structure ಮಾಡುವ ಬಗ್ಗೆ ಚರ್ಚೆ ಮಾಡುವುದಕ್ಕೆ ನೀವು ಒಂದು ಅವಕಾಶ ಮಾಡಿಕೊಡಿ. ಎಂಟು ದಿವಸದೊಳಗಾಗಿಯೇ, ನಿಮಗೆ ಬೇಕಾದವರನ್ನೇ Member ಹಾಕಿಕೊಂಡು, ಕೇಳಿಕೊಂಡು ನೀವು ಪಾಸ್ ಮಾಡಿಕೊಳ್ಳಿ. ಒಂದು ವೇಳೆ Session ಇರುವುದಿಲ್ಲ ಎನ್ನುವುದಾದರೆ, ತಾವು Ordinance issue ಮಾಡಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ನಿಮಿಷ ಮಾತನಾಡುತ್ತೇನೆ. ಹಳ್ಳಿಯಲ್ಲಿ ಹುಡುಗರು ಒದ್ದಾಡುವುದನ್ನು ನೋಡುವುದಕ್ಕಾಗುವುದಿಲ್ಲ. ....

(ಗೊಂದಲ)

ಅಧ್ಯಕ್ಷರು : ಆಯಿತು, ನೀವು ಕುಳಿತುಕೊಳ್ಳಿ. ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. 2006ನೇ ಸಾಲಿನ ಕರ್ನಾಟಕ . .

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ : ಈ ತರಹದ ಭಂಡತನವನ್ನು ಸಹಿಸಲಿಕ್ಕಾಗುವುದಿಲ್ಲ...

(ಗೊಂದಲ)

ಅಧ್ಯಕ್ಷರು : ಈಗ ಅವರು ಮೊಟಕಾಗಬೇಕು ಎಂದರೆ, ಇದು ಮಾಡುವುದಕ್ಕಾಗುತ್ತದೆಯೇ ಧರ್ಮಸಿಂಗ್ ಸಾಹೇಬರೇ?

ಶ್ರೀ ಎನ್. ಧರ್ಮಸಿಂಗ್ : ಏನೋ ನಿಮ್ಮದೇ ಕಥೆ ಕಾಣಿಸುತ್ತದೆ.

ಅಧ್ಯಕ್ಷರು : ಏನು ಹೇಳುತ್ತಿದ್ದೀರಿ? ನೀವೆಲ್ಲಾ clarification ಕೇಳುವುದಕ್ಕೆ sufficient ಅವಕಾಶವನ್ನು ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳು ಮತಕ್ಕೆ ಹಾಕಬೇಕೆಂದು request ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಮುಖ್ಯಮಂತ್ರಿಗಳು ಏನೋ ಹೇಳಲಿಕ್ಕೆ ಹೊರಟಿದ್ದಾರೆ. ಅಷ್ಟರೊಳಗಾಗಿ ನೀವು ಮತಕ್ಕೆ ಹಾಕುತ್ತಿದ್ದೀರಿ.

ಅಧ್ಯಕ್ಷರು : ಅವರು ಹೇಳಲಿಕ್ಕೆ ಹೊರಟಿದ್ದಾರೆ ಎನ್ನುವುದು ನನಗೆ ಹೇಗೆ ಗೊತ್ತಾಗುತ್ತದೆ ಸ್ವಾಮಿ? ನನಗೆ ಎಲ್ಲಾ ಕಡೆ ನೋಡುವುದಕ್ಕೆ ಕಣ್ಣಿಲ್ಲವಲ್ಲಾ. ನನಗೆ ಎರಡೇ ಕಣ್ಣಿರುವುದು.

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ (ಮುಖ್ಯಮಂತ್ರಿ) : ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತಿನ ಮಸೂದೆಗೂ ಗ್ರಾಮೀಣ ಪ್ರದೇಶದ PUC ಯಲ್ಲಿ ವ್ಯಾಸಂಗ ಮಾಡತಕ್ಕಂಥ ಮಕ್ಕಳ ವಿಷಯದಲ್ಲಿ ಏನು ಬರೀ CET ಮೇಲೆ ಪ್ರವೇಶ ದೊರಕಿಸಿಕೊಡಬೇಕು ಎನ್ನುವುದೇನಿದೆ, ಅದಕ್ಕೂ ಈ ಒಂದು ಬಿಲ್ ಗೂ ಸಂಬಂಧವಿಲ್ಲವೆಂದು ನಾನೊಂದು ಸ್ಪಷ್ಟೀಕರಣ ಕೊಡಲಿಕ್ಕೆ ಬಯಸುತ್ತೇನೆ. ಇವತ್ತು PUC ವಿಷಯದಲ್ಲಿ ಏನು 50% ಅದನ್ನೂ ನಾವು ತೆಗೆದುಕೊಳ್ಳಬೇಕು ಎನ್ನುವ ವಿಷಯದಲ್ಲಿ ನಾವು ಕುಳಿತು ಚರ್ಚೆ ಮಾಡೋಣ. ಏಕೆಂದರೆ,

ಈಗಾಗಲೇ ಹೋದ ವರ್ಷ ಹೈಕೋರ್ಟ್‌ನಲ್ಲಿ ಒಂದು ವರ್ಷಕ್ಕೆ ಮಾತ್ರ PUC ಮತ್ತು CET ಎರಡನ್ನೂ ಗಮನಕ್ಕೆ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟಿತ್ತು. ಮುಂದಿನ ವರ್ಷದಿಂದ ಇದನ್ನು ಬದಲಾವಣೆ ಮಾಡಬೇಕೆಂದು ಹೈಕೋರ್ಟ್‌ನವರೇನು ಸಲಹೆಯನ್ನು ಕೊಟ್ಟಿದ್ದರು, ಆ ಹೈಕೋರ್ಟಿನ ತೀರ್ಪಿನ ಮೇಲೆ ತೀರ್ಮಾನಗಳನ್ನು ಮಾಡಿದ್ದಾರೆ. ಈಗ ಗ್ರಾಮೀಣ ಪ್ರದೇಶದ ಮಕ್ಕಳ ದೃಷ್ಟಿಯಿಂದ ಆ ವಿಷಯದಲ್ಲಿ ಕುಳಿತು ಚರ್ಚೆ ಮಾಡೋಣ. ಏಕೆಂದರೆ, ತಮಿಳುನಾಡಿನಲ್ಲೂ ಈಗ PUC ವಿಷಯದಲ್ಲಿ ಈಗಾಗಲೇ ಹೈಕೋರ್ಟ್‌ನವರು ರದ್ದು ಮಾಡಿರತಕ್ಕಂಥದ್ದನ್ನು ಅಧಿಕಾರಿಗಳು ನನ್ನ ಗಮನಕ್ಕೆ ತಂದಿದ್ದಾರೆ. ಗ್ರಾಮೀಣ ಪ್ರದೇಶದ ಮಕ್ಕಳ ಹಿತದೃಷ್ಟಿಯಿಂದ, ಮೆಡಿಕಲ್ ಕಾಲೇಜಿಗೊಂದು ನೀತಿ ಮತ್ತು ಇಂಜಿನಿಯರಿಂಗ್ ಕಾಲೇಜಿಗೊಂದು ನೀತಿ ಏನಿದೆ. ಆ ವಿಷಯಗಳ ಬಗ್ಗೆ ತಾವು ಹೇಳಿದ ಹಾಗೆ ಮಾನ್ಯ ಸದಸ್ಯರುಗಳ ಭಾವನೆಗಳನ್ನು ತೆಗೆದುಕೊಂಡು ಗ್ರಾಮೀಣ ಪ್ರದೇಶದ ಮಕ್ಕಳ ಹಿತದೃಷ್ಟಿಯಿಂದ ನಾವು ಅದಕ್ಕೇನು ಮತ್ತೆ ಮಾರ್ಪಾಡುಗಳನ್ನು ತರಬೇಕಾಗುತ್ತದೋ ಅದನ್ನು ತರುವುದಕ್ಕೆ ಕಾನೂನಿನ ಪ್ರಕಾರವಾಗಿ ನಾವು ಚರ್ಚೆ ಮಾಡುತ್ತೇವೆ. ಆದರೆ ಇವತ್ತಿನ ಬಿಲ್‌ಗೂ PUC ವಿಷಯಕ್ಕೆ ಸಂಬಂಧಪಟ್ಟ ಹಾಗೆ ಯಾವುದೇ ರೀತಿಯ ಸಂಬಂಧಗಳು ಇಲ್ಲ ಎನ್ನುವುದನ್ನು ನಾನು ಸ್ಪಷ್ಟೀಕರಣ ಕೊಡಲಿಕ್ಕೆ ಬಯಸುತ್ತೇನೆ.

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಮುಖ್ಯಮಂತ್ರಿಗಳೇ, ಈಗ ತಾವೇನು ಮಾತುಗಳನ್ನು ಹೇಳಿದ್ದೀರೋ, ತಾವೇ ಒಂದು ಸಭೆ ಕರೆಯಿರಿ, ನಾನೂ ಕೂಡ ಪಾಲ್ಗೊಳ್ಳುತ್ತೇನೆ. ಇಲ್ಲವೆಂದರೆ, ಎಂಟು ದಿವಸದೊಳಗಾಗಿ ನಾವು ಹೇಳುತ್ತಿದ್ದೇವೆ, ನಮಗೇನೂ ಜಾಸ್ತಿ ಇಲ್ಲ. ನಮಗೆ ಯಾರೂ ಕರೆಸಲೂ ಬೇಡಿ. Joint Select Committee ಮಾಡಿ, ಸಮಾಲೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳತಕ್ಕಂಥ ಸಲಹೆ ಕೊಡುತ್ತಿದ್ದೇವೆ. ಕೆಲವು ಸ್ವಲ್ಪ ಸಡಿಲ ಆಗಿವೆ. ನೀವು ಮುಂಜಾನೆಯೇ ಬಂದಿದ್ದರೆ ಏನೋ ಆಗಬಹುದಾಗಿತ್ತು, ಆದರೆ ಏನೂ ಆಗಿಲ್ಲ. ಈಗ ತಾವೇ ಒಂದು ಸಭೆ ಕರೆಸಿ ಇತ್ಯರ್ಥ ಮಾಡಿ. ಎಷ್ಟು ಹೇಳಿದರೂ ಕೂಡ ಏಕೋ ಮಾನ್ಯ ಯಡಿಯೂರಪ್ಪನವರ ಮನಸ್ಸಿನಲ್ಲಿ, ಮಾನ್ಯ ಶಂಕರಮೂರ್ತಿಯವರು ಆಗಲಿ, ಮಾನ್ಯ ಜಗದೀಶ್ ಶೆಟ್ಟರ್‌ರವರಾಗಲಿ, ಈ ಒಂದು ಹಠಮಾರಿತನದ ಧೋರಣೆ ಏನಿದೆಯೋ, ಇದು ನಾವು ಸಹಿಸಿ ಕೊಳ್ಳಲು ಆಗಿರುವುದಿಲ್ಲ. ನಾವು

ವಿರೋಧ ಪಕ್ಷದಲ್ಲಿ ಕುಳಿತು ಸಾರ್ವಜನಿಕರಿಗೆ, ಕರ್ನಾಟಕ ಜನತೆಗೆ ವಿಶೇಷವಾಗಿ ಇವತ್ತು ನಮ್ಮ ಹಳ್ಳಿ ಪ್ರದೇಶದ ಜನತೆಗೇನು ಅನ್ಯಾಯ ಆಗತಕ್ಕಂಥ ರೀತಿಯಲ್ಲಿ ನೋಡಿಕೊಳ್ಳುವುದಕ್ಕಾಗುವುದಿಲ್ಲ. ಇದೇ ತರಹ ತಾವು ಪಾಸ್ ಮಾಡಿಕೊಳ್ಳಲಿಕ್ಕೆ ಹೋದರೆ, ಇದಕ್ಕೆ ನಮ್ಮ ಸಹಮತ ಇಲ್ಲ, ನಾವು ಈ ಸಭೆಯಿಂದ ತ್ಯಾಗ ಮಾಡುತ್ತಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ : ತಾವು Joint Select Committeeಗೆ ರೆಪರ್ ಮಾಡಿ, ಏಪ್ರಿಲ್ 30ರೊಳಗಾಗಿಯೇ ಸದರಿ ಕಮಿಟಿಯಿಂದ ವರದಿಯನ್ನು ತರಿಸಿಕೊಳ್ಳಬಹುದು. ಮಾನ್ಯ ಅಧ್ಯಕ್ಷರೆ, 15 ದಿವಸಗಳಲ್ಲೇ ತರಿಸಬಹುದು.

ಅಧ್ಯಕ್ಷರು : ಆಯಿತು ಬಿಡಿ ಈಗ. Any how, they have not conceded. ಈಗ Let us go. ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ . . .

ಶ್ರೀ ಎನ್ ಧರ್ಮಸಿಂಗ್ : ನೀವು ರಕ್ಷಣೆ ಕೊಡುತ್ತಿಲ್ಲ. . . .

ಅಧ್ಯಕ್ಷರು : ಸ್ವಾಮಿ, ತಾವು ಎಂಟು ಸಲ ಗೆದ್ದು ಬಂದಿರುವವರು, ಮುಖ್ಯಮಂತ್ರಿಗಳಾಗಿದ್ದವರು, ತಾವು ಹೀಗೆ ಆಪಾದನೆ ಮಾಡಿದರೆ ಹೇಗೆ? ನೀವೆಲ್ಲಾ ಕೇಳಿದ್ದೀರಿ, ಹೇಳಿದ್ದೀರಿ. ಸಂಬಂಧಪಟ್ಟ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು, they have not conceded. Naturally, after that, we have to pass the bill. ಏನು ಹೇಳುತ್ತಿದ್ದೀರಿ? ಆಯಿತು, ಆಯಿತು.

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಎಲ್ಲಾ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2006ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 24ರವರೆಗೆ, ಎರಡೂ ಸೇರಿದಂತೆ, ಪ್ರಸ್ತಾವ ಏನೆಂದರೆ:–

ಅಧ್ಯಕ್ಷರು : "ಖಂಡ 2 ರಿಂದ 24ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 24ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2006ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2006ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ಎರಡು ನಿಮಿಷ. ನಿರುದ್ಯೋಗಿ ಯುವಕರ ಪರವಾಗಿ ಇರುವ ಸಮಸ್ಯೆ ಕುರಿತಂತೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುವ ಒಂದು ವಿಷಯವಿದೆ.

ಅಧ್ಯಕ್ಷರು : ಬಿಲ್ಸ್ ಇವೆ. ಅದಾದ ನಂತರ ನೀವು ಮಾತನಾಡಿ.

(ಆ) ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ದತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ. ನಾಗರಾಜಶೆಟ್ಟಿ (ಮೀನುಗಾರಿಕೆ ಬಂದರು ಮತ್ತು ಮುಜರಾಯಿ ಸಚಿವರು) : ಮಾನ್ಯ ಅಧ್ಯಕ್ಷರೆ, "2005ರ ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ದತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ